# ಕರ್ನಾಟಕ ವಿಧಾನ ಪರಿಷತ್ತು

**ಬುಧವಾರ, 1ನೇ ಫೆಬ್ರವರಿ 2012 ಸದನವು**

**ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 11 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

**ಸಭಾಪತಿಯವರು:–** ಮಾನ್ಯ ಸದಸ್ಯರಿಗೆ ಒಂದು ಸಣ್ಣ ವಿಚಾರವನ್ನು ಹೇಳಬಯಸುತ್ತೇನೆ. ನಾನು ಬೆಳಗ್ಗೆ ಪತ್ರಿಕೆಯಲ್ಲಿ ನೋಡಿದೆ. ಅದರಲ್ಲಿ ವಿಧಾನ ಮಂಡಲದ ಅಧಿವೇಶನ ನಡೆಯುವಾಗ ಸದನದ ಒಳಗೆ ಕುಳಿತ ಸದಸ್ಯರು ತಮ್ಮ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದರು ಎಂದು ಬಂದಿದೆ. ಆದರೆ ನಮ್ಮ ಸದನದಲ್ಲಿ ಯಾರೂ ಆ ರೀತಿ ಮಾತನಾಡಿರುವುದಿಲ್ಲ, ಮಾತನಾಡುವುದೂ ಬೇಡ. ಇವತ್ತು ಬೇಕು ಎಂದೇ ನಾನು ನನ್ನ ಮೊಬೈಲ್ ಅನ್ನು ಸದನಕ್ಕೆ ತಂದಿದ್ದೇನೆ. ತಮ್ಮ ಎಲ್ಲರ ಎದುರಿನಲ್ಲಿಯೇ ಅದನ್ನು ಸ್ವಿಚ್ಛ್ ಆಫ್ ಮಾಡುತ್ತಿದ್ದೇನೆ. ತಾವು ಯಾರಾದರು ತಂದಿದ್ದರೆ ದಯಮಾಡಿ ಸ್ವಿಚ್ಚ ಆಫ್ ಮಾಡಿಬಿಡಿ. ಇಲ್ಲಿ ಜಾಮರ್ ಹಾಕಲಾಗಿದೆ. ಆದರೆ ತಂತ್ರಜ್ಞಾನ ಎಷ್ಟು ಮುಂದುವರೆದಿದೆ ಎಂದರೆ, ಒಂದೊಂದು ಸಾರಿ ಜಾಮರ್‌ನ್ನೂ ಮೀರಿ ಮೊಬೈಲ್‌ಗಳು ರಿಂಗ್ ಆಗುತ್ತವೆ. ಆದ್ದರಿಂದ ನಮ್ಮ ಹುಷಾರಿನಲ್ಲಿ ನಾವು ಇರೋಣ. ಈಗ ಪ್ರಶ್ನೋತ್ತರ ವೇಳೆ ಪ್ರಾರಂಭ ಮಾಡೋಣ.

## 1. ಪ್ರಶ್ನೋತ್ತರಗಳು

## (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

### ಸರ್ಕಾರಿ ಕಛೇರಿಗಳಲ್ಲಿ ಜ್ಞಾನಪೀಠ ಪುರಸ್ಕೃತರ ಭಾವಚಿತ್ರ ಅಳವಡಿಸುವ ಬಗ್ಗೆ

### 235; ಡಾ॥ ಶ್ರೀನಾಥ್ (ನಾಮನಿರ್ದೇಶನ ಹೊಂದಿದವರು)

ಅ) ಸರ್ಕಾರಿ ಕಛೇರಿಗಳಲ್ಲಿ ಜ್ಞಾನಪೀಠ ಪುರಸ್ಕೃತರ ಭಾವಚಿತ್ರವನ್ನು ಅಳವಡಿಸಲು ಸರ್ಕಾರದಿಂದ ಆದೇಶವನ್ನು ಹೊರಡಿಸಲಾಗಿದೆಯೇ;

ಅ) ಹಾಗಿದ್ದಲ್ಲಿ, ಸರಸ್ವತಿ ಸಮ್ಮಾನ್ ಪ್ರಥಮ ಪುರಸ್ಕೃತ ಡಾ॥ ಎಸ್.ಎಲ್. ಭೈರಪ್ಪನವರ ಭಾವಚಿತ್ರವನ್ನು ಅಳವಡಿಸಲು ಆದೇಶವನ್ನು ಎಂದು ಹೊರಡಿಸಲಾಗುತ್ತದೆ;

ಇ) ಡಾ॥ ಎಸ್.ಎಲ್. ಭೈರಪ್ಪನವರ ಆಯ್ದ ಕೃತಿಗಳನ್ನು ಸರ್ಕಾರವು ರಿಯಾಯ್ತಿ ದರದಲ್ಲಿ ಪ್ರಕಟಿಸಲು ಏನಾದರೂ ಕ್ರಮ ತೆಗೆದುಕೊಂಡಿದೆಯೇ?

**ಶ್ರೀ ಗೋವಿಂದ ಎಂ. ಕಾರಜೋಳ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಣ್ಣನೀರಾವರಿ ಸಚಿವರು)**

**ಅ)** ಇಲ್ಲ.

**ಅ)** ಉದ್ಭವಿಸುವುದಿಲ್ಲ.

**ಇ)** ಡಾ॥ ಎಸ್.ಎಲ್. ಭೈರಪ್ಪನವರು ತಮ್ಮ ಕೃತಿಗಳ ಪ್ರಕಟಣೆಗೆ ಅನುಮತಿ ನೀಡಿದಲ್ಲಿ ಪ್ರಕಟಣಾ ಕಾರ್ಯವನ್ನು ಕೈಗೊಳ್ಳಲಾಗುವುದು.

**ಡಾ॥ ಶ್ರೀನಾಥ್:–** ಮಾನ್ಯ ಸಭಾಪತಿಗಳೆ, ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರಿ ಕಛೇರಿಗಳಲ್ಲಿ ಜ್ಞಾನಪೀಠ ಪುರಸ್ಕೃತರ ಭಾವಚಿತ್ರಗಳನ್ನು ಅಳವಡಿಸಲು ಸರ್ಕಾರದಿಂದ ಆದೇಶವನ್ನು ಹೊರಡಿಸಲಾಗಿದೆಯೇ ಮತ್ತು ಡಾ॥ ಎಸ್.ಎಲ್. ಬೈರಪ್ಪನವರ ಭಾವಚಿತ್ರವನ್ನು ಅಳವಡಿಸಲು ಆದೇಶವನ್ನು ಹೊರಡಿಸಲಾಗಿದೆಯೇ ಎನ್ನುವ ಪ್ರಶ್ನೆಗೆ "ಉದ್ಭವಿಸುವುದಿಲ್ಲ" ಎಂದು ಸರ್ಕಾರ ಉತ್ತರವನ್ನು ಕೊಟ್ಟಿದೆ. ಡಾ॥ ಎಸ್.ಎಲ್. ಬೈರಪ್ಪನವರ ಆಯ್ದ ಕೃತಿಗಳನ್ನು ಸರ್ಕಾರವು ರಿಯಾಯ್ತಿ ದರದಲ್ಲಿ ಪ್ರಕಟಿಸಲು ಏನಾದರೂ ಕ್ರಮ ತೆಗೆದುಕೊಂಡಿದೆಯೇ ಎನ್ನುವ ಪ್ರಶ್ನೆಗೆ, "ಡಾ॥ ಎಸ್.ಎಲ್. ಬೈರಪ್ಪನವರು ತಮ್ಮ ಕೃತಿಗಳ ಪ್ರಕಟಣೆಗೆ ಅನುಮತಿ ನೀಡಿದಲ್ಲಿ ಪ್ರಕಟಣಾ ಕಾರ್ಯವನ್ನು ಕೈಗೊಳ್ಳಲಾಗುವುದು" ಎಂದು ಉತ್ತರ ಕೊಟ್ಟಿದ್ದಾರೆ. ಜ್ಞಾನಪೀಠ ಪುರಸ್ಕೃತರ ಭಾವಚಿತ್ರಗಳನ್ನು, ಸರಸ್ವತಿ ಸಮ್ಮಾನ್ ಪ್ರಥಮ ಪುರಸ್ಕೃತರ ಭಾವಚಿತ್ರಗಳನ್ನು ಸರ್ಕಾರಿ ಕಛೇರಿಗಳಲ್ಲಿ ಹಾಕಲು ಪ್ರೊಟೊಕಾಲ್‌ನಲ್ಲಿ ಏನಾದರೂ ಕಷ್ಟವಾಗುವುದಾದರೆ, ಕಡೇಪಕ್ಷ ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಇಂತಹವರ ಭಾವಚಿತ್ರಗಳನ್ನು ಅಳವಡಿಸಿ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗುವ ಹಾಗೆ ಮಾಡಬಹುದೇ ಎನ್ನುವುದು ನನ್ನ ಪ್ರಶ್ನೆ. ಡಾ॥ ಎಸ್.ಎಲ್. ಭೈರಪ್ಪನವರ ಬಗ್ಗೆ ಬಹಳ ಅಭಿಮಾನವಿಟ್ಟು ಅವರು ಅನುಮತಿ ಕೊಟ್ಟರೆ ರಿಯಾಯಿತಿ ದರದಲ್ಲಿ ಅವರ ಕೃತಿಗಳನ್ನು ಪ್ರಕಟ ಮಾಡುತ್ತೇವೆ ಎಂದು ಸರ್ಕಾರ ಹೇಳಿದೆ. ಈ ವಿಚಾರವಾಗಿ ಸರ್ಕಾರ ಭೈರಪ್ಪನವರಿಗೆ ಪತ್ರ ಏನಾದರೂ ಬರೆಯಬಹುದೇ ಅವರಾಗಿ ಕೇಳುವುದಕ್ಕಿಂತ ಸರ್ಕಾರ ಪತ್ರ ಬರೆದರೆ ಸರ್ಕಾರ ಈ ರೀತಿ ಪ್ರಶಸ್ತಿ

ಪುರಸ್ಕೃತರಿಗೆ ಗೌರವವನ್ನು ಕೊಟ್ಟಹಾಗೆ ಆಗುತ್ತದೆ. ಸರ್ಕಾರ ಅವರ ಜೊತೆ ಪತ್ರ ವ್ಯವಹಾರ ನಡೆಸುತ್ತದೆಯೇ ಎಂದು ನಾನು ಕೇಳಬಯಸುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಗಳೆ, ಯಾರದೇ ಫೋಟೋಗಳನ್ನು ಹಾಕಬೇಕು ಎಂದು ಸರ್ಕಾರ ನಿಯಮಾವಳಿಗಳನ್ನು ರಚನೆ ಮಾಡಿಲ್ಲ. ಕೇಂದ್ರ ಸರ್ಕಾರದ ಮಾರ್ಗದರ್ಶನದ ಪ್ರಕಾರ. ಹಾಲಿ ಪ್ರಧಾನ ಮಂತ್ರಿಗಳ, ರಾಷ್ಟ್ರಪತಿಗಳ ಮತ್ತು ಮಹಾತ್ಮಾ ಗಾಂಧೀಜಿಯವರ ಫೋಟೋಗಳನ್ನು ಮಾತ್ರ ಹಾಕಬೇಕು ಎನ್ನುವುದು ಕಡ್ಡಾಯವಾದ ಸೂಚನೆ. ಆದರೆ ಇತ್ತೀಚೆಗೆ ಕೆಲವರು ತಮ್ಮ ತಂದೆಯವರ ಫೋಟೋವನ್ನು ಹಾಕಿಕೊಂಡಿರುತ್ತಾರೆ, ಕೆಲವರು ರಾಘವೇಂದ್ರ ಸ್ವಾಮಿಯವರ, ಗಣಪತಿಯ ಫೋಟೋ ಹಾಕಿಕೊಂಡಿರುತ್ತಾರೆ, ಕೆಲವರು ಮಂತ್ರಾಲಯ ದೇವಸ್ಥಾನದ, ತಿರುಪತಿ ದೇವಸ್ಥಾನದ ಫೋಟೋವನ್ನು ಹಾಕಿಕೊಂಡಿರುವುದನ್ನು ನಾವು ನೋಡುತ್ತೇವೆ. ಆದರೆ ಸರ್ಕಾರದ ಕಟ್ಟುನಿಟ್ಟಿನ ಸೂಚನೆ ಇರುವುದು ಕೇವಲ ಮೂರು ಪೋಟೋಗಳನ್ನು ಹಾಕಬೇಕು ಎಂದು. ಅದರ ಹೊರತಾಗಿ ಜ್ಞಾನಪೀಠ ಪುರಸ್ಕೃತರ ಫೋಟೋಗಳನ್ನು ಮತ್ತು ಇನ್ನಿತರ ಪ್ರಶಸ್ತಿ ಪುರಸ್ಕೃತರ ಫೋಟೋಗಳನ್ನು ಹಾಕುವುದಕ್ಕೆ ನಾವು ಯಾವುದೇ ರೀತಿಯ ಆದೇಶವನ್ನು ಹೊರಡಿಸಿರುವುದಿಲ್ಲ. ಹಾಕಬಾರದು ಎನ್ನುವ ನಿರ್ಭಂದವನ್ನೂ ಕೂಡ ನಾವು ಹಾಕಿರುವುದಿಲ್ಲ. ಅವರವರ ಪ್ರೀತಿ–ವಾತ್ಸಲ್ಯಕ್ಕೆ ಅನುಗುಣವಾಗಿ ಅವರವರು ಹಾಕಿಕೊಂಡಿರಬಹುದು. ಅಂತಹ ಸೂಚನೆ ಕೊಡಲು ನಮಗೆ ಆಗುವುದೂ ಇಲ್ಲ. ಈ ರೀತಿಯ ಸೂಚನೆಯನ್ನು ಕೊಟ್ಟರೆ, ಮುಂದೆ ಯಾರ್‍ಯಾರ ಮೇಲೆ ಪ್ರೀತಿ ಇರುತ್ತದೆ ಅವರೆಲ್ಲರ ಫೋಟೋಗಳನ್ನು ಹಾಕಿ ಎಂದರೆ ವಿಧಾನಸೌಧ ತುಂಬ ಗೋಡೆ ಕಾಣದ ಹಾಗೆ ಬರಿ ಫೋಟೋಗಳನ್ನೇ ಹಾಕಬೇಕಾಗುತ್ತದೆ. ಆದ ಕಾರಣ ಈ ನಿಟ್ಟಿನಲ್ಲಿ ಯಾವುದೇ ಸೂಚನೆಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

**ಸಭಾಪತಿಯವರು:–** ಡಾ॥ ಎಸ್.ಎಲ್. ಭೈರಪ್ಪನವರ ಕೃತಿಗಳನ್ನು ಖರೀದಿ ಮಾಡುವ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದರು ಆ ಬಗ್ಗೆ ತಾವು ಉತ್ತರವನ್ನು ನೀಡಲಿಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ:–** ಸನ್ಮಾನ್ಯ ಸಭಾಪತಿಯವರೇ, ಡಾ॥ ಎಸ್.ಎಲ್. ಭೈರಪ್ಪನವರು ಒಪ್ಪಿಗೆಯನ್ನು ಕೊಟ್ಟರೆ, ಖಂಡಿತವಾಗಿ ಅವರ ಕೃತಿಗಳನ್ನು ಸರ್ಕಾರ ಖರೀದಿ ಮಾಡುವುದಕ್ಕೆ ಮುಂದೆ ಬರುತ್ತದೆ. ಸರ್ಕಾರದಿಂದ ಪತ್ರ ಬರೆಯುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ನಾವು ಪತ್ರವನ್ನು ಬರೆಯುತ್ತೇವೆ.

**ಡಾ॥ ಶ್ರೀನಾಥ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರ್ಕಾರಿ ಕಛೇರಿಗಳಲ್ಲಿ ಕಟ್ಟುನಿಟ್ಟಿನ ಆದೇಶವನ್ನು ನೀಡುವುದಕ್ಕೆ ಸಾಧ್ಯವಿಲ್ಲ. ಎನ್ನುವಂತಹ ಮಾತನ್ನು ಹೇಳಿದ್ದಾರೆ. ಆದರೆ, ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಿಯಾದರೂ ಇದನ್ನು ಮಾಡಬಹುದೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಡಾ॥ ಎಸ್.ಆರ್. ಲೀಲಾ:–** ಸನ್ಮಾನ್ಯ ಸಭಾಪತಿಯವರೇ, ಶಾಲಾ ಕಾಲೇಜುಗಳಲ್ಲಿ ಫೋಟೋಗಳನ್ನು ಹಾಕಿಕೊಳ್ಳುವಂತಹ ಪದ್ಧತಿ ಜಾರಿಯಲ್ಲಿದೆ. ಆದರೆ, ಕೇವಲ ಪ್ರಶಸ್ತಿ ಪುರಸ್ಕೃತರ ಫೋಟೋಗಳನ್ನು ಹಾಕುವುದು ಸರಿಯಲ್ಲ ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಆದೇಶವಿರುವುದು ಸರ್ಕಾರಿ ಕಛೇರಿಗಳಲ್ಲಿ, ಶಾಲಾ, ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲಿ ಹಾಕುವ ಅವಶ್ಯಕತೆ ಕಂಡು ಬರುತ್ತದೆ ಅಲ್ಲಿ ಹಾಕುವುದಕ್ಕೆ ನಾವು ಅಡಚಣೆ ಮಾಡುವುದಿಲ್ಲ ಎನ್ನುವಂತಹ ಮಾತನ್ನು ಹೇಳಿದ್ದೇವೆ. ಅವರವರ ಪ್ರೀತಿಗೆ ಅನುಗುಣವಾಗಿ ಫೋಟೋಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಕೆಲವರು ಯಾವ ಯಾವ ಕಾರಣಗಳಿಗಾಗಿಯೋ ತಮ್ಮ ತಮ್ಮ ಆಯ್ಕೆಯ ವ್ಯಕ್ತಿಗಳ ಫೋಟೋಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಅದರ ಕಾರಣಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಅವರವರ ಪ್ರೀತಿಗೆ ಅನುಗುಣವಾಗಿ ಫೋಟೋಗಳನ್ನು ಹಾಕಿಕೊಳ್ಳಬಹುದು.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಮಾನ್ಯ ಆರ್.ವಿ. ವೆಂಕಟೇಶ್ ಅವರದಾಗಿದೆ. ಆದರೆ, ಇದೇ ವಿಷಯ ಗಮನ ಸೆಳೆಯುವ ಸೂಚನೆಯ ರೂಪದಲ್ಲಿ ಈ ದಿನ ಚರ್ಚೆಗೆ ಬರಲಿದೆ. ಆದ್ದರಿಂದ ಮಧ್ಯಾಹ್ನ ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಂಡಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶವನ್ನು ನೀಡಿದರೆ ಚರ್ಚೆಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ತಮ್ಮ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:17(305)ನ್ನು ಗಮನ ಸೆಳೆಯುವ ಸೂಚನೆಯ ಜೊತೆಗೆ ಕ್ಲಬ್ ಮಾಡುತ್ತಿದ್ದೇನೆ.

**ಶ್ರೀ ಆರ್.ವಿ. ವೆಂಕಟೇಶ್:–** ಸನ್ಮಾನ್ಯ ಸಭಾಪತಿಯವರೇ, ಅದಕ್ಕೆ ನನ್ನ ಒಪ್ಪಿಗೆ ಇದೆ.

**ಹಾಸನದ ಸುತ್ತಲಿನ ಕೆರೆಗಳನ್ನು ಅಭಿವೃದ್ಧಿ ಪಡಿಸುವ ಕುರಿತು**

**82; ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಸರ್ಕಾರದ ನಿರ್ಲಕ್ಷದಿಂದ ಹಾಸನದ ಕೆರೆಗಳ ಅವಸಾನದ ಅಂಚಿಗೆ ತಲುಪಿದ್ದು ನಿಸರ್ಗದ ಸಮತೋಲನ ಕಾಪಾಡಲು ಈ ಕೆರೆಗಳನ್ನು ಸಂರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

**ಅ)** ಹಾಸನ ನಗರಕ್ಕೆ ಹೊಂದಿಕೊಂಡಿರುವ ಹುಣಸಿನ ಕೆರೆ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು;

**ಇ)** ಕಳೆದ 3 ವರ್ಷಗಳಲ್ಲಿ ಕೆರೆಗಳ ಅಭಿವೃದ್ಧಿಗೆ ವ್ಯಯಿಸಿರುವ ಮೊಬಲಗೆಷ್ಟು; ಇದರಲ್ಲಿ ಹಾಸನ ಜಿಲ್ಲೆಯ ಪಾಲೆಷ್ಟು?

**ಶ್ರೀ ಎಂ. ಗೋವಿಂದ ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)**

**ಅ)** ಸಣ್ಣ ನೀರಾವರಿ ಇಲಾಖೆಯು ಹಾಸನ ಜಿಲ್ಲೆಯಲ್ಲಿ ಕೆರೆಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಭಾರತ ಸರ್ಕಾರದ ಪುರಸ್ಕೃತ ಆರ್.ಆರ್.ಆರ್ ಯೋಜನೆ, 4702 ಪ್ರಧಾನ ಕಾಮಗಾರಿಗಳ 13ನೇ ಹಣಕಾಸು ಆಯೋಗದ ಅನುದಾನ ಹಾಗೂ ಜಲಸವಂರ್ಧನೆ ಯೋಜನಾ ಸಂಘದ ವತಿಯಿಂದ ಕೈಗೊಂಡಿರುವ/ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ–1, 2, 3, ಹಾಗು 4 ರಲ್ಲಿ ನೀಡಲಾಗಿದೆ.

**ಅ)** ಹಾಸನ ನಗರಕ್ಕೆ ಹೊಂದಿಕೊಂಡಿರುವ ಹುಣಸಿನ ಕೆರೆ ಅಭಿವೃದ್ಧಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುತ್ತಿದೆ.

**ಇ)** ವಿವರಗಳನ್ನು ಅನುಬಂಧ–5 ರಲ್ಲಿ ನೀಡಲಾಗಿದೆ.

**ಅನುಬಂಧ-1**

ಸಣ್ಣ ನೀರಾವರಿ ಇಲಾಖೆಯ ಆರ್.ಆರ್.ಆರ್.ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವ ಕೆರೆಗಳ ವಿವರ.

ರೂ.ಲಕ್ಷಗಳಲ್ಲಿ

| ಕ್ರ ಸಂ. | ತಾಲ್ಲೂಕು | ಕಾಮಗಾರಿಯ ಹೆಸರು | ಅನುಮೋದಿತ ಅಂದಾಜು ಮೊತ್ತ | ಒಟ್ಟಾರೆ ವೆಚ್ಚ | ಷರಾ |
|---|---|---|---|---|---|
| 1 | ಚನ್ನರಾಯಪಟ್ಟಣ | ಯಲಿಯೂರು ಊರಮುಂದಿನ ಕೆರೆ | 36.00 | 21.00 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 2 | ಚನ್ನರಾಯಪಟ್ಟಣ | ನುಗ್ಗೇಹಳ್ಳಿ ಕೆರೆ | 25.00 | 11.41 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 3 | ಚನ್ನರಾಯಪಟ್ಟಣ | ಗೊಲ್ಲರಹೊಸಹಳ್ಳಿ ರಂಗಸಮುದ್ರ ಕೆರೆ | 23.00 | 9.12 | ಹೂಳೆತ್ತುವ ಕೆಲಸಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 4 | ಚನ್ನರಾಯಪಟ್ಟಣ | ಕುಂದೂರು ಕೆರೆ | 22.00 | 14.59 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 5 | ಚನ್ನರಾಯಪಟ್ಟಣ | ಸಂತೆ ಶಿವರ ಊರಮುಂದಿನ ಕೆರೆ | 35.50 | 19.24 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 6 | ಚನ್ನರಾಯಪಟ್ಟಣ | ಆಣತಿ ಊರಮುಂದಿನ ಕೆರೆ | 57.00 | 11.11 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 7 | ಚನ್ನರಾಯಪಟ್ಟಣ | ನವಿಲೆ ಊರಮುಂದಿನ ಕೆರೆ | 37.50 | 1.56 | ಬೌಂಡ್ರಿ ಟ್ರೆಂಚ್ ಕಾಮಗಾರಿ ಪೂರ್ಣಗೊಂಡಿದ್ದು, ಕಾಲುವೆ ಕೆಲಸ ಪ್ರಗತಿಯಲ್ಲಿರುತ್ತದೆ |
| 8 | ಅರಸೀಕೆರೆ | ಹಾರನಹಳ್ಳಿ ದೊಡ್ಡಕೆರೆ | 48.50 | 19.80 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 9 | ಅರಸೀಕೆರೆ | ಕಣಕಟ್ಟೆ ಊರಮುಂದಿನ ಕೆರೆ | 45.00 | 20.88 | ಬೌಂಡ್ರಿ ಟ್ರೆಂಚ್, ಪೋಷಕ ಕಾಲುವೆ ಮತ್ತು ಬಂಡ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಹೂಳೆತ್ತುವ ಕೆಲಸ ಪ್ರಗತಿಯಲ್ಲಿರುತ್ತದೆ |
| 10 | ಅರಸೀಕೆರೆ | ಅರಸೀಕೆರೆ ದೊಡ್ಡ ಕೆರೆ | 61.00 | 31.80 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 11 | ಅರಸೀಕೆರೆ | ಕೊಳಗುಂದ ಊರಮುಂದಿನ ಕೆರೆ | 30.00 | 23.50 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 12 | ಅರಸೀಕೆರೆ | ದಂಡೇಕೆರೆ ಊರಮುಂದಿನ ಕೆರೆ | 29.00 | 25.09 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 13 | ಹಾಸನ | ಕೌಶಿಕ ದೊಡ್ಡಕೆರೆ | 70.00 | 38.93 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 14 | ಹಾಸನ | ಶಾಂತಿಗ್ರಾಮ ದೊಡ್ಡಕೆರೆ | 100.00 | 30.18 | ಪೋಷಕ ಕಾಲುವೆ ಕೆಲಸ, ಬೌಂಡ್ರಿ ಟ್ರೆಂಚ್, ತೂಬು ಕೆಲಸಗಳು ಮುಗಿದಿರುತ್ತವೆ. ಹೂಳೆತ್ತುವ ಕೆಲಸ ಪ್ರಗತಿಯಲ್ಲಿರುತ್ತದೆ |
| 15 | ಹಾಸನ | ಹೆರಗು ತೆಂಗಿನಕೆರೆ | 64.00 | 8.78 | ಬೌಂಡ್ರಿ ಟ್ರೆಂಚ್, ಹೂಳೆತ್ತುವುದು ಮತ್ತು ರಿವೆಟ್‌ಮೆಂಟ್ ಕೆಲಸಗಳು ಮುಗಿದಿರುತ್ತವೆ. ಗೈಡ್‌ವಾಲ್ ಕೆಲಸ ಪ್ರಗತಿಯಲ್ಲಿರುತ್ತದೆ |
| 16 | ಹಾಸನ | ಮುಗಳೂರು ದೊಡ್ಡಕೆರೆ | 62.00 | 53.31 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 17 | ಹಾಸನ | ಹೊನ್ನಾವರ ದೊಡ್ಡಕೆರೆ | 60.00 | 33.01 | ಪೋಷಕ ಕಾಲುವೆ ಕೆಲಸ, ಡ್ರಾಪ್ಟ್ ಚಾನಲ್, ಗೈಡ್‌ವಾಲ್, ಬೌಂಡ್ರಿ ಟ್ರೆಂಚ್ ಮತ್ತು ರಿವೆಟ್‌ಮೆಂಟ್ ಕೆಲಸಗಳು ಮುಗಿದಿರುತ್ತವೆ. ಹೂಳೆತ್ತುವ ಕೆಲಸ ಪ್ರಗತಿಯಲ್ಲಿರುತ್ತದೆ |
| 18 | ಹಾಸನ | ಶಂಖ ದೊಡ್ಡಕೆರೆ | 48.00 | 45.93 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 19 | ಬೇಲೂರು | ರಾಜನಶಿರಿಯೂರು ದೊಡ್ಡಕೆರೆ | 65.00 | 59.78 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |
| 20 | ಬೇಲೂರು | ಹಳೇಬೀಡು ದ್ವಾರಸಮುದ್ರ ಕೆರೆ | 100.00 | 26.28 | ಬೌಂಡ್ರಿ ಟ್ರೆಂಚ್, ಗೈಡ್‌ವಾಲ್, ಬೌಂಡ್ರಿ ಟ್ರೆಂಚ್ ಕೆಲಸಗಳು ಮುಗಿದಿರುತ್ತವೆ. ಕಾಸ್‌ವೇ ಮತ್ತು ಸಿ.ಡಿ. ಕೆಲಸಗಳು ಪ್ರಗತಿಯಲ್ಲಿರುತ್ತದೆ |
| 21 | ಬೇಲೂರು | ಕರಿಕಟ್ಟೆಹಳ್ಳಿ ಪೋಷಕ ಕಾಲುವೆ | 95.00 | 34.78 | ಎನ್.ಆರ್.ಇ.ಜಿ.ಎ. ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ |

ಅನುಬಂಧ–2

ಸಣ್ಣ ನೀರಾವರಿ ಇಲಾಖೆಯ "4702 ಪ್ರಧಾನ ಕಾಮಗಾರಿಗಳ" ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವ ಕೆರೆಗಳ ವಿವರ.

| ಕ್ರ ಸಂ. | ತಾಲ್ಲೂಕು / ವಿಧಾನ ಸಭಾ ಕ್ಷೇತ್ರ | ನಂಜುಂಡಪ್ಪ ವರದಿ ಪ್ರಕಾರ ವರ್ಗೀಕರಣ | ಕಾಮಗಾರಿಯ ಹೆಸರು | ಮಂಜೂರಾದ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) | ಷರಾ |
|---|---|---|---|---|---|
| 1 | ಹಾಸನ | ಇತರೆ | ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಸಾಲಗ್ರಾಮೆ ಹೋಬಳಿ ಕೆಲವತ್ತಿ ಕೆರೆ ಅಭಿವೃದ್ಧಿ | 310.00 | ಅಂದಾಜು ಪಟ್ಟಿಯನ್ನು ಪರಿಶೀಲಿಸಲಾಗುತ್ತಿದೆ. |
| 2 | ಬೇಲೂರು | ಹಿಂದುಳಿದ | ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು ದೊಡ್ಡಕೋಡಿಹಳ್ಳಿ ಗ್ರಾಮದ ದೊಡ್ಡಕೆರೆ ಅಭಿವೃದ್ಧಿ | 182.50 | ಅಂದಾಜು ಪಟ್ಟಿಯನ್ನು ಪರಿಶೀಲಿಸಲಾಗುತ್ತಿದೆ. |

ಅನುಬಂಧ–3

ಸಣ್ಣ ನೀರಾವರಿ ಇಲಾಖೆಯ "13ನೇ ಹಣಕಾಸು ಆಯೋಗದ" ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳ ವಿವರ.

| ಕ್ರ ಸಂ. | ಕಾಮಗಾರಿಯ ಹೆಸರು | ಜಿಲ್ಲೆ | ತಾಲ್ಲೂಕು | ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) | ಷರಾ |
|---|---|---|---|---|---|
| 1 | ಸತ್ಯಮಂಗಲ ದೊಡ್ಡಕೆರೆ ಅಭಿವೃದ್ಧಿ | ಹಾಸನ | ಹಾಸನ | 430.00 | ಟೆಂಡರ್ ಕರೆಯಲಾಗಿದೆ |
| 2 | ಅರಸೀಕೆರೆ ದೊಡ್ಡಕೆರೆ ಅಭಿವೃದ್ಧಿ | ಹಾಸನ | ಹಾಸನ | 473.00 | ಟೆಂಡರ್ ಕರೆಯಲಾಗಿದೆ |

## ಅನುಬಂಧ- 4

ಜಲಸಂವರ್ಧನೆ ಯೋಜನಾ ಸಂಘದ ವತಿಯಿಂದ ಹಾಸನ ಜಿಲ್ಲೆಯ ವೆಚ್ಚದ ವಿವರ (ರೂಗಳಲ್ಲಿ)

| ಕ್ರಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮದ ಹೆಸರು | ಕೆರೆಯ ಹೆಸರು | ಅಂದಾಜು ಮೊತ್ತ | ಒಟ್ಟು ವೆಚ್ಚ |
|---|---|---|---|---|---|---|
| 1 | ಹಾಸನ | ಅರಸೀಕೆರೆ | ಮುದುಡಿ | ಹಿರೆಕೆರೆ | 3820318 | 3016985 |
| 2 | ಹಾಸನ | ಅರಸೀಕೆರೆ | ಕಿತ್ತನಕೆರೆ | ಊರಮುಂದಿನಕೆರೆ | 3333905 | 3125932 |
| 3 | ಹಾಸನ | ಅರಸೀಕೆರೆ | ಕಲ್ಲಂಗೆರೆ | ಊರುಮುಂದಿನಕೆರೆ | 2941431 | 1625374 |
| 4 | ಹಾಸನ | ಅರಸೀಕೆರೆ | ಅಪ್ಪೇನಹಳ್ಳಿ | ಹೊಸಕೆರೆ | 2298190 | 822666 |
| 5 | ಹಾಸನ | ಅರಸೀಕೆರೆ | ರಾಮೇನಹಳ್ಳಿ | ಅಹೋಬಲರಾಯನಕೆರೆ | 1745155 | 1214070 |
| 6 | ಹಾಸನ | ಅರಸೀಕೆರೆ | ಹೊಳಲಕೆರೆ | ಹಿರೇಕೆರೆ | 2333589 | 1610657 |
| 7 | ಹಾಸನ | ಅರಸೀಕೆರೆ | ಮೇಳೇನಹಳ್ಳಿ | ಮೇಳೇನಹಳ್ಳಿಕೆರೆ | 2601535 | 1438452 |
| 8 | ಹಾಸನ | ಅರಸೀಕೆರೆ | ಆದಿಹಳ್ಳಿ | ದೊಡ್ಡಕೆರೆ | 1830095 | 818560 |
| 9 | ಹಾಸನ | ಅರಸೀಕೆರೆ | ಹುಳೇನಹಳ್ಳಿ | ಕಾಳೇನಹಳ್ಳಿ | 2182683 | 1640426 |
| 10 | ಹಾಸನ | ಅರಸೀಕೆರೆ | ಕಡಲುಮಗ್ಗೆ | ಕೆಂಗೇಗೌಡನಕೆರೆ | 1979645 | 1004668 |
| 11 | ಹಾಸನ | ಅರಸೀಕೆರೆ | ದೊಡ್ಡೇನಹಳ್ಳಿ | ದೊಡ್ಡೇನಹಳ್ಳಿ | 2102729 | 1003130 |
| 12 | ಹಾಸನ | ಅರಸೀಕೆರೆ | ತಿರುಪತಿ | ಸಂಪತ್ತಯ್ಯನಕೆರೆ | 1215138 | 797227 |
| 13 | ಹಾಸನ | ಅರಸೀಕೆರೆ | ಕೆ.ಬಂಡಿಹಳ್ಳಿ | ಬಂಡಿಹಳ್ಳಿಕಟ್ಟೆ | 4128566 | 2852876 |
| 14 | ಹಾಸನ | ಅರಸೀಕೆರೆ | ಕೆ.ಶಂಕರನಹಳ್ಳಿ | ಊರುಮುಂದಿನಕೆರೆ | 3206997 | 1437408 |
| 15 | ಹಾಸನ | ಅರಸೀಕೆರೆ | ಕಲ್ಯಾಡಿ | ದೇವಿಕೆರೆ | 1575231 | 897587 |
| 16 | ಹಾಸನ | ಅರಸೀಕೆರೆ | ಕಲ್ಗುಂಡಿ | ಊರಮುಂದಿನಕೆರೆ | 2268755 | 1267621 |
| 17 | ಹಾಸನ | ಅರಸೀಕೆರೆ | ಅರಕೆರೆ | ಅರಕೆರೆಕೆರೆ | 4162205 | 2971108 |
| 18 | ಹಾಸನ | ಅರಸೀಕೆರೆ | ಮುರಲೇಹಳ್ಳಿ | ಮುರಲೇಹಳ್ಳೀಕೆರೆ | 3542131 | 1586896 |
| 19 | ಹಾಸನ | ಅರಸೀಕೆರೆ | ಉಂಡಿಗನಾಳು | ಊರಮುಂದಿನಕೆರೆ | 3213647 | 2075870 |
| 20 | ಹಾಸನ | ಅರಸೀಕೆರೆ | ಬೈರಾಂಬುದಿ | ದೊಡ್ಡಕೆರೆ | 4569976 | 2605213 |
| 21 | ಹಾಸನ | ಅರಸೀಕೆರೆ | ಜನ್ನಾಪುರ | ಸಿದ್ದಲಿಂಗನಕಟ್ಟೆ | 1910216 | 1003519 |
| 22 | ಹಾಸನ | ಅರಸೀಕೆರೆ | ಚಿಕ್ಕೂರು | ಚಿಕ್ಕೂರುಕೆರೆ | 2976950 | 2380715 |
| 23 | ಹಾಸನ | ಅರಸೀಕೆರೆ | ಕುರುವಂಕ | ಊರಮುಂದಿನಕೆರೆ | 3779303 | 3068032 |

| | | | | | | |
|---|---|---|---|---|---|---|
| 24 | ಹಾಸನ | ಅರಸೀಕೆರೆ | ಕೊಂಡವಾಗಿಲು | ಕೊಂಡವಾಗಿಲಕೆರೆ | 4852221 | 4656066 |
| 25 | ಹಾಸನ | ಅರಸೀಕೆರೆ | ಬೈರಗೊಂಡನಹಳ್ಳಿ | ಊರಮುಂದಿನಕೆರೆ | 3722291 | 3015680 |
| 26 | ಹಾಸನ | ಅರಸೀಕೆರೆ | ಬೊಮ್ಮಸಮುದ್ರ | ಊರಮುಂದಿನಕೆರೆ | 2170823 | 1884777 |
| 27 | ಹಾಸನ | ಅರಸೀಕೆರೆ | ಹಿರೇಸಾದರಹಳ್ಳಿ | ಊರಮುಂದಿನಕೆರೆ | 1986729 | 1955877 |
| 28 | ಹಾಸನ | ಅರಸೀಕೆರೆ | ಚಿಕ್ಕೊಂಡನಹಳ್ಳಿ | ಊರಮುಂದಿನಕೆರೆ | 3183228 | 3019867 |
| 29 | ಹಾಸನ | ಅರಸೀಕೆರೆ | ಕಲ್ಲನಾಯ್ಕನಹಳ್ಳಿ | ದೊಡ್ಡಕೆರೆ | 1242400 | 1179136 |
| 30 | ಹಾಸನ | ಅರಸೀಕೆರೆ | ನಾಗತಿಹಳ್ಳಿ | ತಿಮ್ಮಪ್ಪನಾಯಕನಕೆರೆ | 1675332 | 1229186 |
| 31 | ಹಾಸನ | ಬೇಲೂರು | ಮತ್ತಿಘಟ್ಟ | ದೊಡ್ಡಕೆರೆ | 5518106 | 3317353 |
| 32 | ಹಾಸನ | ಬೇಲೂರು | ಚಟಚಟನಹಳ್ಳಿ | ದ್ಯಾವಪ್ಪನಕೆರೆ | 1558437 | 1443016 |
| 33 | ಹಾಸನ | ಬೇಲೂರು | ಘಟ್ಟದಹಳ್ಳಿ | ದೊಡ್ಡಕೆರೆ | 1964805 | 1275699 |
| 34 | ಹಾಸನ | ಬೇಲೂರು | ಗೋಣಿಸೋಮನಹಳ್ಳಿ | ದೊಡ್ಡಕೆರೆ | 1257501 | 1031883 |
| 35 | ಹಾಸನ | ಬೇಲೂರು | ಬೆಟ್ಟದಾಲೂರು | ದೊಡ್ಡಕೆರೆ | 4542181 | 3019199 |
| 36 | ಹಾಸನ | ಬೇಲೂರು | ಪಂಡಿತನಹಳ್ಳಿ | ದೊಡ್ಡಕೆರೆ | 4094663 | 2627729 |
| 37 | ಹಾಸನ | ಬೇಲೂರು | ದೊಡ್ಡಕೋಡಿಹಳ್ಳಿ | ದೊಡ್ಡಕೆರೆ | 2595951 | 1294178 |
| 38 | ಹಾಸನ | ಬೇಲೂರು | ಅಡಗೂರು | ದೊಡ್ಡಕೆರೆ | 2206679 | 2178128 |
| 39 | ಹಾಸನ | ಬೇಲೂರು | ಯಲಹಂಕ | ದೊಡ್ಡಕೆರೆ | 3976605 | 2649319 |
| 40 | ಹಾಸನ | ಬೇಲೂರು | ತೆಂಡೆಕೆರೆ | ದೊಡ್ಡಕೆರೆ | 2531349 | 2421427 |
| 41 | ಹಾಸನ | ಬೇಲೂರು | ಹರುಬಿಹಳ್ಳಿ | ದೊಡ್ಡಕೆರೆ | 1578485 | 1065581 |
| 42 | ಹಾಸನ | ಬೇಲೂರು | ಹಿರೇಹಳ್ಳಿ | ಗಂಗರಾಯನಕಟ್ಟೆ | 2896201 | 2466179 |
| 43 | ಹಾಸನ | ಬೇಲೂರು | ಪೊನ್ನಾಥಪುರ | ದೊಡ್ಡಕೆರೆ | 1751886 | 1637844 |
| 44 | ಹಾಸನ | ಬೇಲೂರು | ಮಲ್ಲಾಪುರ | ಅಪ್ಪಿನಕಟ್ಟೆ | 2424302 | 2335768 |
| 45 | ಹಾಸನ | ಬೇಲೂರು | ದೇವಿಹಳ್ಳಿ | ತಾವರೆಕಟ್ಟೆ | 1901556 | 1023475 |
| 46 | ಹಾಸನ | ಬೇಲೂರು | ರಾಜಗೆರೆ | ಒಡ್ಡುಕೆರೆ | 2636904 | 2548978 |
| 47 | ಹಾಸನ | ಬೇಲೂರು | ಗಂಗೂರು | ಗಂಗೂರುಕೆರೆ | 2380720 | 2332892 |
| 48 | ಹಾಸನ | ಬೇಲೂರು | ಸನ್ಯಾಸಿಹಳ್ಳಿ | ಅಡಗುರಡನಕೆರೆ | 2577274 | 1355792 |
| 49 | ಹಾಸನ | ಬೇಲೂರು | ಚಂಜನಹಳ್ಳಿ (ವೀರದೇವನಹಳ್ಳಿ) | ಊಎಬಾಗಿಲಕೆರೆ | 1441431 | 1260854 |
| 50 | ಹಾಸನ | ಬೇಲೂರು | ಕಲ್ಲಹಳ್ಳಿ | ಸಿದ್ದನಕಟ್ಟೆ ಗಂಗಯ್ಯನಕಟ್ಟೆ | 4802148 | 3846152 |
| 51 | ಹಾಸನ | ಬೇಲೂರು | ಕ್ಯಾತಲಪುರ | ಕ್ಯಾತಲಪುರ ಕೆರೆ | 2621755 | 1482357 |

## ಅನುಬಂಧ-5

ಅ) ಕಳೆದ 3 ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ಅಭಿವೃದ್ಧಿಯ ವೆಚ್ಚದ ವಿವರ

(ರೂ.ಕೋಟಿಗಳಲ್ಲಿ)

| ಕ್ರ ಸಂ | ವರ್ಷ | ಅಂದಾಜು ಮೊತ್ತ | ವೆಚ್ಚ |
|---|---|---|---|
| 1 | 2008-09 | 303.67 | 200.07 |
| 2 | 2009-10 | 336.16 | 267.35 |
| 3 | 2010-11 | 440.74 | 326.71 |

ಆ) ಕಳೆದ 3 ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ಹಾಸನ ಜಿಲ್ಲೆಯ ಕೆರೆಗಳ ಅಭಿವೃದ್ಧಿಯ ವೆಚ್ಚದ ವಿವರ

(ರೂ.ಕೋಟಿಗಳಲ್ಲಿ)

| ಕ್ರ ಸಂ | ವರ್ಷ | ಅಂದಾಜು ಮೊತ್ತ | ವೆಚ್ಚ |
|---|---|---|---|
| 1 | 2008-09 | 15.86 | 29.03 |
| 2 | 2009-10 | 29.14 | 33.63 |
| 3 | 2010-11 | 11.97 | 17.82 |

ಅನುಬಂಧ-5

ಕಳೆದ 3 ವರ್ಷಗಳಲ್ಲಿ ಜಲಸಂವರ್ಧನೆ ಯೋಜನಾ ಸಂಘದ ವತಿಯಿಂದ ಕೈಗೊಂಡಿರುವ ಕೆರೆಗಳ ಅಭಿವೃದ್ಧಿಯ ವಿವರಗಳು

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಜಿಲ್ಲಾ ಯೋಜನಾ ಘಟಕ | ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡ ಕೆರೆಗಳ ಸಂಖ್ಯೆ | ಒಟ್ಟು ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ವೆಚ್ಚ | | |
|---|---|---|---|---|---|---|
| | | | | 2008-09 | 2009-10 | 2010-11 |
| 1 | ಬಾಗಲಕೋಟೆ | 11 | 670.07 | 1596 | 2875 | 0 |
| 2 | ಬೀದರ್ | 13 | 430.30 | 4692 | 3070 | 0 |
| 3 | ಚಿಂತಾಮಣಿ | 29 | 4009.99 | 26848 | 23258 | 0 |
| 4 | ಚಿತ್ರದುರ್ಗ | 4 | 973.75 | 3364 | 14632 | 357 |
| 5 | ಹಾವೇರಿ | 28 | 2131.18 | 30349 | 6484 | 0 |
| 6 | ಬಳ್ಳಾರಿ ಮತ್ತು ಕೊಪ್ಪಳ | 18 | 1006.40 | 7579 | 3347 | 0 |
| 7 | ಕೋಲಾರ | 11 | 4428.82 | 12942 | 16276 | 0 |
| 8 | ರಾಯಚೂರು | 5 | 966.09 | 4323 | 6179 | 0 |
| 9 | ತುಮಕೂರು | 27 | 4368.88 | 25360 | 24955 | 0 |
| ಮೊದಲನೇ ಹಂತದ ಮುಂದುವರೆದ ಯೋಜನೆ | | | | | | |
| 1 | ಬಾಗಲಕೋಟೆ | 17 | 399 | 0 | 0 | 138 |
| 2 | ಬೀದರ್ | 36 | 1189 | 0 | 0 | 132 |
| 3 | ಚಿಕ್ಕಬಳ್ಳಾಪುರ | 137 | 3506 | 0 | 0 | 842 |
| 4 | ಚಿತ್ರದುರ್ಗ | 96 | 2747 | 0 | 0 | 335 |
| 5 | ಹಾವೇರಿ | 200 | 5071 | 0 | 0 | 274 |
| 6 | ಬಳ್ಳಾರಿ | 33 | 1069 | 0 | 0 | 359 |
| 7 | ಕೋಲಾರ | 177 | 3244 | 0 | 0 | 227 |
| 8 | ರಾಯಚೂರು | 19 | 611 | 0 | 0 | 128 |
| 9 | ತುಮಕೂರು | 114 | 2447 | 0 | 0 | 411 |
| ಹೆಚ್ಚುವರಿ ಹಣಕಾಸಿನ ಯೋಜನೆ | | | | | | |
| 1 | ಬೆಳಗಾವಿ | 134 | 3316 | 0 | 0 | 267 |
| 2 | ಬಿಜಾಪುರ | 48 | 1619 | 0 | 0 | 560 |
| 3 | ಚಿಕ್ಕಮಗಳೂರು | 111 | 1856 | 0 | 0 | 200 |
| 4 | ದಾವಣಗೆರೆ | 86 | 2615 | 0 | 0 | 522 |
| 5 | ಧಾರವಾಡ | 103 | 2423 | 0 | 0 | 30 |
| 6 | ಹಾಸನ | 51 | 1376 | 0 | 0 | 168 |
| 7 | ಶಿವಮೊಗ್ಗ | 424 | 7677 | 0 | 0 | 1024 |
| 9 | ಉತ್ತರ ಕನ್ನಡ | 90 | 1582 | 0 | 0 | 44 |

**ಶ್ರೀ ಪಟೇಲ್ ಶಿವರಾಂ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಹಾಸನ ನಗರಕ್ಕೆ ಹೊಂದಿಕೊಂಡಿರುವ ಹುಣಸಿನ ಕೆರೆ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು ಎನ್ನುವ ವಿಚಾರದ ಬಗ್ಗೆ ಬಹಳಷ್ಟು ಸಲ ನಾನು ಸರ್ಕಾರಕ್ಕೆ ಮನವಿಯನ್ನು ಮಾಡಿದ್ದೇನೆ. ಹಾಸನದಲ್ಲಿ ಬೇಲೂರು ಮತ್ತು ಹಳೇಬೀಡು ಯಾತ್ರಾ ಸ್ಥಳಗಳು ಬರುವಂತಹ ದಾರಿಯಲ್ಲಿಯೇ ಈ ಕೆರೆ ಬರುತ್ತದೆ. ಈ ಕೆರೆಯನ್ನು ಅಭಿವೃದ್ಧಿಪಡಿಸಬೇಕೆಂದು ಬಹಳ ಸಲ ಸರ್ಕಾರದ ಮೇಲೆ ಒತ್ತಾಯವನ್ನು ತಂದಿದ್ದೇವೆ. ಮಾನ್ಯ ಸಚಿವರು ಎಲ್ಲಾ ಕೆರೆಗಳ ಮಾಹಿತಿಯನ್ನು ನೀಡಿದ್ದಾರೆ. ಆದರೆ, ಬಹಳಷ್ಟು ಕೆರೆಗಳನ್ನು ಸರ್ವೆ ಮಾಡಿ ಅದರ ಗಡಿಯನ್ನು ಗುರುತು ಮಾಡುವಂತಹ ಕೆಲಸವಾಗಿಲ್ಲ. ಬಹಳಷ್ಟು ಕೆರೆಗಳು ಒತ್ತುವರಿಯಾಗಿ ಮುಚ್ಚಿ ಹೋಗುವಂತಹ ಪರಿಸ್ಥಿತಿಗೆ ಬಂದಿವೆ. ಹಾಸನ ನಗರದಲ್ಲಿ ಇರುವಂತಹ ಎಲ್ಲಾ ಕೆರೆಗಳು ಮುಚ್ಚಿ ಹೋಗಿವೆ.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಅದಕ್ಕೆ ಕಾರಣ ಯಾರು ಎನ್ನುವುದನ್ನು ಸಹ ಹೇಳಬೇಕಾಗುತ್ತದೆ. ಚೆನ್ನಾಗಿದಂತಹ ಚನ್ನಪಟ್ಟಣದ ಕೆರೆಯನ್ನು ಮುಚ್ಚಿ ಹಾಕಿದ್ದಾರೆ.

**ಶ್ರೀ ಪಟೇಲ್ ಶಿವರಾಂ:–** ಸನ್ಮಾನ್ಯ ಸಭಾಪತಿಯವರೇ, ಚನ್ನಪಟ್ಟಣದ ಕೆರೆಯಲ್ಲಿ ಒಂದು ಇಂಟರ್‌ನ್ಯಾಷನ್ ಬಸ್‌ಸ್ಟ್ಯಾಂಡ್ ಆಗಿದೆ. ಭಾರತದಲ್ಲಿಯೇ ಈ ಮಾದರಿ ಬಸ್ ನಿಲ್ದಾಣ ಇದೇ ಮೊದಲು. ಹಾಸನ ನಗರ 'ಬಡವರ ಊಟಿ' ಎನ್ನುವಂತಹ ಮಾತು ಇತ್ತು. ಇವತ್ತು ಅಲ್ಲಿ ಇರುವಂತಹ ಕೆರೆಗಳು ಮುಚ್ಚಿ ಹೋಗಿರುವುದರಿಂದ ಅಂತರ್ಜಲದ ಮಟ್ಟ ಮತ್ತು ಹವಾಮಾನ ನಿಯಂತ್ರಣದ ಸ್ಥಿತಿ ತಪ್ಪಿದೆ. ಹುಣಸಿನ ಕೆರೆ ಚೆನ್ನಾಗಿದೆ. ಅದನ್ನು ಅಭಿವೃದ್ಧಿಪಡಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪಟೇಲ್ ಶಿವರಾಂರವರು ಈ ಪ್ರಶ್ನೆಯನ್ನು ಕೇಳಿದಾಗಲೇ, ಹಾಸನ ಪಟ್ಟಣದಲ್ಲಿ ಇರುವಂತಹ ಹುಣಸಿನ ಕೆರೆ ಅಭಿವೃದ್ಧಿ ಆಗಬೇಕೆನ್ನುವ ಉದ್ದೇಶದಿಂದ ಅವರು ಇಷ್ಟಲ್ಲ ಮಾಹಿತಿಯನ್ನು ಕೇಳಿದ್ದಾರೆಂದು ನಾನು ಅರ್ಥ ಮಾಡಿಕೊಂಡೆ. ನಾನು ಬೆಳಿಗ್ಗೆ ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿದ್ದೆ. ಅವರು ರಜೆಯ ಮೇಲೆ ಇದ್ದ ಕಾರಣ ಸಹಾಯಕ ಜಿಲ್ಲಾಧಿಕಾರಿಯವರಿಗೆ ನಿರ್ದೇಶನವನ್ನು ಕೊಟ್ಟಿದ್ದೇನೆ. 2011–2012ನೇ ಸಾಲಿನಲ್ಲಿ ಆರ್.ಡಿ.ಪಿ.ಆರ್.ನಿಂದ ಸುಮಾರು 1000 ಕೋಟಿ ರೂಪಾಯಿಗಳ ಪ್ಯಾಕೇಜ್ ಇದೆ. ಅದರಡಿಯಲ್ಲಿ ಹಾಸನ ಜಿಲ್ಲೆಯ 37 ಕ್ಷೇತ್ರಗಳಿಗೆ 35 ಕೋಟಿ ರೂಪಾಯಿಗಳ ಅನುದಾನವನ್ನು ನೀಡಲಾಗಿದೆ. ಇದರಲ್ಲಿ ಉಳಿತಾಯವಾಗಿರುವ ಹಣದಲ್ಲಿ ಈ ಕೆಲಸವನ್ನು ಮಾಡಲಾಗುತ್ತದೆ. ಅದಕ್ಕೆ ಅವರು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟರೆ ಕೆರೆಯ ಅಭಿವೃದ್ಧಿ ಮಾತ್ರವಲ್ಲ ಅದನ್ನು ಸುಂದರಗೊಳಿಸುವಂತಹ ಕೆಲಸವನ್ನು ಸಹ ಮಾಡಲಾಗುತ್ತದೆ ಎನ್ನುವಂತಹ ಸೂಚನೆಯನ್ನು ಕೊಟ್ಟಿದ್ದೇನೆ. ಇದಕ್ಕಾಗಿ ಸುಮಾರು 4 ಕೋಟಿ ರೂಪಾಯಿಗಳ ಬೇಕಾಗಬಹುದು ಎಂದು ನಮ್ಮ ಅಧಿಕಾರಿಗಳು ಹೇಳಿದ್ದಾರೆ. ಈ ಕೆಲಸವನ್ನು ಖಂಡಿತವಾಗಿಯೂ ಮಾಡಿಸುತ್ತೇನೆ.

**ಶ್ರೀ ಪಟೇಲ್ ಶಿವರಾಂ:–** ಸನ್ಮಾನ್ಯ ಸಭಾಪತಿಯವರೇ, ಕೆರೆಗಳ ಒತ್ತುವರಿಯನ್ನು ಬಿಡುಗಡೆ ಮಾಡಿಸಬೇಕಾಗುತ್ತದೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಸನ್ಮಾನ್ಯ ಸಭಾಪತಿಯವರೇ, ಒತ್ತುವರಿಯ ಬಗ್ಗೆ ಅವರು ಸಹ ಪ್ರಯತ್ನವನ್ನು ಮಾಡಬೇಕಾಗಿದೆ ಹಾಗೂ ಈ ನಿಟ್ಟಿನಲ್ಲಿ ಅವರ ಸಹಕಾರದ ಅಗತ್ಯವೂ ಇದೆ. ಸರ್ವೆಯರ್‌ಗಳನ್ನು ಕೊಡಿ, ಒತ್ತುವರಿಯಾಗಿರುವಂತಹ ಕೆರೆಗಳನ್ನು ನಾವು ತೆರವುಗೊಳಿಸುತ್ತೇವೆ. ಎನ್ನುವ ಸೂಚನೆಗಳನ್ನು ಎಲ್ಲ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ. ಕೆಲವು ಜಿಲ್ಲಾಧಿಕಾರಿಗಳು ಸಹಕಾರವನ್ನು ನೀಡಿ ಸರ್ವೆಯರ್‌ಗಳನ್ನು ಕೊಟ್ಟಿದ್ದಾರೆ. ಆದರೆ, ಸರ್ವೆಯರ್‌ಗಳ ಕೊರತೆ ಇರುವುದರಿಂದ ಕೆಲವರು ಕೊಡುವುದಕ್ಕೆ

ಸಾಧ್ಯವಾಗಿಲ್ಲ. ಆದ್ದರಿಂದ ಸರ್ವೆ ಮಾಡಿಸಿ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

**ಉಡುಪಿಯ ಜಿಲ್ಲಾ ರಂಗಮಂದಿರ ನಿರ್ಮಾಣದ ಬಗ್ಗೆ**

**87; ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಉಡುಪಿ ಜಿಲ್ಲೆಯಲ್ಲಿ ಜಿಲ್ಲಾ ರಂಗಮಂದಿರ ನಿರ್ಮಾಣಕ್ಕೆ ಸರ್ಕಾರ ಹಣ ಬಿಡುಗಡೆ ಮಾಡಿದೆಯೇ;

ಆ) ಉಡುಪಿಯ ಬೀಡನ ಗುಡ್ಡೆಯಲ್ಲಿ ನಿರ್ಮಾಣಗೊಳ್ಳುತ್ತದೆ ಎನ್ನಲಾದ ಜಿಲ್ಲಾ ರಂಗಮಂದಿರದ ಒಟ್ಟು ಯೋಜನಾ ವೆಚ್ಚ ಎಷ್ಟು?

**ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)**

ಅ) **ಹೌದು**

ಆ) **ಒಟ್ಟು ಅಂದಾಜು ವೆಚ್ಚ ರೂ. 2.00 ಕೋಟಿ ಆಗಿರುತ್ತದೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಉಡುಪಿ ಜಿಲ್ಲಾ ರಂಗಮಂದಿರವು ಅತ್ಯಾಧುನಿಕವಾಗಿ ನಿರ್ಮಾಣವಾಗಬೇಕೆನ್ನುವುದು ಆ ಜಿಲ್ಲೆಯ ಅನೇಕ ಹಿರಿಯರ ಆಶಯವಾಗಿದೆ. ಅದಕ್ಕೆ ಪೂರಕವಾಗಿ ಒಂದು ವರ್ಷದ ಹಿಂದೆ ಉಡುಪಿ ಜಿಲ್ಲಾ ರಂಗಮಂದಿರಕ್ಕೆ ಎರಡು ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ಈಗಾಗಲೇ ಒಂದು ಕೋಟಿ ರೂಪಾಯಿಗಳನ್ನು ಉಡುಪಿ ಜಿಲ್ಲಾ ರಂಗಮಂದಿರ ನಿರ್ಮಾಣಕ್ಕೋಸ್ಕರ ಉಡುಪಿ ಜಿಲ್ಲಾ ಆಡಳಿತಕ್ಕೆ ನೀಡಲಾಗಿದೆ. ಒಂದು ವರ್ಷ ಮೀರಿದರೂ ಸಹ ಇನ್ನೂ ನಿವೇಶನವನ್ನು ಗುರುತಿಸುವಂತಹ ಕೆಲಸವನ್ನು ಮಾಡಿಲ್ಲ. ಮೂರ್‍ನಾಲ್ಕು ನಿವೇಶನವನ್ನು ನಮ್ಮಲ್ಲಿ ಇವೆ. ಯಾವ ನಿವೇಶನವನ್ನಾದರೂ ಸಹ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ ಎಂದು ಸ್ಥಳೀಯ ಆಡಳಿತ ಸಂಸ್ಥೆ ಉಡುಪಿ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಸದಸ್ಯರು ಹಾಗೂ ಅಧ್ಯಕ್ಷರು ಹೇಳುತ್ತಾರೆ. ಖಾತೆಗೆ

ಹಣ ಬಂದು ಒಂದು ವರ್ಷವಾಗಿದೆ. ಸರ್ಕಾರ ನಿವೇಶನವನ್ನು ಗುರುತಿಸಿ ರಂಗ ಮಂದಿರವನ್ನು ನಿರ್ಮಾಣ ಮಾಡುವುದಕ್ಕೆ ಬೇಕಾಗಿರುವಂತಹ ಯೋಜನಾ ವ್ಯವಸ್ಥೆಗಳನ್ನು ಈಗಾಗಲೇ ಮಾಡಬೇಕಾಗಿತ್ತು. ಆದರೆ, ವಿಳಂಬವಾಗಿದೆ. ತಕ್ಷಣ ಸರ್ಕಾರ ಆ ಕೆಲಸವನ್ನು ಮಾಡಬೇಕಾಗಿದೆ. ಅಲ್ಲಿರುವಂತಹ ಉಡುಪಿ ನಗರ ಸಭೆ ಇಡೀ ದೇಶದಲ್ಲಿಯೇ ಒಳ್ಳೆಯ ಕೆಲಸವನ್ನು ಮಾಡಿದೆ ಎನ್ನುವಂತಹ ಕಾರಣಕ್ಕಾಗಿ ಅನೇಕ ಬಾರಿ ಬಹುಮಾನವನ್ನು ಗಳಿಸಿಕೊಂಡಿದೆ. ಅಂತಹ ನಗರಸಭೆಯ ಸಾಮಾನ್ಯ ಸರ್ವ ಸದಸ್ಯರ ಸಭೆಯಲ್ಲಿ ಎಲ್ಲ ಪಕ್ಷದ ಸದಸ್ಯರು, 'ಖಾತೆಗೆ ಹಣ ಬಂದು ಒಂದು ವರ್ಷವಾಗಿದ್ದರೂ ಸಹ ಕಾಮಗಾರಿ ಪ್ರಾರಂಭವಾಗಿಲ್ಲ' ಎಂದು ಹೇಳುತ್ತಿದ್ದಾರೆ. ಇದಕ್ಕೆ ಕಾರಣವೇನು ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕಾಗಿದೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಎರಡು ಕೋಟಿ ರೂಪಾಯಿಗಳ ಜೊತೆಗೆ ಆಡಳಿತಾತ್ಮಕ ಮಂಜೂರಾತಿಯನ್ನೂ ಸಹ ನೀಡಿದೆ. ನಿವೇಶನದ ಬಗ್ಗೆ ಹೇಳಬೇಕಾದರೆ, 'ಕೂಡಲೇ ನಿವೇಶನವನ್ನು ಒದಗಿಸಬೇಕು ಮತ್ತು ಕಾಮಗಾರಿಯನ್ನು ಪ್ರಾರಂಭ ಮಾಡಬೇಕು' ಎಂದು ನಾನು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಕೇಳುವುದಕ್ಕೂ ಮೊದಲೇ ಅಲ್ಲಿಯೇ ಸ್ವಲ್ಪ ಪ್ರಯತ್ನ ಮಾಡಿ, ನಿವೇಶನ ಕೊಡಿಸುವಂತಹ ಪ್ರಯತ್ನವನ್ನು ಮಾಡಿದ್ದರೆ ಕಾಮಗಾರಿ ಕೂಡಲೇ ಪ್ರಾರಂಭವಾಗುತ್ತಿತ್ತು. ನಾನು ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಸೂಚನೆಯನ್ನು ಕೊಟ್ಟಿದ್ದೇನೆ. ದುಡ್ಡು ಬಿಡುಗಡೆ ಮಾಡಿದ್ದೇವೆ, ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಸರ್ಕಾರದಿಂದ ಯಾವುದೇ ಪ್ರಕ್ರಿಯೆಗಳು ಬಾಕಿ ಇಲ್ಲ. ಆದರೆ, ನಿವೇಶನ ಕೊಡುವಂತಹ ಅಧಿಕಾರ ಕನ್ನಡ ಸಂಸ್ಕೃತಿ ಇಲಾಖೆಗೆ ಇಲ್ಲ. ಅದಕ್ಕಾಗಿ ವಿಳಂಬವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು, ಇಲ್ಲಿ ಪ್ರಶ್ನೆ ಕೇಳುವುದಕ್ಕೂ ಮುಂಚೆ ಜಿಲ್ಲೆಯಲ್ಲಿಯೇ ಪ್ರಯತ್ನ ಮಾಡಿದ್ದರೆ ಸಮಸ್ಯೆ ಪರಿಹಾರವಾಗುತ್ತಿತ್ತು ಎನ್ನುವಂತಹ ಮಾತನ್ನು ಹೇಳಿದ್ದಾರೆ. ಈ ಮಾತಿನಿಂದ ನನಗೆ ಆಶ್ಚರ್ಯವಾಗಿದೆ. ನಮ್ಮ ನಮ್ಮ ಜಿಲ್ಲೆಗಳಲ್ಲಿ ನಾವೇ ಪ್ರಯತ್ನ ಪಡುವುದಾದರೆ, ನಾವು ಇಲ್ಲಿ ಪ್ರಶ್ನೆ ಕೇಳುವಂತಹ ಅಗತ್ಯವಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ.

**ಸಭಾಪತಿಯವರು:-** ನಿವೇಶನವನ್ನು ಕೊಡಿಸುವುದಕ್ಕೆ ನೀವು ಪ್ರಯತ್ನ ಮಾಡಬೇಕಾಗಿತ್ತು ಎನ್ನುವಂತಹ ಅರ್ಥದಲ್ಲಿ ಮಾನ್ಯ ಸಚಿವರು ಆ ಮಾತುಗಳನ್ನು ಆಡಿದ್ದಾರೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಸನ್ಮಾನ್ಯ ಸಭಾಪತಿಯವರೇ, ಅವರು ದಿನನಿತ್ಯ ಜಿಲ್ಲಾಧಿಕಾರಿಗಳನ್ನು ನೋಡುತ್ತಿರುತ್ತಾರೆ. ಮಾನ್ಯ ಸದಸ್ಯರು ಅವರ ಮೇಲೆ ಒತ್ತಡವನ್ನು ತಂದು ನಿವೇಶನವನ್ನು ಬೇಗ ಕೊಡಲಿ ಎನ್ನುವ ದೃಷ್ಟಿಯಿಂದ ನಾನು ಆ ಮಾತನ್ನು ಹೇಳಿದ್ದೇನೆ. ನಾನು ಬೇರೆ ಉದ್ದೇಶದಿಂದ ಆ ಮಾತುಗಳನ್ನು ಆಡಲಿಲ್ಲ. ನಾನು ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆಯುತ್ತೇನೆ ಎಂದು ಹೇಳಿ ಕುಳಿತುಕೊಳ್ಳಬಹುದಾಗಿತ್ತು. ಮಾನ್ಯ ಸದಸ್ಯರ ಪ್ರಯತ್ನವೂ ಇರಲಿ ಎನ್ನುವಂತಹ ದೃಷ್ಟಿಯಿಂದ ಆ ಮಾತನ್ನು ಹೇಳಿದ್ದೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಪತ್ರವನ್ನು ನಾವೂ ಸಹ ಬರೆಯಬಹುದು. ಆದರೆ, ಮಂತ್ರಿಗಳಾಗಿ ಅವರು ಏನು ಮಾಡಿದ್ದಾರೆ ಎನ್ನುವುದು ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಸನ್ಮಾನ್ಯ ಸಭಾಪತಿಯವರೇ, ನಾನು ಮಂತ್ರಿಯಾಗಿ ಎರಡು ಕೋಟಿ ರೂಪಾಯಿಗಳನ್ನು ನೀಡಿದ್ದೇನೆ, ಆಡಳಿತಾತ್ಮಕ ಅನುಮೋದನೆಯನ್ನೂ ನೀಡಿದ್ದೇನೆ. ಇದು ಆ ಜಿಲ್ಲೆಯ ಸದಸ್ಯರ ಜವಾಬ್ದಾರಿಯೂ ಆಗಿದೆ. ಆದ್ದರಿಂದ ಅವರು ನಿವೇಶವನ್ನು ಮಂಜೂರು ಮಾಡಿಸಿಕೊಂಡು ಕೆಲಸವನ್ನು ಪ್ರಾರಂಭ ಮಾಡಿಸಬೇಕಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ನನ್ನ ಉಲ್ಲೇಖ ಏನೆಂದರೆ, ಮಾನ್ಯ ಸಚಿವರು ತಕ್ಷಣ ಜಿಲ್ಲಾಧಿಕಾರಿಗಳಿಗೆ ಮತ್ತು ಕನ್ನಡ ಸಂಸ್ಕೃತಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ನಿವೇಶನವನ್ನು ಗುರುತಿಸಿ ಕಾಮಗಾರಿಯನ್ನು ಪ್ರಾರಂಭಿಸುತ್ತಾರೆ ಎನ್ನುವಂತಹ ಆಶಯದಿಂದ ನಾನು ಈ ಪ್ರಶ್ನೆಯನ್ನು ಕೇಳಿದ್ದೆ. ಅದನ್ನೆಲ್ಲಾ ನೀವೇ ಮಾಡಿ ಎಂದು ಹೇಳಿದರೆ ಅದರ ಬಗ್ಗೆ ನನ್ನ ಆಕ್ಷೇಪ ಇಲ್ಲ. ಅಷ್ಟಾದರೂ ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಪೂರ್ಣ ಗೌರವ ಮತ್ತು ಅವರ ವ್ಯವಸ್ಥೆಯ ಬಗ್ಗೆ ವಿಶ್ವಾಸವಿದೆ. ದಯವಿಟ್ಟು ಅವರು ತಮ್ಮ ಅಧಿಕಾರಿಗಳನ್ನು ಜಿಲ್ಲೆಗೆ ಕಳುಹಿಸಿಕೊಡಬೇಕು. ಜಿಲ್ಲೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಇದ್ದಾರೆ. ಅವರಿಗೆ ಅದೇ ಕೆಲಸ ಅದೇ ಇಲಾಖೆ, ಅದಕ್ಕಾಗಿಯೇ ಸಂಬಳವನ್ನು ಪಡೆಯುತ್ತಿದ್ದಾರೆ. ಇವರು ಆದೇಶವನ್ನು ನೀಡಿದರೆ ಒಂದು ವಾರದೊಳಗಾಗಿ ಕೆಲಸವಾಗುತ್ತದೆ. ಇದನ್ನು ಮಾಡಬೇಕೆನ್ನುವುದು ನನ್ನ ವಿನಂತಿ ಆಗಿದೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯ ಅಧಿಕಾರ ಬಹಳ ಸಣ್ಣ ದರ್ಜೆಯ ಅಧಿಕಾರಿಯಾಗಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಸಹಾಯಕ ನಿರ್ದೇಶಕರು ಇರುತ್ತಾರೆ. ಕೆಲವು ಐ.ಎ.ಎಸ್ ಅಧಿಕಾರಿಗಳು ಅವರಿಗೆ ಸಂದರ್ಶನವನ್ನು ಸಹ ಕೊಡದೇ ಇರುವಂತಹ ಪರಿಸ್ಥಿತಿ ಇದೆ. ಆತನ ಕಡೆಯಿಂದ ಈ ಕೆಲಸವನ್ನು ಮಾಡಿಸಬೇಕಾದರೆ ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ವಿಳಂಬವಾಗಿದೆ. ಜಿಲ್ಲಾಮಟ್ಟದಲ್ಲಿ ನಮ್ಮದು ಬಹಳ ಸಣ್ಣ ಇಲಾಖೆಯಾಗಿದೆ. ಐ.ಎ.ಎಸ್., ಐ.ಪಿ.ಎಸ್., ಅಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಇಲ್ಲ. ನಾನು ಹೇಳಿರುವಂತಹ ಮಾತುಗಳನ್ನು ಮಾನ್ಯ ಸದಸ್ಯರು ತಪ್ಪಾಗಿ ಅರ್ಥ ಮಾಡಿಕೊಳ್ಳಬಾರದು. ವಿರೋಧ ಪಕ್ಷದಲ್ಲಿ ಸಹಾಯಕ ಜಿಲ್ಲಾಧಿಕಾರಿಗಳಾಗಿ ಕೆಲಸ ಮಾಡಿದಂತಹ ಸದಸ್ಯರು ಇದ್ದಾರೆ. ಸಹಾಯಕ ಜಿಲ್ಲಾಧಿಕಾರಿಗಳೇ ನಮ್ಮ ಸಹಾಯಕ ನಿರ್ದೇಶಕರಿಗೆ ಸಂದರ್ಶನವನ್ನು ಕೊಡದೇ ಇರುವಂತಹ ಪರಿಸ್ಥಿತಿ ಇದೆ.

(11.30 ಗಂಟೆ)

ಮಾನ್ಯ ಸಭಾಪತಿಯವರೇ, ನಾನು practical ಆಗಿ ಮಾತನಾಡುತ್ತಿದ್ದೇನೆ. ನಮ್ಮ ಅಸಿಸ್ಟೆಂಟ್ ಡೈರೆಕ್ಟರ್‌ಗಳಿಗೆ ಯಾರು ಕಿಮ್ಮತ್ತು ಕೊಡುತ್ತಾರೆ? ಸಬ್ ಇನ್ಸ್‌ಪೆಕ್ಟರ್ ಬಂದರೆ ಕರೆದು ಕುಳಿತುಕೊಳ್ಳಲು ಕುರ್ಚಿಯನ್ನು ಕೊಟ್ಟು ಕೂರಿಸುತ್ತಾರೆ. ಅಸಿಸ್ಟೆಂಟ್ ಡೈರೆಕ್ಟರ್ ಬಂದರೆ ಯಾರಾದರೂ ಒಳಗೆ ಕರೆಯುವವರು ಇದ್ದಾರೆಯೇ, ಅವರನ್ನು ಮಾತನಾಡಿಸುವವರು ಇದ್ದಾರೆಯೇ? ಹಾಗೆ ಆಗುವುದಿಲ್ಲ. ಅದಕ್ಕಾಗಿಯೇ ನಮ್ಮ ಇಲಾಖೆ ಪ್ರತಿಯೊಂದು ಕೆಲಸಗಳಿಗೂ ಜಿಲ್ಲಾಧಿಕಾರಿಗಳ ಮೇಲೆ ಅವಲಂಬನೆಯಾಗಿದ್ದೇವೆ. ನಾವು ಜಿಲ್ಲಾಧಿಕಾರಿಗಳಿಗೆ ವಿನಂತಿ ಮಾಡುತ್ತೇವೆ. ನಮ್ಮ ಹಣವನ್ನು ಕೂಡ ನೇರವಾಗಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುತ್ತೇವೆ. ಏಕೆಂದರೆ ಅವರು ಕೆಲಸವನ್ನು ಮಾಡಿಸಲಿ ಎನ್ನುವ ಕಾರಣಕ್ಕಾಗಿ. ಜಿಲ್ಲಾಧಿಕಾರಿಗಳಿಗೆ ಅಧಿಕಾರವಿರುತ್ತದೆ. ಅವರು ಜಿಲ್ಲೆಯ ಮುಖ್ಯಸ್ಥರಾಗಿರುತ್ತಾರೆ. ಅವರಿಗೆ ಹೇಳಿ ಮಾಡಸಲಿ ಎಂದು ಉತ್ತರವನ್ನು ಹೇಳಿದ್ದೇನೆ ಹೊರತು ನಾನು ಜವಾಬ್ದಾರಿಯಿಂದ ನುಣುಚಿಕೊಳ್ಳಬೇಕು ಎಂದು ಅಲ್ಲ.

**ಸಭಾಪತಿಯವರು:-** ಇದು ಸರಿ ಇದೆ. ಗೌರವಾನ್ವಿತ ಸದಸ್ಯರಾದ ಪಟೇಲ್ ಶಿವರಾಂರವರಿಗೂ ಅದನ್ನೇ ಹೇಳಿದರು. ನಾವು ವಿಧಾನ ಪರಿಷತ್ತಿನ ಸದಸ್ಯರುಗಳು ನಮ್ಮ ಕ್ಷೇತ್ರಗಳಲ್ಲಿ ನಮ್ಮ ಅಭಿವೃದ್ಧಿಗಾಗಿ ನಮ್ಮ ಅಧಿಕಾರಿಗಳ ಜೊತೆಗೆ ಮಾತನಾಡಿ ಅವರಿಗೆ ಒತ್ತಾಯ ಮಾಡಿ ಕೆಲಸವನ್ನು ಮಾಡಿಸಿಕೊಳ್ಳುವುದರ ಕಡೆ ನನಗೆ ಸಹಾಯ ಮಾಡಿ ಎಂದು ಸಚಿವರು ಹೇಳಿದ್ದು ಪ್ರಜಾಪ್ರಭುತ್ವದ ದೃಷ್ಟಿಯಿಂದ ಸರಿ ಇದೆ. ಇದರಲ್ಲಿ ತಪ್ಪು ಅರ್ಥ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ.

**ಚಾಮರಾಜನಗರದಲ್ಲಿ ಚೆಕ್‌ಡ್ಯಾಂ ನಿರ್ಮಿಸಿರುವ ಬಗ್ಗೆ**

**261; ಪ್ರೊ॥ ಕೆ.ಆರ್. ಮಲ್ಲಿಕಾರ್ಜುನಪ್ಪ (ಸ್ಥ.ಸಂ. ಕ್ಷೇತ್ರ)**

**ಅ)** 2009 ರಿಂದ ಚಾಮರಾಜನಗರ ಜಿಲ್ಲೆಯ ಯಾವ–ಯಾವ ತಾಲ್ಲೂಕುಗಳಲ್ಲಿ ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗಿದೆ (ತಾಲ್ಲೂಕುವಾರು / ಗ್ರಾಮವಾರು ವಿವರ ನೀಡುವುದು)

**ಆ)** ಇದಕ್ಕಾಗಿ ಒದಗಿಸಲಾದ ಅನುದಾನದ ವಿವರ ನೀಡುವುದು;

**ಇ)** ಪೂರ್ಣಗೊಂಡ ಕಾಮಗಾರಿಗಳು ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ಗ್ರಾಮವಾರು ವಿವರವನ್ನು ನೀಡುವುದು;

**ಈ)** ಕಾಮಗಾರಿ ಮೊತ್ತ, ಕಾಮಗಾರಿ ಗುತ್ತಿಗೆ ನೀಡಿದ ಪ್ರಕ್ರಿಯೆ ಹಾಗೂ ಗುತ್ತಿಗೆದಾರರ ವಿವರ ಒದಗಿಸುವುದು?

**ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)**

**ಅ), ಆ), ಇ) ಮತ್ತು ಈ)** ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಚಾಮರಾಜನಗರ ಜಿಲ್ಲೆಯಲ್ಲಿ ಕೈಗೊಂಡಿರುವ / ಕೈಗೊಳ್ಳಲಾಗುತ್ತಿರುವ ಚೆಕ್‌ಡ್ಯಾಂಗಳ ವಿವರ.

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ | ತಾಲ್ಲೂಕು | ಗ್ರಾಮ | ಕಾಮಗಾರಿ ಹೆಸರು | ಲೆಕ್ಕಶೀರ್ಷಿಕೆ | ಅಂದಾಜು ಮೊತ್ತ | ಅನುದಾನ | ಗುತ್ತಿಗೆದಾರರ ವಿವರ | ಗುತ್ತಿಗೆ ಪ್ರಕ್ರಿಯೆ | ಪ್ರಸ್ತುತ ಹಂತ |
|---|---|---|---|---|---|---|---|---|---|
| | | | | **2009–10** | | | | | |
| 1 | ಚಾಮರಾಜನಗರ | ಅರವಿ | ಚಾಮರಾಜನಗರ ಜಿಲ್ಲೆ ಚಾಮರಾಜನಗರ ತಾಲ್ಲೂಕು ಅರವಿ ಗ್ರಾಮದ ಬಳಿ ಚೆಕ್ ಡ್ಯಾಂ | 4702 ವಿಶೇಷ ಘಟಕ ಯೋಜನೆ | 5.00 | 2.22 | ಬೆಳ್ಳೇಗೌಡ, ಹಳೇಮರ ಗ್ರಾಮ, ಚಾಮರಾಜನಗರ ತಾಲ್ಲೂಕು | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |
| 2 | ಚಾಮರಾಜನಗರ | ಹೊಸಹಳ್ಳಿ | ಚಾಮರಾಜನಗರ ಜಿಲ್ಲೆ ಚಾಮರಾಜನಗರ ತಾಲ್ಲೂಕು ಹೊಸಹಳ್ಳಿ ಗ್ರಾಮದ ಬಳಿ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 2.22 | ಬೆಳ್ಳೇಗೌಡ, ಹಳೇಮರ ಗ್ರಾಮ, ಚಾಮರಾಜನಗರ ತಾಲ್ಲೂಕು | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |
| 3 | ಚಾಮರಾಜನಗರ | ಹೆಗ್ಗಡವಾಡಿ | ಚಾಮರಾಜನಗರ ಜಿಲ್ಲೆ ಚಾಮರಾಜನಗರ ತಾಲ್ಲೂಕು ಹೆಗ್ಗಡವಾಡಿ ಗ್ರಾಮದ ಬಳಿ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 2.22 | ಬೆಳ್ಳೇಗೌಡ, ಹಳೆಮರ ಗ್ರಾಮ, ಚಾಮರಾಜನಗರ ತಾಲ್ಲೂಕು | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |
| 4 | ಚಾಮರಾಜನಗರ | ಕೆಂಗಾಚಿ | ಚಾಮರಾಜನಗರ ಜಿಲ್ಲೆ ಚಾಮರಾಜನಗರ ತಾಲ್ಲೂಕು ಕೆಂಗಾಚಿ ಗ್ರಾಮದ ಬಳಿ ಚೆಕ್ ಡ್ಯಾಂ | 4702 ವಿಶೇಷ ಘಟಕ ಯೋಜನೆ | 5.00 | 2.22 | ಬೆಳ್ಳೇಗೌಡ, ಹಳೆಮರ ಗ್ರಾಮ, ಚಾಮರಾಜನಗರ ತಾಲ್ಲೂಕು | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |
| 5 | ಗುಂಡ್ಲುಪೇಟೆ | ಮಂಟೀಪುರ | ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಮಂಟೀಪುರ ಗ್ರಾಮದ ಬಳಿ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 2.22 | ಮನೋಜ್ ಕುಮಾರ್, ಗುಂಡ್ಲೂರು, ಗುಂಡ್ಲುಪೇಟೆ ತಾಲ್ಲೂಕು | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |
| 6 | ಗುಂಡ್ಲುಪೇಟೆ | ಕನಿಯನಪುರ | ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಕನಿಯನಪುರ ಗ್ರಾಮದ ಬಳಿ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 2.22 | ಜಗದೀಶ್, ಗುಂಡ್ಲುಪೇಟೆ ತಾಲ್ಲೂಕು | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |
| 7 | ಕೊಳ್ಳೇಗಾಲ | ಕೋಟೆಕೆರೆ | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಕೋಟೆಕೆರೆ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 2.22 | ಮನೋಜ್ ಕುಮಾರ್, ಗುಂಡ್ಲೂರು, ಗುಂಡ್ಲುಪೇಟೆ ತಾಲ್ಲೂಕು | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |

| | | | | | | | | | |
|---|---|---|---|---|---|---|---|---|---|
| 8 | ಗುಂಡ್ಲುಪೇಟೆ | ಉಪಕಾರ | ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಉಪಕಾರ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 2.22 | ಎಲ್.ವಿಜಯ್‌ಕುಮಾರ್, 1ನೇ ದರ್ಜೆ ಗುತ್ತಿಗೆದಾರರು, ಕುವೆಂಪು ನಗರ, ಮೈಸೂರು. | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |
| 9 | ಗುಂಡ್ಲುಪೇಟೆ | ಅಂಗಳ ಹೊಸಹಳ್ಳಿ | ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಅಂಗಳ ಹೊಸಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 2.22 | ಶ್ರೀ. ಪ್ರಭು, 2ನೇ ದರ್ಜೆ ಗುತ್ತಿಗೆದಾರರು, ದೇವನಹಳ್ಳಿ, ಗುಂಡ್ಲುಪೇಟೆ ತಾಲ್ಲೂಕು | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |
| 10 | ಗುಂಡ್ಲುಪೇಟೆ | ಉಪಕಾರ ಗಿರಿಜನ ಕಾಲೋನಿ | ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಉಪಕಾರ ಗಿರಿಜನ ಕಾಲೋನಿಯ ಬಳಿ ಚೆಕ್ ಡ್ಯಾಂ ನಿರ್ಮಾಣ | 4702 ಗಿರಿಜನ ಉಪಯೋಜನೆ | 8.00 | 3.20 | ಶ್ರೀ. ಬಸವರಾಜು, 1ನೇ ದರ್ಜೆ ಗುತ್ತಿಗೆದಾರರು, ಗುಂಡ್ಲುಪೇಟೆ | ಟೆಂಡರ್ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |
| | | | | **2010–11** | | | | | |
| 1 | ಕೊಳ್ಳೇಗಾಲ | ಹನೂರು | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಹನೂರು ಬಳಿ ಸ್ವಾಮಿ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 2.00 | ಶ್ರೀ.ಕೆ.ಹರಿಹರನ್, 2ನೇ ದರ್ಜೆ ಗುತ್ತಿಗೆದಾರರು, ಮೈಸೂರು. | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |
| 2 | ಕೊಳ್ಳೇಗಾಲ | ಬೂದಿಪಡಗ | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಕೌಲಿಹಳ್ಳ ಬಳಿ ಚೆಕ್ ಡ್ಯಾಂ ನಿರ್ಮಾಣ | 4702 ಗಿರಿಜನ ಉಪಯೋಜನೆ | 5.00 | 2.00 | ಶ್ರೀ.ಅಬ್ದುರ್ ಮಜೀದ್, 1ನೇ ದರ್ಜೆ ಗುತ್ತಿಗೆದಾರರು, ಕೊಳ್ಳೇಗಾಲ. | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |
| 3 | ಚಾಮರಾಜನಗರ | ಜ್ಯೋತಿಗೌಡನ ಪುರ | ಚಾಮರಾಜನಗರ ಜಿಲ್ಲೆ ಚಾಮರಾಜನಗರ ತಾಲ್ಲೂಕು ಜ್ಯೋತಿಗೌಡನಪುರ ಪೋಷಕನಾಲೆ ಬಳಿ ಚೆಕ್ ಡ್ಯಾಂ ನಿರ್ಮಾಣ | 4702 ಗಿರಿಜನ ಉಪಯೋಜನೆ | 5.00 | 2.00 | ಶ್ರೀ.ಡಿ.ವೈ.ಫಯಾಜ್‌ಖಾನ್, ಕೆಂಪನಪುರ ರಸ್ತೆ, ಕೊಳ್ಳೇಗಾಲ. | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |
| 4 | ಚಾಮರಾಜನಗರ | ಬೆಲ್ಲತ್ತಸಾನೆ | ಚಾಮರಾಜನಗರ ಜಿಲ್ಲೆ ಚಾಮರಾಜನಗರ ತಾಲ್ಲೂಕು ಬೆಲ್ಲತ್ತಸಾನೆ ಬಳಿ ಚೆಕ್ ಡ್ಯಾಂ ನಿರ್ಮಾಣ | 4702 ಗಿರಿಜನ ಉಪಯೋಜನೆ | 5.00 | 2.00 | ಶ್ರೀ.ಮಾಂತಪ್ಪ, ಆಲ್ಲೂರು ಗ್ರಾಮ, ಚಾಮರಾಜನಗರ ಜಿಲ್ಲೆ. | ತುಂಡು ಗುತ್ತಿಗೆ ಆಧಾರದ ಮೇಲೆ | ಕಾಮಗಾರಿ ಮುಗಿದಿದೆ. |

(ಲಕ್ಷ ರೂ.ಗಳಲ್ಲಿ)

2011-12

| ಕ್ರ. ಸಂ | ತಾಲ್ಲೂಕು | ಗ್ರಾಮ | ಕಾಮಗಾರಿ ಹೆಸರು | ಲೆಕ್ಕ ಶೀರ್ಷಿಕೆ | ಅಂದಾಜು ಮೊತ್ತ | ಒದಗಿಸಿರುವ ಅನುದಾನ | ಷರಾ |
|---|---|---|---|---|---|---|---|
| 1 | ಕೊಳ್ಳೇಗಾಲ | ಮಧುವನಹಳ್ಳಿ | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಮಧುವನಹಳ್ಳಿ ಗ್ರಾಮದ ಬಳಿ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 1.70 | ಕರಾರು ಹಂತದಲ್ಲಿದೆ. |
| 2 | ಕೊಳ್ಳೇಗಾಲ | ಹೊಂಡರಬಾಳು | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಹೊಂಡರಬಾಳು ಗ್ರಾಮದ ಬಳಿ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 1.70 | ಕರಾರು ಹಂತದಲ್ಲಿದೆ. |
| 3 | ಕೊಳ್ಳೇಗಾಲ | ಚಿಕ್ಕಿಂದುವಾಡಿ | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಚಿಕ್ಕಿಂದುವಾಡಿ ಗ್ರಾಮದ ಬಳಿ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 1.70 | ಕರಾರು ಹಂತದಲ್ಲಿದೆ. |
| 4 | ಕೊಳ್ಳೇಗಾಲ | ಲಕ್ಕೀಪುರ | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಲಕ್ಕೀಪುರ ಗ್ರಾಮದ (ಗುಂಡಾಲ್ ಜಲಾಶಯ ರಸ್ತೆ) ಬಳಿ ಚೆಕ್ ಡ್ಯಾಂ ನಿರ್ಮಾಣ | 4702ವಿಶೇಷ ಘಟಕ ಯೋಜನೆ | 5.00 | 1.70 | ಕರಾರು ಹಂತದಲ್ಲಿದೆ. |
| 5 | ಕೊಳ್ಳೇಗಾಲ | ತೆಳ್ಳನೂರು | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ತೆಳ್ಳನೂರು ಗ್ರಾಮದ ಬಸವನಶೆಟ್ಟಿ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 1.70 | ಕರಾರು ಹಂತದಲ್ಲಿದೆ. |
| 6 | ಕೊಳ್ಳೇಗಾಲ | ತೆಳ್ಳನೂರು | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ತೆಳ್ಳನೂರು ಗ್ರಾಮದ ಮಾದೇವಶೆಟ್ಟಿ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | 4702ವಿಶೇಷ ಘಟಕ ಯೋಜನೆ | 5.00 | 1.70 | ಕರಾರು ಹಂತದಲ್ಲಿದೆ. |
| 7 | ಕೊಳ್ಳೇಗಾಲ | ಸಿಂಗಾನಲ್ಲೂರು | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಸಿಂಗಾನಲ್ಲೂರು ಗ್ರಾಮದ ಬಳಿ ಪ.ಜಾತಿ ಜನಾಂಗಕ್ಕೆ ಸೇರಿದ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 1.70 | ಕರಾರು ಹಂತದಲ್ಲಿದೆ. |
| 8 | ಕೊಳ್ಳೇಗಾಲ | ದೊಡ್ಡಿಂದವಾಡಿ | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ದೊಡ್ಡಿಂದವಾಡಿ ಗ್ರಾಮದ ಬಳಿ ಪ.ಜಾತಿ ಜನಾಂಗಕ್ಕೆ ಸೇರಿದ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 1.70 | ಕರಾರು ಹಂತದಲ್ಲಿದೆ. |
| 9 | ಕೊಳ್ಳೇಗಾಲ | ಚಿಕ್ಕಲ್ಲೂರು | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಚಿಕ್ಕಲ್ಲೂರು ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ | 4702 ವಿಶೇಷ ಘಟಕ ಯೋಜನೆ | 5.00 | 1.70 | ತಾಂತ್ರಿಕ ಮಂಜೂರಾತಿ ಆಗಬೇಕಾಗಿದೆ. |
| 10 | ಕೊಳ್ಳೇಗಾಲ | ಪಾಳ್ಯ | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಪಾಳ್ಯ ಬಳಿ ಪ.ಪಂಗಡದವರ ಜನಾಂಗಕ್ಕೆ ಸೇರಿದ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | 4702 ಗಿರಿಜನ ಉಪಯೋಜನೆ | 5.00 | 1.70 | ಕರಾರು ಹಂತದಲ್ಲಿದೆ. |
| 11 | ಕೊಳ್ಳೇಗಾಲ | ಧನಗೆರೆ | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಧನಗೆರೆ ಗ್ರಾಮ ಪ.ಪಂಗಡದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | 4702 ಗಿರಿಜನ ಉಪಯೋಜನೆ | 5.00 | 1.70 | ಕರಾರು ಹಂತದಲ್ಲಿದೆ. |
| 12 | ಕೊಳ್ಳೇಗಾಲ | ದೊಡ್ಡಿಂದವಾಡಿ | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ದೊಡ್ಡಿಂದವಾಡಿ ಗ್ರಾಮ ಪ.ಪಂಗಡದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | 4702 ಗಿರಿಜನ ಉಪಯೋಜನೆ | 5.00 | 1.70 | ಕರಾರು ಹಂತದಲ್ಲಿದೆ. |
| 13 | ಕೊಳ್ಳೇಗಾಲ | ಸರಗೂರು | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಸರಗೂರು ಗ್ರಾಮ ಪ.ಪಂಗಡದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | 4702 ಗಿರಿಜನ ಉಪಯೋಜನೆ | 5.00 | 1.70 | ಕರಾರು ಹಂತದಲ್ಲಿದೆ. |
| 14 | ಕೊಳ್ಳೇಗಾಲ | ಸತ್ತೇಗಾಲ | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಸತ್ತೇಗಾಲ ಗ್ರಾಮ ಪ.ಪಂಗಡದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ | 4702 ಗಿರಿಜನ ಉಪಯೋಜನೆ | 5.00 | 1.70 | ತಾಂತ್ರಿಕ ಮಂಜೂರಾತಿ ಆಗಬೇಕಾಗಿದೆ. |

**ಪ್ರೊ॥ ಕೆ.ಆರ್. ಮಲ್ಲಿಕಾರ್ಜುನಪ್ಪ:–** ಮಾನ್ಯ ಸಭಾಪತಿಯವರೇ, ಚಾಮರಾಜನಗರ ಜಿಲ್ಲೆಯಲ್ಲಿ ನಿರ್ಮಾಣವಾಗಿರತಕ್ಕಂಥ ಚೆಕ್‌ಡ್ಯಾಂಗಳಲ್ಲಿ ಬಹುತೇಕ್ ಚೆಕ್‌ಡ್ಯಾಂಗಳ ಗುಣಮಟ್ಟ ಕಳಪೆ ಇದೆ ಎಂದು ಸಾರ್ವಜನಿಕರಿಂದ ದೂರು ಬಂದಿದೆ. ಅದರ ಬಗ್ಗೆ ಏನಾದರೂ ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ, ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಅಲ್ಲಿರತಕ್ಕಂಥ ಚೆಕ್ಕ ಡ್ಯಾಂಗಳ ಕೆಲಸಗಳು ಬಹಳ ಚಿಕ್ಕ ಕೆಲಸಗಳಾಗಿವೆ. 2 ಲಕ್ಷ, 3 ಲಕ್ಷ, 4 ಲಕ್ಷ ರೂಪಾಯಿಯೊಳಗೆ ಇರತಕ್ಕಂಥ ಕಾಮಗಾರಿಗಳವು. ಒಂದೆರಡು ದೊಡ್ಡ ಕಾಮಗಾರಿಗಳಿರಬಹುದು. ಆದರೆ ಅವರು ಕಾಮಗಾರಿಯಲ್ಲಿ ಕಳಪೆಯಾಗಿದೆ ಎಂದರೆ ಕೂಡಲೇ ನಾನು ನಮ್ಮ ಮುಖ್ಯ ಇಂಜಿನಿಯರ್‌ರವರಿಂದ ಇನ್ಸ್‌ಪೆಕ್ಷನ್ ಮಾಡಿಸಿ ವರದಿಯನ್ನು ತರಿಸುತ್ತೇನೆ. ಕಳಪೆ ಕೆಲಸಗಳಾಗಿದ್ದರೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇನೆ.

## ಬೆಳಗಾವಿ ಜಿಲ್ಲೆಯ ಧೂದಗಂಗಾ ನದಿಯ ಕಾಳಮ್ಮವಾಡಿ ನೀರಾವರಿ ಯೋಜನೆಯ ಬಗ್ಗೆ

**200; ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥ.ಸಂ. ಕ್ಷೇತ್ರ)**

**ಅ)** ಬೆಳಗಾವಿ ಜಿಲ್ಲೆಯ ದೂಧಗಂಗಾ ನದಿಯ ಕಾಳಮ್ಮವಾಡಿ ನೀರಾವರಿ ಯೋಜನೆಯ ಬಗ್ಗೆ ಮಹಾರಾಷ್ಟ್ರ ಸರ್ಕಾರದ ಜೊತೆ ಆದ ಒಪ್ಪಂದವೇನು? ನೀರಿನ ಹಂಚಿಕೆ ಪ್ರಮಾಣ ಎಷ್ಟು;

**ಆ)** ಯಾವ ವರ್ಷ ಒಪ್ಪಂದ ಮಾಡಿಕೊಳ್ಳಲಾಗಿದೆ; ಇದಕ್ಕೆ ತಗುಲಿರುವ ಹಣಕಾಸು ವೆಚ್ಚವೆಷ್ಟು? ಸರ್ಕಾರ ಈ ಯೋಜನೆಗೆ ಇಲ್ಲಿಯವರೆಗೆ ಎಷ್ಟು ಹಣ ಒದಗಿಸಿದೆ;

**ಇ)** ಎಷ್ಟು ನೀರಾವರಿ ಕ್ಷೇತ್ರವನ್ನು ಬಳಸಿಕೊಂಡಿದೆ; ಈ ಯೋಜನೆಯಿಂದ ನೀರಾವರಿಗೆ ಒಳಪಡುವ ನೀರಾವರಿ ಕ್ಷೇತ್ರ ಎಷ್ಟು;

**ಈ)** ಈ ಕಾಮಗಾರಿ ಕುಂಠಿತವಾಗಲು ಕಾರಣವೇನು?

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ) ಕಾಳಮ್ಮವಾಡಿ ನೀರಾವರಿ ಯೋಜನೆಯಡಿ ಮಹಾರಾಷ್ಟ್ರ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಪ್ಪಿಗೆಯಂತೆ ದೂಧಗಂಗಾ ಯೋಜನೆಯ ನಿರ್ಮಾಣ ಮತ್ತು ನಿರ್ವಹಣೆ ಮಾಡುವುದು ಒಳಗೊಂಡಿರುತ್ತದೆ. ಕಾಳಮ್ಮವಾಡಿ ಜಲಾಶಯದಡಿ ಒಟ್ಟು ಬಳಕೆಯಾಗುವ 27.43 ಟಿಎಂಸಿ ಯಲ್ಲಿ ಕರ್ನಾಟಕದ ಪಾಲು 4 ಟಿಎಂಸಿ ಆಗಿರುತ್ತದೆ.

ಆ) ದಿನಾಂಕ: 18–8–2001 ರಂದು ಒಪ್ಪಂದವಾಗಿರುತ್ತದೆ. ಈ ಯೋಜನೆಗೆ ಪ್ರಾರಂಭದಿಂದ ದಿನಾಂಕ: 31–12–2011 ರವರೆಗೆ ತಗುಲಿರುವ ಹಣಕಾಸು ವೆಚ್ಚ ರೂ. 215.11 ಕೋಟಿಗಳಾಗಿದ್ದು, ಸರ್ಕಾರ ಈ ಯೋಜನೆಗೆ ಇಲ್ಲಿಯವರೆಗೆ 215.11 ಕೋಟಿ ರೂ.ಗಳನ್ನು ಒದಗಿಸಿದೆ.

ಇ) 3800 ಹೆಕ್ಟೇರ್ ಬಳಸಿಕೊಂಡಿದೆ. ಈ ಯೋಜನೆಯಿಂದ 15,167 ಹೆಕ್ಟೇರ್ ನೀರಾವರಿಗೆ ಒಳಪಡುತ್ತದೆ.

ಈ) ಕಾಳಮ್ಮವಾಡಿ ಜಲಾಶಯದ ಎಡದಂಡೆ ಕಾಲುವೆಯು (ದೂಧಗಂಗಾ ಎಡದಂತೆ ಕಾಲುವೆ) ಮಹಾರಾಷ್ಟ್ರ ರಾಜ್ಯದ ವ್ಯಾಪ್ತಿಯಲ್ಲಿದ್ದು, ಈ ಕಾಲುವೆಯ ಉದ್ದ 76 ಕಿ.ಮೀ. ಆಗಿದ್ದು, ಈ ಕಾಲುವೆ ನಿರ್ಮಾಣವನ್ನು ಮಹಾರಾಷ್ಟ್ರ ಸರ್ಕಾರ ಕೈಗೆತ್ತಿಕೊಂಡಿದ್ದು, ಕೆಲಸ ಪ್ರಗತಿಯಲ್ಲಿರುತ್ತದೆ. ಕಿ.ಮೀ. ಸಂ. 32 ರಿಂದ 50 ರವರೆಗಿನ ಕಾಲುವೆ ಕೆಲಸಗಳು ರೈತರ ಭೂಸ್ವಾಧೀನದ ಸಮಸ್ಯೆಗಳ ತಕರಾರಿನಿಂದ ನಿಂತು ಹೋಗಿದ್ದು, ಕಿ.ಮೀ 75 ಮತ್ತು 76 ರಲ್ಲಿ ನಿಯೋಜಿತ ಟನೆಲ್ ನಿರ್ಮಾಣ ಕೆಲಸ ಇನ್ನೂ ಪ್ರಾರಂಭವಾಗಿರುವುದಿಲ್ಲ. ಸದರಿ ಕಾಲುವೆಯು ಪೂರ್ತಿಯಾಗಿ ಮಹಾರಾಷ್ಟ್ರದ ವ್ಯಾಪ್ತಿಯಲ್ಲಿದ್ದು, ಮಹಾರಾಷ್ಟ್ರ ಸರ್ಕಾರ ಕೆಲಸಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸಾಕಷ್ಟು ಅನುದಾನವನ್ನು ಬಿಡುಗಡೆ ಮಾಡುತ್ತಿಲ್ಲದ ಕಾರಣ ಮಹಾರಾಷ್ಟ್ರದಲ್ಲಿನ ಕಾಮಗಾರಿಗಳು ನಿಧಾನಗತಿಯಲ್ಲಿವೆ. ಹೀಗಾಗಿ, ಈ

ಕಾಲುವೆಯ ಕಿ.ಮೀ 76 ರಲ್ಲಿ ಕವಲೊಡೆಯುವ ಕುರುಂದವಾಡ ಶಾಖಾ ಕಾಲುವೆಯ ಹಾಗೂ ಕಿ.ಮೀ 4ರಲ್ಲಿ ದತ್ತವಾಡ ಶಾಖಾ ಕಾಲುವೆಯು ಕವಲೊಡೆದಿದ್ದು, ಇದರ ಹಿಂದಿನ ಕಾಲುವೆಯನ್ನು ಮಹಾರಾಷ್ಟ್ರ ಪೂರ್ಣಗೊಳಿಸದೇ ಈ ಕಾಲುವೆಯಲ್ಲಿ ನೀರನ್ನು ಹರಿಬಿಡಲಾಗುವುದಿಲ್ಲ. ಆದುದರಿಂದ, ಕರ್ನಾಟಕದಲ್ಲಿ ದತ್ತವಾಡ ಶಾಖಾ ಕಾಲುವೆಯ ನಿರ್ಮಾಣ ಪ್ರಕ್ರಿಯೆ ನಿಧಾನ ಹಂತದಲ್ಲಿದೆ. ಕರ್ನಾಟಕದ ಜಲ ಸಂಪನ್ಮೂಲ ಸಚಿವರು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಮಹಾರಾಷ್ಟ್ರದ ಜಲ ಸಂಪನ್ಮೂಲ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಮುಂಬಯಿಯಲ್ಲಿ ದಿನಾಂಕ: 15.06.2011 ರಂದು ದೂದ್‌ಗಂಗಾ ಅಂತರರಾಜ್ಯ ಯೋಜನೆಯ ಬಗ್ಗೆ ಚರ್ಚಿಸಿರುತ್ತಾರೆ. ಚರ್ಚೆಯಲ್ಲಿ ಮಹಾರಾಷ್ಟ್ರ ಸರ್ಕಾರವು ದತ್ತವಾಡ ಎಡದಂಡೆ ಕಾಲುವೆ ಕಾಮಗಾರಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಕೂಡಲೇ ಐತೀರ್ಪನ್ನು ನೀಡಿ ಶೀಘ್ರವಾಗಿ ಭೂಸ್ವಾಧೀನ ಪಡಿಸಿಕೊಂಡು ಆದ್ಯತೆ ಮೇಲೆ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ತಿಳಿಸಿರುತ್ತಾರೆ.

**ಶ್ರೀ ಮನೋಹರ ಮಸ್ಕಿ (ಪದವೀಧರರ ಕ್ಷೇತ್ರ) (ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ ಇವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಅನುಕೂಲ ಮಾಡಿಕೊಡುವಂಥ ಒಂದು ಯೋಜನೆ ಇದು. ಇದು ಎರಡು ರಾಜ್ಯ ಸರ್ಕಾರಗಳಿಗೆ ಸೇರಿದೆ ಒಂದು ಯೋಜನೆಯಾಗಿದೆ. ಎರಡನೆಯ ಪ್ರಶ್ನೆಗೆ ಬಹಳ ಸ್ಪಷ್ಟವಾಗಿ ಸರ್ಕಾರ ಉತ್ತರವನ್ನು ನೀಡಿದೆ. ಈ ಯೋಜನೆಗೆ ಇಲ್ಲಿಯವರೆಗೆ 215.11 ಕೋಟಿ ರೂ.ಗಳನ್ನು ಒದಗಿಸಿದೆ ಎಂದು ತಿಳಿಸಿದ್ದಾರೆ. ಅದಕ್ಕಾಗಿ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ 2001 ರಿಂದ ಇಲ್ಲಿಯವರೆವಿಗೂ ಏನು ಯೋಜನಾ ವೆಚ್ಚದಲ್ಲಿ increase ಆಗಿದೆ ಇನ್ನೇನಾದರೂ ಕೊಡಲಿಕ್ಕೆ ಬಾಕಿ ಇದೆಯೇ ಎಂಬುದು ಒಂದು ವಿಚಾರ. ಎರಡನೆಯದಾಗಿ ಇದು ಕರ್ನಾಟಕದ ಭಾಗದಿಂದ ಮುಗಿದಿದೆ. ಈ ಕಾಮಗಾರಿ

ಮಹಾರಾಷ್ಟ್ರ ಭಾಗದಲ್ಲಿರುವಂಥಾದ್ದರಲ್ಲಿ ಪ್ರಗತಿ ಕುಂಠಿತವಾಗಿದೆ. ಅಲ್ಲಿ ಇನ್ನು ಕಾಮಗಾರಿ ಪೂರ್ತಿಗೊಳಿಸುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಈ ಯೋಜನೆಯನ್ನು ಸಂಪೂರ್ಣವಾಗಿ ಜಾರಿಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ನಮ್ಮ ಕರ್ನಾಟಕ ಸರ್ಕಾರದ ಕಡೆಯಿಂದ ಇದನ್ನು ಜಾರಿಗೆ ತರುವ ದೃಷ್ಟಿಯಿಂದ ಯಾವ ಪ್ರಯತ್ನಗಳನ್ನು ಮಾಡಲಾಗಿದೆ, ಯಾವ ರೀತಿ ಮಹಾರಾಷ್ಟ್ರ ಸರ್ಕಾರದ ಜೊತೆಗೆ ಇದರ ಬಗ್ಗೆ ಒಂದು ಸಂಧಾನ, ಚರ್ಚೆ ಅಥವಾ ಒತ್ತಡ ತರುವಂಥಾದ್ದು ನಡೆಯುತ್ತಿದೆ ಮತ್ತು ಹೆಚ್ಚುವರಿ ಯೋಜನಾ ವೆಚ್ಚ ಎಷ್ಟಿದೆ, ಅದನ್ನು ಕೊಡುತ್ತಿದ್ದಾರೆಯೇ?

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಿಳಿಸಿದಂತೆ ಇದೊಂದು ಅಂತರ್‌ರಾಜ್ಯ ಯೋಜನೆಯಾಗಿದೆ. ಮಹಾರಾಷ್ಟ್ರ ಸರ್ಕಾರ ಮತ್ತು ನಮ್ಮ ಕರ್ನಾಟಕ ಸರ್ಕಾರದ ನಡುವೆ 2001ರಲ್ಲಿ ಒಪ್ಪಂದವಾಗಿ ಕಾಳಮ್ಮವಾಡಿ ಜಲಾಶಯದಡಿ ಒಟ್ಟು ಬಳಕೆಯಾಗುವ 27.43 ಟಿಎಂಸಿ ಯಲ್ಲಿ ಕರ್ನಾಟಕದ ಪಾಲು 4 ಟಿಎಂಸಿ ಆಗಿರುತ್ತದೆ. ನಮಗೆ 4 ಟಿಎಂಸಿ ನೀರನ್ನು ಒದಗಿಸಿ ಸುಮಾರು 19,000 ಹೆಕ್ಟೇರ್ ಪ್ರದೇಶಕ್ಕೆ ನೀರನ್ನು ಒದಗಿಸುವಂಥ ಒಂದು ಯೋಜನೆ ಇದಾಗಿದೆ. ಈ ಯೋಜನೆಯಾದ ತಕ್ಷಣವೇ ನಾವು ಇದನ್ನು 2005–06ರಲ್ಲಿ Prime Minister Package ನಲ್ಲಿ ಅಳವಡಿಸಿಕೊಂಡು ತೆಗೆದುಕೊಂಡಿದ್ದೇವೆ. ಈಗಾಗಲೇ ಎಷ್ಟು ಕೆಲಸವಾಗಿದೆಯೋ ಅಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ.

ಮಹಾರಾಷ್ಟ್ರದಿಂದ ಕಳೆದ ಹಲವಾರು ವರ್ಷಗಳಿಂದ ಈ ಯೋಜನೆಗೆ ನೀರನ್ನು ಒದಗಿಸುವಂಥ ದತ್ತವಾಡ ಮತ್ತು ಕುರುಂದವಾಡ ಎಂಬ ಎರಡು branch canal ಇದ್ದಾವೆ. ಅಲ್ಲಿ ಅವರು ಯೋಜನೆಯನ್ನು ಪೂರ್ಣಗೊಳಿಸಿಲ್ಲ. ಒಟ್ಟು 76 ಕಿ.ಮೀ.ನಲ್ಲಿ ಸುಮಾರು 32 ರಿಂದ 50 ಅಂದರೆ ಸುಮಾರು 18 ಕಿ.ಮೀ. ಅವರು ಪೂರ್ತಿ ಮಾಡದೇ ಇರುವ ಸ್ಥಿತಿ ಇದೆ. ಅದಕ್ಕಾಗಿ ನಾವು ನಾಲ್ಕೈದು ಸಭೆಗಳನ್ನು ಮಹಾರಾಷ್ಟ್ರ ಸರ್ಕಾರದ ಜೊತೆಗೆ ಮಾಡಿದ್ದೇವೆ. ಈ

ಸಭೆಗಳನ್ನು ಅಧಿಕಾರಿಗಳ ಮಟ್ಟದಲ್ಲಿ, ಕಾರ್ಯದರ್ಶಿಯವರ ಮಟ್ಟದಲ್ಲಿ ಮತ್ತು ನನ್ನ ಮಟ್ಟದಲ್ಲಿಯೂ ಸಹ ಸಭೆಗಳನ್ನು ಮಾಡಿದ್ದೇವೆ. ನಾನು ಐದಾರು ತಿಂಗಳುಗಳ ಹಿಂದೆ ಹೋಗಿ ಅಲ್ಲಿನ ಸಚಿವರನ್ನು ಭೇಟಿಯಾಗಿ ಅವರ ಜೊತೆಗೆ ಮಾತನಾಡಿದಂಥ ಸಂದರ್ಭದಲ್ಲಿ ಅವರು ಎರಡು ವಿಚಾರಗಳನ್ನು ನನ್ನ ಮುಂದೆ ಇಟ್ಟರು. ಒಂದು ಈ ಯೋಜನೆಗೆ ನಮಗೆ ಸ್ವಲ್ಪ ಹಣಕಾಸಿನ ತೊಂದರೆ ಇದೆ ಎನ್ನುವುದನ್ನು ಒಪ್ಪಿಕೊಂಡರು ಮತ್ತು ಎರಡನೆಯದಾಗಿ land acquisition ನಲ್ಲಿಯೂ ಸಮಸ್ಯೆಯಾಗಿದೆ ಎನ್ನುವುದನ್ನು ಒಪ್ಪಿಕೊಂಡರು. ಅದಕ್ಕೆ ನಾನು ಈಗಾಗಲೇ ನಾವು ನಮ್ಮ ಭಾಗದಲ್ಲಿ ಇಷ್ಟು ಹಣವನ್ನು ಹೂಡಿದ್ದೇವೆ, ಈಗಾಗಲೇ ಇದು ಬರಪೀಡಿತ ಪ್ರದೇಶವಾಗಿರುವುದರಿಂದ ರೈತರಿಗೆ ತೊಂದರೆಯಾಗುತ್ತಿದೆ ಎಂದು ನಾನು ಹೇಳಿದೆ. ಇದರ ಬಗ್ಗೆ Agreement ಆಗಿದೆ, MoU ಆಗಿದೆ. ಆ ಪ್ರಕಾರ ನೀವು ನಡೆದುಕೊಳ್ಳಬೇಕಾಗುತ್ತದೆ. ಯಾವುದಾದರೂ ಕೆಲಸವನ್ನು ನಿಲ್ಲಿಸಿಯಾದರೂ ಇದಕ್ಕೆ ನೀವು ಹಣವನ್ನು ಒದಗಿಸಬೇಕು ಮತ್ತು land acquisition ಪ್ರಕ್ರಿಯೆಯನ್ನು ಮುಂದುವರೆಸಬೇಕು ಎನ್ನುವಂಥ ಮಾತನ್ನು ಹೇಳಿದ್ದೇನೆ. ಆಗ ಅವರು ಅದಕ್ಕೆ ಒಪ್ಪಿಕೊಂಡು Minutes of Meeting ಮಾಡಿ ಅಲ್ಲಿನ ಕಾರ್ಯದರ್ಶಿಯವರಿಗೆ ಕೂಡಲೇ ಕ್ರಮವನ್ನು ಜರುಗಿಸಬೇಕೆಂದು ಆದೇಶವನ್ನು ಕೊಟ್ಟರು. ಅದರ ಜೊತೆಗೆ ಅವರು ಈ ಯೋಜನೆಗೆ ಹಣಕಾಸನ್ನು ಒದಗಿಸುತ್ತೇವೆ ಎನ್ನುವ ಮಾತನ್ನು ಸಹ ಹೇಳಿದರು. ಈಗಿನ ವರದಿಯ ಪ್ರಕಾರ land acquisition ನ್ನು ಅವರು ಬಹುತೇಕ ಪೂರ್ಣ ಮಾಡಿದ್ದಾರೆ ಮತ್ತು ಸ್ವಲ್ಪಮಟ್ಟಿಗೆ ಹಣವನ್ನು ಸಹ ಒದಗಿಸಿದ್ದಾರೆ. ಈ ವರ್ಷ ನಾವು ಆ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ಅಲ್ಲಿನ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡಲು ನಾನು ಸಮಯವನ್ನು ಕೇಳಿದ್ದೇನೆ. ಅವರು ಬಹುತೇಕವಾಗಿ ಈ ವಾರ ಅಥವಾ 10 ದಿವಸಗಳೊಳಗಾಗಿ ಸಮಯವನ್ನು ಕೊಡುತ್ತಾರೆ. ಆ ಸಂದರ್ಭದಲ್ಲಿ ಆ ಭಾಗದ ಕೆಲವು ಪ್ರಮುಖ ಶಾಸಕರು, ನಾನು, ನಮ್ಮ ಇಲಾಖೆಯ ಅಧಿಕಾರಿಗಳು ಮತ್ತು ಮಂತ್ರಿಗಳು ಹೋಗಿ ಅಲ್ಲಿನ

ಮುಖ್ಯಮಂತ್ರಿಗಳು, ಹಣಕಾಸಿನ ಸಚಿವರು ಮತ್ತು ನೀರಾವರಿ ಸಚಿವರ ಜೊತೆಗೆ ಕುಳಿತು ಚರ್ಚೆ ಮಾಡಿ ಸಮಸ್ಯೆಯನ್ನು ಬಗೆಹರಿಸಿ, ಇದೇ ವರ್ಷ ನೀರನ್ನು ಒದಗಿಸುವುದಕ್ಕೆ ಎಲ್ಲಾ ರೀತಿಯ ಪ್ರಯತ್ನವನ್ನು ನಾನು ಮಾಡುತ್ತೇನೆ.

**ಶ್ರೀ ಮನೋಹರ್ ಮಸ್ಕಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಪ್ರಯತ್ನಕ್ಕೆ ಅಭಿನಂದನೆಗಳು. ಆದಷ್ಟು ಶೀಘ್ರವಾಗಿ ಈ ಕಾರ್ಯ ಈಡೇರಲಿ ಎಂದು ನಾನು ಹಾರೈಸುತ್ತೇನೆ.

**ರಾಜ್ಯದಲ್ಲಿರುವ "ಪರಂಪರೆ ಮರ"ಗಳ ಕುರಿತು**

**174; ಶ್ರೀ ಮನೋಹರ ಮಸ್ಕಿ (ಪದವೀಧರರ ಕ್ಷೇತ್ರ)**

**ಅ)** ರಾಜ್ಯದಲ್ಲಿ ಪರಂಪರೆಯ ಮರಗಳೆಂದು ಎಷ್ಟು ಮರಗಳನ್ನು ಗುರುತಿಸಲಾಗಿದೆ;

**ಆ)** ಅವುಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು)**

**ಅ)** ಕರ್ನಾಟಕ ಸಚಿವ ವೈವಿದ್ಯ ಮಂಡಳಿಯು ಈವರೆಗೆ ರಾಜ್ಯದಲ್ಲಿ 10 ಪರಂಪರೆಯ ಮರಗಳೆಂದು ಗುರುತಿಸಲಾಗಿದೆ. ಈ ಮರಗಳನ್ನು ಪರಂಪರೆಯ ಮರಗಳೆಂದು ಘೋಷಿಸುವ ಪ್ರಕ್ರಿಯೆಯು ಪ್ರಗತಿ ಹಂತದಲ್ಲಿರುತ್ತದೆ.

**ಆ)**

1. ಪರಂಪರೆಯ ಮರಗಳ ಸಂರಕ್ಷಣೆಯೊಂದಿಗೆ ಕರ್ನಾಟಕ ಜೀವಿ ವೈವಿದ್ಯ ಮಂಡಳಿಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ (ಸಾಮಾಜಿಕ ಅರಣ್ಯ) ಇವರನ್ನು ನೋಡಲ್ ಅಧಿಕಾರಿಗಳೆಂದು ನೇಮಕ ಮಾಡಿದೆ. ಸದರಿ ಉಪ

ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಜೀವ ವೈವಿದ್ಯ ನಿರ್ವಹಣ ಸಮಿತಿಗಳ ಬಲವರ್ಧನೆ ಹಾಗೂ ಸಂರಕ್ಷಣೆಗಾಗಿ ರೂ. 14.50 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

2. ಪರಂಪರೆಯ ಮರಗಳ ಸಂರಕ್ಷಣೆ ಮತ್ತು ನಿರ್ವಹಣೆಯ ಬಗ್ಗೆ ತಯಾರಿಸಿರುವ ಕರಡು ನಿಯಮಗಳನ್ನು ರಾಷ್ಟ್ರೀಯ ಜೀವ ವೈವಿದ್ಯ ಪ್ರಾಧಿಕಾರಕ್ಕೆ ಪರಮರ್ಶೆಗಾಗಿ ಕಳುಹಿಸಲಾಗಿದೆ.
3. ಜಿಲ್ಲಾ ಉಸ್ತುವಾರಿ ಮಂತ್ರಿಗಳಿಂದ/ಗಣ್ಯರಿಂದ ಪಾರಂಪರಿಕ ಮರಗಳ ಮಾಲೀಕರಿಗೆ ಪರಿಸರ ದಿನಾಚರಣೆ ದಿನದಂದು/ಇತರೆ ರಾಷ್ಟ್ರೀಯ ಅಲಂಕಾರ ಫಲಕದೊಂದಿಗೆ ನಗದು ಬಹುಮಾನ ರೂ. 5,000/–ಗಳು ಮತ್ತು ಜಿ.ಪಿ.ಎಸ್ ಮಾರ್ಕರ್‌ನೊಂದಿಗೆ ಪ್ರಮಾಣ ಪತ್ರವನ್ನು ನೀಡಿ ಗೌರವಿಸಲಾಗುವುದು.
4. ಜಿಲ್ಲೆಯ ಪ್ರವಾಸಿ ನಕ್ಷೆಯಲ್ಲಿ ಪಾರಂಪರಿಕ ಮರಗಳನ್ನು ಬಿಂಬಿಸುವುದು (ಗುರುತಿಸುವುದು)

**ಶ್ರೀ ಮನೋಹರ ಮಸ್ಕಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರವನ್ನು ಒದಗಿಸಿದೆ. ಏಕೆ ಅಷ್ಟೊಂದು ನಿಖರವಾಗಿ ಶಬ್ದಶಃ ಉತ್ತರವನ್ನು ಕೊಡಬೇಕೆಂದು ಅವರು ಭಾವಿಸಿದರೋ ನನಗೆ ಗೊತ್ತಿಲ್ಲ. ನಾನು ರಾಜ್ಯದಲ್ಲಿ ಪರಂಪರೆಯ ಮರಗಳೆಂದು ಎಷ್ಟು ಮರಗಳನ್ನು ಗುರುತಿಸಲಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದೆ. ಅವರು ಸಂಖ್ಯೆಯನ್ನು ಮಾತ್ರ ಹೇಳಿದ್ದಾರೆ. ಆ ಮರಗಳ ಹೆಸರುಗಳನ್ನು ಅವರು ಹೇಳಬಹುದಿತ್ತು. ಈಗಲಾದರೂ ಮಾನ್ಯ ಸಚಿವರು ತಿಳಿಸಿದರೆ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಎಷ್ಟು ಪರಂಪರೆಯ ಮರಗಳಿವೆ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಎರಡನೆಯದಾಗಿ ನಾನು ಅವುಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂದು ಕೇಳಿದ್ದೇನೆ. ಅದಕ್ಕೆ ಅವರು ಉತ್ತರವನ್ನು ಕೊಟ್ಟಿದ್ದಾರೆ.

**ಸಭಾಪತಿಯವರು:–** ಮಾನ್ಯ ಮನೋಹರ ಮಸ್ಕಿಯವರೆ, ನೀವು ರಾಜ್ಯದಲ್ಲಿ ಪರಂಪರೆಯ ಮರಗಳೆಂದು ಎಷ್ಟು ಮರಗಳನ್ನು ಗುರುತಿಸಲಾಗಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೀರಿ. ನೀವು ಎಷ್ಟು ಜಾತಿಯ ಮರಗಳಿವೆ ಎಂದು ಕೇಳಿದ್ದರೆ ಅವರು ಹೇಳುತ್ತಿದ್ದರು. ಅವರು ಎಷ್ಟು ಮರಗಳಿವೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಸಿ.ಪಿ. ಯೋಗೀಶ್ವರ್:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಒಟ್ಟು 10 ಮರಗಳನ್ನು ಜೀವ ವೈವಿಧ್ಯ ಇಲಾಖೆ ಗುರುತಿಸಿದೆ. ಅದರಲ್ಲಿ ಸುಮಾರು 883 ವರ್ಷದ ಒಂದು ಮರ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ದೇವರ ಹಿಪ್ಪರಗಿ ಗ್ರಾಮದಲ್ಲಿದೆ. ಒಟ್ಟು 10 ಮರಗಳು ಸುಮಾರು 400, 500, 600 ವರ್ಷಗಳಷ್ಟು ಹಳೆಯ ಮರಗಳಿವೆ. ಅದರ ಮಾಹಿತಿಯನ್ನು ನಾನು ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೆ, 10 ಜಾತಿಯ ಮರಗಳ ಹೆಸರುಗಳು ನಿಮಗೆ ಗೊತ್ತಿದ್ದರೆ ಹೇಳಿ.

**ಶ್ರೀ ಸಿ.ಪಿ. ಯೋಗೀಶ್ವರ್:–** ಮಾನ್ಯ ಸಭಾಪತಿಯವರೇ, ಹುಣಸೇ ಮರ, ಬೇವಿನ ಮರ, ಆಲದ ಮರ, ಅರಳಿ ಮರ, ಕೆಂಪು ಗುರುಗದ ಮರ ಮುಂತಾದವುಗಳಿವೆ.

**ಶ್ರೀ ಘೋಟ್ನೇಕರ್ ಲಕ್ಷ್ಮಣ ಶ್ರೀಕಾಂತ:–** ಮಾನ್ಯ ಸಭಾಪತಿಯವರೇ, ಸುಮಾರು 6 ಮೀಟರ್ ಗಾತ್ರದ ಒಂದು ಟೀಕ್‌ವುಡ್ ಮರ ಜೋಯಿಡಾ ತಾಲ್ಲೂಕಿನಲ್ಲಿದೆ. ಇದು ಮಾನ್ಯ ಸಚಿವರಿಗೂ ಗೊತ್ತಿದೆ. ಈ ಮರಕ್ಕೆ ಸುಮಾರು 500 ವರ್ಷಗಳಾಗಿವೆ.

**ಡಾ॥ ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಯವರೇ, ಸವಣೂರಿನಲ್ಲಿಯೂ ಒಂದು ಹಳೆಯ ಮರವಿದೆ, ಈ ಮರದ ಕೆಳಗಡೆ ಅನ್ನವನ್ನು ಇಟ್ಟರೆ ಅದು ಹಳಸುವುದಿಲ್ಲ. ಇದು ವೈಜ್ಞಾನಿಕವಾಗಿಯು ಸಾಬೀತಾಗಿದೆ.

**ಹುಲಿಕೆರೆ ಏತ ನೀರಾವರಿ ಯೋಜನೆ ಅಪೂರ್ಣಗೊಂಡಿರುವ ಬಗ್ಗೆ**

**285; ಶ್ರೀ ಬಿ. ರಾಮಕೃಷ್ಣ (ಸ್ಥ.ಸಂ. ಕ್ಷೇತ್ರ)**

ಅ) ಇಗ್ಗಲೂರು ಅಣ್ಣೆಕಟ್ಟು ಯೋಜನೆಯಡಿಯಲ್ಲಿ ಬರುವ ಮದ್ದೂರು ತಾಲ್ಲೂಕು ಹುಲಿಕೆರೆ ಏತ ನೀರಾವರಿ ಯೋಜನೆಯು ಅಪೂರ್ಣಗೊಂಡು ಅರ್ಧದಲ್ಲೇ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಸದರಿ ಕಾಮಗಾರಿಯು ಪ್ರಾರಂಭಿಸಿದ ವರ್ಷ ಮತ್ತು ಪೂರ್ಣಗೊಳ್ಳಲು ನಿಗದಿಪಡಿಸಲಾದ ಕಾಲಮಿತಿಯನ್ನೊಳಗೊಂಡಂತೆ ಅಂದಾಜು ವೆಚ್ಚದ ಮಾಹಿತಿ ನೀಡುವುದು.

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ) ಹುಲಿಕೆರೆ ಹಳ್ಳಿಕೆರೆ ಹಾಗೂ ಚುಂಚಗಳ್ಳಿ ಗ್ರಾಮಗಳ ಒಟ್ಟು 500 ಎಕರೆಗೆ ಶಿಂಷಾ ನದಿಯಿಂದ ನೀರೊದಗಿಸುವ ಹುಲಿಕೆರೆ ಏತ ನೀರಾವರಿ ಯೋಜನೆ ಸಣ್ಣ ನೀರಾವರಿ ಇಲಾಖೆಯಿಂದ ರೂ. 22.5 ಲಕ್ಷಗಳಿಗೆ ಮಂಜೂರಾತಿ ಆಗಿರುತ್ತದೆ. ಅವರು 7.55 ಲಕ್ಷ ವೆಚ್ಚಮಾಡಿ ತದನಂತರ ಕಾವೇರಿ ನೀರಾವರಿ ನಿಗಮಕ್ಕೆ 2003–04ನೇ ಸಾಲಿನಲ್ಲಿ ಹಸ್ತಾಂತರವಾಗಿರುತ್ತದೆ. ಉಳಿಕೆ ಕಾಮಗಾರಿಗೆ 59.00 ಲಕ್ಷಗಳ ಅಂದಾಜು ಮಂಜೂರಾಗಿದ್ದು, ಅದರಲ್ಲಿ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಮೋಟಾರು, ಪಂಪ್, ಟ್ರಾನ್ಸ್‌ಫಾರ್ಮರ್ ಖರೀದಿಸಿದೆ. ಆದರೆ, ತದನಂತರ ಶಿಂಷಾ ನದಿಯಲ್ಲಿ ಅವೈಜ್ಞಾನಿಕವಾಗಿ ಸತತ ಮರಳು ಗಣಿಗಾರಿಕೆಯಿಂದ ನದಿಯ ತಳಮಟ್ಟ ಕುಸಿದ ಕಾರಣ ಜಾಕ್‌ವೆಲ್‌ಗೆ ನೀರು ತಲುಪದೆ ಪಂಪ್ ಅಳವಡಿಸುವ ಕಾಮಗಾರಿ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಶಿಂಷಾ ನದಿಯಲ್ಲಿ ಅವೈಜ್ಞಾನಿಕ ಹಾಗೂ ಸತತ ಮರಳು ಗಣಿಗಾರಿಕೆಯಿಂದಾಗಿ ಈ ಸ್ಥಳದಲ್ಲಿ ನದಿಯ ತಳಮಟ್ಟ ಸುಮಾರು 3 ಮೀ ನಷ್ಟು ಕುಸಿದಿರುವುದರಿಂದ ಈ ಯೋಜನೆಯ ಜಾಕ್‌ವೆಲ್‌ಗೆ ನೀರು ಹರಿಯುತ್ತಿಲ್ಲ. ಈ ಬಗ್ಗೆ ತಾಂತ್ರಿಕವಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡು 2012–13ನೇ ಸಾಲಿನಲ್ಲಿ ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಈ ಕಾಮಗಾರಿಯನ್ನು ಸಣ್ಣ ನೀರಾವರಿ ಇಲಾಖೆಯಿಂದ 1988–89ನೇ ಸಾಲಿನಲ್ಲಿ ಪ್ರಾರಂಭಿಸಲಾಗಿರುತ್ತದೆ.

ಸಿವಿಲ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಈವರೆಗೆ ಈ ಯೋಜನೆಗೆ 63.30 ಲಕ್ಷಗಳು ವೆಚ್ಚವಾಗಿದ್ದು, ಈ ಯೋಜನೆಯ ತಾಂತ್ರಿಕ ಅಡಚಣೆಯನ್ನು ನಿವಾರಿಸಿ ಪಂಪ್ ಅಳವಡಿಕೆ ಪೂರ್ಣಗೊಳಿಸಿ ಯೋಜನೆಯನ್ನು 2012–13ನೇ ಸಾಲಿನಲ್ಲಿ ಚಾಲನೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಗಳೆ, ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಯೋಜನೆಯನ್ನು 1988–89ನೇ ಸಾಲಿನಲ್ಲಿ ಆರಂಭಿಸಿರುತ್ತಾರೆ. ಸುಮಾರು 20 ವರ್ಷಗಳು ಕಳೆದರೂ ಕೂಡ ಈ ಯೋಜನೆ ಕಾರ್ಯರೂಪಕ್ಕೆ ಬಂದಿಲ್ಲ. ಇದಕ್ಕೆ ಹಿಂದಿನಿಂದ ಬಂದಂಥ ಸರ್ಕಾರಗಳನ್ನು ನಾನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರು ಯುವಕರಾಗಿದ್ದಾರೆ. ವಿಶೇಷವಾಗಿ ಹಳ್ಳಿಗಳ ಬಗ್ಗೆ ಕಾಳಜಿವುಳ್ಳ ವ್ಯಕ್ತಿಯಾಗಿದ್ದಾರೆ. ಅವರ ತಂದೆ ಕೂಡ ನೀರಾವರಿ ಇಲಾಖೆಯನ್ನು ವಹಿಸಿಕೊಂಡಾಗ ಒಳ್ಳೆಯ ಹೆಸರು ಪಡೆದುಕೊಂಡಿದ್ದರು. ಹಾಗಾಗಿ ಉದ್ದೇಶಿತ ಯೋಜನೆ ಕಡೆ ಗಮನ ಕೊಡುತ್ತಾರೆ ಎಂದು ಭಾವಿಸುತ್ತೇನೆ. ಮಾನ್ಯ ಸಚಿವರು ಈ ಯೋಜನೆಯನ್ನು 2–3 ತಿಂಗಳ ಒಳಗೆ ಕಾರ್ಯರೂಪಕ್ಕೆ ತರುತ್ತಾರೆಂದು ನಾನು ಆಶಾ ಭಾವನೆ ಇಟ್ಟುಕೊಳ್ಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸದಸ್ಯರು ನನ್ನ ಬಗ್ಗೆ ಒಳ್ಳೆಯ ಭಾವನೆ ಇಟ್ಟುಕೊಂಡಿರುವುದಕ್ಕೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ರಾಜ್ಯದಲ್ಲಿ ಸಣ್ಣ ನೀರಾವರಿ ಅಡಿಯಲ್ಲಿ ಬೇರೆ ಬೇರೆ ಕಾರಣಗಳಿಗೋಸ್ಕರ ಅನೇಕ ಏತ ನೀರಾವರಿ ಯೋಜನೆಗಳನ್ನು ಮಾಡಲಾಗಿದೆ. ಅದು ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಕೊಡುವುದಕ್ಕೆ, ಕೆಲವೊಂದು ಕಡೆ ಆಧುನೀಕರಣ ಮಾಡುವಾಗ ನೀರಿಗೆ ತೊಂದರೆ ಆಗಬಾರದು ಎನ್ನುವ ಕಾರಣಕ್ಕೆ ಯೋಜನೆಗಳನ್ನು ಮಾಡಿದ್ದೂ ಇದೆ. ಈ ರೀತಿ ಒಟ್ಟು 18 ಪ್ರಮುಖ ಯೋಜನೆಗಳನ್ನು ಮಾಡಿದ್ದು, ನಾವು ಬಂದಮೇಲೆ ಈ ಪೈಕಿ 11 ಯೋಜನೆಗಳನ್ನು ಪೂರ್ಣ ಮಾಡಿದ್ದೇವೆ. ಈ 18 ಯೋಜನೆಗಳ ವ್ಯಾಪ್ತಿಯಲ್ಲಿ ಹುಲಿಕೆರೆ ಏತ ನೀರಾವರಿ ಯೋಜನೆ ಬಂದಿಲ್ಲ. ಹಾಗಾಗಿ ಇದು ನಮ್ಮ ಗಮನಕ್ಕೆ ಬರುವುದೂ ಕೂಡ ತಡವಾಯಿತು. ಹುಲಿಕೆರೆ, ಹಳ್ಳಿಕೆರೆ ಹಾಗೂ ಚುಂಚಗಳ್ಳಿ ಗ್ರಾಮಗಳ ಒಟ್ಟು 500 ಎಕರೆಗೆ ಶಿಂಷಾ ನದಿಯಿಂದ ನೀರೊದಗಿಸುವ ಹುಲಿಕೆರೆ ಏತ ನೀರಾವರಿ ಯೋಜನೆ ಸಣ್ಣ ನೀರಾವರಿ ಇಲಾಖೆಯಿಂದ ನಮಗೆ ವರ್ಗಾವಣೆಯಾಯಿತು. ಇದುವರೆಗೂ ಈ ಯೋಜನೆಗೆ 63.30 ಲಕ್ಷ ರೂಪಾಯಿಗಳು ಖರ್ಚಾಗಿದೆ. ಪಂಪುಗಳನ್ನು ತಂದಿಟ್ಟಿದ್ದಾರೆ. Pump house ready ಇದೆ, raising rooms ಇದೆ, ಎಲ್ಲವೂ ರೆಡಿಯಾಗಿದೆ. ಸಿವಿಲ್ ವರ್ಕ್ಸ್ ಮುಗಿದಿದೆ. Electrical fittings ಆಗಬೇಕು, electrical connection ಕೊಡಬೇಕು. ಕಳೆದ ಐದಾರು ವರ್ಷಗಳಿಂದ ಶಿಂಷಾ ನದಿಯಲ್ಲಿ ಅವೈಜ್ಞಾನಿಕ ಹಾಗೂ ಸತತ ಮರಳು ಗಣಿಗಾರಿಕೆಯಿಂದಾಗಿ ಆ ಸ್ಥಳದಲ್ಲಿ ನದಿಯ ತಳಮಟ್ಟ ಸುಮಾರು 3 ಮೀಟರ್‌ನಷ್ಟು ಕುಸಿದಿದೆ. ಹೀಗಾಗಿ ಈ ಯೋಜನೆಯು ಬದಲಾವಣೆಯಾಗಿದೆ. ಇದನ್ನು ಪುನರ್ಪರಿಶೀಲನೆ ಮಾಡಿದಾಗ, ಹಿಂದಿದ್ದ Centrifugal pump ಏನಿತ್ತು ಈಗ ಅದು ಸರಿ ಹೊಂದುವುದಿಲ್ಲ ಎಂದು ಗೊತ್ತಾಗಿದೆ. ಈಗ Turbine pumps ಅನ್ನು ಹಾಕಬೇಕು. ಈ ನಿಟ್ಟಿನಲ್ಲಿ ಬದಲಾವಣೆ ಮಾಡುವುದಕ್ಕೆ ಈಗಾಗಲೇ ಆಜ್ಞೆಯನ್ನು ಕೊಟ್ಟಿದ್ದೇನೆ. ಆ Centrifugal pumpಅನ್ನು ಬೇರೆ ಯೋಜನೆಯಲ್ಲಿ ಉಪಯೋಗ ಮಾಡುತ್ತೇವೆ, ಯಾವುದೇ ರೀತಿ ಅದು

ನಿರುಪಯುಕ್ತವಾಗದೇ ಇರುವ ಹಾಗೆ ನೋಡಿಕೊಳ್ಳುತ್ತೇವೆ. Turbine pumps ಬರುವುದಕ್ಕೆ ಮೂರು ತಿಂಗಳು ಬೇಕು. ಈ ಹಿನ್ನೆಲೆಯಲ್ಲಿ pump house ಅನ್ನು ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಈ ಬದಲಾವಣೆಯನ್ನೂ ಕೂಡ ಮೂರು ತಿಂಗಳ ಒಳಗೆ ಮಾಡುತ್ತೇವೆ. ಆಳಕ್ಕೆ ಹೋಗಿ ನೀರನ್ನು ತೆಗೆಯುವುದಕ್ಕೆ ಏನೆಲ್ಲ substances ಬೇಕೋ ಅವೆಲ್ಲವನ್ನೂ ರೆಡಿ ಮಾಡಿಕೊಳ್ಳುತ್ತೇವೆ. ಎಲ್ಲವನ್ನೂ ಮಾಡಿದ ಮೇಲೆ ನಮಗೆ ನಾಲ್ಕೈದು ತಿಂಗಳುಗಳ ಸಮಯ ಬೇಕಾಗುತ್ತದೆ. ಮಾನ್ಯ ಸದಸ್ಯರ ಕಳಕಳಿಯನ್ನು ಗಮನಿಸಿ, ಈ kharif ನಲ್ಲಿ, ಜೂನ್, ಜುಲೈ, ಆಗಸ್ಟ್ ಒಳಗೆ ಆ ನೀರಾವರಿ ಯೋಜನೆಯನ್ನು ಸಿದ್ಧ ಮಾಡಿ ಆ ಭಾಗದ ಹಳ್ಳಿಗಳಿಗೆ, 500 ಎಕರೆ ಪ್ರದೇಶಕ್ಕೆ ನೀರನ್ನೊದಗಿಸುವ ವ್ಯವಸ್ಥೆ ಮಾಡಿಕೊಡುತ್ತೇನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

## ತುರುವೇಕೆರೆ ತಾಲ್ಲೂಕಿನಲ್ಲಿ ಪಿಳ್ಳೆ ಕಾಲುವೆಯಿಂದ ರೈತರು ಹೊಲಗಳಿಗೆ ನೀರು ಹರಿಸುವ ಬಗ್ಗೆ

**15; ಶ್ರೀ ಜಗ್ಗೇಶ್ (ನಾಮ ನಿರ್ದೇಶನ ಹೊಂದಿದವರು)**

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಹೇಮಾವತಿ ನಾಲೆಯಿಂದ ರೈತರಿಗೆ ಉಪಯೋಗವಾಗಲು ಪಿಳ್ಳೆ ಕಾಲುವೆ ಬಹಳ ಮುಖ್ಯವಾಗಿದ್ದು, ಈ ಪಿಳ್ಳೆ ಕಾಲುವೆಯಿಂದ ರೈತರ ಹೊಲಗಳಿಗೆ ನೇರವಾಗಿ ನೀರು ಹರಿಸಬಹುದಾಗಿದ್ದು, ಈ ಕಾಲುವೆಗೆ ನೀರು ಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಹೇಮಾವತಿ ನಾಲೆ ಅಚ್ಚುಕಟ್ಟಿನಲ್ಲಿ ಮಾರ್ಚ್ 2011 ರವರೆಗೆ 11343 ಹೆಕ್ಟೇರ್ ಪ್ರದೇಶಕ್ಕೆ ಹೊಲಗಾಲುವೆ ನಿರ್ಮಿಸಲಾಗಿದೆ. 2011-12ನೇ ಸಾಲಿನಲ್ಲಿ 15,310 ಹೆಕ್ಟೇರ್ ಪ್ರದೇಶಕ್ಕೆ ಹೊಲಗಾಲುವೆ ನಿರ್ಮಿಸುವ ಕಾರ್ಯಕ್ರಮವಿದ್ದು, ಡಿಸೆಂಬರ್-2011ರ ವರೆಗೆ 5000 ಹೆಕ್ಟೇರ್ ಪ್ರಗತಿ ಸಾಧಿಸಿದೆ. ಈವರೆಗೆ ಒಟ್ಟಾರೆ 522.94

ಲಕ್ಷ ವೆಚ್ಚವಾಗಿರುತ್ತದೆ. ಈ ತಾಲ್ಲೂಕಿನ ಬಾಕಿ ಪ್ರದೇಶಕ್ಕೆ ಹೊಲಗಾಲುವೆ ನಿರ್ಮಾಣವನ್ನು 2012–13ನೇ ಸಾಲಿನಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಹೊಸ ಕಾಲುವೆ ಮಾಡಿದಾಗ ಅದರಿಂದಲೂ ಸಮರ್ಪಕವಾಗಿ ನೀರು ಹರಿಯುವ ನಿಟ್ಟಿನಲ್ಲಿ ಎಲ್ಲಾ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಮಾನ್ಯ ಮಧುಸೂದನ್‌ರವರ ಪ್ರಶ್ನೆ ಸಂಖ್ಯೆ 150ಕ್ಕೆ ಉತ್ತರ ಕೊಡಲು ಮಾನ್ಯ ಸಚಿವರು ಕಾಲಾವಕಾಶವನ್ನು ತೆಗೆದುಕೊಂಡಿದ್ದಾರೆ. ನಂತರ ಉತ್ತರ ಕಳುಹಿಸಿ ಕೊಡುತ್ತಾರೆ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಗಳೆ, ನಾನು ಕೇಳಿರುವ ಪ್ರಶ್ನೆ ಏನಿದೆ, ಆ ಕುರಿತು ಕಂಪ್ಯೂಟರ್‌ನಲ್ಲಿ ಒಂದು ಬಟನ್ ಒತ್ತಿದರೆ ಸಾಕು ಉತ್ತರ ಸಿಕ್ಕಿ ಬಿಡುತ್ತದೆ. ಈ ಪ್ರಶ್ನೆಗೆ ಉತ್ತರ ಕೊಡಲು ಏಕೆ ಸಮಯ ತೆಗೆದುಕೊಳ್ಳುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತಿಲ್ಲ. ನಾನು ಕೇಳುವ ಪ್ರಶ್ನೆಗೆ ಉತ್ತರ ಕೊಡಲು ತಯಾರಿ ಮಾಡಿಕೊಳ್ಳಬೇಕು ಎಂದು ಹೇಳುವುದಾದರೆ ಆ ಮಾತು ಬೇರೆ. ಆದರೆ ಮಾಹಿತಿ ಇಲ್ಲ ಎನ್ನುವಂಥದ್ದು ಒಪ್ಪತಕ್ಕದ್ದಲ್ಲ. ಮಾನ್ಯ ಸಭಾಪತಿಗಳೆ, ತಾವು ನಮ್ಮ ರಕ್ಷಣೆಗೆ ಬರಬೇಕು.

**ಸಭಾಪತಿಯವರು:–** ಉತ್ತರ ತರಿಸಿಕೊಡುತ್ತೇವೆ ಎಂದು ಹೇಳಿದ್ದಾರೆ. ಉತ್ತರ ಕೊಡುವುದು ತಡವಾದಾಗ, ಸದನ ಮುಗಿಯುವುದರ ಒಳಗೆ ಉತ್ತರ ಒದಗಿಸಬೇಕು. ಹಾಗಾಗಲಿಲ್ಲ ಎಂದರೆ ಕನಿಷ್ಠ ಸದನ ಮುಗಿದ ನಾಲ್ಕೈದು ದಿನಗಳ ಒಳಗೆ ಸಂಬಂಧಪಟ್ಟ ಮಾನ್ಯ ಸದಸ್ಯರಿಗೆ ಉತ್ತರ ಕಳುಹಿಸಿ ಕೊಡಬೇಕೆಂದು ನಾನು ಎಲ್ಲಾ ಸಚಿವರಿಗೂ ಸುತ್ತೋಲೆ ಕಳುಹಿಸಿದ್ದೇನೆ. ಮತ್ತೊಮ್ಮೆಯೂ ಕಳುಹಿಸುತ್ತೇನೆ.

**ಕಳಸಾ ಬಂಡೂರಿ ನೀರಾವರಿ ಯೋಜನೆಯ ಪ್ರಗತಿ ಬಗ್ಗೆ**

**227; ಶ್ರೀ ಎಸ್.ಆರ್. ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಕಳಸಾ ಬಂಡೂರಿ ನೀರಾವರಿ ಯೋಜನೆಯ ಪ್ರಗತಿ ಬಗ್ಗೆ ಹಾಗೂ ಪೂರ್ತಿಯಾದ ಬಗ್ಗೆ ವಿವರ ಒದಗಿಸುವುದು;

ಆ) ಕಳಸಾ ಬಂಡೂರಿ ನೀರಾವರಿ ಯೋಜನೆಯನ್ನು ಶೀಘ್ರವಾಗಿ ಪೂರ್ಣಗೊಳಿಸುವುದಕ್ಕೆ ಇರುವ ಅಡಚಣೆಗಳೇನು; (ವಿವರ ಒದಗಿಸುವುದು)

ಇ) ಕಳಸಾ ಬಂಡೂರಿ ನೀರಾವರಿ ಯೋಜನೆಯನ್ನು ಶೀಘ್ರವಾಗಿ ಪೂರ್ಣಗೊಳಿಸುವುದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರಗಳನ್ನು ಒದಗಿಸುವುದು)

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ) ಕಳಸಾ ಬಂಡೂರಿ ನಾಲಾ ಯೋಜನೆಯ ಕೆಲಸಗಳು ಪ್ರಗತಿಯಲ್ಲಿವೆ. ಈ ಯೋಜನೆಯಲ್ಲಿ ಬರುವ ಕಳಸಾ ನಾಲಾ ಕೂಡು ಕಾಲುವೆ ನಿರ್ಮಾಣದ ಕೆಲಸವನ್ನು ಅರಣ್ಯೇತರ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, ಮಲಪ್ರಭಾ ನದಿಗೆ ಜೋಡಿಸುವ ಕೂಡು ಕಾಲುವೆಯ ಒಟ್ಟು ಉದ್ದ 5.15 ಕಿ.ಮೀ ಇದ್ದು, ಅದರಲ್ಲಿ ಈಗಾಗಲೇ 3.70 ಕಿ.ಮೀ ಉದ್ದದ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಬಾಕಿ ಉಳಿದ 1.45 ಕಿ.ಮೀ ಕಾಮಗಾರಿಯು ಪ್ರಗತಿಯಲ್ಲಿದ್ದು, ಮೇ 2012 ಒಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಆ) ಸದರಿ ಯೋಜನೆಯ ಕಾಮಗಾರಿಯನ್ನು ಸುಪ್ರೀಂ ಕೋರ್ಟಿನ ನಿರ್ದೇಶನದ ಮೇರೆಗೆ ನಿರ್ಮಿಸಬೇಕಾಗಿರುತ್ತದೆ. ಕಳಸಾ ನಾಲಾ ಕೂಡು ಕಾಲುವೆಯು ಪಶ್ಚಿಮ ಘಟ್ಟದ ಸೂಕ್ಷ್ಮ ಪ್ರದೇಶದಲ್ಲಿದ್ದು, "ಸಡಿಲ ಮಣ್ಣು" ನಿಂದ (loose soil) ಕೂಡಿದ್ದು, ಪ್ರತಿ ಸಾರಿ ಅಗೆತ ಮಾಡಿದಾಗಲೆಲ್ಲಾ ಮಣ್ಣು ಸಂಪೂರ್ಣವಾಗಿ ಕುಸಿದು ಕಾಲುವೆ

ನಿರ್ಮಾಣಕ್ಕೆ ಅಡಚಣೆ ಆಗಿರುತ್ತದೆ. ಆದುದರಿಂದ, ಸದರಿ 1.45 ಕಿಮೀ. ನಲ್ಲಿ ಕಟ್ ಅಂಡ್ ಕವರ್ ಆರ್.ಸಿ.ಸಿ. ಬಾಕ್ಸ್ ನಿರ್ಮಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಮತ್ತು ದೇವಸ್ಥಾನ ಮತ್ತು ಇತರ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಮಣ್ಣಿನ ಅಗೆತ ಮಾಡಲು ಸಾಧ್ಯವಿಲ್ಲದಿರುವಲ್ಲಿ ಬಾಕ್ಸ್ ಪುಷಿಂಗ್ ಟೆಕ್ನಾಲಜಿ ಉಪಯೋಗ ಮಾಡಿಕೊಂಡು ಕಾಲುವೆ ನಿರ್ಮಿಸಲಾಗುತ್ತಿದೆ. ಇದೆಲ್ಲಕ್ಕೂ ತಾಂತ್ರಿಕವಾಗಿ ಹೆಚ್ಚಿನ ಸಮಯ ಬೇಕಾಗಿರುತ್ತದೆ. ಇದಲ್ಲದೇ, ಈ ಪ್ರದೇಶದಲ್ಲಿ ಅತೀ ಹೆಚ್ಚಿನ ಮಳೆಯಿರುವುದರಿಂದ, ವರ್ಷದಲ್ಲಿ ಕೇವಲ 4 ತಿಂಗಳ ಕಾಲ ಮಾತ್ರ ನಿಚ್ಚಳವಾಗಿ ಕೆಲಸ ಮಾಡಲು ಸಾಧ್ಯವಾಗಿರುತ್ತದೆ. ಆದಾಗ್ಯೂ ಕೂಡ 2012 ರಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇ) ಮೇಲೆ ತಿಳಿಸಿದಂತೆ, ಹಲವಾರು ಅಡಚಣೆಗಳಿದ್ದರೂ ಕೂಡ, ಎರಡೂ ಬದಿ ನಿರ್ಬಂಧಿತ ಪ್ರದೇಶದ ನಡುವೆ ಅರಣ್ಯೇತರ ಪ್ರದೇಶದಲ್ಲಿ ಕೆಲಸ ಮಾಡುವ ಪ್ರಕ್ರಿಯೆಯನ್ನು ಅತ್ಯಂತ ಜಾಗ್ರತೆಯಿಂದ ಸರ್ಕಾರ ಮಾಡುತ್ತಿದ್ದು, ಈ ಕುರಿತು ಕಾರ್ಯ ನಿರ್ವಹಿಸುವಾಗ ಹಲವಾರು ಬಾರಿ ಭೂಸ್ತರದ (geological) ಹಾಗೂ ಇತರೆ ತಾಂತ್ರಿಕ ಅಡೆತಡೆಗಳು ಬಂದಾಗ ಎರಡು ಬಾರಿ ಭಾರತೀಯ ವಿಜ್ಞಾನ ಸಂಸ್ಥೆ ಹಾಗೂ ಸಿವಿಲ್ ಏಡ್ ಸಂಸ್ಥೆ, ಬೆಂಗಳೂರು ಈ ಸಂಸ್ಥೆಗಳ ತಾಂತ್ರಿಕ ಪರಿಣಿತರನ್ನು ಕರೆಸಿ ಅವರ ಮಾರ್ಗದರ್ಶನ ಪಡೆದುಕೊಳ್ಳಲಾಗಿದೆ. ತದನಂತರ, ತಾಂತ್ರಿಕ ಉಪ ಸಮಿತಿಯವರು ಸಹ 3–4 ಬಾರಿ ಸ್ಥಳ ಪರಿಶೀಲನೆ ಮಾಡಿ, ಅವರ ಮಾರ್ಗದರ್ಶನದಂತೆ ಕೆಲಸ ಮುಂದುವರೆಸಲಾಗಿದೆ.

ಈ ಯೋಜನೆಗೆ ಸಂಪರ್ಕ ರಸ್ತೆ ಮಾಡುವ ಬೇಡಿಕೆಯನ್ನು ಇಟ್ಟು, ರೈತರು ಈ ಯೋಜನೆಯನ್ನು ಹಲವಾರು ಬಾರಿ ತಡೆ ಹಿಡಿದಿದ್ದರು. ಆದರೆ, ಈಗ ಸಂಪರ್ಕ ರಸ್ತೆ ಕಲ್ಪಿಸಲಾಗಿದ್ದು, ಯೋಜನೆಯ ಕೂಡು ಕಾಲುವೆ ಕೆಲಸವನ್ನು 2012 ರಲ್ಲಿ ಪೂರ್ಣಗೊಳಿಸಲಾಗುವುದು.

**ಶ್ರೀ ಎಸ್.ಆರ್. ಪಾಟೀಲ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರ ತೃಪ್ತಿದಾಯಕವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಅತ್ಯಂತ ಉಪಯುಕ್ತವಾಗುವಂತಹ ಈ ಯೋಜನೆ ಪ್ರಮುಖವಾದುದು. ಸೊರಗಿ ಹೋದಂತಹ ಮಲ್ಲಪ್ರಭಾ ನದಿಗೆ ಜೀವ ಒದಗಿಸುವಂತಹ ಯೋಜನೆ ಇದಾಗಿದೆ. ಮಲ್ಲಪ್ರಭಾ ನದಿಗೆ ಜಲಾಶಯ ಕಟ್ಟಿದ ನಂತರ ಅಲ್ಲಿ ನೀರಿರಲಾರದೆ ಕೇವಲ ಎರಡು-ಮೂರು ಸಲ ಮಾತ್ರ ಭರ್ತಿಯಾಗಿತ್ತು. ಉಳಿದ ಸಂದರ್ಭದಲ್ಲಿ ನೀರಿನ ಕೊರತೆಯಿಂದ ಜಲಾಶಯ ತುಂಬದೇ ಇರುವ ಸ್ಥಿತಿ ಬಂತು. ಇಂತಹ ಸ್ಥಿತಿಯಲ್ಲಿ ಕಳಸಾ ಬಂಡೂರಿ ನಾಲೆಯ ಮುಖಾಂತರ ನಮ್ಮ ಭಾಗದ ಜಿಲ್ಲೆಗಳಿಗೆ ಕುಡಿಯುವ ನೀರಿನ ಯೋಜನೆ ಜೊತೆಗೆ, ನೀರಾವರಿಗೆ ಫಲಪ್ರದವಾಗುವಂಥ ಅತ್ಯಂತ ಪ್ರತಿಷ್ಠಿತವಾದ ರಾಜಕೀಯ ಹೋರಾಟಗಳಿಗೆ ನಾಂದಿ ಹಾಡಿದ್ದ ಈ ಯೋಜನೆಯನ್ನು 2012ರಲ್ಲಿ ಪೂರ್ತಿ ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. 2012ನೇ ವರ್ಷದ ಮಧ್ಯ ಭಾಗದಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುತ್ತಾರೆಯೇ ಎಂಬ ಬಗ್ಗೆ ನಿಖರವಾಗಿ ಹೇಳಬೇಕು. ಮತ್ತೆ, ಕಳಸಾ ಬಂಡೂರಿ ನಾಲೆ ಮುಖಾಂತರ ಎಷ್ಟು ಟಿಎಂಸಿ ಅಡಿ ನೀರು ಮಲ್ಲಪ್ರಭಾ ನದಿಗೆ add ಆಗುತ್ತದೆ ಎಂಬ ಬಗ್ಗೆ ತಿಳಿಸಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಗಳೆ, ಮಹದಾಯಿಯ ಉಪನದಿ, ಉಪಹಳ್ಳಗಳಾದಂತಹ ಕಳಸಾ ಮತ್ತು ಬಂಡೂರಿ ನಾಲಾಗಳಿಂದ ಪಶ್ಚಿಮಕ್ಕೆ ತಿರುಗಿಸಿ ಸುಮಾರು 7.56 ಟಿಎಂಸಿ ಅಡಿ ನೀರನ್ನು ಹುಬ್ಬಳ್ಳಿ-ಧಾರವಾಡ ಮತ್ತು 13 ಪಟ್ಟಣಗಳಿಗೆ ನೀರನ್ನು ಒದಗಿಸುವ ಯೋಜನೆ ಇದಾಗಿದೆ. ತಮಗೆಲ್ಲ ಗೊತ್ತಿರುವ ಹಾಗೆ, ಕೇಂದ್ರ ಸರ್ಕಾರ ಒಟ್ಟಾರೆ ಮಹದಾಯಿ ನದಿ ನೀರು ಹಂಚಿಕೆ ಬಗ್ಗೆ ಒಂದು ಟ್ರಿಬ್ಯೂನಲ್ ರಚಿಸಿದೆ. ಈ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಮತ್ತು ಹಿಂದಿನ ಸರ್ಕಾರ ಎಲ್ಲಾ ಸೇರಿ, ಒಂದು ತಾತ್ವಿಕ ತೀರ್ಮಾನಕ್ಕೆ ಬಂದು, ಅರಣ್ಯೇತರ ಪ್ರದೇಶದಲ್ಲಿ ಕೇಂದ್ರ ಸರ್ಕಾರದವರು Administrative sanction ಕೊಟ್ಟಾಗ ಅದರ ಆಧಾರದ

ಮೇಲೆ ಕೂಡು ಕಾಲುವೆ ಮಾಡಬೇಕೆಂದು ತೀರ್ಮಾನ ಮಾಡಿದೆವು. ಅದು 5.15 ಕಿ.ಮೀ ಇತ್ತು. ಈಗಾಗಲೇ 3.07 ಕಿಲೋ ಮೀಟರ್‌ನ ಕಾಮಗಾರಿ ಸಂಪೂರ್ಣವಾಗಿ ಮುಗಿದಿದೆ. 1.45 ಕಿ.ಮೀ ಕಾಮಗಾರಿಯಲ್ಲಿ ಅದು ಪಶ್ಚಿಮಘಟ್ಟದಲ್ಲಿರುವುದರಿಂದ ಬಹಳ loose ಆಗಿದೆ. ಮುಂದೆ ಅಗೆದುಕೊಂಡು ಹೋದಂತೆ ಹಿಂದೆ ಕುಸಿದು ಬೀಳುತ್ತಿದೆ. ಅದಕ್ಕಾಗಿ ಎರಡು–ಮೂರು ಬಾರಿ ಅಗೆತ ಮಾಡಿದರೂ ಕೂಡ ಅದು ಪ್ರಯೋಜನವಾಗಲಿಲ್ಲ. Indian Institute of Soil Scienceನ Professors ಬಂದು ವಿಸಿಟ್ ಮಾಡಿ ಸಲಹೆಯನ್ನು ಕೊಟ್ಟರು. ಆದರೂ ಅದು ಸರಿಹೋಗಲಿಲ್ಲ. 3–4 ಜಿಯಾಲಿಸ್ಟ್‌ರವನ್ನೆಲ್ಲಾ ಕಳುಹಿಸಿ ಮಾಡಿದ ಮೇಲೆ ಅದಕ್ಕೆ ಸಂಪೂರ್ಣವಾಗಿ cut and cover ಮಾಡಬೇಕೆಂದು ಅವರೇ ತೀರ್ಮಾನ ಮಾಡಿದ ಮೇಲೆ cut and coverಗೆ ಈಗಾಗಲೇ ಕೆಲಸ ನಡೆಯುತ್ತಿದೆ. ಜೊತೆಗೆ ಅಲ್ಲಿ ಒಂದು ಕಡೆ ದೇವಸ್ಥಾನ ಇದೆ. ಅಲ್ಲಿ ನಮಗೆ ಅಗೆತ ಮಾಡಲಿಕ್ಕೂ ಕೂಡ ಅವಕಾಶವಿಲ್ಲ. ಅಲ್ಲಿನ ಜನರು ದೇವಸ್ಥಾನಕ್ಕೆ ತೊಂದರೆಯಾಗುತ್ತಿದೆ ಎಂದು ಬಹಳ ವಿರೋಧ ಮಾಡುತ್ತಿದ್ದಾರೆ. ಆದ್ದರಿಂದ ನ್ಯಾಷನಲ್ ಹೈವೇನಲ್ಲಿ box machine technology ಏನು ಇದೆ, ಅದನ್ನು ಬಳಕೆ ಮಾಡಿ ಮಾಡುತ್ತಿದ್ದೇವೆ. ಇದೆಲ್ಲವನ್ನೂ ಮಾಡುವಾಗ ಕೇವಲ ನಾಲ್ಕು–ನಾಲ್ಕೂವರೆ ತಿಂಗಳು ಮಾತ್ರ ನಮಗೆ ಅಲ್ಲಿ ಸಮಯಾವಕಾಶ ಸಿಕ್ಕಿದೆ. ಮಿಕ್ಕಿದ ಸಮಯದಲ್ಲಿ ಮಳೆ ಜಾಸ್ತಿ ಇರುವುದರಿಂದ ಮಾಡಲಿಕ್ಕೆ ಆಗಿರುವುದಿಲ್ಲ. ಮಳೆ ನಿಂತ ಮೇಲೂ ಕೂಡ ಒಂದು–ಒಂದೂವರೆ ತಿಂಗಳು ಅಲ್ಲಿ ಕೆಲಸ ಮಾಡದಿರುವಂತಹ ಸ್ಥಿತಿ ಇದೆ. ಇದೆಲ್ಲದರ ಹಿನ್ನೆಲೆಯಲ್ಲಿ ಪ್ರಗತಿ ಮಾಡುತ್ತಿದ್ದೇವೆ. ಕೊನೆಯಪಕ್ಷ ನಮಗೆ connecting ನಾಲೆ ರೆಡಿ ಇರುತ್ತದೆ. ಆದರೆ, ಸಂಪೂರ್ಣವಾಗಿ ನೀರು ಬರಬೇಕಾದರೆ ಟ್ರಿಬುನಲ್‌ನಲ್ಲಿ ಪ್ರೊಸಿಡಿಂಗ್ಸ್ ಆದಮೇಲೆ ನಾವು ಸಂಪೂರ್ಣವಾಗಿ ನೀರನ್ನು ಬಳಕೆ ಮಾಡಲಿಕ್ಕೆ ಸಾಧ್ಯ. ಏಕೆಂದರೆ, ಸುಪ್ರೀಕೋರ್ಟ್‌ನ ನಿರ್ದೇಶನ ಏನಿದೆ, ಅದರ ಅಡಿಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಮತ್ತು ಸುಮಾರು 7–8 ಬಾರಿ ಹಲವಾರು ಪರಿಸರವಾದಿಗಳು ಮತ್ತು ಸಿಇಸಿ ಸದಸ್ಯರುಗಳೆಲ್ಲರೂ ಬಂದು ನೋಡಿ ಹೋಗಿ ecological ಆಗಿ

ಯಾವುದೇ ರೀತಿಯಲ್ಲಿ ತೊಂದರೆಯಿಲ್ಲವೆನ್ನುವ ವರದಿಯನ್ನು ಅವರು ಕೊಟ್ಟಿರುವ ವಿಚಾರವನ್ನು ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಈ ಎಲ್ಲಾ restrictions ನಡುವೆ ನಾವು ಕೆಲಸ ಮಾಡುತ್ತಿರುವಾಗ ಸ್ವಲ್ಪಮಟ್ಟಿಗೆ ಕೆಲಸ ಮಂದಗತಿಯಲ್ಲಿ ನಡೆಯುತ್ತಿದೆ. ಆದರೂ ಕೂಡ ಈ ವರ್ಷ ಈ ಕೂಡು ಕಾಲುವೆ ಏನಿದೆ, ಇದನ್ನು 2012 ರಲ್ಲಿ ಪೂರ್ಣ ಮಾಡುವಂತಹ ಉದ್ದೇಶ ನಮ್ಮದಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ನೀರು ನಮಗೆ ಯಾವಾಗ ಸಿಗುತ್ತದೆನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಸಭಾಪತಿಯವರು:-** ಮಾನ್ಯ ಸಚಿವರು ಆ ವಿಚಾರವಾಗಿ ಅಂದಾಜಿನಲ್ಲಿ ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:-** 1.45 ಕಿ.ಮೀಟರ್ ಕೆಲಸವನ್ನು ಈ ವರ್ಷದಲ್ಲಿ ಪೂರ್ಣ ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ.

**ಶ್ರೀ ಬಸವರಾಜ ಬೊಮ್ಮಾಯಿ:-** ತಮಗೆ ಗೊತ್ತಿರುವಂತೆ ಮಹದಾಯಿ ಟ್ರಿಬುನಲ್ ಅನ್ನು ಭಾರತ ಸರ್ಕಾರದವರು ನೇಮಿಸಿದ್ದಾರೆ. ಈಗ ಅದಕ್ಕೆ ಪ್ರೊಸಿಡಿಂಗ್ಸ್ ಪ್ರಾರಂಭವಾಗುತ್ತಿದೆ.

**Sri. S.R. PATIL:-** Terms of reference, ಅಂದರೆ, ಕಾಲುವೆ ಕೆಲಸ ಪೂರ್ಣವಾಯಿತು, ಆದರೆ, ನೀರು ಬಂದಾಗಲೇ ನಮ್ಮ ಮಲಪ್ರಭಕ್ಕೆ ನ್ಯಾಯ ದೊರೆತಂತಾಗುತ್ತದೆ. ಆದ್ದರಿಂದ ತಮ್ಮ ಅಂದಾಜು ಸಮಯವನ್ನು ಹೇಳಿ.

**ಶ್ರೀ ಬಸವರಾಜ ಬೊಮ್ಮಾಯಿ:-** ನಮ್ಮ ಸರ್ಕಾರದವರು ಮತ್ತು ಎಲ್ಲಾ ವಿರೋಧ ಪಕ್ಷದ ನಾಯಕರುಗಳು ಸೇರಿ ಒಂದು ಸಭೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಅದು ಏನೆಂದರೆ, 220 ಟಿಎಂಸಿ ಮಹದಾಯಿ ನೀರನ್ನು ಒಟ್ಟಾರೆ ಹಂಚಿಕೆ ಮಾಡುವ ಸಂದರ್ಭದಲ್ಲಿ ನಮ್ಮ ಕರ್ನಾಟಕದ ಭಾಗದ್ದು ಏನಿದೆ, ಅದನ್ನು ಕೊಡಿ, ಆದರೆ, ಈ ಮಧ್ಯೆ ಇದು ಕುಡಿಯುವ ನೀರಿನ ವಿಚಾರ ಇರುವುದರಿಂದ 7.56 ಗೆ ನಮಗೆ ಅನುಮತಿಯನ್ನು ಕೊಡಿ,

ನಮ್ಮ ಒಟ್ಟಾರೆ ಅಲೋಕೇಷನ್‌ನಲ್ಲಿ ಇದನ್ನು ಅಡ್ಜೆಸ್ಟ್ ಮಾಡಿ ಎನ್ನುವ ಮಾತನ್ನು ಕೂಡ ನಾವು ಹೇಳಿದ್ದೇವೆ. ಆದರೆ, ಅದನ್ನು ಟ್ರಿಬುನಲ್‌ನವರು ಪರಿಗಣಿಸಿಲ್ಲ. ಟ್ರಿಬುನಲ್‌ನವರು ಯಥಾಪ್ರಕಾರ ಆ ನೀರಿನ ಹಂಚಿಕೆಯ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ.

**ಶ್ರೀ ಎಂ.ಸಿ. ನಾಣಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಹದಾಯಿ ನೀರು ಅಲ್ಲಿಂದ ಧಾರವಾಡ–ಹುಬ್ಬಳ್ಳಿಗೆ ಕುಡಿಯುವ ನೀರನ್ನು ಕೊಡಬೇಕಾಗಿರುವಂತಹದ್ದು 7.50 ಟಿಎಂಸಿ ನೀರನ್ನು ನಮಗೆ ದಯವಿಟ್ಟು ಕೊಡಿ, ಹಂಚಿಕೆ ಮಾಡಿಕೊಳ್ಳುವ ಸಮಯದಲ್ಲಿ ಅಡ್ಜೆಸ್ಟ್ ಮಾಡಿಕೊಳ್ಳೋಣ ಎಂದು ಹೇಳುತ್ತಿರುವುದನ್ನು ನಾವು ಕಳೆದ 20 ವರ್ಷಗಳಿಂದ ಹೇಳಿಕೊಂಡು ಬಂದಿದ್ದೇವೆ. ನೀರೇ ಸಿಕ್ಕಿಲ್ಲ, ಆದರೆ ಕಾಲುವೆಯನ್ನು ಕಟ್ಟಿಯಾಯಿತು, ಸುರಂಗ ಮಾರ್ಗ ತೆಗೆದು ಆಯಿತು. ಸುರಂಗ ಮಾರ್ಗ ತೆಗೆಯಲಿಕ್ಕೆ ಪುನಃ ಹಣವನ್ನು ಕೊಟ್ಟಿದ್ದೀರಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಸುರಂಗ ಮಾರ್ಗವನ್ನು ತೆಗೆದಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:–** ನಾನು ನಿಮ್ಮನ್ನು ಕೇಳುವುದೇನೆಂದರೆ ನಿಮಗೆ ಈ ನೀರು ಲಭ್ಯ ಆಗುವಂತಹದ್ದು ನಿಮಗೆ Tribunal Award ಆಗಬೇಕಾಗುತ್ತದೆ. ಇವತ್ತಿನ ಅವರ ಮಾನದಂಡದ ಪ್ರಕಾರ ಬೇಗ ಬಂದಾಯಿತು. ಈಗ ಕಾಲುವೆಯನ್ನು ತೆಗೆದಾದಮೇಲೆ ಪರಿಸ್ಥಿತಿಯನ್ನು ನೋಡಬೇಕಾಗುತ್ತದೆ. ಇದಕ್ಕೆ ಸುಮಾರು 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಾ? 100 ಕೋಟಿ ರೂಪಾಯಿಗಳ ಹಣವನ್ನು ನೀರೇ ಬಂದಿಲ್ಲವೆಂದು ಖರ್ಚು ಮಾಡಿ ಇಲ್ಲಿಗೆ ಸುಮಾರು ವರ್ಷವಾಗಿ ಆ ಕಾಲುವೆಗಳ ಪರಿಸ್ಥಿತಿ ಯಾವ ರೀತಿ ಉಂಟು ಎನ್ನುವುದನ್ನು ನೀವು ನೋಡಿದ್ದೀರಾ? ಹಣವನ್ನು ಎಷ್ಟರಮಟ್ಟಿಗೆ ಖರ್ಚು ಮಾಡಿದ್ದೀರಿ ಎಂದರೆ ಹುಟ್ಟುವ ಮುಂಚೆಯೇ ಕುಲಾವಿ ಹೊಲಿಸುವುದು ಎನ್ನುವಂತಾಗಿದೆ. ಈ ಕೆಲಸವನ್ನು ಏತಕ್ಕೆ ಮಾಡಬೇಕಾಗಿತ್ತು? ಮಾಡಿದ್ದು ಏತಕ್ಕೆಂದು ತಮಗೆ ಗೊತ್ತಿದೆ ಅಲ್ಲವೇ? ನೀರು ಬರುವುದಕ್ಕಿಂತ ಮುಂಚೆ ಇಷ್ಟು ದೊಡ್ಡ

ಪ್ರಮಾಣದ ಹಣವನ್ನು ಖರ್ಚು ಮಾಡಲಿಕ್ಕೆ ಏತಕ್ಕೆ ಇಷ್ಟೊಂದು ಆತುರ ಇತ್ತು? I will call it a sheer waste now. ಇಲ್ಲಿಗೆ 4–5 ವರ್ಷಗಳಾಗಿವೆ. ಕಾಲುವೆಯನ್ನು ಕಟ್ಟಿದ ಮೇಲೆ ಆ ಕಾಲುವೆಯ ಪರಿಸ್ಥಿತಿ ಏನು? ಇನ್ನು ಪುನಃ ಅದನ್ನೇ ರಿಪೇರಿ ಮಾಡಬೇಕಾದರೆ ಅಷ್ಟೇ ದೊಡ್ಡ ಪ್ರಮಾಣದ ಹಣ ಬೇಕಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಸ್ವಲ್ಪಮಟ್ಟಿಗಾದರೂ ಎಚ್ಚರ ವಹಿಸಬೇಕಾಗುತ್ತದೆ. ಚುನಾವಣೆ ಬಂತು ಎಂದು ಹೇಳಿ ತಾವು ಮಾಡಿದಿರಿ ಎಂದು ಎಲ್ಲರಿಗೂ ಗೊತ್ತಿರುವಂತಹ ವಿಚಾರ. ಅದು ಇರಲಿ. ಆ ಪ್ರಶ್ನೆ ಬೇಡ.

**Sri BASAVARAJ BOMMAI:-** To put the record straight, ಈ ತೀರ್ಮಾನವನ್ನು 2005–06ರಲ್ಲಿ ಸರ್ಕಾರಗಳು ಒಂದು ಒಳ್ಳೆಯ ಸದುದ್ದೇಶದಿಂದ ತೆಗೆದುಕೊಂಡಿವೆ. ಏಕೆಂದರೆ, ಇದಕ್ಕೆ ಹಿನ್ನೆಲೆ ಬಹಳ ಮುಖ್ಯ. ಈ ವಿಚಾರ ತಮಗೆಲ್ಲಾ ಗೊತ್ತಿದೆ.

**ಶ್ರೀ ಎಂ.ಸಿ. ನಾಣಯ್ಯ:–** ಈ ವಿಚಾರವನ್ನು ನಾವು 15 ವರ್ಷಗಳಿಂದ ಇಲ್ಲಿ ಚರ್ಚೆ ಮಾಡಿದ್ದೇವೆ. ಆತುರ ನಿಮಗೆ ಏತಕ್ಕೆ ಇತ್ತು? ನಾನು ಕೇಳುತ್ತಿರುವಂತಹದ್ದು, ಸರ್ಕಾರದ ಆತುರ, ಸರ್ಕಾರ ಹಣವನ್ನು ಖರ್ಚು ಮಾಡುವಂತಹ ಪರಿಸ್ಥಿತಿ ಏತಕ್ಕೆ ಇತ್ತು ಹೇಳಿ. It has become unproductive now.

**Sri BASAVARAJ BOMMAI:-** It is not unproductive.

**Sri M.C. NANAIAH:-** Who said it is not unproductive?

**ಶ್ರೀ ಬಸವರಾಜ ಬೊಮ್ಮಾಯಿ:–** I will tell you sir, ನಮಗೆ 2002 ರಲ್ಲಿ ಆಡಳಿತಾತ್ಮಕವಾಗಿ ಅನುಮತಿಯನ್ನು ಕೊಟ್ಟರು. ಮತ್ತೆ 5–6 ತಿಂಗಳಿನಲ್ಲಿ ಅದಕ್ಕೆ ತಡೆಯಾಜ್ಞೆಯನ್ನು ಕೊಟ್ಟರು.

**ಶ್ರೀ ಎಂ.ಸಿ. ನಾಣಯ್ಯ:–** ತಡೆಯಾಜ್ಞೆಯನ್ನು ಯಾರು ಕೊಟ್ಟರು?

**ಶ್ರೀ ಬಸವರಾಜ ಬೊಮ್ಮಾಯಿ:–** ಕೇಂದ್ರ ಸರ್ಕಾರದವರು ತಡೆಯಾಜ್ಞೆಯನ್ನು ಕೊಟ್ಟರು. ಎಲ್ಲಾ ವಿವರವನ್ನು ನಾನು ಹೇಳುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:–** ಬಾಕಿ ಸಂದರ್ಭದಲ್ಲಿ ಆದಲ್ಲಿ, ಯಾರ ಮೇಲಾದರೂ ಗೂಬೆ ಕೂರಿಸುತ್ತಿದ್ದೀರಿ. ಅಲ್ಲವೇ? ಹೇಳಿ, ಅದನ್ನು ಯಾರು ಕೊಟ್ಟರು, ಯಾವ ಕಾಲದಲ್ಲಿ ಕೊಟ್ಟರು, ಯಾವ ಸರ್ಕಾರ ಕೊಟ್ಟಿದೆ ಎನ್ನುವುದನ್ನು ಹೇಳಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಇದರ ಬಗ್ಗೆ ಚರ್ಚೆ ಮಾಡಿ ಎಲ್ಲಾ ರಾಜಕೀಯ ಮಾತನಾಡಬೇಕೆಂದರೆ ಅದಕ್ಕೂ ನಾನು ತಯಾರು ಇದ್ದೇನೆ. ಯಾವ್ಯಾವ ಸರ್ಕಾರಗಳು ಏನೇನು ಮಾಡಿದೆ ಎನ್ನುವುದನ್ನು ನಾನು ಹೇಳಲಿಕ್ಕೆ ತಯಾರಿದ್ದೇನೆ.

**ಸಭಾಪತಿಯವರು:–** ಈಗ ಆ ವಿಚಾರ ಬೇಡ. ಅವರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೀರಿ. ಆ ಚರ್ಚೆಯನ್ನು ಬೇರೆ ಸಂದರ್ಭದಲ್ಲಿ ಮಾತನಾಡೋಣ.

**ಶ್ರೀ ಎಸ್.ಆರ್. ಪಾಟೀಲ್:–** ಹಿಂದಿನ ವಿಚಾರವನ್ನು ಕೆದಕಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ಮಣ್ಣಿನ ಗೋಡೆಗೆ ನೀರು ಹುಗ್ಗಿದರೆ ಮಣ್ಣಿನ ರಾಡು ಸಿಡಿಯುತ್ತದೆ. ನನಗೆ ಅರ್ಥವಾಗಿದೆ. ಆದರೆ, ನನ್ನ ಉದ್ದೇಶ ಎಂದರೆ ಸೊರಗಿದಂತಹ ಮಲಪ್ರಭ ನದಿಗೆ 7.50 ಟಿಎಂಸಿ ನೀರು ತಕ್ಷಣ ಬೇಕು. ಆ ಮೂಲಕ ಆ ಭಾಗದ ರೈತರ ಮತ್ತು ಅನೇಕ ಪಟ್ಟಣಗಳ ಕುಡಿಯುವ ನೀರಿನ ಸಮಸ್ಯೆ ತ್ವರಿತವಾಗಿ ಬಗೆಹರಿಯಬೇಕೆನ್ನುವ ಇಚ್ಛಾಶಕ್ತಿಯಿಂದ ಈ ಪ್ರಶ್ನೆಯನ್ನು ಮಾಡಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಅದೇ ಇಚ್ಛಾಶಕ್ತಿಯಿಂದ ನಾವು ಕೆಲಸ ಮಾಡುತ್ತಿದ್ದೇವೆ. This is a part of the project. ಆದಷ್ಟು ಬೇಗ ನೀರನ್ನು ಕೊಡುತ್ತೇವೆ. ನಮ್ಮ ಪಾಲಿನ ನೀರು ಹರಿದು ಬರುವಂತಹ ವಿಶ್ವಾಸ ಇದೆ. ನಮ್ಮ ಕೇಳಿರುವಂತಹ 45 ಟಿಎಂಸಿ ನೀರು ಬಹಳ ಕಡಿಮೆ ಇರುವುದರಿಂದ ಖಂಡಿತವಾಗಿಯೂ ಸಿಕ್ಕುತ್ತದೆ. ಇದು main part ನಲ್ಲಿರುವುದರಿಂದ ಯಾವುದೂ ಸಹ unproductive expenditure ಆಗುವುದಿಲ್ಲ. Fulfill ಆಗುತ್ತದೆ. ಆ ಟ್ರಿಬುನಲ್ ಆದೇಶ ಬಂದ ತಕ್ಷಣವೇ

ನೀರನ್ನು ಉಪಯೋಗ ಮಾಡಿಕೊಳ್ಳುವಂತಹ ಒಂದು ದೂರದೃಷ್ಟಿಯನ್ನಿಟ್ಟುಕೊಂಡು ಅಂದಿನ ಸರ್ಕಾರ ಮತ್ತು ಇಂದಿನ ಸರ್ಕಾರ ಕ್ರಮವನ್ನು ತೆಗೆದುಕೊಂಡಿದೆ. ಆ ಭಾಗದ ಜನರ ಆಶೋತ್ತರಗಳನ್ನು ಈಡೇರಿಸುವ ಸಲುವಾಗಿ ಇದನ್ನು ಮಾಡಿದ್ದೇವೆ. ಆದ್ದರಿಂದ, ಸುಪ್ರೀಂ ಕೋರ್ಟ್‌ನ ಆದೇಶದ ಅನ್ವಯ ಕೆಲಸ ಮಾಡುತ್ತಿದ್ದೇವೆ. ಟ್ರಿಬುನಲ್ಲೂ ಕೂಡ ಪಡೆದುಕೊಂಡು ಇದನ್ನು ಉಪಯೋಗ ಮಾಡಿಕೊಳ್ಳುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

**ವರಾಹಿ ನೀರಾವರಿ ಯೋಜನೆ ಕಾಮಗಾರಿ ವಿಳಂಬಕ್ಕೆ ನ್ಯಾಯಾಲಯದಲ್ಲಿ ದೂರು**

**294; ಶ್ರೀ ಕೆ.ಸಿ. ಕೊಂಡಯ್ಯ (ವಿ.ಸಭೆಯಿಂದ ಚುನಾಯಿತರಾದವರು)**

**ಅ)** ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ವಾರಾಹಿ ನೀರಾವರಿ ಯೋಜನೆಗಾಗಿ ಟೆಂಡರ್ ಕರೆದು ಹಲವು ವರ್ಷಗಳಾದರು ಇದುವರೆಗೂ ಕಾಮಗಾರಿ ಆರಂಭಿಸದಿರುವ ಕುರಿತು ಸಿ.ಬಿ.ಐ ತನಿಖೆಗೆ ಆದೇಶಿಸುವಂತೆ ರಾಜ್ಯ ಉಚ್ಚನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ದೂರು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ನ್ಯಾಯಾಲಯದಲ್ಲಿ ದಾಖಲಾಗಿರುವ ದೂರಿನ ಪ್ರತಿ ಒದಗಿಸುವುದು)

**ಆ)** ದಾಖಲಾಗಿರುವ ದೂರಿನನ್ವಯ ಸರ್ಕಾರಕ್ಕೆ ನ್ಯಾಯಾಲಯ ನಿರ್ದೇಶನವನ್ನೇನಾದರು ನೀಡಿದೆಯೇ; (ನಿರ್ದೇಶನದ ಪ್ರತಿ ಒದಗಿಸುವುದು)

**ಇ)** ನ್ಯಾಯಾಲಯದಲ್ಲಿ ದಾಖಲಾಗಿರುವ ದೂರಿನನ್ವಯ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ) ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 41420/2011 (ಪಿ.ಐ.ಎಲ್) ಸಾರ್ವಜನಿಕ ಹಿತಾಸಕ್ತಿ ದೂರು ದಾಖಲಾಗಿರುತ್ತದೆ.

ನ್ಯಾಯಾಲಯದಲ್ಲಿ ದಾಖಲಾಗಿರುವ ದೂರಿನ ಪ್ರತಿಯನ್ನು ಲಗತ್ತಿಸಿದೆ.

ಆ) ಸದರಿ ರಿಟ್ ಅರ್ಜಿ ನ್ಯಾಯಾಲಯದ ಅಂಗೀಕಾರಕ್ಕೆ ಬಾಕಿ ಇದೆ (Pending for admission)

ಇ) ಮಾನ್ಯ ಉಚ್ಚ ನ್ಯಾಯಾಲಯಕ್ಕೆ ನಿಗಮದ ವತಿಯಿಂದ ಅಕ್ಷೇಪಣಾ ಹೇಳಿಕೆಯನ್ನು ಸಲ್ಲಿಸಲಾಗಿದೆ. ಪ್ರಕರಣ ನ್ಯಾಯಾಲಯದಲ್ಲಿ ದಿನಾಂಕ: 08.12.2011 ರಂದು ಪ್ರಾರ್ಥಮಿಕ ವಿಚಾರಣೆ ನಡೆದಿದ್ದು, ದಿನಾಂಕ 02.02.2012ಕ್ಕೆ ಮುಂದೂಡಲಾಗಿದೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಶ್ರೀ ಕೆ.ಸಿ. ಕೊಂಡಯ್ಯನವರ ಪರವಾಗಿ):–** ಮಾನ್ಯ ಸಭಾಪತಿಯವರೆ, ಈ ವರಾಹಿ ನೀರಾವರಿ ಯೋಜನೆಯ ಬಗ್ಗೆ ರಾಜ್ಯ ಉಚ್ಚನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ದೂರು ದಾಖಲಾಗಿ ಸಿಬಿಐ ತನಿಖೆ ಆಗಬೇಕೆನ್ನುವ ಉದ್ದೇಶದಿಂದ ಇದನ್ನು ದಾಖಲು ಮಾಡಿದ್ದಾರೆ. ಈ ಸಂದರ್ಭದಲ್ಲಿ ಈ ವಿಚಾರವಾಗಿ ಕೇವಲ 2–3 ಪ್ರಶ್ನೆಗಳನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ನೇರವಾಗಿ ನೀವು ಹಿಂದಿನಿಂದ ಇಲ್ಲಿಯವರೆಗೆ ಜವಾಬ್ದಾರಿ ಎನ್ನತಕ್ಕಂತಹ ವಾದ ಮಾಡುತ್ತಿಲ್ಲ. ಆದರೆ, ಈಗ ಆ ಜವಾಬ್ದಾರಿ ತಮ್ಮ ಮೇಲೆ ಇದೆ. ನಾನು ಕೇಳುವುದೇನೆಂದರೆ 32 ವರ್ಷಗಳ ಹಿಂದೆ ಉದ್ಘಾಟನೆಯಾಗಿರುವಂತಹ ವಾರಾಹಿ ನೀರಾವರಿ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆಯನ್ನು ಇಲ್ಲಿಯವರೆಗೆ ಪೂರ್ಣಗೊಳಿಸದಿರುವುದಕ್ಕೆ ಕಾರಣವೇನು? ಇದು ಒಂದು ವಿಚಾರ. ಮತ್ತೆ, ಈ ಭೂಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸದೇ ಟೆಂಡರ್ ಕರೆಯತಕ್ಕಂತಹ ಉದ್ದೇಶ ಏನು? ಮೂರನೆಯದಾಗಿ, ತಮ್ಮ EFI (Extra Financial Implication) ಎನ್ನುವಂತಹ ಅರ್ಥ ಏನಿದೆ, ಅದನ್ನು ಸಕ್ರಮ ಮಾಡಲಿಕ್ಕೆ ಏನು ಮಾಡುತ್ತಿದ್ದೀರಿ? Technical Sub Committee, ಅಂದರೆ ನಿವೃತ್ತ ಮುಖ್ಯ

ಇಂಜಿನೀಯರ್ ರವರ ಸಬ್ ಕಮಿಟಿಯ ಮೂಲಕ ಅದನ್ನು ಸಕ್ರಮ ಮಾಡಿ ಈ ರಾಜ್ಯದ ಬೊಕ್ಕಸಕ್ಕೆ ಕೋಟ್ಯಾಂತರ ನಷ್ಟವಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಇದರ ಬಗ್ಗೆ ಸಿಬಿಐ ತನಿಖೆಯಾಗಬೇಕೆನ್ನುವುದು ನಮ್ಮ ಒತ್ತಾಯವಾಗಿದೆ. ನಾಲ್ಕನೆಯದಾಗಿ, ಮಾನ್ಯ ಸದಸ್ಯರಾದ ಶ್ರೀಯುತ ನಾಣಯ್ಯನವರು ಹೇಳಿದಂತೆ ನೀರು ಹೋಗದೇ ಇತರತಕ್ಕಂತಹ ಕಾಲುವೆಗಳು ಕುಸಿಯುತ್ತಿವೆ. ಆ ಕಾಲುವೆಯನ್ನು ತೋಡಿರತಕ್ಕಂತಹ ಗುತ್ತಿಗೆದಾರರನ್ನು ಮತ್ತು ಅದನ್ನು ನಿರ್ವಹಣೆ ಮಾಡಿರುವಂತಹ ಇಂಜಿನೀಯರ್‌ರವರ ಮೇಲೆ ಏತಕ್ಕೆ accountability fix ಮಾಡುವುದಿಲ್ಲ, ಅವರ ಮೇಲೆ ಏತಕ್ಕೆ ಕ್ರಮ ಕೈಗೊಂಡಿರುವುದಿಲ್ಲ. ಅಲ್ಲಿ ಸರ್ವೀಸ್ ರೋಡ್ ಇಲ್ಲ. ಇಲ್ಲಿನ ವ್ಯವಸ್ಥೆ ಹೇಗೆ ಎಂದು ಹೇಳಿದರೆ ತಾವು ಬೆಂಗಳೂರಿನಲ್ಲಿ ಇದ್ದುಕೊಂಡು ಬಹುಶಃ ತಾವು ಬಂದಿರಬಹುದು. ನಾನು ಅಲ್ಲಿಗೆ ಹೋಗಿ ನೋಡಿದ್ದೇನೆ. ಅಲ್ಲಿ ದಾರಿಯೇ ಇಲ್ಲ. ನೀವು ಹೇಗೆ ಹೋಗಿದ್ದೀರಿ. ತಾವು ಒಂದು ದಿವಸ ಆ ಕಾಲುವೆಯ ಬದಿಯಲ್ಲಿ ಹೋಗಿ ಬನ್ನಿ. ನಾನು ಪ್ರಥಮವಾಗಿಯೇ ಹೇಳಿದಂತೆ ಈ ಜವಾಬ್ದಾರಿ ತಮ್ಮ ಮೇಲೆ ಇದೆ. ನಿಮಗೆ ಈ ವಿಚಾರದಲ್ಲಿ ಸಿಬಿಐ ತನಿಖೆ ಮಾಡಲಿಕ್ಕೆ ಏನು ತೊಂದರೆ ಇದೆ?

(12.00 ಗಂಟೆ)

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ಹಿಂದಿನ ಸ್ಥಿತಿ ಎಲ್ಲವೂ ಗೊತ್ತಿದೆ. 1979 ರಲ್ಲಿ ಇದು ಪ್ರಾರಂಭವಾಯಿತು. ಆಗಿನ ಸರ್ಕಾರಗಳು ಈ ಯೋಜನೆಯನ್ನು ಆವತ್ತಿನ ಹುಮ್ಮಸ್ಸಿನಲ್ಲಿ ಮಾಡಿವೆ. ನಾನು ಅದನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅದಕ್ಕೆ ತಕ್ಕ ಮತ್ತು ಸರಿಯಾದ ರೂಪುರೇಷಗಳು ಮತ್ತು ಯೋಜನೆಗಳನ್ನು ಮಾಡದೆ ಆ ಒಂದು ಪ್ರಕ್ರಿಯೆ ಪ್ರಾರಂಭವಾಯಿತು. ಇದಕ್ಕೆ ಒಂದು ಸ್ಟೋರೇಜ್ ಡ್ಯಾಂ ಕಟ್ಟಬೇಕು ಅದರಲ್ಲಿ 18 ಟಿ.ಎಂ.ಸಿ. ನೀರನ್ನು ಹಿಡಿದಿಟ್ಟುಕೊಳ್ಳಬೇಕು ಎಂಬ ಮಹತ್ವಾಕಾಂಕ್ಷೆಯ ಯೋಜನೆ ಇದಾಗಿತ್ತು. ಬಹುತೇಕವಾಗಿ ಈ ಯೋಜನೆಯಷ್ಟನ್ನೇ ಮಾಡಿದ್ದಿದ್ದರೆ ಇದು ಹತ್ತು

ವರ್ಷಗಳಲ್ಲಿ ಮುಗಿಯುತ್ತಿತ್ತೋ ಏನೋ ಗೊತ್ತಿಲ್ಲ. ಆದರೆ ಕೆ.ಪಿ.ಸಿ. ಯವರು ಬಂದು ಈ ಹೆಡ್ ಅನ್ನು ನಾವು ಉಪಯೋಗ ಮಾಡಿಕೊಂಡು ಪವರ್ ಜನರೇಷನ್ ಕೂಡ ಮಾಡುತ್ತೇವೆಂದು ಹೇಳಿದರು. ಇದಕ್ಕಾಗಿ ಇನ್ನಷ್ಟು ಎತ್ತರವನ್ನು ಹೆಚ್ಚು ಮಾಡಬೇಕು ಅಂದರೆ 79 ಮೀಟರಿನಿಂದ 81 ಮೀಟರಿಗೆ ಎತ್ತರವನ್ನು ಹೆಚ್ಚು ಮಾಡಬೇಕು ಎಂದು ಹೇಳಿದರು. ಏಕೆಂದರೆ ಪೀಕ್ ಲೋಡ್ ಪವರ್ ಪ್ರೊಡಕ್ಷನ್ ಮಾಡುತ್ತೇವೆ ಎಂದು ಹೇಳಿದರು. ಈ ಪೀಕ್ ಲೋಡ್ ಪವರ್ ಪ್ರೊಡಕ್ಷನ್ ಮಾಡುವಾಗ ನಮಗೆ ನಿಗದಿತ ಸಮಯದಲ್ಲಿ ನೀರು ಇರುವುದಿಲ್ಲ. ಆದುದರಿಂದ ಈ ಪವರ್ ಪ್ರೊಡಕ್ಷನ್ನಿಗೆ ಆ ಡ್ಯಾಂನಲ್ಲೇ ನೀರನ್ನು ಹಿಡಿದಿಟ್ಟುಕೊಳ್ಳಬೇಕೆಂಬ ದೃಷ್ಟಿಯಿಂದ ಮತ್ತೆ ಎತ್ತರವನ್ನು ಹೆಚ್ಚು ಮಾಡಿದರು. ಈ ಎತ್ತರವನ್ನು ಹೆಚ್ಚು ಮಾಡಿದಾಗ ಪರಿಸರ ಇಲಾಖೆಯವರು ಆಕ್ಷೇಪಣೆ ಮಾಡಿದರು. MoEF ನವರೂ ಕೂಡ ಇದಕ್ಕೆ ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು. ಫಾರೆಸ್ಟ್ ಸಬ್‌ಮರ್ಷನ್ ಆಗುತ್ತದೆ ಎನ್ವಿರೋನ್‌ಮೆಂಟಲ್ ಎಕಲಾಜಿಕಲ್ ಇಂಬ್ಯಾಲೆನ್ಸ್ ಆಗುತ್ತದೆ ಎಂದು ಹೇಳಿದರು. MoEFನವರು ಒಪ್ಪದೇ ಇರುವಾಗ ಈ ಯೋಜನೆ ಮತ್ತೆ ಪರಿಷ್ಕರಣೆ ಆಯಿತು. ಇದು ಪ್ರಶ್ನೋತ್ತರ ಅವಧಿ ಆಗಿರುವುದರಿಂದ ಈ ಬಗ್ಗೆ ಎಲ್ಲಾ ದಿನಾಂಕಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಬೇರೆ ರೂಪದಲ್ಲಿ ಈ ವಿಚಾರವನ್ನು ಚರ್ಚೆಗೆ ತಂದಿದ್ದರೆ ಆಗ ವಿವರವಾಗಿ ಇತಿಹಾಸವನ್ನು ಹೇಳಬಹುದಿತ್ತು. ಅದಾದ ಮೇಲೆ ಇವೆಲ್ಲವನ್ನೂ ಪರಿಷ್ಕರಣೆ ಮಾಡಿಯಾದ ಮೇಲೆ 81 ಮೀಟರ್ ಎತ್ತರದಿಂದ 51 ಮೀಟರ್‌ಗೆ ಇಳಿಯಿತು. ಇದು ಸ್ಟೋರೇಟ್ ಡ್ಯಾಂ ಇದೆ ಅದನ್ನು ಡೈವರ್ಷನ್ ವೇರ್ ಅನ್ನಾಗಿ ಮಾಡಬೇಕೆಂದು 51 ಮೀಟರ್ ಸರಿ ಇಲ್ಲವೆಂದು ನಂತರ 31 ಮೀಟರಿಗೆ ಇಳಿಸಿದರು. ಅಂದರೆ ನೀರು ಬಂದ ಹಾಗೆ ಆ ನೀರನ್ನು ಸ್ಟೋರ್ ಮಾಡಬಾರದು ಡೈವರ್ಟ್ ಮಾಡಬೇಕೆಂಬುದು ಇದರ ಉದ್ದೇಶವಾಗಿತ್ತು. ಇದಕ್ಕೆಲ್ಲವೂ ಬಹಳ ದೊಡ್ಡ ಕಥೆ ಇದೆ. ಯೋಜನೆಯ ರೂಪವನ್ನೇ ಬದಲಾವಣೆ ಮಾಡುವಂತಹ ನಿರ್ಣಯಗಳು ಕಾಲಕಾಲಕ್ಕೆ ಆಗಿ ಆಗಿ ಕೊನೆಗೆ 2005 ರಲ್ಲಿ ಇದಕ್ಕೆ ಒಂದು ಕಾಯಕಲ್ಪ ಯೋಜನೆಯನ್ನು ಮಾಡಲಾಯಿತು.

9 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಇದ್ದದ್ದನ್ನು 509 ಕೋಟಿ ರೂಪಾಯಿಗಳಿಗೆ ಹೆಚ್ಚಳ ಮಾಡಿದರು. ಇದೆಲ್ಲವನ್ನೂ ಮಾಡಿದ ಮೇಲೆ ಇದನ್ನು ಎ.ಆರ್.ಡಿ.ಪಿ., ಗೆ ಕೊಟ್ಟರು. ನದಿಯ ಅಕ್ಕ ಪಕ್ಕದ ಕಾಲುವೆಗಳನ್ನು ತೆಗೆದು ಮಾಡುವುದೆಲ್ಲವೂ ನಾರ್ಮಲ್ ಆಗಿದೆ. ಈ ಕಡೆಯ ನೀರನ್ನು ಅಂದರೆ ಬಲ ದಂಡೆಯಲ್ಲಿನ ನೀರನ್ನು ಎಡದಂಡೆ ಬದಿಗೆ ಪಂಪ್ ಮಾಡಿ ಒಂದು ಮೊಬೈಲ್ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ ಮಾಡಿದರು. ಈ ಯೋಜನೆ ತಡವಾಗುತ್ತದೆ ಎಂದು ಈ ರೀತಿ ಮಾಡಿದರು. ಬಲ ದಂಡೆಯಲ್ಲಿನ ನೀರನ್ನು ಎಡದಂಡೆ ಬದಿಗೆ ತಾತ್ಕಾಲಿಕವಾಗಿ ಪಂಪ್ ಮಾಡಿ ಸುಮಾರು 29–30 ಕಿ.ಮೀ ನೀರು ಹರಿಸಿ ಅಲ್ಲಿ ನೀರಾವರಿ ಮಾಡಬೇಕೆಂದು ಮಾಡಿದರು. ಈ ರೀತಿಯ ನಿರ್ಣಯಗಳಿಂದ ಇಷ್ಟೆಲ್ಲಾ ಅವಾಂತರಗಳಾಯಿತು. ಇದರಲ್ಲಿ ಎಷ್ಟು ಉಪಯೋಗವಾಗಿದೆ ಎಷ್ಟು ಉಪಯೋಗವಾಗಿಲ್ಲ ಎಂದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಈಗ ನಾನು ಬಂದ ಮೇಲೆ ಇಷ್ಟೆಲ್ಲವೂ ಖರ್ಚು ಮಾಡಿದ ಮೇಲೆ ಮಿನಿಮಮ್ ಆದರೂ ನೀರನ್ನು ಕೊಡಬೇಕೆಂದು ಡೈವರ್ಷನ್‌ವರೆಗೂ ಪೂರ್ತಿ ಮಾಡಿದ್ದೇವೆ. ಅಕ್ವಡಕ್ಟ್ ಅನ್ನು ಮಾಡಿದ್ದೇವೆ. Slippage ಅಂದರೆ ಲಿಫ್ಟ್‌ನಿಂದ ನೀರನ್ನು ಹಾಕುವ ಯೋಜನೆಗೆ ಬದಲಾಗಿ ಈ ಅಕ್ವಡಕ್ಟ್ ಅನ್ನು ಪೂರ್ತಿ ಮಾಡಿದ್ದೇವೆ.

ಕಾಲುವೆ ನಿರ್ಮಾಣಗಳ ಬಗ್ಗೆ ಹೇಳುವುದಾದರೆ. ವೆಸ್ಟ್ರನ್ ಘಾಟ್‌ಗಳಲ್ಲಿ ಸೀಪೇಜ್ ಜಾಸ್ತಿ ಇದೆ. ಆ ಸೀಪೇಜಿನಿಂದಾಗಿ ಒಂದು ಸಲ ಮಾಡಿದರು ಅದು ಬಿದ್ದು ಹೋಯಿತು ಮತ್ತೊಂದು ಸಲ ಮಾಡಿದಾಗ ಕೂಡ ಅದು ಬಿದ್ದು ಹೋಯಿತು. ಅಲ್ಲಿಗೆ ಸರಿಯಾದ ಅಪ್ರೋಚ್ ರಸ್ತೆ ಇಲ್ಲ. ಕಾಲುವೆಗಳನ್ನು ಮಾಡುವಾಗ ಕುಮ್ಕಿ ಲ್ಯಾಂಡ್ ಎಂದು ಬರುತ್ತದೆ. ಈ ಕುಮ್ಕಿ ಲ್ಯಾಂಡಿನ ಸಮಸ್ಯೆ ರಾಜ್ಯದಲ್ಲಿ ಹಲವಾರು ವರ್ಷಗಳಿಂದ ನಡೆಯುತ್ತಿದೆ. ರೈತರು ಅಲ್ಲಿ ವಾಸ ಇದ್ದಾರೆ. ಆದರೆ ದಾಖಲೆಗಳಲ್ಲಿ ಅರಣ್ಯ ಪ್ರದೇಶವೆಂದು ಇದೆ. ಅವರಿಗೆ ಪರಿಹಾರ ಕೊಡಬೇಕೆಂದು ನಮ್ಮ ಇಚ್ಛೆ. ಆದರೆ ಕಾನೂನು ಪ್ರಕಾರ ಅವರಿಗೆ ಪರಿಹಾರವನ್ನು ಕೊಡುವುದಕ್ಕೆ ಬರುವುದಿಲ್ಲ. ಅರಣ್ಯ ಇಲಾಖೆಯವರು ಇದಕ್ಕೆ ಆಕ್ಷೇಪ ಮಾಡುತ್ತಿದ್ದಾರೆ. ಈ ಬಗ್ಗೆ ಮೂರು

ಸಭೆಗಳನ್ನು ಮಾಡಲಾಗಿದೆ. ಸಂಪೂರ್ಣವಾಗಿ ಮಾಹಿತಿಯನ್ನು ತರಿಸಿಕೊಂಡಿದ್ದು ಕಂದಾಯ ಇಲಾಖೆಯವರು ಈ ಸಮಸ್ಯೆಯನ್ನು ನಾವು ಬಗೆಹರಿಸುತ್ತೇವೆಂದು ಹೇಳಿದ್ದಾರೆ. ಈ ವಿಚಾರ ಕಂದಾಯ ಇಲಾಖೆಗೆ ಬಂದಿದ್ದು, ಲ್ಯಾಂಡ್ ಅಕ್ವಿಸಿಷನ್ ಸಮಸ್ಯೆ ಆಗಿದೆ. ಈ ಮಧ್ಯೆ ಎಲ್ಲೆಲ್ಲಿ ಜಮೀನು ಇದೆ ಅಲ್ಲಿಯಾದರೂ ಕೆಲವು ಕಾಮಗಾರಿಗಳನ್ನು ಮಾಡೋಣ ಎಂಬ ದೃಷ್ಟಿಯಿಂದ ಕೆಲವನ್ನು ಮಾಡಿದ್ದರು. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ನಮ್ಮ ಗಮನಕ್ಕೆ ತಂದ ಮೇಲೆ ಅದನ್ನೆಲ್ಲಾ ನಿಲ್ಲಿಸಲಾಗಿದೆ. ಇನ್ನು ಸಿ.ಬಿ.ಐ. ಏನು ಇದೆ ಇದರ ಬಗ್ಗೆ PIL ಹಾಕಲಾಗಿದೆ ಇನ್ನೂ ಅಡ್ಮಿಷನ್ ಕೂಡ ಆಗಿಲ್ಲ. ಅಡ್ಮಿಷನ್ ಹಂತದಲ್ಲಿ ಇದೆ. ಈ ಕೇಸ್ ಅನ್ನು ಅಡ್ಮಿಟ್ ಮಾಡಬೇಕೋ ಬೇಡವೋ ಎಂಬ ಬಗ್ಗೆ ಮೆರಿಟ್ಸ್ ಅಂಡ್ ಡೀ ಮೆರಿಟ್ಸ್ ಬಗ್ಗೆ ವಿಚಾರ ಕೋರ್ಟು ಮಾಡುತ್ತಿದೆ. ಈ ಕುರಿತು ಕೋರ್ಟು ಯಾವ ನಿರ್ಣಯವನ್ನು ಕೊಡುತ್ತದೆಯೋ ಅದರ ಪ್ರಕಾರ ನಾವು ಮಾಡುತ್ತೇವೆ.

## ರೇಷ್ಮೆ ಬೆಳೆ ಕುರಿತು

## 263; ಶ್ರೀ ಅಲ್ಲಮ್ಮ ಪ್ರಭು ಪಾಟೀಲ್

**ಅ)** ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಹಿಪ್ಪುನೇರಳೆ ಬೆಳೆಯುತ್ತಿರುವ ಭೂಮಿಯ ವಿಸ್ತೀರ್ಣ ಎಷ್ಟು;

**ಆ)** ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರೇಷ್ಮೆ ಬೆಳೆ ಬೆಳೆಯುತ್ತಿರುವ ಕ್ಷೇತ್ರವೆಷ್ಟು; ಈ ಉದ್ಯಮದಲ್ಲಿ ತೊಡಗಿರುವ ರೈತರ ಸಂಖ್ಯೆ ಎಷ್ಟು? (ವರ್ಷವಾರು, ತಾಲ್ಲೂಕುವಾರು ವಿವರ ನೀಡುವುದು)

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು)**

ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅನುಕ್ರಮವಾಗಿ 415 ಮತ್ತು 224 ಹೆಕ್ಟೇರುಗಳ ಹಿಪ್ಪುನೇರಳೆ ವಿಸ್ತೀರ್ಣವಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ತಾಲ್ಲೂಕುವಾರು, ವರ್ಷವಾರು ಹಿಪ್ಪುನೇರಳೆ ಕ್ಷೇತ್ರ ಮತ್ತು ಈ ಉದ್ಯಮದಲ್ಲಿ ತೊಡಗಿರುವ ರೈತ ಕುಟುಂಬಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ /

ಕಳೆದ ಮೂರು ವರ್ಷಗಳ ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ತಾಲ್ಲೂಕುವಾರು ಹಿಪ್ಪುನೇರಳೆ ವಿಸ್ತೀರ್ಣ ಹಾಗೂ ರೇಷ್ಮೆ ಬೆಳೆಗಾರರ ಕುಟುಂಬ )

| ಕ್ರ.ಸಂ | ತಾಲ್ಲೂಕುಗಳು | 2008-09 | | 2009-10 | | 2010-11 | | 2011-12 (ಡಿಸೆಂಬರ್-2011ರ ಅಂತ್ಯಕ್ಕೆ) | |
|---|---|---|---|---|---|---|---|---|---|
| | | ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರು) | ರೇಷ್ಮೆ ಬೆಳೆಗಾರರ ಕುಟುಂಬಗಳು (ಸಂಖ್ಯೆ) | ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರು) | ರೇಷ್ಮೆ ಬೆಳೆಗಾರರ ಕುಟುಂಬಗಳು (ಸಂಖ್ಯೆ) | ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರು) | ರೇಷ್ಮೆ ಬೆಳೆಗಾರರ ಕುಟುಂಬಗಳು (ಸಂಖ್ಯೆ) | ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರು) | ರೇಷ್ಮೆ ಬೆಳೆಗಾರರ ಕುಟುಂಬಗಳು (ಸಂಖ್ಯೆ) |
| ಗುಲ್ಬರ್ಗಾ ಜಿಲ್ಲೆ | | | | | | | | | |
| 1 | ಅಫ್ಜಲ್‌ಪುರ | 29 | 41 | 38 | 53 | 46 | 59 | 77.40 | 106 |
| 2 | ಆಳಂದ | 60 | 102 | 69 | 99 | 67 | 99 | 131.12 | 193 |
| 3 | ಗುಲ್ಬರ್ಗಾ | 67 | 77 | 57 | 60 | 71 | 78 | 112.00 | 123 |
| 4 | ಚಿಂಚೋಳಿ | 9 | 10 | 9 | 7 | 4 | 4 | 13.20 | 19 |
| 5 | ಸೇಡಂ | 1 | 1 | 1 | 1 | 2 | 2 | 4.80 | 6 |
| 6 | ಜೇವರ್ಗಿ | 45 | 66 | 31 | 49 | 37 | 47 | 57.30 | 71 |
| 7 | ಚಿತಾಪುರ | 19 | 19 | 12 | 15 | 11 | 12 | 19.18 | 24 |
| | | - | | | | 238 | 301 | 415.00 | 542 |
| ಯಾದಗಿರಿ ಜಿಲ್ಲೆ | | | | | | | | | |
| 1 | ಶಹಾಪುರ | 83 | 126 | 92 | 143 | 83 | 72 | 131.40 | 116 |
| 2 | ಸುರಪುರ | 5 | 6 | 7 | 9 | 17 | 29 | 32.80 | 55 |
| 3 | ಯಾದಗಿರಿ | 17 | 23 | 24 | 33 | 40 | 56 | 59.80 | 80 |
| | ಜಿಲ್ಲೆಯ ಒಟ್ಟು | 335 * | 471 * | 340 * | 469 * | 140 | 157 | 224.00 | 251 |

* ಅವಿಭಾಜ್ಯ ಗುಲ್ಬರ್ಗಾ ಜಿಲ್ಲೆ

**ಶ್ರೀ ಅಲ್ಲಮ್ಮ ಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಕೇಳಿರತಕ್ಕಂಥಹ ಪ್ರಶ್ನೆಗೆ ಮಾನ್ಯ ಸಚಿವರು ಸರಿಯಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಅದರ ಹಿಂದುಗಡೆ ರೇಷ್ಮೆ ಬೆಳೆಯ ವಿಸ್ತೀರ್ಣ ಮತ್ತು ರೇಷ್ಮೆ ಬೆಳೆಗಾರರ ಕುಟುಂಬಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಒಂದು ವಿಚಾರದ ಬಗ್ಗೆ ನಾನು ಮಾನ್ಯ ಸಚಿವರ ಗಮನವನ್ನು ಸೆಳೆಯಬೇಕೆಂದಿದ್ದೇನೆ. ಕಳೆದ 30 ವರ್ಷಗಳಿಂದ ಇಡೀ ಕರ್ನಾಟಕ ರಾಜ್ಯದ ಗುಲ್ಬರ್ಗ ಜಿಲ್ಲೆಯಲ್ಲಿ 5 ರಿಂದ 6 ಸಾವಿರ ಎಕರೆ ಪ್ರದೇಶದಲ್ಲಿ ಈ ರೇಷ್ಮೆ ಬೆಳೆಯನ್ನು ಬೆಳೆಯಲಾಗುತ್ತಿತ್ತು. ಆದರೆ ಇವತ್ತು 471 ರಿಂದ 224-251 ಎಕರೆಗೆ ಬಂದಿದೆ. ಮಾನ್ಯ ಗುಂಡೂರಾವ್ ಅವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ 1982 ರಲ್ಲಿ ದೊಡ್ಡದೊಂದು ರೇಷ್ಮೆ ಮಾರುಕಟ್ಟೆಯನ್ನು ಸ್ಥಾಪನೆ ಮಾಡಿದ್ದರು. ಈ ವಿಚಾರವೆಲ್ಲವೂ ತಮಗೂ ಕೂಡ ಗೊತ್ತಿದೆ. ಕಳೆದ ಹತ್ತು ವರ್ಷಗಳ ಹಿಂದೆ ಜೇರ್ವಗಿಯಲ್ಲಿ 4 ಎಕರೆ ಭೂಮಿಯಲ್ಲಿ 4 ರೇಷ್ಮೆ ರೀಲಿಂಗ್ ಷೆಡ್ ಅನ್ನು ನಿರ್ಮಾಣ ಮಾಡಿದ್ದರು. ಇವತ್ತಿಗೂ ಆ ಒಂದು ಕೋಟಿ ರೂಪಾಯಿಯ ಮೆಷಿನ್ ಹಾಳಾಗುತ್ತಾ ಬಿದ್ದಿದೆ. ಸಾಮಾನ್ಯ ರೈತರಿಗೆ 1 ಸಾವಿರ ಚದುರ ಅಡಿಗೆ 75,000 ರೂಪಾಯಿ ಮತ್ತು ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ 90,000 ರೂಪಾಯಿ ನೀಡುತ್ತಿದೆ. ಅಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಒಂದು ಎಕರೆಗೆ 4200 ರೂಪಾಯಿ ಸಬ್ಸಿಡಿಯನ್ನು ಕೊಟ್ಟರೂ ಕೂಡ ಈ ರೇಷ್ಮೆ ಬೆಳೆ ಉತ್ಪಾದನೆ ಕಡಿಮೆಯಾಗುತ್ತಿದೆ. ಇವತ್ತು ಎಲ್ಲಾ ಕಡೆ ಹೊಲದಲ್ಲಿ ಷೆಡ್‌ಗಳು ಇವೆ. ಆದರೂ ಕೂಡ ಈ ರೇಷ್ಮೆ ಬೆಲೆ ಕಡಿಮೆಯಾಗುತ್ತಿರುವುದಕ್ಕೆ ಅನೇಕ ಕಾರಣಗಳು ಇವೆ. ಇದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ತೊಗರಿ, ಜೋಳ, ಇತ್ಯಾದಿ ಬೆಳೆಗಳನ್ನು ಬೆಳೆಯುವ ರೈತರಿಗೆ ಎಲ್ಲಾ ಕಡೆಯಲ್ಲಿ ಸಬ್ಸಿಡಿಯನ್ನು ಕೊಡುತ್ತೀರಿ ಅದೇ ರೀತಿಯಲ್ಲಿ ಈ ರೇಷ್ಮೆ ಬೆಳೆಗಾರರಿಗೂ ಕೂಡ ಸಬ್ಸಿಡಿಯನ್ನು ಕೊಡಬೇಕಾಗುತ್ತದೆ. ಆ ಗುಲ್ಬರ್ಗ ಜಿಲ್ಲೆಯಲ್ಲಿನ ರೈತರಿಗೆ ಒಂದು ಎಕರೆಗೆ ಸುಮಾರು 300 ಮೊಟ್ಟೆಗಳು ಬೇಕಾಗುತ್ತದೆ. ಈ ಮೊಟ್ಟೆಗಳು ಗುಲ್ಬರ್ಗ ಜಿಲ್ಲೆಯಲ್ಲಿ ಸಿಗುತ್ತಿಲ್ಲ. ಇದಕ್ಕೂ

ಕೂಡ ಸಬ್ಸಿಡಿಯನ್ನು ಕೊಡಬೇಕಾಗುತ್ತದೆ. ನಮ್ಮ ಜೇವರ್ಗಿ ತಾಲ್ಲೂಕಿನಲ್ಲಿ ರೇಷ್ಮೆ ರೀಲಿಂಗ್ ನೂಲು ತೆಗೆಯತಕ್ಕಂಥಹ ಷೆಡ್‌ಗಳು ಏನು ಇವೆ ಈ ಷೆಡ್‌ಗಳನ್ನು ಕಡಿಮೆ ಬೆಲೆ ಬಾಡಿಗೆಗೆ ರೈತರಿಗೆ ಕೊಟ್ಟಿದ್ದೇ ಆದರೆ ನಮ್ಮ ರೈತರು ಹೆಚ್ಚಿನ ಮಟ್ಟದಲ್ಲಿ ರೇಷ್ಮೆ ಬೆಳೆಯನ್ನು ಹೆಚ್ಚು ತೆಗೆಯುವುದಕ್ಕೆ ಸಾಧ್ಯವಿದೆ. ಈ ಜೇವರ್ಗಿಯಲ್ಲಿ ಇರತಕ್ಕಂಥಹ ಷೆಡ್‌ಗಳಿಗೆ ಕಡಿಮೆ ಬಾಡಿಗೆಯನ್ನು ನಿಗದಿ ಮಾಡಿ ಆ ಷೆಡ್‌ಗಳನ್ನು ಪ್ರಾರಂಭ ಮಾಡಬೇಕು. ರೀಲಿಂಗ್ ಸ್ಟೇಷನ್ ಅನ್ನು ಪ್ರಾರಂಭ ಮಾಡಬೇಕು. ಈ ಎಲ್ಲಾ ವಿಚಾರವನ್ನು ಈಗಾಗಲೇ ಅಲ್ಲಿನ ಅಧಿಕಾರಿಗಳು ತಮ್ಮ ಗಮನಕ್ಕೆ ತಂದಿದ್ದಾರೆ. ಅಲ್ಲಿ ಇದ್ದ ಜೆ.ಡಿ. ಯವರನ್ನು ಆಧಾರ ಯೋಜನೆಗೆ ವರ್ಗಾವಣೆ ಮಾಡಿದ್ದಾರೆ. ಇದು ತಮ್ಮ ಗಮನದಲ್ಲೂ ಕೂಡ ಇದೆ. ಅಲ್ಲಿ ಕಳೆದ 4 ತಿಂಗಳಿನಿಂದ ಜೆ.ಡಿ. ಹುದ್ದೆ ಖಾಲಿ ಇದೆ. ಅಲ್ಲಿ ಇರುವಂತಹ ಜೆ.ಡಿ. ಹುದ್ದೆಯನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿ ಹಾಕಬೇಕೆಂದು ಮಾಡಿದ್ದೀರಿ ಇದು ನಮ್ಮ ಗಮನಕ್ಕೂ ಕೂಡ ಬಂದಿದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚಿನ ರೇಷ್ಮೆ ಬೆಳೆ, ರೇಷ್ಮೆ ಗೂಡನ್ನು ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಬೆಳೆದು ಅದನ್ನು ರಾಮನಗರ, ಚನ್ನಪಟ್ಟಣಕ್ಕೆ ತಂದಿರತಕ್ಕಂಥಹ ಉದಾಹರಣೆ ಇದೆ. ಈಗ ಕೇವಲ ಆಳಂದ್, ಅಫ್‌ಜಲ್‌ಪುರ ಭಾಗದಲ್ಲಿ ಮಾತ್ರ ರೇಷ್ಮೆಯನ್ನು ಬೆಳೆಯುತ್ತಿದ್ದಾರೆ. ಜೇವರ್ಗಿ ಮುಂತಾದ ಕಡೆಗಳಲ್ಲಿ ರೇಷ್ಮೆ ಬೆಳೆಗೆ ಅಗತ್ಯವಾಗಿರುವ ಗೋಡೌನ್ ಇತ್ಯಾದಿ ಇನ್‌ಫ್ರಾಸ್ಟ್ರಕ್ಚರ್ ಇದೆ ಆದರೆ ಅಗತ್ಯವಾದ ರೇಷ್ಮೆ ಮೊಟ್ಟೆಗಳು ಸಿಗುತ್ತಿಲ್ಲ. ಈ ಮೊಟ್ಟೆಗಳನ್ನು ಅಲ್ಲಿನ ರೈತರಿಗೆ ಕೊಟ್ಟು ಅವರು ಬೆಳೆದ ರೇಷ್ಮೆ ಬೆಳೆಯನ್ನು ಅಲ್ಲಿಯೇ ಮಾರಾಟ ಮಾಡುವ ಸಲುವಾಗಿ ಅಲ್ಲಿ ಮಾರುಕಟ್ಟೆಯನ್ನು ಪುನರ್ ಸ್ಥಾಪನೆ ಮಾಡಬೇಕೆಂದು ವಿನಂತಿಸುತ್ತೇನೆ. ಮತ್ತು ಅಲ್ಲಿ ಇರುವ ಜೆ.ಡಿ. ಹುದ್ದೆಯನ್ನು ಅಲ್ಲಿಯೇ ಉಳಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಕಳಕಳಿಯ ಮನವಿ ಮಾಡುತ್ತೇನೆ.

**ಶ್ರೀ ಬಿ.ಎನ್. ಬಚ್ಚೇಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಮೆಚ್ಚುತ್ತೇನೆ. ತಾವು ಹೇಳಿದ ಹಾಗೆ ರೇಷ್ಮೆ ಕೃಷಿ ಗುಲ್ಬರ್ಗದಲ್ಲಿ ಅಲ್ಲದೆ ಈಗ ಹೊಸದಾಗಿ ರಚಿತವಾಗಿರುವ ಯಾದಗಿರಿ ಜಿಲ್ಲೆಯಲ್ಲಿ ಒಟ್ಟು ಹತ್ತು ತಾಲ್ಲೂಕಿನಲ್ಲಿ ಹಿಂದೆ ಬಹಳ ಚೆನ್ನಾಗಿ ಇತ್ತು. ಆದರೆ ಇತ್ತೀಚೆಗೆ ಅಲ್ಲಿನ ಪರಿಸರ ಬಹಳ ಬಿಸಿ ವಾತಾವರಣ ಇದೆ. ಮಾರ್ಚ್ ತಿಂಗಳಿನಿಂದ ಜುಲೈ ತಿಂಗಳವರೆಗೆ ಬಹಳ ಬಿಸಿ ವಾತಾವರಣ ಇರುತ್ತದೆ. ಇದರಿಂದಾಗಿ ಈ ರೇಷ್ಮೆ ಬೆಳೆಗೆ ಸ್ವಲ್ಪ ತೊಂದರೆಯಾಗಿದೆ. ಅಲ್ಲಿ ಹವಾಗುಣದ ಸಮಸ್ಯೆ ಇದೆ. ಜೊತೆಗೆ ಅಲ್ಲಿ ಈ ಕೆಲಸವನ್ನು ಮಾಡಲು ಕಾರ್ಮಿಕರು ಇತ್ತೀಚೆಗೆ ಸಿಗುತ್ತಿಲ್ಲ. ಬೇರೆ ಕಡೆಗೆ ಗುಳೆ ಹೋಗುತ್ತಿದ್ದಾರೆ. ರೇಷ್ಮೆ ವಿಸ್ತರಣಾ ಯೋಜನೆ ಎಂದು ಮಾಡಿಕೊಂಡಿದ್ದೇವೆ. ಅಫಜಲ್‌ಪುರ, ಆಳಂದ, ಗುಲ್ಬರ್ಗ, ಚಿಂಚೋಳಿ, ಸೇಡಂ ಈ ಕಡೆಗಳಲ್ಲಿ ಬಹಳ ಕಡಿಮೆ ಇದೆ. ಜೇವರ್ಗಿಯಲ್ಲಿ ಶೇಕಡಾ 57.03 ಪರ್ಸೆಂಟ್ ಇದೆ. ಚಿತ್ತಾಪುರ ಇವೆಲ್ಲವೂ ಸೇರಿ 415 ಎಕರೆ ಪ್ರದೇಶದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯುತ್ತಿದ್ದು 542 ಕುಟುಂಬಗಳು ಇದರಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಯಾದಗಿರಿಯಲ್ಲಿ 224 ಎಕರೆಯಲ್ಲಿ 251 ಕುಟುಂಬಗಳು ಈ ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಂಡಿವೆ. ಜಂಟಿ ನಿರ್ದೇಶಕರ ಕಚೇರಿ ಗುಲ್ಬರ್ಗದಲ್ಲಿ ಇದೆ. ಉಪ ನಿರ್ದೇಶಕರ ಕಚೇರಿ ಕೂಡ ಇದೆ. ತಾವು ಒತ್ತಾಯ ಮಾಡುತ್ತಿದ್ದೀರೆಂದು ಜಂಟಿ ನಿರ್ದೇಶಕರನ್ನು ಆ ಕಚೇರಿಯನ್ನು ಅಲ್ಲಿಯೇ ಮುಂದುವರಿಸುತ್ತೇವೆ. ವಿಸ್ತರಣಾ ಕಾರ್ಯದಲ್ಲಿ ರಾಜ್ಯದಲ್ಲಿ ಈ ಸಲ 10 ಕೋಟಿ ರೂಪಾಯಿ ಕೊಟ್ಟು 31,317 ರೈತರನ್ನು ಗುರುತಿಸಿದ್ದೇವೆ. ಸುವರ್ಣ ಭೂಮಿ ಯೋಜನೆಯಲ್ಲಿ 49,000 ಜನ ರೈತರು ಅರ್ಜಿಯನ್ನು ಹಾಕಿಕೊಂಡಿದ್ದರು. ಅಲ್ಲಿ ಬೆಳೆದಂತಹ ರೇಷ್ಮೆ ಬೆಳೆಯನ್ನು ರೀಲಿಂಗ್ ಮಾಡಲು ರೀಲರ್ಸ್ ಇಲ್ಲದೇ, ಮೂರು ಜನರು ಆಳಂದದಲ್ಲಿ ಇದ್ದಾರೆ, ಮೂರು ಜನರು ಜೇವರ್ಗಿಯಲ್ಲಿದ್ದಾರೆ, ಇನ್ನಿಬ್ಬರು ಬೇರೆ ಕಡೆ ಇದ್ದಾರೆ. ಒಟ್ಟು 8 ಜನರು ಮಾತ್ರ ರೀಲರ್ಸ್‌ಗಳಿದ್ದಾರೆ. ಆದ್ದರಿಂದ ಇವರಿಗೆ cottage basin ಚರಕಗಳನ್ನು ಹೊಂದಿರುವಂತಹ ರೀಲರ್ಸ್‌ಗಳಿದ್ದಾರೆ. ಆದ್ದರಿಂದ ನಾವು 75% ವರೆಗೂ ಸಬ್ಸಿಡಿಯನ್ನು ಕೊಡುತ್ತಿದ್ದೇವೆ. Central Silk

Board ಮತ್ತು ನಮ್ಮ ಸರ್ಕಾರ ಸೇರಿ ರೇಷ್ಮೆ ಬೆಳೆಗೆ ಅತ್ಯಂತ ಹೆಚ್ಚು ಸಬ್ಸಿಡಿಯನ್ನು ಕೊಡಲಾಗುತ್ತಿದೆ. ಎರಡು ಸೇರಿ ಕೊಡುವಂತಹ ಯೋಜನೆಯಲ್ಲಿ Catalytic Development Programme for Development of Sericulture ಎನ್ನುವಂಥದ್ದು ಒಂದು, ರೇಷ್ಮೆ ವರದಾನ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಗ ಯೋಜನೆ, ಜಿಲ್ಲಾ ಪಂಚಾಯಿತಿ ಯೋಜನೆಗಳು, ರೇಷ್ಮೆ ಸಾಗಾಣಿಕೆ ಚಟುವಟಿಕೆ ಅಭಿವೃದ್ಧಿ, ರೇಷ್ಮೆ ವ್ಯವಸಾಯ ಅಭಿವೃದ್ಧಿ ಕ್ಲಸ್ಟರ್ ಮತ್ತು Bivoltine ಉತ್ತೇಜಕಗಳು ಕೆಲವು ಕಡೆ ಇದೆ. ದ್ವಿತಳಿ ಸಾಗಾಣಿಕೆ ಈ ರೀತಿಯಾಗಿ ಎಲ್ಲಾ ಸ್ಕೀಂಗಳನ್ನು ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಕೂಡ ಕೊಟ್ಟುಕೊಂಡು ಬಂದಿದ್ದೇವೆ. 2008–09ನೇ ಸಾಲಿನಲ್ಲಿ 37.67 ಲಕ್ಷ ರೂಪಾಯಿಗಳನ್ನು ಸಹಾಯಧನವನ್ನಾಗಿ ಅಲ್ಲಿ ಕೊಟ್ಟಿರತಕ್ಕಂಥದ್ದು, 2009–10ನೇ ಸಾಲಿನಲ್ಲಿ 20.56 ಲಕ್ಷ ರೂಪಾಯಿಗಳು ಮತ್ತು 2010–11ಕ್ಕೆ 39.47 ಲಕ್ಷ ರೂಪಾಯಿಗಳು ಹಾಗೂ 2011ನೇ ಸಾಲಿನಲ್ಲಿ ಇದುವರೆಗೂ 13.97 ಲಕ್ಷ ರೂಪಾಯಿಗಳನ್ನು ಸಬ್ಸಿಡಿ ಕೊಡಲಾಗಿದೆ. ಒಟ್ಟು 111 ಲಕ್ಷ ರೂಪಾಯಿಗಳನ್ನು ಮಾನ್ಯ ಸದಸ್ಯರ ಜಿಲ್ಲೆಗೆ ಸಬ್ಸಿಡಿಯನ್ನು ಕೊಡಲಾಗಿದೆ.

**ಶ್ರೀ ಅಲ್ಲಮ್ಮ ಪ್ರಭು ಪಾಟೀಲ್:–** ಮಾನ್ಯ ಸಭಾಪತಿಯವರೆ, ಸಚಿವರು ಸಬ್ಸಿಡಿಯನ್ನು ಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು. ನಮ್ಮ ಭಾಗದಲ್ಲಿ ಮೊದಲು 6,000 ಎಕರೆಯಲ್ಲಿ ಬೆಳೆಯುತ್ತಿದ್ದ ರೇಷ್ಮೆಯು ಇವತ್ತಿನ ದಿವಸ 421 ಎಕರೆಯಲ್ಲಿ ಮಾತ್ರ ರೇಷ್ಮೆಯನ್ನು ಬೆಳೆಯಲಾಗುತ್ತಿದೆ. ಅದನ್ನು ಮತ್ತೆ ಪುನರ್ ಜೀವನಗೊಳಿಸಿ, ರೇಷ್ಮೆ ಬೆಳೆಗಾರರನ್ನು ಜಾಸ್ತಿ ಮಾಡಬೇಕಾದರೆ ರೇಷ್ಮೆ ಮೊಟ್ಟೆಗಳನ್ನು ರಾಮನಗರ ಮತ್ತು ಚನ್ನಪಟ್ಟಣದಿಂದ ತರಬೇಕಾಗಿದೆ. ಇದರಿಂದ ಬಹಳ ತೊಂದರೆಯಾಗುತ್ತಿದೆ. ಆದುದರಿಂದ ರೇಷ್ಮೆ ಮೊಟ್ಟೆಯು ಬೀದರ್ ಮತ್ತು ಗುಲ್ಬರ್ಗಾದಲ್ಲಿಯೇ ಸಿಗುವಂತೆ ಮಾಡಬೇಕು. ಜೊತೆಗೆ ಜೋಳದ ಬೀಜ ಮತ್ತು ತೋಗರಿ ಬೀಜಕ್ಕೆ ಸರ್ಕಾರ ಸಬ್ಸಿಡಿಯನ್ನು ಕೊಡಲಾಗುತ್ತಿದೆ. ಅದೇ ರೀತಿಯಲ್ಲಿ ರೇಷ್ಮೆ ಮೊಟ್ಟೆಗಳಿಗೂ ಕೂಡ ಸರ್ಕಾರ ಸಬ್ಸಿಡಿಯನ್ನು ಕೊಡಬೇಕು. ಜೇವರ್ಗಿಯಲ್ಲಿ ಒಂದು ಕೋಟಿ ರೂಪಾಯಿ ಬೆಲೆ

ಬಾಳುವ ಮೆಷಿನರಿಯು ಉದ್ಘಾಟನೆಯಾಗಿ ಉಪಯೋಗವಾಗದೇ ಬಿದ್ದಿದೆ. ನಾಲ್ಕು ಎಕರೆ ಜಮೀನು ಕೂಡ ಇದೆ. ಎಲ್ಲಾ ಹಾಳಾಗುತ್ತಿದೆ. ರಾಮನಗರದಿಂದ ರೀಲಿಂಗ್ ಸೆಂಟರ್‌ರವರು ಬಂದು ಅದನ್ನು ಕೊಡಿ ಎಂದು ಕೇಳುತ್ತಿದ್ದಾರೆ. ದಯಮಾಡಿ ಅವರಿಗೆ ಕೊಟ್ಟರೆ ಅಲ್ಲಿ ಬೆಳೆದಂತಹ ರೇಷ್ಮೆಯನ್ನು ಅವರು ಅಲ್ಲಿಯೇ ಖರೀದಿ ಮಾಡಿ, ನೂಲನ್ನು ತೆಗೆಯುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಹೆಚ್ಚು ಜನ ರೈತರು ರೇಷ್ಮೆಯನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ಬಿ.ಎನ್. ಬಚ್ಚೇಗೌಡ:–** ಮಾನ್ಯ ಸಭಾಪತಿಯವರೆ, ಆ ವ್ಯವಸ್ಥೆಯನ್ನು ಅಲ್ಲಿ ಮಾಡುತ್ತೇನೆ. ಮಾನ್ಯ ಸದಸ್ಯರು ನನ್ನನ್ನು ಆಮೇಲೆ ಭೇಟಿಯಾಗಲಿ. ಯಾವ ರೀತಿಯಾಗಿ ಅಲ್ಲಿ ರೂಪುರೇಶೆಗಳು ಬೇಕೋ ಆ ರೀತಿಯಾಗಿ ಎಲ್ಲವನ್ನೂ ಮಾಡಿಕೊಡುತ್ತೇನೆ.

## ಹುಬ್ಬಳ್ಳಿ–ಧಾರವಾಡ ಮಧ್ಯದಲ್ಲಿರುವ NGEF ಫ್ಯಾಕ್ಟರಿ ಮುಚ್ಚುವ ಹಂತಕ್ಕೆ ಬಂದಿರುವ ಬಗ್ಗೆ

**44; ಶ್ರೀ ಮೋಹನ ಎ. ಲಿಂಬಿಕಾಯಿ**

**ಅ)** ಹುಬ್ಬಳ್ಳಿ–ಧಾರವಾಡ ಮಧ್ಯದಲ್ಲಿರುವ ಎನ್.ಜಿ.ಇ.ಎಫ್. ಫ್ಯಾಕ್ಟರಿ ಸುಮಾರು ಎರಡು ವರ್ಷದಿಂದ ಆರ್ಥಿಕ ತೊಂದರೆಯಲ್ಲಿದ್ದು ಮುಚ್ಚುವ ಪರಿಸ್ಥಿತಿ ಒದಗಿ, ಅಲ್ಲಿದ್ದ ನೂರಾರು ಕಾರ್ಮಿಕರ ನಾಲ್ಕು ತಿಂಗಳಿನಿಂದ ವೇತನ ಮತ್ತು ಕೆಲಸವಿಲ್ಲದೇ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಹಾಗಿದ್ದಲ್ಲಿ, ಫ್ಯಾಕ್ಟರಿಯನ್ನು ಪುನಶ್ಚೇತನ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಮುರ್‌ಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)**

**ಅ)** ಸರ್ಕಾರದ ಗಮನಕ್ಕೆ ಬಂದಿದೆ.

ಸಂಸ್ಥೆಯು ಕಳೆದ 2 ವರ್ಷಗಳಿಂದ ಅಂದರೆ 2009–10ರಲ್ಲಿ ರೂ. 2.04 ಕೋಟಿ ಹಾಗೂ 2010–11ರಲ್ಲಿ ರೂ. 1.39 ಕೋಟಿ ನಷ್ಟ ಅನುಭವಿಸಿದೆ. ಇದಕ್ಕೆ ಪ್ರಮುಖ ಕಾರಣಗಳೆಂದರೆ:

1. ದುಡಿಯುವ ಬಂಡವಾಳದ ಕೊರತೆ
2. ಹೆಚ್ಚಿನ ಗಾತ್ರದ ಚಾಲಕ ಯಂತ್ರಗಳ ಮಿಶ್ರ ಉತ್ಪನ್ನಗಳ ಅಲಭ್ಯತೆ
3. ಉತ್ಪಾದನೆಗೆ ಬೇಕಾಗುವ ಕಚ್ಚಾವಸ್ತುಗಳನ್ನು ಸರಬರಾಜು ಮಾಡಿರುವ ಸರಬರಾಜುದಾರರಿಗೆ ಸಂಸ್ಥೆಯು ಕೊಡಬೇಕಾದ 4.55 ಕೋಟಿ ರೂ.ಗಳ ಹಣ ಬಾಕಿ ಇದೆ.

ಸರಬರಾಜುದಾರರು ಸಂಸ್ಥೆಗೆ ಬೇಕಾದ ಕಚ್ಚಾವಸ್ತುಗಳನ್ನು ಒದಗಿಸುತ್ತಿಲ್ಲ. ಹಾಗಾಗಿ ಉದ್ಯೋಗಿಗಳಿಗೆ ಕೆಲಸವನ್ನು ಕೊಡಲು ಸಾಧ್ಯವಾಗುತ್ತಿಲ್ಲ.

ಆ)

- ಎನ್.ಜಿ.ಇ.ಎಫ್(ಹುಬ್ಬಳ್ಳಿ) ಸಂಸ್ಥೆಯು ಎನ್.ಜಿ.ಇ.ಎಫ್. ಬೆಂಗಳೂರು ಸಂಸ್ಥೆಯ ಅಧೀನ ಸಂಸ್ಥೆಯಾಗಿದೆ.
- ಎನ್.ಜಿ.ಇ.ಎಫ್. ಬೆಂಗಳೂರು ಸಂಸ್ಥೆಯನ್ನು ಈಗಾಗಲೇ ಮುಚ್ಚಲಾಗಿದ್ದು, ಇದಕ್ಕೆ ಅಧಿಕೃತ ಸಮಾಪನಾಧಿಕಾರಿಯನ್ನು ನೇಮಕ ಮಾಡಲಾಗಿದೆ.
- ಎನ್.ಜಿ.ಇ.ಎಫ್. ಹುಬ್ಬಳ್ಳಿ ಸಂಸ್ಥೆಯು ಸಂಪೂರ್ಣ ಆರ್ಥಿಕ ಮುಗ್ಗಟ್ಟು ಅನುಭವಿಸುತ್ತಿದ್ದು, ಉತ್ಪಾದನೆಯಲ್ಲಿ ಅಡೆತಡೆ ಉಂಟಾಗಿರುವುದರಿಂದ ಬಾಕಿ ಬಿಲ್ಲುಗಳನ್ನು ಪಾವತಿಸುವ ಹಾಗೂ ಸಂಸ್ಥೆಯ ಖರ್ಚುಗಳನ್ನು ಭರಿಸುವ ಸಾಮರ್ಥ್ಯ ಇಲ್ಲವಾಗಿದೆ.

- ಸರ್ಕಾರಿ ಸ್ವಾಮ್ಯದ ಲಾಭ ಗಳಿಸುತ್ತಿರುವ ಉದ್ಯಮವಾದ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಲಿ; ಸಂಸ್ಥೆಯಿಂದ ತುರ್ತಾದ ದುಡಿಮೆ ಬಂಡವಾಳದ ಅವಶ್ಯಕತೆ ಪೂರೈಸುವ ಸಲುವಾಗಿ ರೂ. 10–00 ಕೋಟಿಗಳ ಬಡ್ಡಿರಹಿತ ಸಾಲವನ್ನು ಪಡೆಯಲು ದಿನಾಂಕ: 29–9–2011ರಂದು ವ್ಯವಸ್ಥಾಪಕ ನಿರ್ದೇಶಕರು, ಹಟ್ಟಿ ಗೋಲ್ಡ್ ಮೈನ್ಸ್ ಲಿ; ಇವರಿಗೆ ಪತ್ರ ಬರೆಯಲಾಗಿದ್ದು, ಸದರಿ ಸಂಸ್ಥೆಯೊಡನೆ ಸಮಾಲೋಚನೆ ನಡೆಸಲಾಗುತ್ತಿದೆ.

**ಶ್ರೀ ಮೋಹನ್ ಎ. ಲಿಂಬಿಕಾಯಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಪ್ರಪ್ರಥಮವಾಗಿ ಕಾಕತಾಳಿ ಎನ್ನುವ ಹಾಗೆ ಹುಬ್ಬಳ್ಳಿ–ಧಾರವಾಡದ ಮಧ್ಯೆಯಲ್ಲಿರುವಂತಹ ಈ ಎನ್‌ಜಿಇಎಫ್ ಸಂಸ್ಥೆಯನ್ನು ಸ್ಥಾಪನೆ ಮಾಡಿದಂಥವರು ಮಾನ್ಯ ಶ್ರೀ ಎಸ್.ಆರ್. ಬೊಮ್ಮಾಯಿಯವರು. ಇವತ್ತು ಇದಕ್ಕೆ ಉತ್ತರವನ್ನು ಕೊಡುತ್ತಿರುವಂಥವರು ಶ್ರೀ ಬಸವರಾಜ ಬೊಮ್ಮಾಯಿಯವರು. ಅದಕ್ಕೆ ಒಂದು ಕಳಕಳಿಯ ವಿನಂತಿ ಏನೆಂದರೆ, ಇಡೀ ಭಾರತದಲ್ಲಿಯೇ ಅತ್ಯುತ್ತಮವಾದಂತಹ ವಿದ್ಯುತ್ ಮೋಟರ್‌ಗಳನ್ನು ತಯಾರು ಮಾಡುವಂತಹ ಉತ್ತಮವಾದಂತಹ ಸಂಸ್ಥೆ. 2008–09ನೇ ಸಾಲಿನ ವರೆಗೆ ಲಾಭದಾಯಕವಾಗಿ ನಡೆಯುತ್ತಿತ್ತು. 2008–09ನೇ ಸಾಲಿನಲ್ಲಿ 54,00,000 ರೂಪಾಯಿಗಳನ್ನು ಲಾಭ ಗಳಿಸಿತ್ತು. 2009–10 ರಿಂದ 2010–11ರ ವರೆಗೆ ನಷ್ಟದಲ್ಲಿ ಈ ಸಂಸ್ಥೆ ನಡೆಯುತ್ತಿದೆ. ಕಾರಣವೇನೆಂದರೆ, ಒಂದು ಪೈಪೋಟಿ ಎರಡನೆಯದಾಗಿ ಅಲ್ಲಿರುವಂತಹ ಯಂತ್ರಗಳು ನವೀಕರಣವಾಗಬೇಕಾಗಿದೆ. ಈ ಹಿನ್ನಲೆಯಲ್ಲಿ ಸರ್ಕಾರ ಆ ಸಂಸ್ಥೆಗೆ ವಿಶೇಷವಾದಂತಹ ಅನುದಾನವನ್ನು ಕೊಟ್ಟರೆ ಮಾತ್ರ ಅದು ಬದುಕುತ್ತದೆ. ಅಲ್ಲಿ 147 ಜನರು ನೌಕರಿಯನ್ನು ಮಾಡುತ್ತಿದ್ದಾರೆ. ಕಳೆದ ಮೂರು ತಿಂಗಳುಗಳಿಂದ ಅವರಿಗೆ ಸಂಬಳ ಕೊಟ್ಟಿಲ್ಲ. Provident Fund contribution, LIC contribution ಕೊಟ್ಟಿಲ್ಲ. OD payment ಮಾಡಿಲ್ಲ. ಯಾರ್‍ಯಾರಿಂದ raw material ಖರೀದಿ ಮಾಡಲಾಗಿದೆ ಅವರಿಗೆ ಹಣವನ್ನು ಕೊಟ್ಟಿಲ್ಲ. 10 ರಿಂದ 12 ಕೋಟಿ ರೂಪಾಯಿಗಳ ವರೆಗೆ ಹಣ

ಕೊಡುವಂಥದ್ದು ಬಾಕಿ ಇದೆ. 350 ರಿಂದ 400 ಜನ ನೌಕರರ ಅವಲಂಬಿತ ನೌಕರರು ಬೀದಿ ಪಾಲಾಗಿದ್ದಾರೆ. ಅಷ್ಟೇ ಅಲ್ಲದೇ ಎನ್‌ಜಿಇಎಫ್ ಅನ್ನು ಆಧಾರಿಸಿ ಅಪ್ರತೇಕ್ಷವಾಗಿ ಉದ್ಯೋಗ ಮಾಡುತ್ತಿದ್ದ ಸುಮಾರು 2500 ಉದ್ಯಮೆಗಳು ಇವತ್ತಿನ ದಿವಸ ಬಂದ್ ಆಗಿದೆ. ಕಳೆದ ಎರಡು ವರ್ಷದಿಂದ ನಾವು ಸರ್ಕಾರಕ್ಕೆ ಮನವಿಯನ್ನು ಮಾಡುತ್ತಿದ್ದೇವೆ. ಅವರಿಗೆ ಏನಾದರು ವಿಶೇಷವಾದಂತಹ ಅನುದಾನವನ್ನು ಕೊಡುವುದರ ಮುಖಾಂತರ ಆ ಸಂಸ್ಥೆಯನ್ನು ಉಳಿಸಬೇಕು. ಸರ್ಕಾರ ಇಂತಹ ಸಂಸ್ಥೆಗಳಿಗೆ ಸಾಕಷ್ಟು ಅನುದಾನವನ್ನು ಕೊಟ್ಟಿರುವಂತಹ ಉದಾಹರಣೆಗಳಿವೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದಕ್ಕೆ ಪೂರಕವಾದಂತಹ ಮಾಹಿತಿ ಏನೆಂದರೆ, ಈ ಸಂಸ್ಥೆಯ ಆಸ್ತಿ ಪಾಸ್ತಿಗಳನ್ನು ಮಾರಾಟ ಮಾಡಲು ಅನುಮತಿಯನ್ನು ನೀಡಲು ನ್ಯಾಯಸಮ್ಮತ ಆದೇಶವನ್ನು ಜಾರಿಗೊಳಿಸಲು ಕೋರಿರುತ್ತಾರೆಂದು ಉತ್ತರದಲ್ಲಿ ಕೊಟ್ಟಿದ್ದಾರೆ. Official Liquidator appointment ಮಾಡಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ಎರಡು ಸಂಸ್ಥೆಗಳಿವೆ. ಇದಕ್ಕೆ ಬೆಂಗಳೂರಿನಲ್ಲಿರುವ ಎನ್‌ಜಿಇಎಫ್‌ಗೆ Official Liquidator appointment ಮಾಡಿಕೊಂಡಿದ್ದಾರೆ. ಅವರು ಹುಬ್ಬಳ್ಳಿ ಆಸ್ತಿಯನ್ನು ಕೂಡ ಮಾರಾಟ ಮಾಡಬೇಕೆಂದು ಕೇಳಿದ್ದರು. ಅದಕ್ಕೆ ಸರ್ಕಾರದ ವತಿಯಿಂದ ಏನು ಒಂದು ಮನವಿಯನ್ನು ಸಲ್ಲಿಸಲಾಗಿತ್ತು ಅದಕ್ಕೆ ರಾಜ್ಯ ಉಚ್ಚ ನ್ಯಾಯಾಲಯವು ದಿನಾಂಕ 07.07.2011ರಂದು ಒಂದು ಆದೇಶವನ್ನು ಮಾಡಿ ಬೆಂಗಳೂರಿನಲ್ಲಿರುವಂತಹ ಎನ್‌ಜಿಇಎಫ್ ಮತ್ತು ಹುಬ್ಬಳ್ಳಿಯಲ್ಲಿರುವಂತಹ ಎನ್‌ಜಿಇಎಫ್ ಎರಡು ಪ್ರತ್ಯೇಕವಾದಂತಹ ಸಂಸ್ಥೆ ಎಂದು ಆದೇಶ ಮಾಡಿದೆ. ಹುಬ್ಬಳ್ಳಿಯ ಆಸ್ತಿಯನ್ನು ಮಾರಾಟ ಮಾಡಬಾರದೆಂದು ರಾಜ್ಯ ಉಚ್ಚ ನ್ಯಾಯಾಲಯ ಇದಕ್ಕೆ ತಡೆಯಾಜ್ಞೆಯನ್ನು ಕೊಡಲಾಗಿದೆ.

ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದೇನೆಂದರೆ, ಸರ್ಕಾರ ಆದಷ್ಟು ಬೇಗ ಇದಕ್ಕೆ ಹಣವನ್ನು ಕೊಟ್ಟರೆ ಇದು ಬದುಕುತ್ತದೆ, ಇಲ್ಲದಿದ್ದರೆ ಸಾಯುತ್ತದೆ. ಅದಕ್ಕೆ ಹಟ್ಟಿ ಗೋಲ್ಡ್ ಮೈನ್ಸ್ ಲಿ., ರವರಿಗೆ ದಿನಾಂಕ 29.09.2011ರಂದು ವ್ಯವಸ್ಥಾಪಕ ನಿರ್ದೇಶಕರಿಗೆ ಒಂದು ಪತ್ರವನ್ನು

ಬರೆದು ಅವರಿಗೆ ಹಣವನ್ನು ಕೊಡುವುದಕ್ಕೆ ಹೇಳಿದ್ದೇವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಅವರಿಗೆ ಪತ್ರವನ್ನು ಬರೆದ ನಂತರ ಅವರು ಎರಡು ಸಭೆಗಳನ್ನು ಮಾಡಿದ್ದಾರೆ. ಎರಡು ಸಭೆಯಲ್ಲಿಯೂ ಕೂಡ ಹಣವನ್ನು ಕೊಡುವುದರ ಪರವಾಗಿ ಪೂರಕವಾದಂತಹ ನಿರ್ಧಾರಗಳನ್ನು ತೆಗೆದುಕೊಂಡಿಲ್ಲ. ಸರ್ಕಾರ ಕೊಡಬಹುದೇ ವಿನಃ, ನಾವು ಕೊಡುವುದಿಲ್ಲವೆಂದು ಹೇಳಿದ್ದಾರೆ. ಈಗ ಸರ್ಕಾರ ಕನಿಷ್ಠ 20 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಈಗ ಏನು 10 ಕೋಟಿ ರೂಪಾಯಿಗಳನ್ನು ಬಾಕಿ ಕೊಡಬೇಕಾಗಿದೆ ಅದನ್ನು ಕೊಡುವುದಕ್ಕೆ, ಇನ್ನೊಂದು 10 ಕೋಟಿ ರೂಪಾಯಿಗಳು ದುಡಿಯುವ ಬಂಡವಾಳವನ್ನಾಗಿ ಕೊಟ್ಟರೆ ಮಾತ್ರ ಆ ಸಂಸ್ಥೆ ಬದುಕುತ್ತದೆ. ಇಲ್ಲವೆಂದರೆ 250 ಜನ ನೌಕರರಿದ್ದಾರೆ ಅವರೆಲ್ಲರೂ ಬೀದಿ ಪಾಲಾಗುತ್ತಾರೆ. ಅವರುಗಳಿಗೆ ಈಗಾಗಲೇ ಮೂರು ತಿಂಗಳುಗಳಿಂದ ಸಂಬಳವನ್ನು ಕೊಟ್ಟಿಲ್ಲ. ಬಹಳ ಕೆಟ್ಟ ಪರಿಸ್ಥಿತಿ ಇದೆ. ಇದು ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಮಾನ್ಯ ಸಚಿವರಿಗೂ ಕೂಡ ಇದರ ಬಗ್ಗೆ ಗೊತ್ತಿದೆ. ಆದುದರಿಂದ ತಕ್ಷಣ ಒಂದು ವಾರದಲ್ಲಿ ಕನಿಷ್ಟ 20 ಕೋಟಿ ರೂಪಾಯಿಗಳನ್ನು ಎನ್‌ಜಿಇಎಫ್‌ಗೆ ಕೊಡುವಂತಹ ವ್ಯವಸ್ಥೆ ಮಾಡಬೇಕು. ಮೆ: ಹಟ್ಟಿ ಗೋಲ್ಡ್ ಮೈನ್ಸ್ ಲಿ. ಸಂಸ್ಥೆಯವರು ಹಣವನ್ನು ಕೊಡುತ್ತಾರೆ ಎಂದು ಅವರ ಮೇಲೆ ಹಾಕುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಅವರು ಕೊಡುವುದಿಲ್ಲ. ಸಮಸ್ಯೆ ಬಗೆಹರಿಯದೇ ಸುಮಾರು 25 ಎಕರೆ ಜಾಗದಲ್ಲಿರುವಂತಹ ಈ ಸಂಸ್ಥೆ ಮುಚ್ಚಿ ಹೋಗಿ ಬಹಳ ತೊಂದರೆಯಾಗುತ್ತದೆ. ಶ್ರೀ ಎಸ್.ಆರ್. ಬೊಮ್ಮಾಯಿಯವರು ಹುಟ್ಟಿ ಹಾಕಿದಂತಹ ಸಂಸ್ಥೆಯನ್ನು ಶ್ರೀ ಬಸವರಾಜ ಬೊಮ್ಮಾಯಿಯವರು ಸಚಿವರಾಗಿದ್ದಾಗ ಮುಚ್ಚಿ ಹಾಕಿದರು ಎನ್ನುವಂಥದ್ದಾಗುತ್ತದೆ. ಅಂತಹ ಕೆಟ್ಟ ಹೆಸರು ಬರುವುದು ಬೇಡ. ಇದರ ಬಗ್ಗೆ ಸರ್ಕಾರ ಬೇಗ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರದವರನ್ನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ (ಭಾರೀ ನೀರಾವರಿ ಸಚಿವರು) (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಪರವಾಗಿ):–** ಮಾನ್ಯ ಸಭಾಪತಿಯವರೆ, ಹುಬ್ಬಳ್ಳಿಯ ಎನ್‌ಜಿಇಎಫ್ ಸಂಸ್ಥೆ ಬಗ್ಗೆ ಮತ್ತು ಬೆಂಗಳೂರಿನಲ್ಲಿರುವಂತಹ ಎನ್‌ಜಿಇಎಫ್ ಸಂಬಂಧದ ಬಗ್ಗೆ ಸಂಪೂರ್ಣವಾಗಿ ಸನ್ಮಾನ್ಯ ಸದಸ್ಯರು ಹೇಳಿದ್ದಾರೆ. ಉತ್ತರ ಕರ್ನಾಟಕದಲ್ಲಿ ಮೊಟ್ಟ ಮೊದಲು ಪಬ್ಲಿಕ್ ಸೆಕ್ಟರ್ 1984ನೇ ಇಸವಿಯಲ್ಲಿ ಪ್ರಾರಂಭವಾಗಿ ಸತತವಾಗಿ ಲಾಭದಾಯಕವಾಗಿ ನಡೆದುಕೊಂಡು ಬಂದು 2009ನೇ ಇಸವಿಯಿಂದ ಬದಲಾದಂತಹ ಒಂದು ಕೈಗಾರಿಕೆಯ ವಾತಾವರಣದಲ್ಲಿ ಅದಕ್ಕೆ ಎಷ್ಟು ಶಕ್ತಿಯನ್ನು ಕಾಲ ಕಾಲಕ್ಕೆ ತುಂಬಬೇಕು ಅದು ಆಗದೇ ಮತ್ತು ಕೆಲವು ಮ್ಯಾನೇಜ್‌ಮೆಂಟ್‌ನ ತಪ್ಪುಗಳಿಂದ ಇವತ್ತು ಈ ಪರಿಸ್ಥಿತಿ ಬಂದಿದೆ. ಆ ಫ್ಯಾಕ್ಟರಿಗೆ ಇರುವಂತಹ ಹೆಸರು ಮತ್ತು ಅವರು ತಯಾರು ಮಾಡುವಂತಹ ಪ್ರಾಡಕ್ಟ್‌ಗೆ ಮತ್ತು ಅದರ ಡಿಸೈನ್‌ಗೆ ಇವತ್ತಿಗೂ ಕೂಡ ಅತ್ಯಂತ ಉತ್ಕೃಷ್ಟವಾಗಿದೆ. ಎನ್‌ಜಿಇಎಫ್ ಮೋಟಾರ್ಸ್ ಎಂದರೆ, ಅದು ನಮ್ಮ ಜರ್ಮನ್ collaboration ಇರುವಂತಹ ಡಿಸೈನ್ ಮೋಟರ್ಸ್.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಎಲ್ಲಿಗೆ ಹೋಗಿದ್ದಾರೆ?

**ಸಭಾಪತಿಯವರು:–** ಅವರು ಸದನಕ್ಕೆ ಬರುವುದಕ್ಕೆ ಸಾಧ್ಯವಾಗುತ್ತಿಲ್ಲವಾದ್ದರಿಂದ ನನ್ನ ಪರವಾಗಿ ಭಾರೀ ನೀರಾವರಿ ಸಚಿವರು ಉತ್ತರವನ್ನು ಕೊಡುತ್ತಾರೆಂದು ಪತ್ರವನ್ನು ಕಳುಹಿಸಿಕೊಟ್ಟಿದ್ದಾರೆಂದು ನಾನು ಹೇಳಿದೆ. ತಾವು ಕೇಳಿಸಿಕೊಳ್ಳಲಿಲ್ಲ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ಅವರು ಸದನದಕ್ಕೆ ಬರದೇ ಇರುವುದಕ್ಕೆ ಕಾರಣವನ್ನು ಏನು ಕೊಟ್ಟಿದ್ದಾರೆ?

**ಸಭಾಪತಿಯವರು:–** ನನಗೆ ಒಂದು ಪತ್ರವನ್ನು ಕಳುಹಿಸಿಕೊಟ್ಟಿದ್ದಾರೆ.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೆ, ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ಏಕೆಂದರೆ ಸದನ ಕಾರ್ಯಕಲಾಪಗಳು ನಡೆಯುವಂತಹ ಸಂದರ್ಭದಲ್ಲಿ ಕಾರ್ಯಕಲಾಪಗಳಿಗೆ ಆದ್ಯತೆಯನ್ನು ಕೊಡಬೇಕೆಂದು ತಾವು ಹೇಳಿಕೊಂಡು ಬಂದಿದ್ದೀರಿ. ನಾವೆಲ್ಲರೂ ಸದನದಲ್ಲಿ ಅದೇ ರೀತಿಯಾಗಿ ನಡೆದುಕೊಂಡು ಬರುತ್ತಿದ್ದೇವೆ. ಅವರು ಪತ್ರವನ್ನು ಕಳುಹಿಸಿಬಿಟ್ಟಿದ್ದಾರೆನ್ನುವುದು ಸಕಾರಣ ಅಲ್ಲ. ಕಾರಣ ಏನು ಕೊಟ್ಟಿದ್ದಾರೆ? ಕಾರಣವನ್ನು ತಿಳಿದುಕೊಳ್ಳುವಂತಹ ಜವಾಬ್ದಾರಿ ನಮಗೆ ಇದೆ. ಕಾರ್ಯಕಲಾಪಗಳು ನಡೆಯುತ್ತಿರುವಾಗ ಸಚಿವರುಗಳಿಗೆ ಇದಕ್ಕಿಂತಲೂ ಪ್ರಾಮುಖ್ಯತೆ ಯಾವುದು ಇದೆ, ಪತ್ರವನ್ನು ಬರೆದು ಕಳುಹಿಸಿ ಬಿಟ್ಟರೆ ಸಾಕಾಗುತ್ತದೆಯೇ? ದಯಮಾಡಿ ಅವರು ಕಾರಣವನ್ನು ಏನು ಕೊಟ್ಟಿದ್ದಾರೆಂದು ಹೇಳಬೇಕು. ಕಾರ್ಯಕ್ರಮ ಯಾವುದು ಇದೆ ಎಂದು ತಿಳಿಸಿದ್ದಾರೆ?

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೆ, ಇದಕ್ಕೆ ಉತ್ತರವನ್ನು ಹೇಳಿ ಮುಗಿಸಿ ಬಿಡುತ್ತೇನೆ.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೆ, ದಯಮಾಡಿ ಮಾನ್ಯ ಬಸವರಾಜ ಬೊಮ್ಮಾಯಿಯವರಿಗೆ ಒಂದು ನಿಮಿಷ ಕುಳಿತುಕೊಳ್ಳುವುದಕ್ಕೆ ಹೇಳಿ. ನಾವು ಕಾರಣವನ್ನು ತಿಳಿದುಕೊಳ್ಳಬೇಕಾಗುತ್ತದೆ. ಸದನಕ್ಕೂ ಕೂಡ ಕಾರಣ ಗೊತ್ತಾಗಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಒಂದು ಪತ್ರವನ್ನು ಬರೆದು ನನಗೆ ದಿನಾಂಕ 01.02.2012 ರಂದು ಇಂತಹ ಕಾರಣಕ್ಕಾಗಿ ಸದನಕ್ಕೆ ಬರುವುದಕ್ಕಾಗುತ್ತಿಲ್ಲ, ಹಾಗಾಗಿ ಬೃಹತ್ ನೀರಾವರಿ ಸಚಿವರು ನನ್ನ ಪರವಾಗಿ ಉತ್ತರವನ್ನು ಕೊಡುತ್ತಾರೆ, ಸಂಬಂಧಪಟ್ಟಂತಹ ಎಲ್ಲಾ ಫೈಲ್‌ಗಳನ್ನು ಅವರಿಗೆ ಕೊಟ್ಟಿದ್ದೇನೆಂದು ನನಗೆ ಪತ್ರದಲ್ಲಿ ತಿಳಿಸಿದ್ದಾರೆ. ಆ ಪತ್ರದ ಆಧಾರದ ಮೇಲೆ ಒಬ್ಬ ಸಚಿವರ ಹೆಸರಿನಲ್ಲಿರುವಂತಹ ಪ್ರಶ್ನೆಗೆ ಬೇರೆ ಸಚಿವರು ಉತ್ತರವನ್ನು ಕೊಡುವುದಕ್ಕೆ

ನಿಯಮಾವಳಿಯಲ್ಲಿ ಅವಕಾಶ ಇದೆ. ಹಾಗಾಗಿ, ಶ್ರೀ ಬಸವರಾಜ ಬೊಮ್ಮಾಯಿ ಅವರು ಉತ್ತರವನ್ನು ಕೊಡುತ್ತಿದ್ದಾರೆ. ಅವರು ನನ್ನ ಹತ್ತಿರ ಪೂರ್ಣ ಮಾಹಿತಿ ಇದೆಯೆಂದು confident ಆಗಿ ಉತ್ತರವನ್ನು ಕೊಡುತ್ತಿರುವುದರಿಂದ ಉತ್ತರ ಸಿಗುತ್ತದೆ. ಎರಡನೆಯದಾಗಿ ಸಂಬಂಧಪಟ್ಟಂತಹ ಸಚಿವರು ಸದನಕ್ಕೆ ಏಕೆ ಬರಲಿಲ್ಲ ಕಾರಣವನ್ನು ತಿಳಿಸಿ ಎಂದು ಕೇಳುತ್ತಿದ್ದೀರಿ. ಅದು ಪ್ರಶ್ನೆ ಇರುವಂಥದ್ದು. ನಾನು ಅದಕ್ಕೆ ತಮಗೆ ಪತ್ರವನ್ನು ಕಳುಹಿಸಿಕೊಡುತ್ತೇನೆ.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೆ, ಮನೆಯಲ್ಲಿ ಏನಾದರು ಅನಾಹುತವಾಗಿದ್ದರೆ ಆಯಿತು. ಅದರ ಬಗ್ಗೆ ನಾವು ಏನು ಹೇಳುವುದಿಲ್ಲ. ಅವರು ಕಳುಹಿಸಿಕೊಟ್ಟಿರುವಂತಹ ಪತ್ರವನ್ನು ಓದಿ ಎಲ್ಲಾ ಸದಸ್ಯರುಗಳಿಗೂ ಕೂಡ ಅವರು ಸದನಕ್ಕೆ ಬರದೇ ಇರುವುದಕ್ಕೆ ಕಾರಣ ಗೊತ್ತಾಗಲಿ

**ಶ್ರೀ ಆರ್.ವಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಮದುವೆ ಇದೆ ಎಂದು ಹೋಗಿದ್ದರೆ ಅದರಲ್ಲಿ ಏನು ಅರ್ಥ ಇರುವುದಿಲ್ಲ.

**ಸಭಾಪತಿಯವರು:-** ಅವರು ಮದುವೆ ಇದೆ ಅಲ್ಲಿಗೆ ಹೋಗಬೇಕೆಂದು ಏನು ಅವರ ಪತ್ರದಲ್ಲಿ ಬರೆದಿಲ್ಲ. ಊಹೆ ಮಾಡಿಕೊಳ್ಳುವುದು ಸರಿಯಲ್ಲ.

ಮಾನ್ಯ ಮರಿತಿಬ್ಬೇಗೌಡರು ಅಪರೂಪಕ್ಕೆ ಎದ್ದು ನಿಂತಿದ್ದಾರೆ ಅವರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇನೆ. ಆದರೆ ಮಾನ್ಯ ಮರಿತಿಬ್ಬೇಗೌಡರೆ ಮೆಲ್ಲಗೆ ಮಾತನಾಡಿ ನನಗೆ ಕಿವಿ ಕೇಳುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಗೈರುಹಾಜರಿ ಬಗ್ಗೆ ಗುಪ್ತವಾಗಿ ಇಡಿ ಎಂದು ಏನಾದರೂ ಬರೆದಿದ್ದಾರೆಯೇ?

**ಸಭಾಪತಿಯವರು:-** ಇಲ್ಲ. ಅವರು ಸದನಕ್ಕೆ ಬರುವುದಕ್ಕೆ ಅವಕಾಶವಾಗುತ್ತಿಲ್ಲ. ನನ್ನ ಬದಲು ಶ್ರೀ ಬಸವರಾಜ ಬೊಮ್ಮಾಯಿಯವರು ಉತ್ತರವನ್ನು ಕೊಡುತ್ತಾರೆಂದು ಪತ್ರದಲ್ಲಿ ತಿಳಿಸಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ನಗುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಮುಖ್ಯಮಮತ್ರಿಗಳು ನಕ್ಕಿದ್ದು ನಾನು ಮಾನ್ಯ ಮರಿತಿಬ್ಬೇಗೌಡರೆ ಮೆತ್ತಗೆ ಮಾತನಾಡಿ ನನಗೆ ಕಿವಿ ಕೇಳುತ್ತದೆಂದು ಹೇಳಿದ್ದಕ್ಕೆ. ಅವರು ಸ್ವಲ್ಪ ಜೋರಾಗಿ ಮಾತನಾಡುತ್ತಾರೆ ಅದು ಅವರ ಸ್ವಾಭಾವ. ಅವರಿಗೂ ನಾನು ಹೇಳುತ್ತಿರಬೇಕು. ಇಲ್ಲದಿದ್ದರೆ ಅವರ ಸ್ವಾಭಾವ ವಾಪಸ್ಸು ಬಂದು ಬಿಡುತ್ತದೆ. ಜೋರಾಗಿ ಮಾತನಾಡಿ ಬಿಡುತ್ತಾರೆ. ಈ ವಿಷಯದ ಬಗ್ಗೆ ಪ್ರಶ್ನೋತ್ತರ ವೇಳೆಯನ್ನು ಮುಗಿಸಿ ಬಿಡೋಣ. ಪ್ರಶ್ನೋತ್ತರ ವೇಳೆಯನ್ನು ಮುಗಿಸಿ ಮತ್ತೆ ಇದಕ್ಕೆ ಬರೋಣ.

**ಶ್ರೀ ಎಂ.ಸಿ. ನಾಣಯ್ಯ:–** ಆಯಿತು.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ವಿವರಣೆಯನ್ನು ಹೇಳಿದ್ದೆ. ಹುಬ್ಬಳ್ಳಿಯಲ್ಲಿರುವ ಎನ್‌ಜಿಇಎಫ್ ಫ್ಯಾಕ್ಟರಿಯ ಪ್ರಾಡಕ್ಟ್ ಬಹಳ ಉತ್ಕೃಷ್ಟವಾಗಿದೆ. ಬೇಡಿಕೆ ಕೂಡ ಇದೆ. ಆ ಹಿನ್ನಲೆಯಲ್ಲಿಯೇ ಎನ್‌ಜಿಇಎಫ್ liquidate ಆದರೂ ಕೂಡ ಇದನ್ನು ಮಾರಾಟ ಮಾಡದೇ ಇದನ್ನು ಕಂಟಿನ್ಯೂ ಮಾಡಿತ್ತು. ಈಗಲೂ ಕೂಡ ಆ ಸಂಸ್ಥೆಯನ್ನು ಮುಂದುವರೆಸುವಂತಹ ಉದ್ದೇಶದಿಂದಲೇ ಮುಖ್ಯಮಂತ್ರಿಗಳು ಮೆ: ಹಟ್ಟಿ ಗೋಲ್ಡ್ ಮೈನ್ಸ್ ಲಿ., ಗೆ ನಿರ್ದೇಶನವನ್ನು ನೀಡಿದ್ದರು. ಅವರದೇ ಅದಂತಹ ತೊಂದರೆಯಿಂದ ಅವರು ತೀರ್ಮಾನವನ್ನು ತೆಗೆದುಕೊಂಡಿಲ್ಲ. ಬರುವ ವಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಹಣಕಾಸು ಇಲಾಖೆ ಮತ್ತು ಮೆ: ಹಟ್ಟಿ ಗೋಲ್ಡ್ ಮೈನ್ಸ್ ಲಿ.,ನವರ ಎಂ.ಡಿ.ಯವರನ್ನು ಕರೆದು ಇದಕ್ಕೆ ಸಮರ್ಪಕವಾಗಿ ಏನೆಲ್ಲಾ ಒದಗಿಸಬೇಕು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೆ, ಹುಬ್ಬಳ್ಳಿಯಲ್ಲಿರುವ ಎನ್‌ಜಿಇಎಫ್ it is a subsidiary of the Parent Department. ಹುಬ್ಬಳ್ಳಿಯಲ್ಲಿ ಸ್ಥಾಪನೆ ಮಾಡುವಂತಹ ಸಂದರ್ಭದಲ್ಲಿ ಶ್ರೀ ಎಸ್.ಆರ್. ಬೊಮ್ಮಾಯಿಯವರು ಅವತ್ತಿನ ದಿವಸ ಮಂತ್ರಿಗಳಾದ್ದರು. ನಾನು ಅವರ ಜೊತೆಯಲ್ಲಿ ಸಚಿವ ಸಂಪುಟದಲ್ಲಿದ್ದೆ. ಆಗ ಆ ಕೆಲಸವನ್ನು ಮಾಡಬೇಕೆಂದು ಚಿಂತನೆ ಇತ್ತು. ನಂತರ ಆ ಸಂಸ್ಥೆಯನ್ನು ಪ್ರಾರಂಭ ಮಾಡಲಾಯಿತು. ಕಡೆಗೆ NGEF Parent Department ಕಥೆ ನಿಮಗೆ ಗೊತ್ತಿದೆ. ಹತ್ತಾರು ಸಂದರ್ಭದಲ್ಲಿ ಅವರು ಕೇಳಿರತಕ್ಕಂತಹ ಹಣವನ್ನು ಕೊಟ್ಟು ಕೊಟ್ಟು ಆ ಸಂಸ್ಥೆಯನ್ನು ನಡೆಸುತ್ತಿರುವಂಥವರು ಬೇರೆ ಯಾರೂ ಅಲ್ಲ, ಎಲ್ಲಾ ಹಿರಿಯ ಐಎಎಸ್ ಅಧಿಕಾರಿಗಳು. Public Sector Undertakings ನಲ್ಲಿ ಇವತ್ತು ಇರತಕ್ಕಂಥದ್ದರೆಲ್ಲದರಲ್ಲಿಯೂ ಕೂಡ Managing Directors ಆಗಿರುವವರು ಹಿರಿಯ ಐಎಎಸ್ ಅಧಿಕಾರಿಗಳು. ಎಲ್ಲಾ ಸಂಸ್ಥೆಗಳ ಪರಿಸ್ಥಿತಿಯು ನಮ್ಮೆಲ್ಲರಿಗೂ ಕೂಡ ಗೊತ್ತಿರತಕ್ಕಂಥದ್ದು ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಗೊತ್ತಿದೆ. ಈ ಹಿನ್ನಲೆಯಲ್ಲಿ ಶ್ರೀ ಮೋಹನ ಎ. ಲಿಂಬಿಕಾಯಿಯವರು ಹೇಳಿದಂತೆ NGEF ನವರು ಉತ್ತಮ ಮೋಟರ್‌ಗಳನ್ನು ತಯಾರು ಮಾಡುತ್ತಿದ್ದರು. ಆದರೆ ಇವತ್ತಿನ ದಿವಸ ಪೈಪೋಟಿ ಜಾಸ್ತಿಯಾಗಿದೆ ಎಂದು ಕೂಡ ಹೇಳಿದ್ದಾರೆ. ನಾಳೆ ಈ ರೀತಿಯ ಮೋಟರ್‌ಗಳು ಎಲ್ಲಿಯೂ ಕೂಡ ಸಿಗುವುದೇ ಇಲ್ಲ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾದರೆ ಬಹುಶಃ ನಾನು ಹೇಳುತ್ತೇನೆ ನಾಳೆ ನೀವು 10 ಕೋಟಿ ರೂಪಾಯಿಗಳಲ್ಲ 20 ಕೋಟಿ ರೂಪಾಯಿಗಳನ್ನು ಕೊಟ್ಟು ಮಾಡಬೇಕಾದಂತಹ ಅನಿವಾರ್ಯತೆ ಇದೆ. ಆದರೆ ಇವತ್ತು ನಾನು ಹೇಳುವುದೇನೆಂದರೆ. NGEF Parent Department liquidate ಆಯಿತು. ಸರ್ಕಾರದಿಂದ ಪುನಃ ಪುನಃ ಈ ರೀತಿಯ ಕಂಪನಿಗಳಿಗೆ ಹಣ ಕೊಟ್ಟು ಕೊಟ್ಟು ನಮ್ಮ Public Sector Undertakings ಗಳನ್ನು ಇಟ್ಟುಕೊಂಡಿರುವುದೇ ನಿಗಮ ಮಂಡಲಿಗಳಿಗೆ ಛೇರ್ಮನ್‌ಗಳನ್ನು ನೇಮಕ ಮಾಡುವಂತಹ ಪರಿಸ್ಥಿತಿ ಇದೆಯಲ್ಲಾ ಇದೆಲ್ಲದ್ದಕ್ಕೂ ಇತಿಶ್ರೀ ಹಾಕಬೇಕಾದಂತಹ ಕಾಲ ಬಂದ ಹಿನ್ನಲೆಯಲ್ಲಿ ದಯವಿಟ್ಟು ನಾನು

ಹೇಳುತ್ತೇನೆ, ಇಂದನ್ನು objective ಆಗಿ ನೋಡಿ. ಅವರು 20 ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರೆಂದು ನಾವು ಮೆ: ಹಟ್ಟಿ ಗೋಲ್ಡ್ ಮೈನ್ಸ್ ಲಿ., ನಿಂದಲಾದರು ಹಣ ಕೊಡಿ ಮತ್ತೊಂದು ಕಡೆಯಿಂದಲಾದರೂ ಹಣ ಕೊಡಿ ಎಂದು ಹೇಳುವಂಥದ್ದಲ್ಲ. Let me tell you, as at the moment, ಹುಬ್ಬಳ್ಳಿಯಲ್ಲಿರುವಂತಹ ಎನ್.ಜಿ.ಇ.ಎಫ್. ನಷ್ಟದಲ್ಲಿ ನಡೆಯುತ್ತಿರುವಂಥದ್ದು. ಇದಕ್ಕೆ ಇವತ್ತು ಎಷ್ಟೇ ಹಣವನ್ನು ಹಾಕಿದರೂ ಕೂಡ ಇವತ್ತಿನ ಪೈಪೋಟಿಯಲ್ಲಿ ನಡೆಸಲು ಆಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿರುವ ಸಂದರ್ಭದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಈಗ ಸದನದಲ್ಲಿದ್ದಾರೆ. Sir, you must have a second look at the functioning of many of the Public Sector Undertakings now. ಸರ್ಕಾರದ ವತಿಯಿಂದ. Share Capital ಕೊಟ್ಟಿರುವಂಥದ್ದು, subsequently ಸಾಲದ ರೂಪದಲ್ಲಿ ಕೊಟ್ಟು ಈಕ್ವಿಟಿಯಾಗಿ ಕನ್ವರ್ಟ್ ಆಗಿರುವಂಥದ್ದು. ಎಲ್ಲವೂ ಕೂಡ totally eroded. ಇಂತಹ ಸಂದರ್ಭದಲ್ಲಿ ಇವುಗಳನ್ನು revive ಮಾಡಬೇಕೆಂದು ಹೇಳಿದರೆ, the Government is not a charity. ಈ ಹಿನ್ನಲೆಯಲ್ಲಿ ಇದರ ಬಗ್ಗೆ kindly have a second look at it ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಎಂ.ಸಿ. ನಾಣಯ್ಯನವರು ಹೇಳಿದ್ದರಲ್ಲಿ ಬಹಳ ಸತ್ಯ ಇದೆ. ಸರ್ಕಾರ ಇದನ್ನು objective ಆಗಿ ನೋಡುತ್ತದೆ. ಸರ್ಕಾರದ ಮುಂದೆ ಹತ್ತು ಹಲವಾರು options ಇವೆ. ಮಾನ್ಯ ಶ್ರೀ ಮೋಹನ ಎ. ಲಿಂಬಿಕಾಯಿಯವರ ಕಳಕಳಿ ಏನೆಂದರೆ, ಈ ಫ್ಯಾಕ್ಟರಿ ಮುಚ್ಚಬಾರದು, ಅಲ್ಲಿ ಕೆಲಸವನ್ನು ಮಾಡುವಂತಹ ನೌಕರರಿಗೆ ಸರಿಯಾಗಿ ಸಂಬಳವನ್ನು ಕೊಡಬೇಕು, ಪ್ರಾಡಕ್ಟ್ ಒಳ್ಳೆಯದಾಗಿರಬೇಕು, ಅದು ವಿಸ್ತರಣೆಯಾಗಬೇಕು ಮತ್ತು ಲಾಭದಾಯಕವಾಗಬೇಕು ಎನ್ನುವ ವಿಚಾರ ಇದೆ. ಅದು ಯಾವ ರೂಪದಲ್ಲಿರಬೇಕು, ಅದು ಸರ್ಕಾರಿ ಇರಬೇಕೋ, ಅರೆ ಸರ್ಕಾರಿ ಇರಬೇಕೋ ಎನ್ನುವ ಬಗ್ಗೆ we have got many options there. ಆ options open

ಮಾಡುತ್ತೇವೆ ಮತ್ತು ಅದನ್ನು ಮತ್ತೆ ಪ್ರಾರಂಭ ಮಾಡುವುದಕ್ಕೆ ನನಗೆ ತಿಳಿದಂತೆ 20 ಕೋಟಿ ರೂಪಾಯಿಗಳ ಅವಶ್ಯಕತೆ ಇಲ್ಲ. ಮೂರ್ನಾಲ್ಕು ಕೋಟಿ ರೂಪಾಯಿಗಳಲ್ಲಿ ಅಲ್ಲಿ ಮತ್ತೆ ಕೆಲಸವನ್ನು ಪ್ರಾರಂಭ ಮಾಡಬಹುದು. ಆ ಎಲ್ಲಾ options open ಮಾಡಿ, ಎಲ್ಲೆಲ್ಲಿ ನಾವು ಕನಿಷ್ಟ ಹಣವನ್ನು ತೊಡಗಿಸಿ ಅದನ್ನು ಪ್ರಾರಂಭ ಮಾಡಬೇಕೋ ಆ ಸಾಧ್ಯತೆ ಮತ್ತು other format ನಲ್ಲಿ ಇದನ್ನು ನಡೆಸುವುದಕ್ಕೆ options ಅನ್ನು ನಾವು explore ಮಾಡುತ್ತೇವೆ. ಒಟ್ಟಾರೆ ಆ ಒಂದು ಸಂಸ್ಥೆ ಉತ್ಪಾದನೆಯನ್ನು ಮಾಡುವಂತೆ ಕ್ರಮವನ್ನು ಜರುಗಿಸುತ್ತೇವೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಅಲ್ಲಿ ಕೆಲಸವನ್ನು ನಿರ್ವಹಿಸುವಂತಹ ನೌಕರರನ್ನು ಸಂರಕ್ಷಣೆ ಮಾಡಬೇಕು.

**ಸಭಾಪತಿಯವರು:–** ಹಣವನ್ನು ಕೊಟ್ಟು ಆ ಸಂಸ್ಥೆಯನ್ನು ಉಳಿಸುತ್ತೇವೆಂದು ಹೇಳಿದ್ದಾರೆ.

**ರೈತರ ಮೇಲೆ ಕಾಡು ಪ್ರಾಣಿಗಳ ದಾಳಿ ಬಗ್ಗೆ**

**333; ಶ್ರೀ ಕೃಷ್ಣಪ್ಪ ಇ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರತಿ ದಿನ ಕಾಡುಪ್ರಾಣಿಗಳು ನಾಡಿಗೆ ಬಂದು ರೈತರ ಬೆಳೆಯನ್ನು ನಿರಂತರವಾಗಿ ಹಾಳು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಬಂದಿದ್ದಲ್ಲಿ, ಇದನ್ನು ತಡೆಗಟ್ಟುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

**ಇ)** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬನ್ನೇರುಘಟ್ಟದಲ್ಲಿ ಆನೆಯ ಆಕ್ರೋಶಕ್ಕೆ ರೈತನೊಬ್ಬ ಮೃತ ಪಟ್ಟಿದ್ದು, ಇಂತಹ ಹಲವಾರು ಪ್ರಕರಣಗಳು ಪ್ರತಿ ದಿನ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಇದನ್ನು ತಡೆಗಟ್ಟಲು ಅರಣ್ಯ ಇಲಾಖೆ ಸೌರಶಕ್ತಿ

ಬೇಲಿಗಳನ್ನು ಹಾಗೂ ತಡೆಗೋಡೆಗಳನ್ನು ನಿರ್ಮಿಸುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ; ಇದು ಯಾವ ಹಂತದಲ್ಲಿರುತ್ತದೆ?

**ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು)**

**ಅ)** ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೆಲವು ಬಾರಿ ಕಾಡಾನೆಗಳು ನಾಡಿಗೆ ಬಂದು ಅಲ್ಲಲ್ಲಿ ರೈತರ ಬೆಳೆಯನ್ನು ಹಾಳುಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

**ಆ)** ಕಾಡು ಪ್ರಾಣಿಗಳು ಹಾಗೂ ಕಾಡಾನೆಗಳು ಗ್ರಾಮಗಳಿಗೆ, ನಗರಗಳಿಗೆ ಬರುತ್ತಿರುವುದನ್ನು ತಡೆಗಟ್ಟಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳು ಈ ಕೆಳಗಿನಂತಿವೆ.

1. ಕಾಡಾನೆಗಳು ಅರಣ್ಯ ಪ್ರದೇಶದಿಂದ ಪಕ್ಕದ ಕೃಷಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ದಾಳಿ ಮಾಡುವುದನ್ನು ತಡೆಗಟ್ಟುವ ಸಲುವಾಗಿ ಅರಣ್ಯದ ಅಂಚಿನ ಸೂಕ್ಷ್ಮ ಪ್ರದೇಶಗಳಲ್ಲಿ ಸೋಲಾರ್ ತಂತಿ ಬೇಲಿ ನಿರ್ಮಿಸಲಾಗಿದ್ದು ಇವುಗಳನ್ನು ನಿರ್ವಹಿಸಲಾಗುತ್ತಿದೆ.
2. ಕಾಡು ಪ್ರಾಣಿಗಳು ಹಾಗೂ ಕಾಡಾನೆಗಳು ಪದೇ ಪದೇ ಕೃಷಿ ಜಮೀನುಗಳಿಗೆ ದಾಳಿ ಮಾಡುವ ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಪುನಃ ಕಾಡಿಗೆ ಓಡಿಸುವ ಸಲುವಾಗಿ ಕಾಡಾನೆ ತಡೆ ಕ್ಯಾಂಪುಗಳನ್ನು (Anti Depredation Camp) ಸ್ಥಾಪಿಸಿ, ಪ್ರತಿಯೊಂದು ಕ್ಯಾಂಪಿನಲ್ಲೂ ಸ್ಥಳೀಯರ ಜೊತೆಗೆ ನಾಲ್ಕು ಮಂದಿ ನುರಿತ ಅರಣ್ಯ ಸಿಬ್ಬಂದಿಗಳನ್ನು ನಿಯೋಜಿಸಿ ಕ್ರಮಕೈಗೊಳ್ಳಲಾಗಿದೆ.
3. ಕಾಡಾನೆಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ನಿಯೋಜಿತ ಸಿಬ್ಬಂದಿಗಳಿಗೆ ವಾಕಿ–ಟಾಕಿ, ಗನ್ ಹಾಗೂ ವಾಹನಗಳ ಸೌಲಭ್ಯಗಳನ್ನು ಒದಗಿಸಲಾಗಿದೆ.

4. ಸಿಬ್ಬಂದಿಗಳಿಗೆ ಪಟಾಕಿ ಇನ್ನಿತರ ಸಾಮಗ್ರಿಗಳನ್ನು ಒದಗಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

5. ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಹಾಗೂ ಮಾನವ ಸಾವಿಗೆ ಕಾರಣವಾಗಿರುವ ಪುಂಡ ಕಾಡಾನೆಗಳನ್ನು ಗುರುತಿಸಿ ಅವುಗಳನ್ನು ಹಿಡಿದು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು.

6. ಕಾಡಾನೆಗಳು ರೈತರ ಬೆಳೆಗಳಿಗೆ ಹಾನಿ ಮಾಡಿದಾಗ ರೈತರಿಗೆ ಪರಿಹಾರವನ್ನು ಪಾವತಿಸಲಾಗುವುದು.

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬನ್ನೇರುಘಟ್ಟದಲ್ಲಿ ಆನೆಯ ಆಕ್ರೋಶಕ್ಕೆ ರೈತರು ಮೃತಪಟ್ಟಿರುವ ಯಾವುದೇ ಪ್ರಕರಣ ಇರುವುದಿಲ್ಲ. ಆದರೆ ಇತ್ತೀಚೆಗೆ ಬನ್ನೇರುಘಟ್ಟದಲ್ಲಿ ಕಾಡಿನಿಂದ ಹೊರಬಂದ ಕಾಡಾನೆಗಳನ್ನು ವೀಕ್ಷಿಸಲು ಬಂದಂತಹ ಓರ್ವ ವ್ಯಕ್ತಿಯು ದಿನಾಂಕ: 07–01–2012 ರಂದು ಹೆದರಿ ಓಡುವ ಸಮಯದಲ್ಲಿ ಮೃತಪಟ್ಟಿರುತ್ತಾನೆ.

ಪ್ರತಿದಿನ ಇಂತಹ ಪ್ರಕರಣಗಳು ಸಂಭವಿಸುತ್ತಿರುವುದಿಲ್ಲ, ಇದನ್ನು ತಡೆಗಟ್ಟಲು ಬೆಂಗಳೂರು ಗ್ರಾಮಾಂತರ ಜಿಲ್ಲೆ ಬನ್ನೇರುಘಟ್ಟ ಪ್ರದೇಶದಲ್ಲಿ ಕಾಡಿನಿಂದ ಹೊರಗೆ ಬರುವ ಕಾಡಾನೆಗಳನ್ನು ಹಿಮ್ಮೆಟ್ಟಿಸಲು ಆನೆ ತಡೆ ಶಿಬಿರಗಳನ್ನು ಹಾಗೂ ಕಾಡಿನ ಸರಹದ್ದಿಗೆ ರಬಲ್ ಸ್ಟೋನ್ ವಾಲ್‌ಗಳನ್ನು ನಿರ್ಮಿಸಲಾಗಿದೆ.

ಅಲ್ಲದೇ 2010–11ನೇ ಸಾಲಿನ ವರೆಗೆ 31.55 ಕಿ.ಮೀ. ಆನೆ ತಡೆ ಕಂದಕಗಳನ್ನು ನಿರ್ಮಿಸಲಾಗಿರುತ್ತದೆ ಮತ್ತು 63 ಕಿ.ಮೀ. ಸೋಲಾರ್ ತಂತಿಬೇಲಿಗಳನ್ನು ಅಳವಡಿಸಿ ನಿರ್ವಹಣೆ ಮಾಡಲಾಗುತ್ತಿದೆ. 2011–12ನೇ ಸಾಲಿಗೆ 9 ಕಿ.ಮೀ. ಆನೆ ತಡೆ ಕಂದಕ ನಿರ್ಮಾಣ

ಹಾಗೂ 53 ಕಿ.ಮೀ. ಸೋಲಾರ್ ತಂತಿ ಬೇಲಿ ನಿರ್ಮಾಣ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದೆ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅದರಲ್ಲಿ ಕೆಲವನ್ನು ಹೇಳಿದ್ದಾರೆ. ಕಾಡಾನೆಗಳು ರೈತರ ಬೆಳೆಗಳಿಗೆ ಹಾನಿ ಮಾಡಿದಾಗ ರೈತರಿಗೆ ಪರಿಹಾರವನ್ನು ಪಾವತಿಸಲಾಗುವುದೆಂದು ಹೇಳಿದ್ದಾರೆ. ನಿಜಕ್ಕೂ ರೈತರ ಬಾಳೆ ತೋಟಗಳಿಗೆ, ಅಡಿಕೆ ತೋಟಗಳಿಗೆ ಕಾಡಾನೆಗಳು ನುಗ್ಗಿ ಬೆಳೆಯನ್ನು ಧ್ವಾಂಸ ಮಾಡಿದಾಗ ಅವರಿಗೆ ಬೆಳೆ ನಾಶವಾಗುತ್ತದೆ. ಇವರು ಅವೈಜ್ಞಾನಿಕವಾದಂತಹ ಪರಿಹಾರವನ್ನು ಹಿಂದಿನ 20–30 ವರ್ಷಗಳ ರೀತಿಯಲ್ಲಿ 500 ರೂಪಾಯಿಗಳು, 1,500 ರೂಪಾಯಿಗಳ ಪರಿಹಾರವನ್ನು ನೀಡುತ್ತಾರೆ. ಆ ಪರಿಹಾರವನ್ನು ನೀಡುವುದನ್ನು ಬಿಟ್ಟು ರೈತರ ಬೆಳೆಗಳಿಗೆ ಕಾಡಾನೆಗಳು ನುಗ್ಗಿ ಧ್ವಂಸ ಮಾಡದಂತೆ ರಕ್ಷಣೆ ಕೊಟ್ಟರೆ ಸಾಕಾಗುತ್ತದೆ. ರೈತರು ಸರ್ಕಾರದ ಹತ್ತಿರ ಪರಿಹಾರಕ್ಕೆ ಬರುತ್ತಿಲ್ಲ. ಆನೆಗಳಾಗಬಹುದು, ಕಾಡು ಪ್ರಾಣಿಗಳು ಯಾವುದೇ ಆಗಲಿ ನಮ್ಮ ಪ್ರದೇಶಕ್ಕೆ ಬರದಂತೆ ರಕ್ಷಣೆಯನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಮುಖ್ಯವಾಗಿ ಬನ್ನೇರುಘಟ್ಟ ಅಭಯಾರಣ್ಯ ನಮ್ಮ ಬೆಂಗಳೂರು ನಗರಕ್ಕೆ ಸೇರಿರುವಂತಿದೆ. ಅದರಲ್ಲಿಯೂ ಕೂಡ ರಾಮನಗರ ಜಿಲ್ಲೆಯ ಕನಕಪುರ, ಚನ್ನಪಟ್ಟಣ, ಮಾಗಡಿ ತಾಲ್ಲೂಕ್‌ಗಳಲ್ಲಿ ಕಾಡಾನೆ ಮತ್ತು ಕಾಡು ಪ್ರಾಣಿಗಳು ಅತೀ ಹೆಚ್ಚು ಹಾನಿಯನ್ನು ಮಾಡುತ್ತಿದೆ. ನಮ್ಮ ಸಚಿವರು ಲಿಖಿತವಾಗಿ ಕೊಟ್ಟಿರುವಂತಹ ಉತ್ತರದಲ್ಲಿ ವರ್ಷದಲ್ಲಿ 31 ಕಿಲೋ ಮೀಟರ್, 12 ಕಿಲೋ ಮೀಟರ್, 13 ಕಿಲೋ ಮೀಟರ್ ಎಂದು ವಿವರಣೆಯನ್ನು ಕೊಡುವುದರ ಬದಲು ಮುಖ್ಯವಾಗಿ ಅದರಲ್ಲಿಯೂ ಇದೊಂದು ಬನ್ನೇರುಘಟ್ಟ ಅರಣ್ಯಕ್ಕೆ ಮಾತ್ರ ಸೀಮಿತವಾಗಿ ಅದಕ್ಕೆ ಒಂದು ತಡೆ ಗೋಡೆಯನ್ನು ನಿರ್ಮಿಸಬೇಕು. ಇಲ್ಲ ಎಂದರೆ ಕಾಡು ಪ್ರಾಣಿಗಳ ಸಂಖ್ಯೆಯನ್ನಾದರು ಕಡಿಮೆ ಮಾಡಬೇಕು ಅಥವಾ ಪ್ರಾಣಿಗಳು ಕಾಡುಗಳಿಂದ ಹೊರಗಡೆ ಬರದಂತೆ ನೋಡಿಕೊಳ್ಳಬೇಕು. ಸಂಖ್ಯೆಗಳು ಕಡಿಮೆ ಮಾಡುವುದು ಎಂದರೆ ಬೇರೆ ದೊಡ್ಡ ದೊಡ್ಡ ಕಾಡುಗಳಿಗೆ ಈ ಪ್ರಾಣಿಗಳನ್ನು ತೆಗೆದುಕೊಂಡು

ಹೋಗಿ ಬಿಡಲಿ ಎಂದು ಹೇಳಿದ್ದು. ಬನ್ನೇರುಘಟ್ಟ ಅರಣ್ಯ ಪ್ರದೇಶವು ಬಹಳ ಚಿಕ್ಕದಾಗಿದೆ. ಕಾರಣ ಏನೆಂದರೆ ಪ್ರತಿಬಾರಿಯು ಬಳವಾಡಿ ಹೋಬಳಿಗೆ ಕಾಡಾನೆಗಳು ಹೋಗಿ ದ್ವಾಂಸವನ್ನು ಮಾಡುತ್ತಲೇ ಇರುತ್ತದೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಮಾನ್ಯ ಸದಸ್ಯರ ಪ್ರಶ್ನೆ ನಿಮಗೆ ಅರ್ಥವಾಗಿದೆ ಉತ್ತರವನ್ನು ಹೇಳಿ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ನಾನು ಕಳೆದ ಸದನದಲ್ಲಿ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೋರಿ ಪತ್ರವನ್ನು ಕಳುಹಿಸಿದ್ದೆ. ಆದರೆ ಅದು ಬರಲೇ ಇಲ್ಲ. ನನ್ನ ಕ್ಷೇತ್ರದಲ್ಲಿಯೂ ಕೂಡ ಕಾಡಾನೆಗಳ ಹಾವಳಿ ಇರುವುದರಿಂದ ನನಗೂ ಕೂಡ ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಕೊಡಬೇಕು.

**ಸಭಾಪತಿಯವರು:–** ಒಟ್ಟಿಗೆ ಎಲ್ಲರೂ ಉಪ ಪ್ರಶ್ನೆಗಳನ್ನು ಕೇಳುತ್ತಾ ಹೋದರೆ, ಮಾನ್ಯ ಸಚಿವರಿಗೆ ಉತ್ತರವನ್ನು ಹೇಳುವುದಕ್ಕೆ ನೆನಪು ಇರುವುದಿಲ್ಲ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬನ್ನೇರುಘಟ್ಟದಲ್ಲಿ ಆನೆಯ ಆಕ್ರೋಶಕ್ಕೆ ಯಾರಾದರೂ ಮೃತಪಟ್ಟಿದ್ದಾರೆಯೇ ಎನ್ನುವಂತಹ ಪ್ರಶ್ನೆಗೆ ಸಚಿವರು "ಯಾವುದೇ ಪ್ರಾಣ ಹಾನಿಯಾಗಿರುವುದಿಲ್ಲ. ದಿನಾಂಕ 07.01.2012ರಂದು ಬನ್ನೇರುಘಟ್ಟದಲ್ಲಿ ಕಾಡಿನಿಂದ ಹೊರಬಂದ ಕಾಡಾನೆಯನ್ನು ವೀಕ್ಷಿಸಲು ಬಂದಂತಹ ಓರ್ವ ವ್ಯಕ್ತಿಯು ಹೆದರಿ ಓಡುವ ಸಮಯದಲ್ಲಿ ಒಬ್ಬ ಮೃತಪಟ್ಟಿರುತ್ತಾನೆ" ಎಂದು ಹೇಳಿರುತ್ತಾರೆ. ಅಂದರೆ ಕಾಡಾನೆಗೆ ಹೆದರಿ ಓಡುವಾಗ ಸತ್ತರೆ ಅದು ಅವನ ಅಪರಾಧವೇ? ಪ್ರಾಣಿಯಿಂದ ತೊಂದರೆಯಾಗುತ್ತದೆಂದು ತಾನೇ ಹೆದರಿ ಓಡಿರುವುದು.

**ಸಭಾಪತಿಯವರು:–** ನೀವು ಎಷ್ಟು ಜನರು ಸತ್ತಿದ್ದಾರೆ ಎನ್ನುವುದಕ್ಕೆ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಯಾರೂ ಸತ್ತಿಲ್ಲ. ಆದರೆ ಹೆದರಿ ಓಡಿ ಹೋಗುವಾಗ ಸತ್ತಿದ್ದಾರಂತೆ. ಈ ಉತ್ತರ ಸರಿಯಿಲ್ಲವೆಂದು ನನಗನ್ನಿಸಿದೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಈ ಪ್ರಶ್ನೆಯನ್ನು ನಾನು ಬಹಳ ಸಾರಿ ಇದೇ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಶಾಶ್ವತವಾದಂತಹ ಪರಿಹಾರವನ್ನು ಹುಡುಕಬೇಕೆಂದು ಮಾನ್ಯ ಸಚಿವರು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಇದಕ್ಕೆ ಪೂರಕವಾಗಿ ನಮ್ಮ ಸರ್ಕಾರ Africa ದೇಶಕ್ಕೆ ನಮ್ಮ ಅರಣ್ಯ ಇಲಾಖೆಯ ಕೆಲವು ಅಧಿಕಾರಿಗಳನ್ನು ಅಲ್ಲಿ ಕಾಡಾನೆಗೂ ಮತ್ತು ಮನುಷ್ಯನಿಗೂ ಇರತಕ್ಕಂತಹ ಸಂಘರ್ಷವನ್ನು ಅವರು ಯಾವ ರೀತಿಯಾಗಿ ನಿವಾರಿಸಿದ್ದಾರೆ ಎಂದು ತಿಳಿದುಕೊಂಡು ಬರುವುದಕ್ಕೋಸ್ಕರವಾಗಿ ಕಳುಹಿಸಿಕೊಟ್ಟಿದ್ದರು. ಸರ್ಕಾರದ ಅರಣ್ಯ ಇಲಾಖೆಯು ಒಂದು ಟೆಕ್ನಿಕಲ್ ಟೀಂ ಅನ್ನು ಕಳುಹಿಸಿಕೊಟ್ಟಿದ್ದರು. ಅವರು ಕೆನ್ಯಾಕ್ಕೆ ಹೋಗಿ ಬಂದಿದ್ದಾರೆ. ಆಫ್ರಿಕಾ ದೇಶದಲ್ಲಿ ಒಟ್ಟು ಮೂರುವರೆ ಲಕ್ಷ ಕಾಡಾನೆಗಳಿವೆ. Kenya has got the biggest population of elephants. ಆ ಟೆಕ್ನಿಕಲ್ ಟೀಂನವರು ಅಲ್ಲಿಗೆ ಹೋಗಿ ಬಂದ ಮೇಲೆ ಅಲ್ಲಿ ಅವರು ಯಾವ ರೀತಿಯಾಗಿ ತಡೆ ಹಿಡಿದ್ದಾರೆಂದು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿರಬಹುದೆಂದು ಭಾವಿಸುತ್ತೇನೆ. ಅವರ ವರದಿಯನ್ನು ನಾನೂ ಓದಿದ್ದೇನೆ. ಕಳೆದ 20 ವರ್ಷಗಳಿಂದ ಅವರು ಸೋಲಾರ್ ತಂತಿಬೇಲಿಗಳನ್ನು ಹಾಕಿದ್ದಾರೆ. ಅರಣ್ಯ ಪ್ರದೇಶ ಎಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿರುವಂತಹ ರೀತಿಯಲ್ಲಿ ಅರಣ್ಯ ಪ್ರದೇಶ ಅಲ್ಲಿ ಇಲ್ಲ. ಅಲ್ಲಿ ಹುಲ್ಲುಗಾವಲು ಅಷ್ಟೇ. ಕೆಲವು ಸೌತ್ ಪ್ರದೇಶದಲ್ಲಿ ಮಾತ್ರ ಹೆಚ್ಚು ಇದೆ. ಬಾಕಿ ಪ್ರದೇಶದಲ್ಲಿ ಯಾವುದೂ ಇಲ್ಲ. ಅವರು ಹಾಕಿರುವಂತಹ ಸೋಲಾರ್ ತಂತಿಬೇಲಿ ಇದೆಯಲ್ಲಾ ಅದು ಕಳೆದ 20 ವರ್ಷಗಳಿಂದ intact ಆಗಿದೆ. ಅದು ಅವರ ವರದಿಯಲ್ಲಿಯೇ ಇದೆ ಬಹುಶಃ ನಾನು ಅರಣ್ಯ ಸಚಿವರನ್ನು ಕೇಳುವುದೇನೆಂದರೆ, ಆ ವರದಿ ಸರ್ಕಾರಕ್ಕೆ ಸಿಕ್ಕಿಯಾದ ಮೇಲೆ ಏನಾಗಿದೆ? ಸರ್ಕಾರವು ಏಕೆ ಅರಣ್ಯ ಇಲಾಖೆಯ ಟೆಕ್ನಿಕಲ್ ಟೀಂ ಅನ್ನು ಕಳುಹಿಸಿದ್ದರು

ಎಂದರೆ. ನಮ್ಮ ರಾಜ್ಯದ ಉಚ್ಚ ನ್ಯಾಯಾಲಯ ಆಲೂರಿನಲ್ಲಿರತಕ್ಕಂತಹ ಆನೆಗಳನ್ನು ನೀವು translocation ಮಾಡುವುದಕ್ಕೆ ಕಳುಹಿಸುವಾಗ ಆ ತಜ್ಞರನ್ನು ಆಫ್ರಿಕಾ ದೇಶದಲ್ಲಿರುವ ತಜ್ಞರನ್ನು ಕೇಳಿಕೊಂಡು ಬಂದು ಒಂದು ವರದಿಯನ್ನು ಕೊಡಿ ಎಂದ ಹಿನ್ನಲೆಯಲ್ಲಿ ಕಳುಹಿಸಲಾಗಿತ್ತು. ಕಡೆಗೆ ಅಲ್ಲಿ ಮನುಷ್ಯನಿಗೂ ಆನೆಗಳಿಗೂ ಬಹಳ ಸಮೀಪವಾಗಿರುವಂತಹ ಸಂಬಂಧ ಇದೆ ಎಂದು ಹೇಳುವಂತಹ ವರದಿ ಕೂಡ ಇದೆ. ಅಲ್ಲಿ ಆನೆಗಳು ಮನುಷ್ಯರು ಬಹಳ ಚೆನ್ನಾಗಿ ಜೀವನವನ್ನು ಮಾಡುತ್ತಾರಂತೆ. ಹೇಗೆ ಎಂದು ನನಗೆ ಗೊತ್ತಿಲ್ಲ.

**ಸಭಾಪತಿಯವರು:-** ಯಾವ ರೀತಿ ಎಂದು ಮಾನ್ಯ ಸಚಿವರನ್ನು ಕೇಳೋಣ.

**ಶ್ರೀ ಎಂ.ಸಿ. ನಾಣಯ್ಯ:-** ಆ ವರದಿಯ ಆಧಾರದ ಮೇಲೆ ಯಾವ ಪರಿಹಾರವನ್ನು ಹುಡುಕುವುದಕ್ಕೆ ಸಾಧ್ಯತೆ ಇದೆ, ನಮ್ಮಲ್ಲಿರುವ ಸೋಲಾರ್ ಫೆನ್ಸಿಂಗ್ ಯಾವುದು, ಅವರು ಮಾಡುತ್ತಿರುವಂತಹ ಸೋಲಾರ್ ಫೆನ್ಸಿಂಗ್ ಯಾವುದು, ಅದಕ್ಕನುಗುಣವಾಗಿ ಸರ್ಕಾರ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತದೆಯೋ ಇಲ್ಲವೋ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗುತ್ತದೆ.

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):-** ಮಾನ್ಯ ಸಭಾಪತಿಯವರೇ, ಸೋಲಾರ್ ಫೆನ್ಸಿಂಗ್ ಮತ್ತು ಕಂದಕಗಳನ್ನು ತೋಡುವುದು ಈ ಎರಡನ್ನು ಕೆಲವು ಕಡೆಗಳಲ್ಲಿ ಮಾಡಲಾಗಿದೆ.

**ಶ್ರೀ ಪಟೇಲ್ ಶಿವರಾಂ:-** ಮಾನ್ಯ ಸಭಾಪತಿಯವರೇ, ...

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಕೊಡುತ್ತಾರೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ನೀಡುವುದಿಲ್ಲ ಎಂದರೆ ಅದು ಸರಿಯಾಗುವುದಿಲ್ಲ. ನೀವು

ಪ್ರತ್ಯೇಕವಾಗಿ ಒಂದು ನೋಟೀಸ್ ಕಳುಹಿಸಿಕೊಡಿ. ಮಾನ್ಯ ಸಚಿವರೇ ತಾವೀಗ ಉತ್ತರ ಕೊಡಿ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ, ನೀವೇ ಹೀಗೆ ಮಾಡಿದರೆ ಹೇಗೆ? ಸಚಿವರು ಉತ್ತರ ಹೇಳುವುದಕ್ಕೆ ಕೂಡ ನೀವು ಬಿಡುವುದಿಲ್ಲವೇ? ಹಾಗಾದರೆ ಒಂದು ಕೆಲಸ ಮಾಡೋಣ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಏನೋ ಹೇಳುವುದಕ್ಕೆ ಹೊರಟಿದ್ದಾರೆ. ದಯಮಾಡಿ ತಾವು ಕುಳಿತುಕೊಳ್ಳಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದ ಪ್ರಶ್ನೆ. ಎಲ್ಲಾ ಕಡೆ ಆನೆಗಳು ಊರೊಳಗೆ, ನಗರದೊಳಗೆ ಬಂದು ಜನರನ್ನು ಕೊಲ್ಲುತ್ತಿವೆ. ಅದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರು ಈ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಹೊರಟರೆ ಅದಕ್ಕೆ ಅವಕಾಶವನ್ನೇ ಕೊಡುವುದಿಲ್ಲವೆಂದರೆ ಹೇಗೆ?

**ಶ್ರೀಮತಿ ಮೋಟಮ್ಮ:–** ದಕ್ಷಿಣ ಆಫ್ರಿಕಾಕ್ಕೆ ಹೋಗಿ ಬಂದು ವರದಿಯನ್ನೇನು ಸಲ್ಲಿಸಿದ್ದಾರೆ ಅದರ ಬಗ್ಗೆ ಮಾನ್ಯ ನಾಣಯ್ಯನವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ.

**ಸಭಾಪತಿಯವರು:–** ನೀವು ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ಬಿಡುತ್ತಿಲ್ಲ. ಅವರು ಏನು ಉತ್ತರ ಕೊಡುತ್ತಾರೆಯೋ ನೋಡೋಣ. ಅವರು ಉತ್ತರ ಕೊಡುವುದಕ್ಕೆ ಬಿಡದೆ ಸದಸ್ಯರೆಲ್ಲಾ ಎದ್ದು ನಿಂತರೆ ಹೇಗೆ? ಮಾನ್ಯ ಸಚಿವರೇ, ತಾವು ಬೇಗನೇ ಉತ್ತರ ಹೇಳಿ. ಪ್ರಶ್ನೋತ್ತರ ಅವಧಿ ಮುಗಿಯುತ್ತಿದೆ.

**ಶ್ರೀ ಸಿ.ಪಿ. ಯೋಗೀಶ್ವರ್:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಉತ್ತರ ಕೊಡಲು ತಾವು ಸ್ವಲ್ಪಮಟ್ಟಿಗೆ ಹೆಚ್ಚಿನ ಕಾಲಾವಕಾಶವನ್ನು ನೀಡಬೇಕಾಗುತ್ತದೆ. ಏಕೆಂದರೆ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಸಾಕಷ್ಟು ಪ್ರಶ್ನೆಗಳನ್ನು ಕೇಳಿರುವುದರಿಂದ ನಾನು ಆ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡಲು ಸಿದ್ಧವಾಗಿ ಬಂದಿದ್ದೇನೆ. ಆದ್ದರಿಂದ ತಾವು ನನಗೆ ಉತ್ತರ ಕೊಡಲು ಸಾಕಷ್ಟು ಕಾಲಾವಕಾಶವನ್ನು ನೀಡಬೇಕಾಗುತ್ತದೆ.

**ಸಭಾಪತಿಯವರು:–** ಆನೆ ಸಮಸ್ಯೆ ಮತ್ತಿತರ ಕಾಡು ಪ್ರಾಣಿಗಳ ಸಮಸ್ಯೆ ಬಗ್ಗೆ ಹಿಂದಿನ ಅಧಿವೇಶನದಲ್ಲಿ ಚರ್ಚೆಯಾಗಿದ್ದು ಅದನ್ನು ಪ್ರಶ್ನೋತ್ತರ ಅವಧಿಯಲ್ಲಿ ತಂದರೆ ಅದು ಅರ್ಥವಿಲ್ಲದ್ದು ಏಕೆಂದರೆ ಒಂದು ನಿಮಿಷ ಅಥವಾ ಎರಡು ನಿಮಿಷಗಳಲ್ಲಿ ಸರ್ಕಾರಕ್ಕೆ ಉತ್ತರ ಕೊಡುವುದಕ್ಕೂ ಆಗುವುದಿಲ್ಲ. ಮೂರು ನಿಮಿಷದಲ್ಲಿ ಸದಸ್ಯರು ಪ್ರಶ್ನೆ ಕೇಳುವುದಕ್ಕೂ ಬರುವುದಿಲ್ಲ. ಹಾಗಾಗಿ ಈ ವಿಚಾರವಾಗಿ ಸುಮಾರು ಅರ್ಧ ಗಂಟೆ ಕಾಲ ಚರ್ಚೆ ಮಾಡೋಣ, ನೋಟೀಸ್ ಕೊಡುವುದಾದರೆ ಕೊಡಿ ಎಂದು ಹೇಳಿದ್ದೆ. ಸದಸ್ಯರು ನೋಟೀಸ್ ಕೊಟ್ಟಿದ್ದರು. ಆದರೆ ಯೋಗಾಯೋಗ ನಮಗೆ ಅದನ್ನು ಅನುಷ್ಠಾನ ಮಾಡುವುದಕ್ಕಾಗಲಿಲ್ಲ. ಈಗಲಾದರೂ ತಾವೇನು ಉತ್ತರ ಕೊಡಲು ತಯಾರಾಗಿದ್ದೀರಿ ಅದನ್ನು ಚುಟುಕಾಗಿಯೇ ಕೊಡಿ. ಮಾನ್ಯ ಸದಸ್ಯರೇನಾದರೂ ಇಷ್ಟಪಟ್ಟು ನೋಟೀಸ್ ಕೊಟ್ಟರೆ ಖಂಡಿತವಾಗಿಯೂ ಆದಷ್ಟು ಬೇಗನೇ ಅರ್ಧ ಗಂಟೆ ಚರ್ಚೆಗೆ ನಾನು ಅವಕಾಶ ಕೊಡುತ್ತೇನೆ. ನೋಟೀಸನ್ನೇ ಕೊಡದಿದ್ದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ತಾವು ಚುಟುಕಾಗಿ ಉತ್ತರ ಕೊಡಬೇಕು, ಏಕೆಂದರೆ ಈಗ ಪ್ರಶ್ನೋತ್ತರ ಸಮಯ ಮೀರಿ ಹೋಗಿದೆ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, ನಾನು ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ.

**ಸಭಾಪತಿಯವರು:–** ಇಲ್ಲ, ಆ ರೀತಿ ಅವಕಾಶ ಕೊಡುವುದಕ್ಕಾಗುವುದಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿದಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಗೋವಿಂದ ಎಂ. ಕಾರಜೋಳ (ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೇ, ದಿನಾಂಕ:01ನೇ ಫೆಬ್ರವರಿ 2012ರಂದು ಸಮೂಹ 3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 47 ಪ್ರಶ್ನೆಗಳ ಪೈಕಿ 36 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ತುಂಗಭದ್ರ ಅಣೆಕಟ್ಟೆಯಲ್ಲಿ ನೀರಿನ ಸಾಮರ್ಥ್ಯ ಕಡಿಮೆಯಾಗುತ್ತಿರುವ ಬಗ್ಗೆ**

**41; ಶ್ರೀ ಎನ್. ತಿಪ್ಪಣ್ಣ (ನಾಮನಿರ್ದೇಶನ ಹೊಂದಿದವರು)**

**ಅ)** ಬಳ್ಳಾರಿ ಜಿಲ್ಲೆಯ ತುಂಗಭದ್ರ ಅಣೆಕಟ್ಟಿನ ಪ್ರಾರಂಭದ ದಿನಗಳಲ್ಲಿ ನೀರು ಹಿಡಿದಿಡುವ ಸಾಮರ್ಥ್ಯ ಎಷ್ಟಿತ್ತು;

**ಆ)** ಈಗಿನ ಸಾಮರ್ಥ್ಯ ಎಷ್ಟು;

**ಇ)** ನೀರಿನ ಸಾಮರ್ಥ್ಯ ಕಡಿಮೆಯಾಗಿದ್ದಲ್ಲಿ ಅದಕ್ಕೆ ಕಾರಣಗಳೇನು; ಹಾಗೂ ಸಾಮರ್ಥ್ಯ ಹೆಚ್ಚಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

**ಈ)** ನೀರಿನ ಸಾಮರ್ಥ್ಯ ಕಡಿಮೆಯಾಗಿರುವುದರಿಂದ Tail end (ಕಾಲುವೆ ಕೊನೆ ಭಾಗದಲ್ಲಿ) ನಲ್ಲಿರುವ ರೈತರಿಗೆ ನೀರು ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

**ಅ)** ತುಂಗಭದ್ರಾ ಅಣೆಕಟ್ಟೆನಲ್ಲಿ ಪ್ರಾರಂಭ ದಿನಗಳಲ್ಲಿ 132.417 ಟಿಎಂಸಿ ನೀರು ಹಿಡಿದಿಡುವ ಸಾಮರ್ಥ್ಯ ಇರುತ್ತದೆ.

**ಆ)** 2008ನೇ ಸಾಲಿನಲ್ಲಿ ಹೈಡ್ರೋಗ್ರಾಫಿಕ್ ಸರ್ವೆ ಕಾರ್ಯ ಕೈಗೊಂಡಿದ್ದು, ಅದರ ಪ್ರಕಾರ ಈಗಿನ ಸಾಮರ್ಥ್ಯ 104.417 ಟಿಎಂಸಿ ಆಗಿರುತ್ತದೆ.

**ಇ)** ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿರುವುದರಿಂದ ನೀರಿನ ಸಾಮರ್ಥ್ಯ ಕಡಿಮೆಯಾಗಿದೆ. ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬುವುದನ್ನು ತಡೆಹಿಡಿಯಲು ಹಿರೇಹಳ್ಳ ಹಾಗೂ ಹಗರಿಬೊಮ್ಮನಹಳ್ಳಿ ಅಣೆಕಟ್ಟೆಗಳನ್ನು ಈಗಾಗಲೇ ನಿರ್ಮಾಣ ಮಾಡಲಾಗಿದೆ. ಜಲಾಶಯದಿಂದ ತೆಗೆಯುವ ಹೂಳನ್ನು ಸ್ಥಳಾಂತರಿಸುವ ಹಾಗೂ ಬೇರೆಡೆ ಶೇಖರಿಸುವ ಸಾಧ್ಯಾ ಸಾಧ್ಯತೇ ಬಗ್ಗೆ ಪರಿಶೀಲಿಸಿಕೊಳ್ಳಬೇಕಾಗಿರುತ್ತದೆ. ಸುಮಾರು 28 ಟಿಎಂಸಿ ಪ್ರಮಾಣದಷ್ಟು ಹೂಳನ್ನು ಪರಿಗಣಿಸಬೇಕಾಗಿದ್ದು, ಈ ಪ್ರಮಾಣದ ಕಾಮಗಾರಿ ಎಲ್ಲಿಯೂ ನಡೆದಿರುವುದಿಲ್ಲ. ತುಂಗಭದ್ರಾ ಜಲಾಶಯದ ಹೂಳನ್ನು ತೆಗೆಯಲು Concept paper ಅನ್ನು ಪರಿಣಿತ ತಜ್ಞರಿಂದ ಪಡೆಯಲು ರಾಷ್ಟ್ರ ಮಟ್ಟದಲ್ಲಿ ಟೆಂಡರ್ ಅನ್ನು ಕರೆಯಲಾಗಿತ್ತು.

**ಈ)** ಕಾಲುವೆಯ ಕೊನೆ ಭಾಗದಲ್ಲಿ ರೈತರಿಗೆ ಸೂಕ್ತ ನೀರು ನಿರ್ವಹಣಾ ವಿಧಾನಗಳನ್ನು ಅಳವಡಿಸಿಕೊಂಡು ರೈತರಿಗೆ ನೀರು ಒದಗಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಜಲಾಶಯದ ಹೂಳನ್ನು ತೆಗೆಯುವ ಸಂಬಂಧ ಕೆಲವು ಪ್ರಮುಖ ಏಜೆನ್ಸಿಗಳು ಪ್ರಾಯೋಗಿಕವಾಗಿ ಕೈಗೊಳ್ಳಲು ಮುಂದೇ ಬಂದಿದ್ದು, ಅವರೊಡನೆ ಸಮಾಲೋಚಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

## ಬಾಲಕಾರ್ಮಿಕರ ಮಾಹಿತಿ ಬಗ್ಗೆ

### 43; ಶ್ರೀ ಮೋಹನ್ ಎ. ಲಿಂಬೀಕಾಯಿ (ಪದವೀಧರರ ಕ್ಷೇತ್ರ)

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಬಾಲ ಕಾರ್ಮಿಕ ನಿಷೇಧ ಕಾಯ್ದೆಯಡಿ ದಾಖಲಾಗಿರುವ ಪ್ರಕರಣಗಳೆಷ್ಟು; ಅವುಗಳಲ್ಲಿ ಎಷ್ಟು ಜನಕ್ಕೆ ಶಿಕ್ಷೆ ಆಗಿದೆ;

ಆ) ಇಂತಹ ಕಾಯ್ದೆ ಮತ್ತು ಅದರ ಪಾಲನೆಗೆ ಇಲಾಖೆ ಇದ್ದರೂ ಸಹ ಹೋಟೆಲ್‌ಗಳಲ್ಲಿ ವಾಹನ ದುರಸ್ತಿ ಗ್ಯಾರೇಜ್‌ಗಳಲ್ಲಿ ಮತ್ತು ಮನೆ ಕೆಲಸದವರಾಗಿ ಸಹಸ್ರಾರು ಬಾಲ ಕಾರ್ಮಿಕರು ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

### ಶ್ರೀ ಬಿ.ಎಸ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಅಡಿಯಲ್ಲಿ 1,015 ಪ್ರಕರಣಗಳನ್ನು ದಾಖಲು ಮಾಡಲಾಗಿದ್ದು, 431 ಪ್ರಕರಣಗಳು ಶಿಕ್ಷೆಯಲ್ಲಿ ಅಂತ್ಯಗೊಂಡಿದ್ದು, ನ್ಯಾಯಾಲಯ ತಪ್ಪಿತಸ್ಥ ಮಾಲೀಕರಿಗೆ ಒಟ್ಟು ರೂ. 16,94,150 ಗಳನ್ನು ದಂಡವಾಗಿ ವಿಧಿಸಲಾಗಿದೆ.

ಆ) ಈ ವೃತ್ತಿಗಳಲ್ಲಿ ಬಾಲಕಾರ್ಮಿಕರು ಕೆಲಸ ಮಾಡುತ್ತಿರುವ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಅಲ್ಲಲ್ಲಿ ಇಂತಹ ಕೆಲವು ಪ್ರಕರಣಗಳು ವರದಿಯಾಗುವುದು ಹಾಗೂ ಪತ್ತೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಕೇಂದ್ರ ಸರ್ಕಾರ 10.07.2006 ರಂದು ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಪರಿಚ್ಛೇಧ 3ಕ್ಕೆ ತಿದ್ದುಪಡಿ ತರುವುದರ ಮೂಲಕ ಗೃಹಕೃತ್ಯ, ಹೋಟೆಲ್ಸ್, ಗ್ಯಾರೇಜ್‌ಗಳಲ್ಲಿ ಬಾಲಕಾರ್ಮಿಕರನ್ನು ದುಡಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಕಳೆದ

3 ವರ್ಷಗಳಲ್ಲಿ 12,244 ಬಾಲಕಾರ್ಮಿಕರನ್ನು ಪತ್ತೆ ಹಚ್ಚಿ ಕೆಲಸದಿಂದ ಬಿಡುಗಡೆ ಮಾಡಲಾಗಿದೆ. ಕೆಲಸದಿಂದ ಬಿಡುಗಡೆಗೊಳಿಸಿದ ಬಾಲಕಾರ್ಮಿಕರಿಗೆ ಸರ್ಕಾರ ಈ ಕೆಳಕಂಡ ಕ್ರಮಗಳನ್ನು ಜರುಗಿಸಿದೆ.

1. ಬಾಲಕಾರ್ಮಿಕರನ್ನು ಪತ್ತೆಹಚ್ಚುವ ಮತ್ತು ಪುನರ್ವಸತಿಗೊಳಿಸುವ ಸಲುವಾಗಿ ನಿಯಮಿತವಾಗಿ ತಪಾಸಣೆಗಳನ್ನು ನಡೆಸಲಾಗುತ್ತಿದ್ದು, ಅನಿರೀಕ್ಷಿತ ತಪಾಸಣೆಗಳನ್ನೂ ಸಹ ನಡೆಸಲಾಗುತ್ತಿದೆ. ತಪ್ಪಿತಸ್ಥ ಮಾಲೀಕರ ವಿರುದ್ಧ ಸಕ್ಷಮ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ದಾಖಲು ಮಾಡಲಾಗುತ್ತಿದೆ.

2. ಪತ್ತೆಹಚ್ಚಲಾದ ಬಾಲಕಾರ್ಮಿಕರನ್ನು, ಕೇಂದ್ರ ಸರ್ಕಾರದ ರಾಷ್ಟ್ರೀಯ ಬಾಲಕಾರ್ಮಿಕ ಕ್ರಿಯಾಯೋಜನೆ (ಎನ್‌ಸಿಎಲ್‌ಪಿ) ಮತ್ತು ರಾಜ್ಯ ಸರ್ಕಾರದ ಬಾಲಕಾರ್ಮಿಕ ಕ್ರಿಯಾ ಯೋಜನೆಯಡಿಯಲ್ಲಿ ನಡೆಸುತ್ತಿರುವ ವಿಶೇಷ ವಸತಿ ಶಾಲೆಗಳಲ್ಲಿ ಪುನರ್ವಸತಿ ಕಲ್ಪಿಸುವುದರ ಮೂಲಕ ವಿದ್ಯಾಭ್ಯಾಸವನ್ನು ನೀಡಲಾಗುತ್ತಿದೆ.

3. ರಾಜ್ಯದಲ್ಲಿ ಬಾಲಕಾರ್ಮಿಕರನ್ನು ಗುರುತಿಸುವ ಸಂಬಂಧ ಸಮೀಕ್ಷೆ ಕಾರ್ಯವನ್ನು ಹಮ್ಮಿಕೊಂಡಿದ್ದು, ಬಹುತೇಕ ಜಿಲ್ಲೆಗಳಲ್ಲಿ ಸಮೀಕ್ಷೆ ಕಾರ್ಯ ಸಂಪೂರ್ಣಗೊಂಡಿದ್ದು, ಬಾಲಕಾರ್ಮಿಕರ ಸಂಖ್ಯೆಗನುಗುಣವಾಗಿ ವಿಶೇಷ ಶಾಲೆಗಳನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗಿದೆ.

4. ಬಾಲಕಾರ್ಮಿಕರ ಸಂಪೂರ್ಣ ದಾಖಲೀಕರಣ ಮತ್ತು ನಿಯಂತ್ರಣಕ್ಕಾಗಿ Web based Child Labour Tracking System ಅನ್ನು ಅಳವಡಿಸಲಾಗುತ್ತಿದೆ.

5. ಸಾರ್ವಜನಿಕರಿಗೆ ಮಕ್ಕಳು ದುಡಿಯುತ್ತಿರುವುದು ಕಂಡುಬಂದಲ್ಲಿ, ದೂರುಗಳನ್ನು ನೀಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ನಿರ್ವಹಿಸುತ್ತಿರುವ ಉಚಿತ ದೂರವಾಣಿ ಸಂಖ್ಯೆ 1098 ಅನ್ನು ಬಳಸಿಕೊಳ್ಳಲಾಗುತ್ತಿದೆ.

6. ಬಾಲಕಾರ್ಮಿಕರ ನೇಮಕಾತಿ ಬಗ್ಗೆ ದೂರುಗಳನ್ನು ಸ್ವೀಕರಿಸಲು ಕೇಂದ್ರ ಕಚೇರಿಯಲ್ಲಿ ಕಂಟ್ರೋಲ್ ರೂಮ್ ಅನ್ನು ತೆರೆಯಲಾಗಿದೆ.

7. ಆನ್‌ಲೈನ್ ಮೂಲಕ ದೂರುಗಳನ್ನು ದಾಖಲಿಸುವ ವ್ಯವಸ್ಥೆಯನ್ನೂ ಸಹ ಕಲ್ಪಿಸಲಾಗಿದೆ.

8. ಸಾರ್ವಜನಿಕರಿಗೆ ಮತ್ತು ಸಂಘ ಸಂಸ್ಥೆಗಳಿಗೆ ಬಾಲಕಾರ್ಮಿಕತೆಯ ಕುರಿತು ಮಾಹಿತಿ ನೀಡುವ ಸಲುವಾಗಿ ವಿದ್ಯುನ್ಮಾನ ದ್ವೈಮಾಶಿಕ 'ಬಾಲವಾಣಿ' ಎಂಬ ಪತ್ರಿಕೆಯನ್ನು ಪ್ರಕಟಿಸಲಾಗುತ್ತಿದೆ.

9. ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಉದ್ದೇಶದಿಂದ ಕಾರ್ಮಿಕ ಇಲಾಖೆಯ ಅಧಿಕಾರಿಗಳಲ್ಲದೇ, ಇತರೆ 11 ಇಲಾಖೆಗಳ ಅಧಿಕಾರಿಗಳನ್ನು ನಿರೀಕ್ಷಕರನ್ನಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

10. ಅಪಾಯಕಾರಿ ಕೆಲಸಗಳಲ್ಲಿ, ಬಾಲಕಾರ್ಮಿಕರನ್ನು ನೇಮಿಸಿಕೊಂಡ ಮಾಲೀಕರಿಂದ ಪ್ರತಿ ಪ್ರಕರಣಕ್ಕೆ ರೂ. 20,000/- ಗಳಂತೆ ಪರಿಹಾರವನ್ನು ವಸೂಲಿ ಮಾಡಿ 'ಕಾರ್ಪಸ್ ನಿಧಿ'ಯನ್ನು ಸ್ಥಾಪಿಸಿ, 'ಕಾರ್ಪಸ್ ನಿಧಿ'ಯಿಂದ ಬರುವ ಬಡ್ಡಿಯನ್ನು ಬಾಲಕಾರ್ಮಿಕರ ಕುಟುಂಬಕ್ಕೆ ಪಾವತಿಸಲಾಗುತ್ತಿದೆ.

11. ಸಾರ್ವಜನಿಕರು ಮತ್ತು ಪೋಷಕರಲ್ಲಿ ಬಾಲಕಾರ್ಮಿಕ ಪದ್ಧತಿ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

**ನೌಕರರ ರಾಜ್ಯ ವಿಮಾ ಸಂಸ್ಥೆಯ ಕಾರ್ಯ ನಿರ್ವಹಣೆ ಕುರಿತು**

**83; ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಹಾಸನ ನಗರದಲ್ಲಿ ಇ.ಎಸ್.ಐ.ಸಿ ವ್ಯಾಪ್ತಿಗೆ ಒಳಪಡಲು ಅರ್ಹತೆ ಹೊಂದಿರುವ ಸಂಸ್ಥೆಗಳು ಎಷ್ಟು;

**ಆ)** ಈ ಸಂಸ್ಥೆಗಳ ಪೈಕಿ ಇ.ಎಸ್.ಐ.ಸಿ ಯಲ್ಲಿ ನೋಂದಾಯಿಸಿಕೊಂಡಿರುವ ಸಂಸ್ಥೆಗಳು ಎಷ್ಟು;

**ಇ)** ಇ.ಎಸ್.ಐ.ಸಿ ಯಲ್ಲಿ ನೋಂದಾಯಿತ ಸಂಸ್ಥೆಗಳ ಮೇಲೆ ಪರಿವೀಕ್ಷಣೆ ನೆಪದಲ್ಲಿ ಶೋಷಣೆ ಮಾಡುವುದು ಹೆಚ್ಚುತ್ತಿದ್ದು, ಆದರೆ ನೋಂದಣೆಯಿಂದಲೇ ನುಣುಚಿಕೊಳ್ಳುತ್ತಿರುವ ಸಂಸ್ಥೆಗಳನ್ನು ನೋಂದಣಿ ಮಾಡಿಸಲು ವಿಫಲರಾಗಿದ್ದು ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಈ)** ಹಾಸನದಲ್ಲಿ 2009–10 ಸಾಲಿನಿಂದ 2011–12 ಸಾಲಿನಲ್ಲಿ ನೋಂದಾಯಿಸಿಕೊಂಡ ಸಂಸ್ಥೆಗಳೆಷ್ಟು ಒಟ್ಟು ಎಷ್ಟು ಜನ ಕಾರ್ಮಿಕರು ಇದರ ಲಾಭ ಪಡೆಯುತ್ತಿದ್ದಾರೆ;

**ಉ)** ಕಾನೂನು ರೀತ್ಯಾ 'ಸ್ಥಳೀಯ' ಸಭೆಗಳನ್ನು ಕರೆಯುವುದು ಕಡ್ಡಾಯವಾಗಿದ್ದು, ಕಳೆದ 3 ವರ್ಷಗಳಿಂದ ಹಾಸನದ ಇ.ಎಸ್.ಐ.ಸಿ. ಕಛೇರಿಯಲ್ಲಿ ಈ ಸಭೆಗಳನ್ನು ಕರೆಯದಿರಲು ಕಾರಣಗಳೇನು; ಹಾಗೂ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಬಿ.ಎನ್. ಬಚ್ಚೇಗೌಡ (ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು)**

**ಅ)** **ಮತ್ತು ಆ)** ಪ್ರಸ್ತುತ 240 ಸಂಸ್ಥೆಗಳು ನೋಂದಾಯಿತವಾಗಿರುತ್ತದೆ.

**ಇ)** ಪರಿವೀಕ್ಷಣೆಯ ನೆಪದಲ್ಲಿ ಶೋಷಣೆ ಮಾಡಲಾದ ಬಗ್ಗೆ ಕೆಲವು ಪ್ರಕರಣ ಕಾರಾವಿ ನಿಗಮದ ಗಮನಕ್ಕೆ ಬಂದಿದ್ದು ನಿಗಮವು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡಿರುತ್ತದೆ. ಮುಂದುವರೆದು ಕಾ.ರಾ.ವಿ. ನಿಗಮದ ಸ್ಥಳೀಯ ಕಛೇರಿ ವ್ಯವಸ್ಥಾಪಕರಿಗೆ ಕಾರ್ಖಾನೆಗಳ/ಸಂಸ್ಥೆಗಳ ಪಟ್ಟಿಯನ್ನು ನೀಡಲಾಗಿದ್ದು ಇವರು ಪರಿವೀಕ್ಷಣೆ ಮಾಡಿ ಸಂಸ್ಥೆಗಳನ್ನು ನೋಂದಣಿ ಮಾಡುತ್ತಿದ್ದಾರೆ ಹಾಗೂ ಹೊಸ ಸಂಸ್ಥೆಗಳನ್ನು ಪರಿವೀಕ್ಷಣೆ ಮಾಡಿ ಯೋಜನೆಯ ವ್ಯಾಪ್ತಿಗೆ ಒಳಪಡಿಸಲು ಕ್ರಮ ಕೈಗೊಳುವಂತೆ ನಿರ್ದೇಶನ ನೀಡಲಾಗಿರುತ್ತದೆ.

**ಈ)** 2009–10 ಸಾಲಿನಲ್ಲಿ 4 ಸಂಸ್ಥೆಗಳು

2010–11 ಸಾಲಿನಲ್ಲಿ 2 ಸಂಸ್ಥೆಗಳು

2011–12 ಸಾಲಿನಲ್ಲಿ 18 ಸಂಸ್ಥೆಗಳು ನೋಂದಾಯಿಸಿಕೊಂಡಿರುತ್ತದೆ.

2760 ಕಾರ್ಮಿಕರು ಯೋಜನೆಯ ಸೌಲಭ್ಯವನ್ನು ಪಡೆಯುತ್ತಿದ್ದಾರೆ.

**ಉ)** ಸ್ಥಳೀಯ ಸಮಿತಿಯ ಸಭೆಯನ್ನು ದಿ:29–03–2010 ರಂದು ನಡೆಸಲಾಗಿದ್ದು ಸ್ಥಳೀಯ ಸಮಿತಿಯನ್ನು ಪುನರ್ ರಚನೆ ಮಾಡದೆ ಇರುವುದರಿಂದ ಸಮಿತಿಯ ಸಭೆಯನ್ನು ಕರೆದಿರುವುದಿಲ್ಲಾ. ಪ್ರಸ್ತುತ ಇರುವ ಸದಸ್ಯರೊಂದಿಗೆ ಸಭೆಯನ್ನು ನಡೆಸುವಂತೆ ಕಾ.ರಾ.ವಿ. ನಿಗಮದ ಸ್ಥಳೀಯ ಕಛೇರಿ ವ್ಯವಸ್ಥಾಪಕರಿಗೆ ಸೂಚನೆ ನೀಡಲಾಗಿರುತ್ತದೆ.

**ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳ ಶಾಶ್ವತ ನೆನಪಿನ ಯೋಜನೆ ಬಗ್ಗೆ**

**89; ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳ ಶಾಶ್ವತ ನೆನಪಿಗಾಗಿ ಸರ್ಕಾರ ಏನೇನು ಯೋಜನೆ ರೂಪಿಸಿದೆ;

ಆ) ಅವುಗಳ ನಿರ್ವಹಣೆ ಯಾವ ರೀತಿ ನಡೆಯುತ್ತಿದೆ;

ಇ) ಜ್ಞಾನಪೀಠ ಪ್ರಶಸ್ತಿ ವಿಜೇತರ ಕೃತಿಗಳನ್ನು ಅನ್ಯ ಭಾಷೆಗಳಲ್ಲಿ ಪ್ರಕಟಿಸಲು ಸರ್ಕಾರ ಕೈಗೊಂಡ ಕ್ರಮವೇನು?

**ಶ್ರೀ ಗೋವಿಂದ ಎಂ. ಕಾರಜೋಳ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಣ್ಣ ನೀರಾವರಿ ಸಚಿವರು)**

ಅ) ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳ ಶಾಶ್ವತ ನೆನಪಿಗಾಗಿ ಟ್ರಸ್ಟ್‌ಗಳನ್ನು ಸ್ಥಾಪಿಸಲಾಗಿದೆ ಹಾಗೂ ಅವರ ಹೆಸರಿನಲ್ಲಿ ರಂಗಮಂದಿರ/ಸಾಂಸ್ಕೃತಿಕ ಭವನಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

ಆ) ಟ್ರಸ್ಟುಗಳಿಗೆ ವಾರ್ಷಿಕ ರೂ. 12.00 ಲಕ್ಷಗಳ ಅನುದಾನ ನೀಡಲಾಗುತ್ತಿದೆ.

ಇ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕುವೆಂಪು ಭಾಷಾ ಭಾರತಿ ಮೂಲಕ ಜ್ಞಾನಪೀಠ ಪ್ರಶಸ್ತಿ ವಿಜೇತರ ಆಯ್ದ ಕೃತಿಗಳ ಅನುವಾದ ಕಾರ್ಯಕ್ರಮ ಕೈಗೊಂಡಿದ್ದು, ಈಗಾಗಲೇ ರೂ. 1.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

**Information about number of offices functioning and posts in the Department of Sericulture in the State**

**101; Sri K. Prathapchandra Shetty (Local body constiuency)**

**a)** What is the number of offices functioning in the Department of sericulture of the State;

**b)** Of them what is the number of posts sanctioned and deficit posts (furnish taluk-wise, office-wise details);

**c)** What is the no. of farmers engaged in sericulture in the State; and what is the extent of land? (furnish taluk wise details)

**Sri B.N. Bachegowda (Minister for Labour and Sericulture)**

**a)** 797 offices of the Department of Sericulture are functioning in the State.

**b)** The details of the posts sanctioned filled and vacant is furnished to the Hon'ble member Separetely

**c)** The details of talukwise area under mulberry and sericultural families engaged is furnished to the Hon'ble member Separetely

**ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಸುರಕ್ಷಿತ ಅರಣ್ಯಗಳ ಒಳಗೆ ಇರುವ ಕೆರೆಗಳ ಮಾಹಿತಿ ಬಗ್ಗೆ**

**99; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸುರಕ್ಷಿತ ಅರಣ್ಯ ಪ್ರದೇಶದ ಒಳಗಡೆ ಇರುವ ಕೆರೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ಗ್ರಾಮ ಪಂಚಾಯತ್‌ವಾರು ವಿವರ ನೀಡುವುದು)

ಆ) ಇವುಗಳ ಅಭಿವೃದ್ಧಿಗೆ ಇಲಾಖೆ ತೆಗೆದುಕೊಂಡ ಕ್ರಮವೇನು;

ಇ) ಸುರಕ್ಷಿತ ಅರಣ್ಯದ ಒಳಗಡೆ ಇರುವ ಎಷ್ಟು ಕೆರೆಗಳ ಅಭಿವೃದ್ಧಿಯನ್ನು ಸಣ್ಣ ನೀರಾವರಿ ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ವಹಿಸಿಕೊಡಲಾಗಿದೆ; ಒಂದೇ ಕೆರೆಗೆ ಎರಡೂ ಇಲಾಖೆಯ ಮೂಲಕ ಹಣ ಪಾವತಿಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಸಿ.ಪಿ. ಯೋಗೇಶ್ವರ, (ಅರಣ್ಯ ಸಚಿವರು)**

ಅ) ಮಂಗಳೂರು ವಿಭಾಗ ಹಾಗೂ ಕಾರ್ಕಳ ವನ್ಯಜೀವಿ ವಿಭಾಗಗಳಲ್ಲಿ ಸುರಕ್ಷಿತ ಅರಣ್ಯ ಪ್ರದೇಶದ ಒಳಗಡೆ ಘೋಷಿಸಲ್ಪಡುವ ಯಾವುದೇ ಕೆರೆಗಳು ಇರುವುದಿಲ್ಲ. ಆದರೆ ಕುದುರೆ ವನ್ಯಜೀವಿ, ಕಾರ್ಕಳ ವಿಭಾಗದ ವ್ಯಾಪ್ತಿಯಲ್ಲಿ ವನ್ಯಪ್ರಾಣಿಗಳ ಉಪಯೋಗದ ಸಲುವಾಗಿ ಅಲ್ಲಲ್ಲಿ ಕೃತಕ ಸಣ್ಣ ಕೆರೆಗಳನ್ನು ಮಾತ್ರ ನಿರ್ಮಿಸಲಾಗಿದ್ದು, ನೈಸರ್ಗಿಕ ಕೆರೆಗಳು ಇರುವುದಿಲ್ಲ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ 10 ಹಾಗೂ ಉಡುಪಿ ಜಿಲ್ಲೆಯಲ್ಲಿ 80 ಕೆರೆಗಳು ಇವೆ. ವಿವರ ಈ ಕೆಳಕಂಡಂತಿದೆ:

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ವಲಯ | ಗ್ರಾಮ ಪಂಚಾಯತ್ ಹೆಸರು | ಕೆರೆಗಳ ಒಟ್ಟು ಸಂಖ್ಯೆ |
|---|---|---|---|---|---|
| 1 | ಉಡುಪಿ | ಕುಂದಾಪುರ | ಬೈಂದೂರು | ಹೇರೂರು | 1 |
| 2 | ಉಡುಪಿ | ಕುಂದಾಪುರ | ಕುಂದಾಪುರ | ಅಂಪಾರು | 1 |
| | | | | ಕರ್ಕುಂಜೆ | 5 |
| | | | | ಆಜ್ರಿ | 1 |
| | | | | ಕೆರಾಡಿ | 1 |
| | | | | ಜಡ್ಕಲ್ | 1 |
| 3 | ಉಡುಪಿ | ಕುಂದಾಪುರ | ಶಂಕರನಾರಾಯಣ | ಬಿಲ್ಲಾಡಿ | 1 |
| | | | | ಆವರ್ಸೆ | 6 |
| | | | | ಶಿರಿಯಾರ | 1 |

| | | | | | |
|---|---|---|---|---|---|
| | | | | ಹಾಲಾಡಿ | 1 |
| | | | | ಶಂಕರನಾರಾಯಣ | 4 |
| | | | | ಸಿದ್ದಾಪುರ | 6 |
| | | | | ಆಜ್ರಿ | 2 |
| | | | | ಅಮಾಸೆಬೈಲು | 7 |
| | | | | ಹೆಂಗವಳ್ಳಿ | 7 |
| | | | | ಹೊಸಂಗಡಿ | 6 |
| | | | | ಹಳ್ಳಿಹೊಳೆ | 3 |
| 4 | ಉಡುಪಿ | ಉಡುಪಿ | ಉಡುಪಿ | ಕಾಡೂರು | 2 |
| | | | | ಪಿಲಾರು | 1 |
| 5 | ಉಡುಪಿ | ಕಾರ್ಕಳ | ಹೆಬ್ರಿ | ಹೆಬ್ರಿ | 1 |
| | | | | ಶಿವಪುರ | 1 |
| | | | | ನಾಡ್ಪಾಲು | 3 |
| | | ಉಡುಪಿ | ಹೆಬ್ರಿ | ಕೊಕ್ಕರ್ಣೆ | 3 |
| | | | | ಕರ್ಜೆ | 2 |
| | | | | ನಾಲ್ಕೂರು | 1 |
| | | | | ಪೆರ್ಡೂರು | 2 |
| | | | | ಬೈರಂಪಲ್ಲಿ | 1 |
| 6 | ಉಡುಪಿ | ಕಾರ್ಕಳ | ಕಾರ್ಕಳ | ದುರ್ಗಾ | 3 |
| | | | | ಮರ್ಣೆ | 4 |
| | | | | ಶಿರ್ಲಾಲು | 1 |
| 7 | ಉಡುಪಿ | ಕಾರ್ಕಳ | ಮೂಡಬಿದ್ರೆ | ನಲ್ಲೂರು | 1 |
| | ದ.ಕನ್ನಡ | ಮಂಗಳೂರು | ಮೂಡಬಿದ್ರೆ | ನೆಲ್ಲಿಕಾರು | 2 |
| | | | | ಪಾಲಡ್ಕ | 2 |
| | | | | ಹೊಸಬೆಟ್ಟು | 2 |
| | | | | ದರೆಗುಡ್ಡೆ | 3 |
| 8 | ದ.ಕನ್ನಡ | ಬೆಳ್ತಂಗಡಿ | ವೇಣೂರು | ಮರೋಡಿ | 1 |
| | | | **ಒಟ್ಟು** | | **90** |

ಆ) 2010–11ನೇ ಸಾಲಿನಲ್ಲಿ 15 ಕೆರೆಗಳನ್ನು ಇಲಾಖೆ ಮೂಲಕ ಹೂಳೆತ್ತಿ ಅಭಿವೃದ್ಧಿ ಪಡಿಸಲಾಗಿದೆ. ಅಲ್ಲದೆ ಕುದುರೆಮುಖ ವನ್ಯಜೀವಿ, ಕಾರ್ಕಳ ವಿಭಾಗದಲ್ಲಿ ಇದ್ದಕೃತಕ ಕೆರೆಗಳನ್ನು ಎರಡು ಮೂರು ವರ್ಷಗಳಿಗೊಮ್ಮೆ ಹೂಳು ತೆಗೆಯುವ ಕೆಲಸ ಮಾಡಲಾಗುತ್ತದೆ.

ಇ) ಇಲ್ಲ

ಉದ್ಭವಿಸುವುದಿಲ್ಲ

**ಉಡುಪಿ ಜಿಲ್ಲೆಯ ವಾರಾಹಿ ನೀರಾವರಿ ಯೋಜನೆಯ ಬಗ್ಗೆ**

**100 ಮತ್ತು 88; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ ಮತ್ತು ಶ್ರೀ ಕೋಟ ಶ್ರೀನಿವಾಸ ಪೂಜಾರಿ**

ಅ) ಉಡುಪಿ ಜಿಲ್ಲೆಯ ವಾರಾಹಿ ಯೋಜನೆ ಯಾವಾಗ ಪ್ರಾರಂಭವಾಯಿತು; ಯೋಜನೆಯ ಅಂದಾಜು ಮೊತ್ತವೆಷ್ಟು; ಉದ್ದೇಶಿತ ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳಲು ಇಚ್ಛಿಸಿರುವ ಕಂದಾಯ ಇಲಾಖೆಯ ಭೂಮಿ, ಪಟ್ಟಾ ಭೂಮಿ ಮತ್ತು ಅರಣ್ಯ ಇಲಾಖೆಯ ಭೂಮಿ ಎಷ್ಟು; ಕಾಲುವೆಯ ಉದ್ದ ಮತ್ತು ಉಪ ಕಾಲುವೆಗಳ ಉದ್ದ ಎಷ್ಟು;

ಆ) ಪ್ರಸ್ತುತ ವಾರಾಹಿ ನೀರಾವರಿ ಯೋಜನೆಯ ಪರಿಷ್ಕೃತ ಅಂದಾಜು ವೆಚ್ಚ ಎಷ್ಟು; ಮತ್ತು ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ಮತ್ತು ಉದ್ದೇಶಿತ ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳಲು ಇಚ್ಛಿಸಿರುವ ಕಂದಾಯ ಇಲಾಖೆಯ ಭೂಮಿ, ಪಟ್ಟಾ ಭೂಮಿ ಮತ್ತು ಅರಣ್ಯ ಇಲಾಖೆಯ ಭೂಮಿ ಎಷ್ಟು ಪರಿಷ್ಕೃತ ಕಾಲುವೆ ಉದ್ದ ಮತ್ತು ಉಪ ಕಾಲುವೆಗಳ ಉದ್ದ ಎಷ್ಟು;

ಇ) ಇಂದು ಸ್ವಾಧೀನ ಪಡಿಸಿಕೊಳ್ಳಲಾದ ಪಟ್ಟಾ ಸ್ಥಳ ಎಷ್ಟು ಮತ್ತು ಪೂರ್ಣಗೊಂಡ ಕಾಲುವೆಗಳ ಮತ್ತು ಉಪ ಕಾಲುವೆಗಳ ಉದ್ದವೆಷ್ಟು?

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

**ಅ)** ವಾರಾಹಿ ನೀರಾವರಿ ಯೋಜನೆಯು 1979ರಲ್ಲಿ ಪ್ರಾರಂಭವಾಗಿದ್ದು, ಇದರ ಮೂಲ ಅಂದಾಜು ಮೊತ್ತ ರೂ. 943.00 ಲಕ್ಷಗಳಾಗಿರುತ್ತದೆ.

| | |
|---|---|
| **ವಾರಾಹಿ ನೀರಾವರಿ ಯೋಜನೆಯ ಮೂಲ ಅಂದಾಜಿನಂತೆ, ಭೂಸ್ವಾಧೀನ ಪಡಿಸಿಕೊಳ್ಳುವ ಜಮೀನುಗಳ ವಿವರಗಳು:** | |
| 1. ಕಂದಾಯ ಇಲಾಖೆಯ ಭೂಮಿ (ಸಿ ಅಂಡ್ ಡಿ ಸರ್ಕಾರಿ ಜಮೀನು) | 1689.12 ಎಕರೆ (ಮೂಲ ಅಂದಾಜು ತಯಾರಿಸುವಾಗ ವಿವರವಾದ ಸರ್ವೆ ಕೆಲಸ ಮಾಡಿಲ್ಲದಿರುವುದರಿಂದ ಕಂದಾಯ ಮತ್ತು ಪಟ್ಟಾ ಜಮೀನುಗಳನ್ನು ಸೇರಿಸಿ ಅಂದಾಜಿಸಲಾಗಿದೆ). |
| 2. ಪಟ್ಟಾ ಭೂಮಿ | |
| 3. ಅರಣ್ಯ ಭೂಮಿ | 271.00 ಎಕರೆ |
| **ಕಾಲುವೆಗಳ ಉದ್ದ** | |
| 1. ವಾರಾಹಿ ಬಲದಂಡೆ ನಾಲೆ | 70.20 ಕಿ.ಮೀ |
| 2. ವಾರಾಹಿ ಎಡದಂಡೆ ನಾಲೆ | 78.80 ಕಿ.ಮೀ |
| 3. ವಾರಾಹಿ ಏತ ನೀರಾವರಿ ಕಾಲುವೆ | 54.00 ಕಿ.ಮೀ |
| **ಉಪ ಕಾಲುವೆಗಳ ಉದ್ದ** | |
| ವಾರಾಹಿ ಎಡದಂಡೆ ನಾಲೆಯ ಉಪ ಕಾಲುವೆಗಳ ಒಟ್ಟು ಉದ್ದ: | ಮೂಲ ಅಂದಾಜು ತಯಾರಿಸುವಾಗ ಉಪ ಕಾಲುವೆಗಳ ಸರ್ವೆ ಮಾಡಿರುವುದಿಲ್ಲ. ಒಟ್ಟಾರೆ ಅಚ್ಚುಕಟ್ಟು 15702 ಹೆಕ್ಟೇರ್‌ಗಳನ್ನು ಪರಿಗಣಿಸಿ ಅಂದಾಜನ್ನು ತಯಾರಿಸಲಾಗಿರುತ್ತದೆ. |
| ವಾರಾಹಿ ಬಲದಂಡೆ ನಾಲೆಯ ಉಪ ಕಾಲುವೆಗಳ ಒಟ್ಟು ಉದ್ದ: | |

**ಆ)** ವಾರಾಹಿ ನೀರಾವರಿ ಯೋಜನೆಯ ಪರಿಷ್ಕೃತ ಅಂದಾಜು 2003–04ನೇ ಸಾಲಿನ ಜಲಸಂಪನ್ಮೂಲ ದರಪಟ್ಟಿಯನ್ವಯ ತಯಾರಿಸಿದ್ದು, ಪರಿಷ್ಕೃತ ಅಂದಾಜು ಮೊತ್ತ ರೂ. 569.53 ಕೋಟಿಗಳು ಆಗಿರುತ್ತದೆ. ಸದರಿ ಯೋಜನೆಯನ್ನು 2013–14ನೇ ಸಾಲಿನೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

| **ಪ್ರಸ್ತುತ ಯೋಜನೆಯಂತೆ, ಭೂಸ್ವಾಧೀನ ಪಡಿಸಿಕೊಳ್ಳುವ ಜಮೀನುಗಳ ವಿವರ** | |
|---|---|
| 1. ಕಂದಾಯ ಇಲಾಖೆಯ ಭೂಮಿ (ಸಿ ಅಂಡ್ ಡಿ ಸರ್ಕಾರಿ ಜಮೀನು) | 268.58 ಎಕರೆ |
| 2. ಪಟ್ಟಾ ಭೂಮಿ | 1356.17 ಎಕರೆ |
| 3. ಅರಣ್ಯ ಭೂಮಿ | 358.15 ಎಕರೆ |
| **ಕಾಲುವೆಗಳ ಉದ್ದ** | |
| 1. ವಾರಾಹಿ ಬಲದಂಡೆ ನಾಲೆ | 42.73 ಕಿ.ಮೀ |
| 2. ವಾರಾಹಿ ಎಡದಂಡೆ ನಾಲೆ | 44.35 ಕಿ.ಮೀ |
| 3. ವಾರಾಹಿ ಏತ ನೀರಾವರಿ ಕಾಲುವೆ | 33.00 ಕಿ.ಮೀ |
| **ಉಪ ಕಾಲುವೆಗಳ ಉದ್ದ** | |
| **ವಾರಾಹಿ ಎಡದಂಡೆ ನಾಲೆಯ ಉಪ ಕಾಲುವೆಗಳ ಒಟ್ಟು ಉದ್ದ:**<br>**ವಾರಾಹಿ ಬಲದಂಡೆ ನಾಲೆಯ ಉಪ ಕಾಲುವೆಗಳ ಒಟ್ಟು ಉದ್ದ:** | **122.82 ಕಿ.ಮೀ**<br>**5.611 ಕಿ.ಮೀ** |

ಇ)

| | |
|---|---|
| ಈವರೆಗೆ ಸ್ವಾಧೀನ ಪಡಿಸಿಕೊಳ್ಳಲಾದ ಪಟ್ಟಾ ಜಮೀನು ವಿಸ್ತೀರ್ಣ | 173.58 ಎಕರೆ |
| **ಪೂರ್ಣಗೊಂಡ ಕಾಲುವೆಗಳ ಉದ್ದ** | |
| 1. ವಾರಾಹಿ ಬಲದಂಡೆ ನಾಲೆ | 1 ಕಿ.ಮೀ |
| 2. ವಾರಾಹಿ ಲೆಡದಂಡೆ ನಾಲೆ | 22 ಕಿ.ಮೀ |
| ಪೂರ್ಣಗೊಂಡ ಉಪಕಾಲುವೆಗಳ ಒಟ್ಟು ಉದ್ದ | 5.00 ಕಿ.ಮೀ |

## ರಾಜ್ಯದಲ್ಲಿ ಕಾರ್ಮಿಕ ಸ್ವಾಸ್ಥ್ಯ ಭೀಮಾ ಯೋಜನೆಯನ್ವಯ ಬಂದ ಅರ್ಜಿಗಳ ಮಾಹಿತಿ ಕೋರಿ

### 97; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ರಾಜ್ಯದಲ್ಲಿ ಕಾರ್ಮಿಕರಿಂದ ಸ್ವಾಸ್ಥ್ಯ ಬಿಮಾ ಯೋಜನೆಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಆ ಅರ್ಜಿಗಳಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಈ ಯೋಜನೆಯ ಆಯ್ಕೆಗೆ ಇರುವ ಮಾನದಂಡವೇನು; ಮತ್ತು ಯಾವ ಸಂಸ್ಥೆಗಳ ಮೂಲಕ ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗುತ್ತಿದೆ;

ಇ) ಉಡುಪಿ ಜಿಲ್ಲೆಯಲ್ಲಿ ಯಾವ ಯಾವ ಗ್ರಾಮ ಪಂಚಾಯತಿಗಳ ಮೂಲಕ ಎಷ್ಟು ಸ್ವಾಸ್ಥ್ಯ ಬಿಮಾ ಯೋಜನೆಯ ಅರ್ಜಿ ಸ್ವೀಕರಿಸಲಾಗಿದೆ? ಮತ್ತು ಅವುಗಳಲ್ಲಿ ಮಂಜೂರಾದ ಅರ್ಜಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

### ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು)

ಅ) ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿ ಕಾರ್ಮಿಕರಿಂದ ಅರ್ಜಿ ಪಡೆಯುವ ವ್ಯವಸ್ಥೆ ಇರುವುದಿಲ್ಲ. ಬದಲಿಗೆ, ಕೇಂದ್ರ ಸರ್ಕಾರದ ಮಾರ್ಗ ಸೂಚಿಯನ್ವಯ ಫಲಾನುಭವಿಗಳನ್ನು ಗುರುತಿಸಿ ಸ್ಮಾರ್ಟ್ ಕಾರ್ಡ್ ನೀಡಿ ಆರೋಗ್ಯ ವಿಮೆ ಸೌಲಭ್ಯ ವಿಸ್ತರಿಸಲಾಗುವುದು.

ರಾಜ್ಯ ನೋಡಲ್ ಏಜೆನ್ಸಿಯು ಒಟ್ಟು 4077991 ಫಲಾನುಭವಿಗಳನ್ನು ಗುರುತಿಸಿರುತ್ತದೆ. ಜಿಲ್ಲಾವಾರು ಫಲಾನುಭವಿಗಳ ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಆ) ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಕಾರ್ಮಿಕರು ಹಾಗು ಕೇಂದ್ರ ಸರ್ಕಾರ ಗುರುತಿಸಿದ ಯಾವುದೇ ರೀತಿಯ ವೃತ್ತಿಯ ಕಾರ್ಮಿಕರು ಈ ಯೋಜನೆಯ ವ್ಯಾಪ್ತಿಗೆ ಬರುತ್ತಾರೆ.

ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯನ್ನು ಅನುಷ್ಠಾನ ಮಾಡಲು ಕಾರ್ಮಿಕ ಇಲಾಖೆಯನ್ನು ರಾಜ್ಯ ನೋಡಲ್ ಏಜೆನ್ಸಿ ಎಂದು ಗುರುತಿಸಲಾಗಿದೆ. ರಾಜ್ಯ ನೋಡಲ್ ಏಜೆನ್ಸಿಯು ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಸ್ಪರ್ಧಾತ್ಮಕ ಬಿಡ್ ಮೂಲಕ ಇಫ್ಕೋ ಟೋಕಿಯೊ ಜನರಲ್ ಇನ್ಸೂರೆನ್ಸ್ ಕಂಪನಿ, ಟಾಟಾ–ಎಐಜಿ ಜನರಲ್ ಇನ್ಸೂರೆನ್ಸ್ ಕಂಪನಿ ಹಾಗು ಯುನೈಟೆಡ್ ಇಂಡಿಯ ಇನ್ಸೂರೆನ್ಸ್ ಕಂಪನಿ ಎಂಬ ವಿಮಾ ಕಂಪನಿಗಳನ್ನು ಆಯ್ಕೆ ಮಾಡಿ ಒಡಂಬಡಿಕೆ ಮಾಡಿಕೊಂಡಿರುತ್ತದೆ. ಈ ವಿಮಾ ಕಂಪನಿಗಳು ಥರ್ಡ್ ಪಾರ್ಟಿ ಅಡ್ಮಿನಿಸ್ಟ್ರೇಟರ್ ಹಾಗು ಕಾರ್ಡ್‌ವೆಂಡಿಂಗ್ ಕಂಪನಿಗಳ ಸಹಕಾರದಿಂದ ಯೋಜನೆ ಅನುಷ್ಠಾನ ಮಾಡುತ್ತವೆ.

ಇ) ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿ ಗ್ರಾಮ ಪಂಚಾಯತ್‌ಗಳ ಮೂಲಕ ಅರ್ಜಿ ಸ್ವೀಕರಿಸುವ ವ್ಯವಸ್ಥೆ ಇರುವುದಿಲ್ಲ. ಫಲಾನುಭವಿಗಳ ಪಟ್ಟಿಯನ್ನು ರಾಜ್ಯ ನೋಡಲ್ ಏಜೆನ್ಸಿಯು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆದು ಅನುಷ್ಠಾನ ಮಾಡಲಾಗುತ್ತದೆ. ತಾಲ್ಲೂಕುವಾರು ಫಲಾನುಭವಿಗಳ ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ.

ಅನುಭಂದ –1

| ಕ್ರ. ಸಂ | ಜಿಲ್ಲೆ ಹೆಸರು | ಆಯ್ಕೆ ಮಾಡಿದ ಫಲಾನುಭವಿಗಳ ಸಂಖ್ಯೆ |
|---|---|---|
| 1 | ಗುಲ್ಬರ್ಗಾ | 225307 |
| 2 | ಯಾದಗಿರಿ | 118533 |
| 3 | ಬಳ್ಳಾರಿ | 165123 |
| 4 | ಕೊಪ್ಪಳ | 138774 |
| 5 | ರಾಯಚೂರು | 258894 |
| 6 | ಬೀದರ್ | 122708 |
| 7 | ಬೆಳಗಾವಿ | 380766 |
| 8 | ಉತ್ತರ ಕನ್ನಡ | 115482 |
| 9 | ಬಾಗಲಕೋಟೆ | 122613 |
| 10 | ಬಿಜಾಪುರ | 134019 |
| 11 | ಗದಗ | 74600 |
| 12 | ಹಾವೇರಿ | 126849 |
| 13 | ಧಾರವಾಡ | 113278 |
| 14 | ಶಿವಮೊಗ್ಗ | 123493 |
| 15 | ದಕ್ಷಿಣ ಕನ್ನಡ | 62194 |
| 16 | ಚಿಕ್ಕಮಗಳೂರು | 109820 |
| 17 | ಹಾಸನ | 161203 |
| 18 | ಉಡುಪಿ | 43668 |
| 19 | ಕೊಡಗು | 50987 |
| 20 | ಬೆಂಗಳೂರು ನಗರ | 197524 |
| 21 | ಕೋಲಾರ | 126232 |
| 22 | ಚಿಕ್ಕಬಳ್ಳಾಪುರ | 91577 |
| 23 | ಚಿತ್ರದುರ್ಗ | 130935 |
| 24 | ತುಮಕೂರು | 219074 |
| 25 | ದಾವಣಗೆರೆ | 141334 |
| 26 | ಮೈಸೂರು | 181461 |
| 27 | ರಾಮನಗರ | 91033 |
| 28 | ಚಾಮರಾಜನಗರ | 97870 |
| 29 | ಬೆಂಗಳೂರು ಗ್ರಾಮೀಣ | 49604 |
| 30 | ಮಂಡ್ಯ | 103016 |
| ಒಟ್ಟು 4077991 | | |

## ಅನುಭಂದ–2

| ಕ್ರ. ಸಂ | ತಾಲ್ಲೂಕು ಹೆಸರು | ಗ್ರಾವೀಣ ಬಿಪಿಎಲ್ | ನಗರ ಬಿಪಿಎಲ್ | ಎಂಜಿಎನ್‌ಆರ್ ಇಜಿಎಸ್ | ಒಟ್ಟು |
|---|---|---|---|---|---|
| 1 | ಉಡುಪಿ | 18558 | 3045 | 227 | 21830 |
| 2 | ಕುಂದಾಪುರ | 12946 | 926 | 920 | 14792 |
| 3 | ಕಾರ್ಕಳ | 5862 | 229 | 955 | 7046 |
| | ಒಟ್ಟು | **37366** | **4200** | **2102** | **43668** |

## ಕೆಳದಿ ಚೆನ್ನಮ್ಮನ ಪುತ್ಥಳಿ ಸ್ಥಾಪನೆ ಬಗ್ಗೆ

**103; ಡಾ॥ ಎಸ್.ಆರ್. ಲೀಲಾ (ನಾಮನಿರ್ದೇಶನ ಹೊಂದಿದವರು)**

ಅ) ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕಿನ ಕೆಳದಿ ಗ್ರಾಮದಲ್ಲಿ ಐತಿಹಾಸಿಕ ಕೆಳದಿ ಚನ್ನಮ್ಮನ ಪ್ರತಿಮೆ ಸ್ಥಾಪನೆಗೆ ಸರ್ಕಾರ ಅನುಮತಿ ನೀಡಿದ್ದರೂ, ಇದುವರೆಗೆ ಪ್ರತಿಮೆಯನ್ನು ಸ್ಥಾಪಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರತಿಮೆಯ ಸ್ಥಾಪನೆಗೆ ಆಗುತ್ತಿರುವ ವಿಳಂಬಕ್ಕೆ ಕಾರಣವೇನು; (ವಿವರ ಒದಗಿಸುವುದು)

ಇ) ಎಷ್ಟು ದಿನಗಳೊಳಗೆ ಈ ಪ್ರತಿಮೆಯನ್ನು ಸ್ಥಾಪಿಸಲಾಗುವುದು?

**ಶ್ರೀ ಗೋವಿಂದ ಎಂ. ಕಾರಜೋಳ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಣ್ಣ ನೀರಾವರಿ ಸಚಿವರು)**

ಅ) ಹೌದು.

ಆ) ಶಿಲ್ಪಕಲಾ ಅಕಾಡೆಮಿ ವತಿಯಿಂದ ಪ್ರತಿಮೆ ಸ್ಥಾಪನೆಗೆ ಪ್ರಾಥಮಿಕವಾಗಿ ಟೆಂಡರ್ ಕರೆದು ಕ್ರಮ ಕೈಗೊಳ್ಳಲು ಸೂಚಿಸಲಾಗಿದ್ದಿತು. ಅನುದಾನ ಬಿಡುಗಡೆ ವಿಳಂಬವಾದ ಹಿನ್ನೆಲೆಯಲ್ಲಿ ಪ್ರಸ್ತುತ ಇದನ್ನು ಶಿವಮೊಗ್ಗ ಜಿಲ್ಲಾಡಳಿತ ವತಿಯಿಂದ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕೆ ಈಗಾಗಲೇ ಒಟ್ಟು ರೂ. 20.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

ಇ) ಜಿಲ್ಲಾಧಿಕಾರಿಗಳು, ಶಿವಮೊಗ್ಗ ಇವರು ಈ ಕಾರ್ಯಕ್ಕೆ ಈಗಾಗಲೇ ಟೆಂಡರ್ ಕರೆದಿದ್ದು, ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.

## ಸಣ್ಣ ಕೈಗಾರಿಕಾ ವಸಾಹತು ಪ್ರದೇಶಗಳ ಅಭಿವೃದ್ಧಿ

**199; ಶ್ರೀ ಮತ್ತಿಕಟ್ಟಿ ವೀರಣ್ಣ (ವಿ.ಸ.ಕ್ಷೇತ್ರ)**

ಅ) ಧಾರವಾಡ, ಗದಗ್ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಸಣ್ಣ ಕೈಗಾರಿಕಾ ವಸಾಹತು ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಯೋಜನೆಗಳನ್ನು ಸರ್ಕಾರವು ಹಮ್ಮಿಕೊಂಡಿದೆಯೇ;

ಆ) ಹಾಗಿದ್ದಲ್ಲಿ, ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು; (ಇದಕ್ಕಾಗಿ ಒದಗಿಸಲಾದ ಜಿಲ್ಲಾವಾರು ಅನುದಾನ ಮತ್ತು ವೆಚ್ಚದ ವಿವರಗಳನ್ನು ನೀಡುವುದು)

ಇ) ಸಣ್ಣ ಕೈಗಾರಿಕೆಗಳಿಗೆ ಕೃಷಿ ಸಾಲದ ರೀತಿಯಲ್ಲಿ ಕಡಿಮೆ ದರದ ಬಡ್ಡಿ ವಿಧಿಸಿ ಉತ್ತೇಜನ ನೀಡಲಾಗುವುದೇ?

**ಶ್ರೀ ನರಸಿಂಹ ನಾಯಕ (ರಾಜೂಗೌಡ) (ಸಣ್ಣ ಕೈಗಾರಿಕೆ ಸಚಿವರು)**

ಅ) ಹೌದು

ಆ) ಧಾರವಾಡ, ಗದಗ್ ಮತ್ತು ಹಾವೇರಿ ಜಿಲ್ಲೆಗಳಲ್ಲಿ ನಿಗಮದಿಂದ ಈಗಾಗಲೇ ಕೈಗಾರಿಕಾ ವಸಾಹತುಗಳನ್ನು ಕೆಎಸ್‌ಎಸ್‌ಐಡಿಸಿ ಮೂಲಕ ಸ್ಥಾಪಿಸಲಾಗಿದೆ. ಸಂಕ್ಷಿಪ್ತ ವಿವರಗಳು ಕೆಳಕಂಡಂತಿರುತ್ತವೆ.

| ಕ್ರ.ಸಂ. | ಜಿಲ್ಲೆ | ಸ್ಥಾಪಿಸಿರುವ ಕೈಗಾರಿಕಾ ವಸಾಹತು | ನಿರ್ಮಿಸಿರುವ ಮಳಿಗೆಗಳು | ಅಭಿವೃದ್ಧಿಪಡಿಸಿರುವ ನಿವೇಶನಗಳು |
|---|---|---|---|---|
| 1 | ಧಾರವಾಡ | 6 | 570 | 790 |
| 2 | ಗದಗ | 6 | 34 | 259 |
| 3 | ಹಾವೇರಿ | 5 | 32 | 244 |

ಮುಂದುವರೆದಂತೆ,

(1) ಧಾರವಾಡ ಜಿಲ್ಲೆಯ ಗಾಮನಗಟ್ಟಿಯಲ್ಲಿ ಬೇಡಿಕೆಗನುಗುಣವಾಗಿ ಹೊಸದಾಗಿ ಕೈಗಾರಿಕಾ ವಸಾಹತುವನ್ನು ಅಭಿವೃದ್ಧಿ ಪಡಿಸುತ್ತಿದ್ದು ಅಭಿವೃದ್ಧಿ ಕೆಲಸಗಳು ಮುಕ್ತಾಯ ಹಂತದಲ್ಲಿರುತ್ತವೆ.

(2) ಗದಗ ಜಿಲ್ಲೆಯಲ್ಲಿ ಹೊಸ ಕೈಗಾರಿಕಾ ವಸಾಹತುಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸಧ್ಯಕ್ಕೆ ಇರುವುದಿಲ್ಲ.

(3) ಹಾವೇರಿ ಜಿಲ್ಲೆಯಲ್ಲಿನ ರಾಣಿಬೆನ್ನೂರಿನಲ್ಲಿ 2ನೇ ಹಂತದ ಕೈಗಾರಿಕಾ ವಸಾಹತುವನ್ನು ಸ್ಥಾಪಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಮೇಲ್ಕಂಡ ಕೈಗಾರಿಕಾ ವಸಾಹತುಗಳಲ್ಲಿ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಕೆಎಸ್‌ಎಸ್‌ಐಡಿಸಿ ನಿಗಮವು ಕಲ್ಪಿಸಿದೆ. ಇದಕ್ಕಾಗಿ ತಗುಲಿದ ವೆಚ್ಚಗಳನ್ನು ನಿಗಮದ ಹಣಕಾಸಿನ ಮೂಲದಿಂದ ಹಾಗೂ ಭಾರತ ಸರ್ಕಾರದ Integrated Infrastructure Development (IID) ಯೋಜನೆಯಡಿ ಭರಿಸಲಾಗಿದೆ.

(ರೂ. ಲಕ್ಷಗಳಲ್ಲಿ)

| ಜಿಲ್ಲೆ | IID | ನಿಗಮದ ಬಂಡವಾಳ |
|---|---|---|
| ಧಾರವಾಡ | 75.50 | 1696.23 |
| ಗದಗ | 26.00 | 31.40 |
| ಹಾವೇರಿ | – | 60.50 |
| **ಒಟ್ಟು** | **101.50** | **1788.13** |

ಇ) ಇಲ್ಲ

## ಕೃಷ್ಣಾನದಿ ನೀರಿನ ಹಂಚಿಕೆಯಲ್ಲಿ ನ್ಯಾಯಾಧೀಕರಣ ತೀರ್ಪಿನ ನಮ್ಮ ರಾಜ್ಯಕ್ಕೆ ಒದಗಿಸಿರುವ ನೀರಿನ ಹಂಚಿಕೆ ಪ್ರಮಾಣ ಕುರಿತು

### 201; ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಕೃಷ್ಣಾ ನದಿ ನೀರಿನ ಹಂಚಿಕೆಯ ಬಗ್ಗೆ ನ್ಯಾಯಾಧೀಕಾರಣ ತೀರ್ಪಿನ ಹಿನ್ನಲೆಯಲ್ಲಿ (Tribunal) ನಮ್ಮ ರಾಜ್ಯಕ್ಕೆ ಒದಗಿಸಿರುವ ನೀರಿನ ಹಂಚಿಕೆಯ ಪ್ರಮಾಣವೆಷ್ಟು;

ಆ) ಇದರ ಬಗ್ಗೆ ಸರ್ಕಾರ ಹೊಸ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಿದೆಯೇ; ಯಾವ ಯಾವ ಯೋಜನೆಗಳು ಸರ್ಕಾರದ ಮುಂದಿವೆ?

### ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ) ಕೃಷ್ಣಾ ನ್ಯಾಯಾಧೀಕರಣ–II ನ ತೀರ್ಪು ದಿನಾಂಕ:30/12/2010 ರಂದು ಹೊರಬಿದ್ದಿದ್ದು, ಈ ತೀರ್ಪಿನಲ್ಲಿ ಕರ್ನಾಟಕ ರಾಜ್ಯಕ್ಕೆ 177.00 ಟಿಎಂಸಿ ನೀರನ್ನು ಹಂಚಿಕೆ ಮಾಡಲಾಗಿದೆ.

ಆ) ಕೃಷ್ಣಾ ನ್ಯಾಯಾಧೀಕರಣ ತೀರ್ಪಿನಲ್ಲಿ ನೀರಿನ ಹಂಚಿಕೆ ಮಾಡಿರುವ ಯೋಜನೆಗಳ ವಿವರ ಈ ಕೆಳಕಂಡಂತಿದೆ.

ಕೃಷ್ಣಾ ಭಾಗ್ಯ ಜಲ ನಿಗಮದಡಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 ಕ್ಕೆ 130.00 ಟಿಎಂಸಿ ನೀರು ಹಂಚಿಕೆಯಾಗಿದ್ದು, 5.30 ಲಕ್ಷ ಹೆ. ಪ್ರದೇಶಕ್ಕೆ ನೀರಾವರಿ ಒದಗಿಸುವ ರೂ. 17,207.00 ಕೋಟಿಗಳ ಪ್ರಸ್ತಾವನೆಗೆ ತಾತ್ವಿಕ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಯೋಜನಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ.

ಕರ್ನಾಟಕ ನೀರಾವರಿ ನಿಗಮದಡಿ ತುಂಗಾ ಮೇಲ್ದಂಡೆ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಮತ್ತು ಸಿಂಗಟಲೂರು ಏತ ನೀರಾವರಿ ಯೋಜನೆಗಳಿಗೆ 40 ಟಿಎಂಸಿ ಹಂಚಿಕೆಯಾಗಿದ್ದು, ಈ ಯೋಜನೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಕನಿಷ್ಠ ಹರಿವು ನೀರಿನ ಪ್ರಮಾಣ 7.00 ಟಿಎಂಸಿ ಎಂದು ನಿಗಧಿಪಡಿಸಿದೆ.

**ಇಂಗುಕೆರೆ ಅಭಿವೃದ್ಧಿಪಡಿಸುವ ಬಗ್ಗೆ**

**203; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕು ಸೊಗಲ ಗ್ರಾಮದಲ್ಲಿ ಇಂಗುಕೆರೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಸರ್ಕಾರವು ಒದಗಿಸಿರುವ ಹಣವೆಷ್ಟು;

ಆ) ಸದರಿ ಕಾಮಗಾರಿಗಳನ್ನು ಸರ್ಕಾರವು ಯಾವಾಗ ಪ್ರಾರಂಭಿಸುವುದು;

ಇ) ಅದೇ ರೀತಿ, ಬೈಲಹೊಂಗಲ ತಾಲ್ಲೂಕಿನಲ್ಲಿ ಯಾವ ಯಾವ ಇಂಗುಕೆರೆಗಳನ್ನು ಅಭಿವೃದ್ಧಿಪಡಿಸಲಾಗುವುದು; ಸದರಿ ಕಾಮಗಾರಿಗಳಿಗೆ ಒದಗಿಸಲಾದ ಹಣವೆಷ್ಟು?

**ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)**

ಅ) ಪ್ರಸಕ್ತ ಸಾಲಿನಲ್ಲಿ ಸೊಗಲ ಗ್ರಾಮದ ಇಂಗುಕೆರೆ ಅಭಿವೃದ್ಧಿಗೆ ಸಣ್ಣ ನೀರಾವರಿ ಇಲಾಖೆಯು ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಸಕ್ತ ಸಾಲಿನಲ್ಲಿ **"ಕೆರೆಗಳ ಅಭಿವೃದ್ಧಿ ಮತ್ತು ಪುನಃಶ್ಚೇತನ"** ಯೋಜನೆಯಡಿ ಬೈಲಹೊಂಗಲ ತಾಲ್ಲೂಕಿನಲ್ಲಿ ಗಜಮಿನಾಳ ಮತ್ತು ಮಸ್ತಮರಡಿ ಇಂಗುಕೆರೆಗಳನ್ನು ಕ್ರಮವಾಗಿ 10.00 ಲಕ್ಷ ರೂ.ಗಳ ಮತ್ತು

13.05 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿದೆ.

**ಸಣ್ಣ ಕೆರೆಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ**

**226; ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

ಅ) ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಮತಿ ಪಡೆಯುವ ಪ್ರಕ್ರಿಯೆಯನ್ನು ಸರಳೀಕರಣ ಮಾಡಲಾಗುವುದೇ;

ಆ) ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರವು ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸುವುದೇ;

ಇ) ಹಾಗಿದ್ದಲ್ಲಿ, ಎಲ್ಲೆಲ್ಲಿ ಮತ್ತು ಯಾವಾಗ ಸ್ಥಾಪಿಸಲಾಗುವುದು;

ಈ) ಬೆಳಗಾವಿ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು; ಇಲ್ಲಿ ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಾಗುವುದೇ?

**ಶ್ರೀ ನರಸಿಂಹ ನಾಯಕ (ರಾಜೂಗೌಡ) (ಸಣ್ಣ ಕೈಗಾರಿಕೆ ಸಚಿವರು)**

ಅ) ಹೌದು. ಸೂಕ್ಷ್ಮ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಅನುವಾಗುವಂತೆ ನೋಂದಣಿ ಪ್ರಕ್ರಿಯೆಯನ್ನು ಈಗಾಗಲೇ ಭಾರತ ಸರ್ಕಾರದ ಎಂಎಸ್‌ಎಂಇ ಕಾಯ್ದೆ 2006 ರನ್ವಯ ಸರಳೀಕರಿಸಲಾಗಿದೆ. ನೋಂದಣಿ ಪಡೆಯಲು ಸಣ್ಣ ಕೈಗಾರಿಕೆಗಳು ಯಾವುದೇ ದಾಖಲಾತಿಗಳನ್ನು ಸಲ್ಲಿಸದೇ ಅರ್ಜಿಯನ್ನು ಅಂತರಜಾಲ ಹಾಗೂ ಕಚೇರಿಯಲ್ಲೂ ಸಹ ಸಲ್ಲಿಸಿ ನೊಂದಾಯಿಸಿಕೊಳ್ಳಬಹುದಾಗಿದೆ.

Yes. The registration of Micro, Small & Medium enterprises has been simplified vide MSME Act 2006 of Government of India. Further small enterprises can be registered without submission of any documents on-line and also by filing application in the prescribed proforma.

ಆ) ಹೌದು.

ಸರ್ಕಾರವು ಕೈಗಾರಿಕಾ ನೀತಿ 2006–11 ರಲ್ಲಿ ವಿಶೇಷ ನೈಪುಣ್ಯತಾ ತರಬೇತಿಗಳನ್ನು ಸ್ಥಾಪಿಸಿ ವಿವಿಧ ಕ್ಷೇತ್ರಗಳಲ್ಲಿ ಬೇಡಿಕೆ ಇರುವ ಮಾನವ ಸಂಪನ್ಮೂಲಗಳನ್ನು ಒದಗಿಸುವ ಉದ್ದೇಶದಿಂದ ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಯ ಸಹಭಾಗಿತ್ವದ ಮೂಲಕ ಈಗ ಉದ್ಯೋಗಾವಕಾಶಕ್ಕೆ ಬೇಡಿಕೆ ಇರುವ ಚಟುವಟಿಕೆಗಳು/ವೃತ್ತಿಗಳಲ್ಲಿ ವಿದ್ಯಾವಂತ ಯುವಕ ಯುವತಿಯವರಿಗೆ ತರಬೇತಿ ನೀಡಲು ಅನುಕೂಲವಾಗುವಂತೆ ಸುವರ್ಣ ಕಾಯಕ ಕೌಶಲ್ಯಾಭಿವೃದ್ಧಿ ತರಬೇತಿ ಸಂಸ್ಥೆ ಸ್ಥಾಪಿಸಲು ತೀರ್ಮಾನಿಸಿ, ಒಟ್ಟು 20 ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ.

ಜಿಟಿಟಿಸಿ ತರಬೇತಿ ಕೇಂದ್ರವು ಸಹ ಕೈಗಾರಿಕೆಗಳಲ್ಲಿ ಬೇಡಿಕೆ ಇರುವ ವಿವಿಧ ವೃತ್ತಿಗಳಲ್ಲಿ ಕೋರ್ಸ್‌ಗಳನ್ನು ನಡೆಸುತ್ತಿದೆ.

Yes.

Govt. in its industrial policy 2006-11 has proposed a new scheme called, Suvarna Kayaka Koushalyabhivridhi Yojane (SKKY) to encourage institutions to setup special training centers in the State through Public Private Partnership (PPP) Model. to increase the employability of educated unemployed youth by providing required vocational training and to provide required manpower to the industrial sector. Govt. has so far given approval for starting 20 Training centres.

GTTC centre is also providing Training in various courses, that are in demand by industries.

ಇ) ಈವರೆಗೂ ಸರ್ಕಾರವು 20 ಸಂಸ್ಥೆಗಳಿಗೆ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆಗೆ ನೀಡಿದೆ. ಇದರಲ್ಲಿ 4 ಸಂಸ್ಥೆಗಳ ತರಬೇತಿ ಕೇಂದ್ರಗಳು ಸ್ಥಾಪನೆಯಾಗಿರುತ್ತದೆ. 9 ಕೇಂದ್ರಗಳು ನಿರ್ಮಾಣದ ಹಂತದಲ್ಲಿರುತ್ತವೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

So far, State Government has accorded administrative approval to 20 Institutions for establishment of Training Centres, out of which, 4 institutions have established training centers. 9 centers are under various stages of construction. Details are enclosed.

ಈ) ಬೆಳಗಾವಿ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಕೈಗಾರಿಕಾ ಪ್ರೇರಣಾ ಶಿಬಿರ, ಇಡಿಪಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗುವುದು ಮತ್ತು ಕೈಗಾರಿಕೆಗಳನ್ನು ಸ್ಥಾಪಿಸಲು ಇಚ್ಚಿಸುವ ಉದ್ಯಮಿಗಳಿಗೆ ಹೊಸ ಕೈಗಾರಿಕಾ ನೀತಿ 2009–14 ರನ್ವಯ ಲಭ್ಯವಿರುವ ಸವಲತ್ತುಗಳನ್ನು ಕಲ್ಪಿಸಲಾಗುವುದು. ಕ್ಲಸ್ಟರ್ ಅಭಿವೃದ್ಧಿ ಯೋಜನೆಯಡಿ ಗುಂಪು ಕೈಗಾರಿಕೆಗಳಿಗೆ ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯಂತ್ರೋಪಕರಣಗಳಿಗೆ ಆರ್ಥಿಕ ನೆರವು ನೀಡಲಾಗುವುದು.

ಬೆಳಗಾವಿ ಜಿಲ್ಲೆಯಲ್ಲಿ ಭಾರತೀಯ ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್, ಹುಕ್ಕೇರಿ ಇವರಿಂದ ಒಂದು ತರಬೇತಿ ಕೇಂದ್ರದ ಸ್ಥಾಪನೆಯು ಪ್ರಗತಿಯಲ್ಲಿದೆ.

Entreprenuership Awareness programmes Workshops & EDPs are being conducted. As per New Industrial Policy 2009-14, Incentives and Concessions are being offered for setting up of industries in the District. Under Cluster Development Programme, financial assistance will be provided by Government of India and State Govt. for development of infrastructure & acquisition of plant and machinery

In Belgaum District, establishment of one Training Centre Bharatiya Rural Development Foundation, Hukkeri is under progress.

## ಅನುಬಂಧ

| | ತರಬೇತಿ ಕೇಂದ್ರದ ಹೆಸರು ಮತ್ತು ವಿಳಾಸ |
|---|---|
| 01 | ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ, ಬಿಜಿಎಸ್, ಸಸ್ಯಕಾಶಿ, ಬೆಳ್ಳೂರು, ನಾಗಮಂಗಲ, ಮಂಡ್ಯ **(ಅನುಷ್ಠಾನಗೊಳಿಸಲಾಗಿದೆ)** |
| 02 | ಜೆ.ಎಸ್.ಎಸ್. ಇಂಡಸ್ಟ್ರೀಯಲ್ ಟ್ರೈನಿಂಗ್ ಸೆಂಟರ್, ಬಿ.ಆರ್. ಹಿಲ್ಸ್ ರಸ್ತೆ, ಚಾಮರಾಜನಗರ **(ಅನುಷ್ಠಾನಗೊಳಿಸಲಾಗಿದೆ)** |
| 03 | ಜೆ.ಎಸ್.ಎಸ್. ಮಹಾ ವಿದ್ಯಾಪೀಠ, ಜೆ.ಎಸ್.ಎಸ್. ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಆವರಣ, ಮೈಸೂರು–570 006 **(ಅನುಷ್ಠಾನಗೊಳಿಸಲಾಗಿದೆ)** |
| 04 | ಮೆ:ಎನ್.ಎಸ್. ಇನ್‌ಫೋಟೆಕ್, ವಿದ್ಯಾನಗರ, ಹುಬ್ಬಳ್ಳಿ, ಧಾರವಾಡ **(ಅನುಷ್ಠಾನಗೊಳಿಸಲಾಗಿದೆ)** |
| 05 | ಬಿ.ವಿ.ವಿ. ಸಂಘ ರೂರಲ್ ಡೆವಲಪ್‌ಮೆಂಟ್ (ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ) ಬಾಗಲಕೋಟೆ **(ಪ್ರಗತಿಯಲ್ಲಿದೆ)** |
| 06 | ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಷನ್ ಸೊಸೈಟಿ, ದಕ್ಷಿಣ ಕನ್ನಡ ಜಿಲ್ಲೆ **(ಪ್ರಗತಿಯಲ್ಲಿದೆ)** |
| 07 | ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ, ಕೋಲಾರ **(ಪ್ರಗತಿಯಲ್ಲಿದೆ)** |
| 08 | ಎನ್.ಎಂ.ಎ.ಎಂ.ಐ.ಟಿ. ಸ್ಟೆಪ್, ಉಡುಪಿ **(ಪ್ರಗತಿಯಲ್ಲಿದೆ)** |
| 09 | ಮೆ:ಮುಂದುಡ ಎಜುಕೇಷನ್ ಟ್ರಸ್ಟ್ (ವೋಗ್ ಇನ್ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ) ಎಂ.ಜಿ. ರಸ್ತೆ, ಬೆಂಗಳೂರು **(ಪ್ರಗತಿಯಲ್ಲಿದೆ)** |
| 10 | ಭಾರತೀಯ ರೂರಲ್ ಡೆವಲಪ್‌ಮೆಂಟ್ ಫೌಂಡೇಷನ್, ಹುಕ್ಕೇರಿ, ಬೆಳಗಾಂ **(ಪ್ರಗತಿಯಲ್ಲಿದೆ)** |
| 11 | ಶ್ರೀ ಸಿದ್ದಾರ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಸ್.ಎಸ್.ಐ.ಟಿ., ಎಸ್‌ಟಿಇಪಿ, ಮಾಲೂರು, ತುಮಕೂರು **(ಪ್ರಗತಿಯಲ್ಲಿದೆ)** |
| 12 | ದೇವರಾಜ ಅರಸ್ ಎಜುಕೇಷನ್ ಸೊಸೈಟಿ, ಚಳ್ಳಕೆರೆ, ಚಿತ್ರದುರ್ಗ **(ಪ್ರಗತಿಯಲ್ಲಿದೆ)** |
| 13 | ಶ್ವೇತ ವಿದ್ಯಾ ಸಂಸ್ಥೆ, ದಾಸರಕೊಪ್ಪಲು, ಸಾಲಗಾಮೆ, ಹಾಸನ, ಚಿಕ್ಕಮಗಳೂರು **(ಪ್ರಗತಿಯಲ್ಲಿದೆ)** |
| 14 | ಎನ್.ಎಸ್.ಟಿ. ಅಕಾಡೆಮಿ, ನಂ.39/9, 80 ಅಡಿ ರಸ್ತೆ, ಇಂದಿರಾನಗರ, ಅಂಚೆಪೆಟ್ಟಿಗೆ ಸಂಖ್ಯೆ–3841, ಬೆಂಗಳೂರು–38 |
| 15 | ಬಾಪೂಜಿ ಗ್ರಾಮೀಣ ವಿಕಾಸ ಸಮಿತಿ, ಕಾರವಾರ |
| 16 | ಬಸವ ಕಾರ್ಯ ಸಮಿತಿ, ಕೊಟ್ಟೇಗಾಳ್ ಅಂಚೆ, ಭಾಲ್ಕಿ, ಬೀದರ್ ಜಿಲ್ಲೆ |
| 17 | ಅದಮ್ಯ ಚೇತನ, ಶ್ರೀಮತಿ ಗಿರಿಜಾಶಾಸ್ತ್ರೀ ಮೆಮೋರಿಯಲ್ ಟ್ರಸ್ಟ್, ನಂ.84, ರಾಣೋಜಿರಾವ್ ರಸ್ತೆ, ಬಸವನಗುಡಿ, ಬೆಂಗಳೂರು–4 |
| 18 | ಶ್ರೀ ವೆಂಕಟೇಶ್ವರ ಎಜುಕೇಷನಲ್ ಟ್ರಸ್ಟ್, ನಂ.77, ಹನುಮಂತನಹಳ್ಳಿ, ಮರಿಸಿದ್ದನ ಹಳ್ಳಿ ಅಂಚೆ, ಪಾವಗಡ, ತುಮಕೂರು. |
| 19 | ಬಿಎಲ್‌ಡಿಇ ಅಸೋಸಿಯೇಶನ್ಸ್ ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜ್ ಕ್ಯಾಂಪಸ್, ಆಶ್ರಮ ರಸ್ತೆ, ಬಿಜಾಪುರ–586103 |
| 20 | ಜಿ.ಎಂ. ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಪಿ.ಬಿ ರೋಡ್, ದಾವಣಗೆರೆ |

**ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಪ್ರದೇಶ ಸ್ಥಾಪನೆ ಪರಿಹಾರ ಕುರಿತು**

**205; ಶ್ರೀ ವಿ.ಆರ್. ಸುದರ್ಶನ್ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ವೇಮಗಲ್ ಹೋಬಳಿಯಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ಕೈಗಾರಿಕಾ ಕೇಂದ್ರದ ಅಭಿವೃದ್ಧಿ ಹಾಗೂ ಸ್ಥಾಪನೆಯಾಗಲಿರುವ ಕೈಗಾರಿಕೆಗಳ ವಿವರಗಳನ್ನು ನೀಡುವುದು;

ಆ) ಭೂಸ್ವಾಧೀನ ಪ್ರಕ್ರಿಯೆಯ ನಂತರ ಪ್ರತಿ ಎಕರೆ ಜಮೀನಿಗೆ ನಿಗಧಿಯಾದ ಪರಿಹಾರದ ಮೊತ್ತವೆಷ್ಟು;

ಇ) ಸ್ಥಳೀಯರಿಗೆ ಉದ್ಯೋಗಾವಕಾಶಗಳ ಬಗ್ಗೆ ಹಾಗೂ ಜಮೀನು ಕಳೆದುಕೊಂಡಿರುವ ರೈತರಿಗೆ ವಿಶೇಷ ನೆರವನ್ನು ನೀಡಬೇಕೆಂಬುದರ ಬಗ್ಗೆ ಸರ್ಕಾರದ ನಿಲುವೇನು ಹಾಗೂ ಇದಕ್ಕೆ ಪೂರಕವಾಗಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು?

**ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)**

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಕುರುಗಲ್, ಹಾರ್ಜೆನಹಳ್ಳಿ, ಪೆರ್ಜೇನಹಳ್ಳಿ ಮತ್ತು ಶಿಂಗಿಹಳ್ಳಿ ಗ್ರಾಮಗಳ ಒಟ್ಟು 666-16$^{1/4}$ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆಯನ್ನು ದಿನಾಂಕ: 09.09.2011ರಂದು ಹೊರಡಿಸಲಾಗಿದೆ.

ಈ ಪ್ರದೇಶದಲ್ಲಿ 3 ಕಂಪನಿಗಳಿಗೆ ವಿವಿಧ ಕೈಗಾರಿಕೆಗಳನ್ನು ಸ್ಥಾಪಿಸಲು ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ವಿವರಗಳನ್ನು **ಅನುಬಂಧ–1**ರಲ್ಲಿ ನಮೂದಿಸಲಾಗಿದೆ.

2012ರ ಜೂನ್ ತಿಂಗಳಿನಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಲು ನಿರ್ಣಯಿಸಲಾಗಿದೆ. ಈ ಸಮಾವೇಶದಲ್ಲಿ ಹಲವಾರು ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಿದ್ದು, ಈ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಸ್ಥಾಪಿಸಲು ಮುಂದೆ ಬರುವ ಕೈಗಾರಿಕೋದ್ಯಮಿಗಳಿಗೆ ಜಮೀನನ್ನು ಹಂಚಿಕೆ ಮಾಡಲು ಕ್ರಮ ವಹಿಸಲಾಗುವುದು.

ಆ) ದಿನಾಂಕ: 12.12.2011ರಂದು ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಭೂ ದರ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ಎಕರೆ ಒಂದಕ್ಕೆ ₹. 25.00 ಲಕ್ಷದಂತೆ ಭೂ ಪರಿಹಾರ ದರ ನಿಗದಿಪಡಿಸಿರುತ್ತಾರೆ.

ಇ) ಯೋಜನೆ ಮಂಜೂರಾತಿ ಮಾಡುವ ಸಂದರ್ಭದಲ್ಲಿ ಡಾ॥ ಸರೋಜಿನಿ ಮಹಿಷಿ ವರದಿಯ ಪ್ರಕಾರ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡುವಂತೆ ಷರತ್ತನ್ನು ವಿಧಿಸಲಾಗುತ್ತದೆ.

ಭೂಮಿ ಕಳೆದುಕೊಳ್ಳುವ ರೈತರಿಗೆ ಭೂ ಪರಿಹಾರದ ಬದಲಾಗಿ ಪ್ರತಿ ಎಕರೆ ಜಮೀನಿಗೆ ಅಭಿವೃದ್ಧಿಪಡಿಸಿದ 9583 ಚ. ಅಡಿ ಜಮೀನನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

ಭೂ ಪರಿಹಾರದ ಹಣದಿಂದ ಬೇರೆ ಭೂಮಿ ಖರೀದಿ ಮಾಡಿದಾಗ ಮುದ್ರಾಂಕ ಮತ್ತು ನೊಂದಣಿ ಶುಲ್ಕದಲ್ಲಿ ವಿನಾಯಿತಿ ನೀಡಲಾಗುತ್ತದೆ.

## ANNEXURE-1

## SLSWCC APPROVED PROJECTS - VEMAGAL INDUSTRIAL AREA

| SL NO | DBASE NO | UNIT NAME AND ADDRESS | LOCATION | PRODUCTS | MEETING NO | MEETING DATE | POWER | INVESTMENT (Rs. In lakhs) | WATERKL | LAND ALLOT | LAND DETAIL | EMPLOYMENT |
|---|---|---|---|---|---|---|---|---|---|---|---|---|
| 1 | 5315 | SWASTID ENGINEERING PVT. LTD., HOUSE NO.45, VASCON PARADISE, NEAR FOOD BAZAR,BANNER RD,AUNDH,PUNE-4110450 | VEMGAL IA, KOLAR DIST. | PLASTIC MOULDED AUTOMOBILE PARTS | 69 | 3-Dec-11 | 750 | 4700.00 | 2 | 5.00 | KIADB | 105 |
| 2 | 5334 | MASTERCRAFT ENGINEERING PVT. LTD.,NO.126 & 127, 4TH PHASE, BOMMASANDRA IA, JIGANIHOBLI, BANGALORE - 560099 | VEMGAL IA, KOLAR DISTRICT | PLASTIC INJ.MOULD,MOULD PARTS & MOULDED COMPONENTS | 69 | 3-Dec-11 | 500 | 534.00 | 1 | 2.00 | KIADB | 26 |
| 3 | 5370 | KLASSIC WHEELS PVT. LTD., 'BASANT' PL.NO.6&7,OPP.CHANDAN ESTATE,MANIKNAGAR,AHMEDNAGAR (MAHARASTRA)414001 | VEMGAL IA, KOLAR DIST. | WHEEL RIMS & AUTO PARTS | 69 | 3-Dec-11 | 200 | 920.00 | 20 | 3.00 | KIADB | 82 |
| | | | | | | TOTAL | | 6154.00 | | | | 213 |

## ಚಾಮರಾಜನಗರ ಜಿಲ್ಲೆಯಲ್ಲಿನ ಕೆರೆ–ಕಟ್ಟೆ, ರಸ್ತೆ ಮತ್ತು ಕಾಲುವೆಗಳ ಅಭಿವೃದ್ಧಿ ಬಗ್ಗೆ

**259; ಪ್ರೊ|| ಕೆ.ಆರ್. ಮಲ್ಲಿಕಾರ್ಜುನಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** 2009 ರಿಂದ ಚಾಮರಾಜನಗರ ಜಿಲ್ಲೆಯ ಯಾವ – ಯಾವ ತಾಲ್ಲೂಕುಗಳಲ್ಲಿ ಕೆರೆ–ಕಟ್ಟೆ, ರಸ್ತೆ ಮತ್ತು ಕಾಲುವೆಗಳ ಅಭಿವೃದ್ಧಿ ಪಡಿಸಲಾಗಿದೆ; (ತಾಲ್ಲೂಕುವಾರು/ಗ್ರಾಮವಾರು ವಿವರ ನೀಡುವುದು)

**ಆ)** ಇದಕ್ಕಾಗಿ ಅಲ್ಲಿಗೆ ಒದಗಿಸಿರುವ ಅನುದಾನದ ವಿವರ ನೀಡುವುದು;

**ಇ)** ಪೂರ್ಣಗೊಂಡ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ಗ್ರಾಮವಾರು ವಿವರವನ್ನು ನೀಡುವುದು;

**ಈ)** ಕಾಮಗಾರಿ ಮೊತ್ತ, ಕಾಮಗಾರಿ ಗುತ್ತಿಗೆ ನೀಡಿದ ಪ್ರಕ್ರಿಯೆ ಹಾಗೂ ಗುತ್ತಿಗೆದಾರರ ವಿವರ ನೀಡುವುದು;

**ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)**

**ಅ), ಆ), ಇ) ಮತ್ತು ಈ)** ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನು-೨೦೪

ಚಾಮರಾಜನಗರ ಜಿಲ್ಲೆಯಲ್ಲಿನ ಕೆರೆ-ಕಟ್ಟೆ, ರಸೆ ಮತ್ತು ಕಾಲುವೆಗಳ ಅಭಿವೃದ್ಧಿ ಬಗ್ಗೆ. (2009-10) ಲೆಕ್ಕ ಶೀರ್ಷಿಕೆ: 4702 ಆಧುನೀಕರಣ (ರೂ. ಲಕ್ಷಗಳಲ್ಲಿ)

| ಕ್ರ. | ಜಿಲ್ಲೆ | ತಾಲ್ಲೂಕು | ಗ್ರಾಮ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಗುತ್ತಿಗೆ ನೀಡಿದ ಪ್ರಕ್ರಿಯೆ | ಗುತ್ತಿಗೆದಾರರ ವಿವರ | ಪ್ರಸ್ತುತ ಹಂತ |
|---|---|---|---|---|---|---|---|---|
| 1 | ಚಾಮರಾಜನಗರ | ಕೊಳ್ಳೇಗಾಲ | ಗೋಪಿನಾಥಂ | ಗೋಪಿನಾಥಂ ಕೆರೆಯ ಮುಖ್ಯ ಕಾಲುವೆಯ ಅಬಿವೃದ್ಧಿ ಕಾಮಗಾರಿ ಹಾಗೂ ತೂಬುಗಳ ಕಾಮಗಾರಿ | 50.00 | ಟೆಂಡರ್ | ಶ್ರೀ ಅಪ್ಪಾದೊರೈ, 1 ನೇ ದರ್ಜೆ ಗುತ್ತಿಗೆದಾರರು, ಹಳೇಕೋಟೆ, ಕೊಳ್ಳೇಗಾಲ | ಪೂರ್ಣಗೊಂಡಿದೆ |
| 2 | ಚಾಮರಾಜನಗರ | ಕೊಳ್ಳೇಗಾಲ | ಹೂಗ್ಯಂ | ಮಿನ್ನತ್ತುಹಳ್ಳ ಎಡದಂಡೆ ನಾಲೆಯ ವಿತರಣಾ ನಾಲೆಯ ದುರಸ್ಥಿ | 50.00 | ಟೆಂಡರ್ | ಶ್ರೀ ಎಂ.ಬಸವರಾಜು, 1 ನೇ ದರ್ಜೆ ಗುತ್ತಿಗೆದಾರರು, ಬಸಪ್ಪನದೊಡ್ಡಿ, ಕೊಳ್ಳೇಗಾಲ | ಪೂರ್ಣಗೊಂಡಿದೆ |
| 3 | ಚಾಮರಾಜನಗರ | ಚಾಮರಾಜನಗರ | ಹರದನಹಳ್ಳಿ | ಮರಗದ ಕೆರೆ ಪೋಷಕ ನಾಲೆ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ಎಂ.ಆರ್.ಕೇಶವೇಗೌಡ, 1 ನೇ ದರ್ಜೆ ಗುತ್ತಿಗೆದಾರರು, ವಿಜಯನಗರ, ಮೈಸೂರು | ಪೂರ್ಣಗೊಂಡಿದೆ |
| 4 | ಚಾಮರಾಜನಗರ | ಚಾಮರಾಜನಗರ | ನರಸಮಂಗಲ | ನರಸಮಂಗಲ ಕೆರೆ ಏರಿ ಮತ್ತು ನಾಲೆಗಳ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ಎಂ.ಆರ್.ಕೇಶವೇಗೌಡ, 1 ನೇ ದರ್ಜೆ ಗುತ್ತಿಗೆದಾರರು, ವಿಜಯನಗರ, ಮೈಸೂರು | ಪೂರ್ಣಗೊಂಡಿದೆ |
| 5 | ಚಾಮರಾಜನಗರ | ಚಾಮರಾಜನಗರ | ಮಾಲಗೆರೆ | ಮಾಲಗೆರೆ ಕೆರೆ ಏರಿ ಮತ್ತು ಪೋಷಕ ನಾಲೆ ಹಾಗೂ ತೂಬುಗಳ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ಮಹದೇವಪ್ಪ, 1 ನೇ ದರ್ಜೆ ಗುತ್ತಿಗೆದಾರರು, ದಡದಹಳ್ಳಿ, ಚಾಮರಾಜನಗರ | ಪೂರ್ಣಗೊಂಡಿದೆ |
| 6 | ಚಾಮರಾಜನಗರ | ಚಾಮರಾಜನಗರ | ಕೆರೆಹಳಿ | ಕೆರೆಹಳ್ಳಿ ಕೆರೆ ಏರಿ ಮತ್ತು ನಾಲೆಗಳ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ಎಂ.ಆರ್.ಕೇಶವೇಗೌಡ, 1 ನೇ ದರ್ಜೆ ಗುತ್ತಿಗೆದಾರರು, ವಿಜಯನಗರ, ಮೈಸೂರು | ಪೂರ್ಣಗೊಂಡಿದೆ |
| 7 | ಚಾಮರಾಜನಗರ | ಚಾಮರಾಜನಗರ | ಬೆಲ್ಲತ್ತಸಾನೆ | ಬೆಲ್ಲತ್ತಸಾನೆ ಕೆರೆಯ ಎಡ ದಂಡೆ ಹಾಗೂ ಬಲದಂಡೆ ನಾಲೆಗಳ ಅಭಿವೃದ್ಧಿ | 60.00 | ಟೆಂಡರ್ | ಶ್ರೀ ಎಂ.ವೆಂಕಟೇಶ್, 1 ನೇ ದರ್ಜೆ ಗುತ್ತಿಗೆದಾರರು, ಜೆ.ಪಿ.ನಗರ, ಮೈಸೂರು | ಪೂರ್ಣಗೊಂಡಿದೆ |
| 8 | ಚಾಮರಾಜನಗರ | ಚಾಮರಾಜನಗರ | ಹೊಂಗನೂರು | ಹೊಂಗನೂರು ಹಿರೇಕೆರೆ ಬಲದಂಡೆ ನಾಲೆ ಅಬಿವೃದ್ಧಿ | 55.00 | ಟೆಂಡರ್ | ಶ್ರೀ ಹೆಚ್.ಎಂ.ನಾರಾಯಣಮೂರ್ತಿ, 1 ನೇ ದರ್ಜೆ ಗುತ್ತಿಗೆದಾರರು, ನಾಗಮಂಗಲ ಮಂಡ್ಯ | ಪೂರ್ಣಗೊಂಡಿದೆ |
| 9 | ಚಾಮರಾಜನಗರ | ಚಾಮರಾಜನಗರ | ಉಮ್ಮತ್ತೂರು | ಉಮ್ಮತ್ತೂರು ಕೆರೆಯ ಪೋಷಕ ನಾಲೆ ಸಮಗ್ರ ಅಭಿವೃದ್ಧಿ | 100.00 | ಟೆಂಡರ್ | ಶ್ರೀ ಎಸ್.ಗೋಪಾಲರಾಜು., 1 ನೇ ದರ್ಜೆ ಗುತ್ತಿಗೆದಾರರು, ಸಿದ್ಧಾರ್ಥನಗರ, ಮೈಸೂರು | ಪೂರ್ಣಗೊಂಡಿದೆ |
| 10 | ಚಾಮರಾಜನಗರ | ಚಾಮರಾಜನಗರ | ಹೊಂಡರಬಾಳು | ಹೊಂಡರಬಾಳು ಕೆರೆಯಿಂದ ಜ್ಯೋತಿಗೌಡನಪುರ ಕಥಾನಾಯಕನ ಕೆರೆಗೆ ಹೋಗುವ ಪೋಷಕ ಕಾಲುವೆ ಅಭಿವೃದ್ಧಿ ಸರ. 0 ಯಿಂದ 1 ಕಿ.ಮೀ. | 10.00 | ಟೆಂಡರ್ | ಶ್ರೀ ಎಸ್.ವಿದ್ಯಾಧರ, 2 ನೇ ದರ್ಜೆ ಗುತ್ತಿಗೆದಾರರು, ನಂ.70, 1 ನೇ ಕ್ರಾಸ್, 2 ನೇ ಮುಖ್ಯ ರಸ್ತೆ, ಮೈಸೂರು | ಪ್ರಗತಿಯಲ್ಲಿದೆ |
| 11 | ಚಾಮರಾಜನಗರ | ಚಾಮರಾಜನಗರ | ಜ್ಯೋತಿಗೌಡನಪುರ | ಜ್ಯೋತಿಗೌಡನಪುರ ಕಥಾನಾಯಕನ ಕೆರೆ ಏರಿ ಮತ್ತು ನಾಲೆಗಳ ದುರಸ್ತಿ | 30.00 | ಟೆಂಡರ್ | ಶ್ರೀ ಮಹದೇವಪ್ಪ, 1 ನೇ ದರ್ಜೆ ಗುತ್ತಿಗೆದಾರರು, ಚಾಮರಾಜನಗರ | ಪೂರ್ಣಗೊಂಡಿದೆ |
| 12 | ಚಾಮರಾಜನಗರ | ಚಾಮರಾಜನಗರ | ಹೊಂಡರಬಾಳು | ಹೊಂಡರಬಾಳು ಕೆರೆ ಏರಿ ದುರಸ್ತಿ | 49.50 | ಟೆಂಡರ್ | ಶ್ರೀ ಎನ್.ಕೋಟಾರೆಡ್ಡಿ, 1 ನೇ ದರ್ಜೆ ಗುತ್ತಿಗೆದಾರರು, ಜೆ.ಪಿ.ನಗರ, ಮೈಸೂರು | ಪೂರ್ಣಗೊಂಡಿದೆ |
| 13 | ಚಾಮರಾಜನಗರ | ಚಾಮರಾಜನಗರ | ಹರದನಹಳ್ಳಿ | ಮರಗದ ಕೆರೆಯ ಏರಿ ದುರಸ್ತಿ | 9.80 | ಟೆಂಡರ್ | ಶ್ರೀ ಎಂ.ಆರ್.ಕೇಶವೇಗೌಡ, 1 ನೇ ದರ್ಜೆ ಗುತ್ತಿಗೆದಾರರು, ವಿಜಯನಗರ, ಮೈಸೂರು | ಪ್ರಗತಿಯಲ್ಲಿದೆ |

| ಕ್ರ ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಗುತ್ತಿಗೆ ನೀಡಿದ ಪ್ರಕ್ರಿಯೆ | ಗುತ್ತಿಗೆದಾರರ ವಿವರ | ಪ್ರಸ್ತುತ ಹಂತ |
|---|---|---|---|---|---|---|---|---|
| 14 | ಚಾಮರಾಜನಗರ | ಚಾಮರಾಜನಗರ | ನರಸಮಂಗಲ | ನರಸಮಂಗಲ ಫೀಡರ್ ನಾಲೆ ದುರಸ್ತಿ | 14.70 | ಟೆಂಡರ್ | ಶ್ರೀ ಬಂಗಾರು, 2 ನೇ ದರ್ಜೆ ಗುತ್ತಿಗೆದಾರರು, ಹರದನಹಳ್ಳಿ, ಚಾಮರಾಜನಗರ | ಪೂರ್ಣಗೊಂಡಿದೆ |
| 15 | ಚಾಮರಾಜನಗರ | ಚಾಮರಾಜನಗರ | ಮೂಕನಪಾಳ್ಯ | ಮೂಕನಪಾಳ್ಯ ಕೆರೆಯ ಅಪ್ರೋಚ್ ನಾಲೆ ದುರಸ್ತಿ | 15.00 | ಟೆಂಡರ್ | ಶ್ರೀ ಎಸ್.ಬಸವರಾಜು, 1 ನೇ ದರ್ಜೆ ಗುತ್ತಿಗೆದಾರರು, ಹುಣಸೂರು | ಪ್ರಗತಿಯಲ್ಲಿದೆ |
| 16 | ಚಾಮರಾಜನಗರ | ಚಾಮರಾಜನಗರ | ಮೂಕನಪಾಳ್ಯ | ಮೂಕನಪಾಳ್ಯ ಕೆರೆಯ ಎಡದಂಡೆ ನಾಲೆ ಅಭಿವೃದ್ಧಿ | 10.00 | ಟೆಂಡರ್ | ಶ್ರೀ ಪಿ.ರಂಗಾರೆಡ್ಡಿ, 1 ನೇ ದರ್ಜೆ ಗುತ್ತಿಗೆದಾರರು, ಟಿ.ನರಸೀಪುರ | ಪೂರ್ಣಗೊಂಡಿದೆ |
| 17 | ಚಾಮರಾಜನಗರ | ಚಾಮರಾಜನಗರ | ಮಾಲಗೆರೆ | ಮಾಲಗೆರೆ ಕೆರೆ ಏರಿ ಹಾಗೂ ನಾಲೆ ಅಭಿವೃದ್ಧಿ | 15.00 | ಟೆಂಡರ್ | ಶ್ರೀ ಪಿ.ಹೆಚ್.ರಾಜೇಗೌಡ, 1 ನೇ ದರ್ಜೆ ಗುತ್ತಿಗೆದಾರರು, ಕೆ.ಎನ್.ಪುರ ಬಡಾವಣೆ, ಮೈಸೂರು | ಪೂರ್ಣಗೊಂಡಿದೆ |
| 18 | ಚಾಮರಾಜನಗರ | ಚಾಮರಾಜನಗರ | ದೊಡ್ಡರಾಯಪೇಟೆ | ದೊಡ್ಡರಾಯಪೇಟೆ ಕೆರೆ ಏರಿ ಹಾಗೂ ನಾಲೆ ಅಭಿವೃದ್ಧಿ | 14.80 | ಟೆಂಡರ್ | ಶ್ರೀ ಕೆ.ಎ.ಡಿ.ಅಬ್ರಹಾಂ, 1 ನೇ ದರ್ಜೆ ಗುತ್ತಿಗೆದಾರರು, ಜೆ.ಪಿ.ನಗರ, ಮೈಸೂರು | ಪೂರ್ಣಗೊಂಡಿದೆ |
| 19 | ಚಾಮರಾಜನಗರ | ಚಾಮರಾಜನಗರ | ಹೊಂಗನೂರು | ಹೊಂಗನೂರು ಹಿರೇಕೆರೆ ಏರಿ ಅಭಿವೃದ್ಧಿ | 20.00 | ಟೆಂಡರ್ | ಶ್ರೀ ರಾಮೇಗೌಡ, 1 ನೇ ದರ್ಜೆ ಗುತ್ತಿಗೆದಾರರು, ಕುವೆಂಪುನಗರ, ಮೈಸೂರು | ಪೂರ್ಣಗೊಂಡಿದೆ |
| 20 | ಚಾಮರಾಜನಗರ | ಚಾಮರಾಜನಗರ | ಕೆಂಪನಪುರ | ಕೆಂಪನಪುರ ಕೆರೆಯ ಏರಿ ಅಭಿವೃದ್ಧಿ | 10.00 | ಟೆಂಡರ್ | ಶ್ರೀ ಎಸ್.ಕೃಷ್ಣ, 1 ನೇ ದರ್ಜೆ ಗುತ್ತಿಗೆದಾರರು, ಟಿ.ಕೆ.ಬಡಾವಣೆ, ಮೈಸೂರು | ಪೂರ್ಣಗೊಂಡಿದೆ |
| 21 | ಚಾಮರಾಜನಗರ | ಚಾಮರಾಜನಗರ | ಮಂಗಳ | ಎಡಿಯೂರ ಅಡ್ಡಹಳ್ಳ ಕೆರೆ ಏರಿ ಅಭಿವೃದ್ಧಿ | 10.00 | ಟೆಂಡರ್ | ಶ್ರೀ ಎ.ಚನ್ನಕೃಷ್ಣಯ್ಯ, 1 ನೇ ದರ್ಜೆ ಗುತ್ತಿಗೆದಾರರು, ಯರಗನಹಳ್ಳಿ, ಮೈಸೂರು | ಪೂರ್ಣಗೊಂಡಿದೆ |
| 22 | ಚಾಮರಾಜನಗರ | ಚಾಮರಾಜನಗರ | ಕೋಡಿಮೋಳೆ | ಕೋಡಿಮೋಳೆ ಕೆರೆಯ ಏರಿ ಅಭಿವೃದ್ಧಿ | 15.00 | ಟೆಂಡರ್ | ಶ್ರೀ ಕೆ.ಮೋಹನ್, 2 ನೇ ದರ್ಜೆ ಗುತ್ತಿಗೆದಾರರು, ಕುವೆಂಪುನಗರ, ಮೈಸೂರು | ಪ್ರಗತಿಯಲ್ಲಿದೆ |
| 23 | ಚಾಮರಾಜನಗರ | ಚಾಮರಾಜನಗರ | ಯರಗನಹಳ್ಳಿ | ಯರಗನಹಳ್ಳಿ ಕೆರೆ ಏರಿ ಅಭಿವೃದ್ಧಿ | 10.00 | ಟೆಂಡರ್ | ಶ್ರೀ ಅಂಕಿರೆಡ್ಡಿ, 1 ನೇ ದರ್ಜೆ ಗುತ್ತಿಗೆದಾರರು, ಜೆ.ಪಿ.ನಗರ, ಮೈಸೂರು | ಪೂರ್ಣಗೊಂಡಿದೆ |
| 24 | ಚಾಮರಾಜನಗರ | ಚಾಮರಾಜನಗರ | ಅಮಚವಾಡಿ | ಅಮಚವಾಡಿ ಕೆರೆ ಏರಿ ಅಭಿವೃದ್ಧಿ | 11.40 | ಟೆಂಡರ್ | ಶ್ರೀ ಎಸ್.ಚೇತನ್, 1 ನೇ ದರ್ಜೆ ಗುತ್ತಿಗೆದಾರರು, ಗುಂಡ್ಲುಪೇಟೆ | ಪೂರ್ಣಗೊಂಡಿದೆ |
| 25 | ಚಾಮರಾಜನಗರ | ಚಾಮರಾಜನಗರ | ಕೆಂಪನಪುರ | ಕೆಂಪನಪುರ ಕೆರೆಯ ಫೀಡರ್ ಕಾಲುವೆ ಅಭಿವೃದ್ಧಿ | 9.90 | ಟೆಂಡರ್ | ಶ್ರೀ ಸಿ.ಎನ್.ರಾಜೇಶ್, 1 ನೇ ದರ್ಜೆ ಗುತ್ತಿಗೆದಾರರು, ಚಾಮರಾಜನಗರ | ಪೂರ್ಣಗೊಂಡಿದೆ |
| 26 | ಚಾಮರಾಜನಗರ | ಕೊಳ್ಳೇಗಾಲ | ಬೂದಿಪಡಗ | ಕೌಲಿಹಳ್ಳ ಕೆರೆಯ ಏರಿ ತೂಬುಗಳು ಹಾಗೂ ಕಾಲುವೆಯ ದುರಸ್ತಿ | 17.00 | ಟೆಂಡರ್ | ಶ್ರೀ ಎನ್.ಕಾಮರಾಜ್, 1 ನೇ ದರ್ಜೆ ಗುತ್ತಿಗೆದಾರರು, ಪಿ.ಜಿ.ಪಾಳ್ಯ, ಕೊಳ್ಳೇಗಾಲ | ಪ್ರಗತಿಯಲ್ಲಿದೆ |
| 27 | ಚಾಮರಾಜನಗರ | ಕೊಳ್ಳೇಗಾಲ | ಬೂದಿಪಡಗ | ಕೌಲಿಹಳ್ಳ ಕೆರೆಯ ನಾಲೆಗಳ ಅಭಿವೃದ್ಧಿ ಹಾಗೂ ದುರಸ್ತಿ | 29.25 | ಟೆಂಡರ್ | ಶ್ರೀ ಎಸ್.ಶಿವಸ್ವಾಮಿ, 1 ನೇ ದರ್ಜೆ ಗುತ್ತಿಗೆದಾರರು, ಕೊಳ್ಳೇಗಾಲ | ಪೂರ್ಣಗೊಂಡಿದೆ |
| 28 | ಚಾಮರಾಜನಗರ | ಕೊಳ್ಳೇಗಾಲ | ಮಾರ್ಟಳ್ಳಿ | ಮಾರ್ಟಳ್ಳಿ ಕೆರೆಯ ನಾಲೆಗಳ ಅಭಿವೃದ್ಧಿ | 30.00 | ಟೆಂಡರ್ | ಶ್ರೀ ಎಂ.ಎಸ್.ಗಜೇಂದ್ರ, 1 ನೇ ದರ್ಜೆ ಗುತ್ತಿಗೆದಾರರು, ರಾಮಾಪುರ, ಕೊಳ್ಳೇಗಾಲ | ಪೂರ್ಣಗೊಂಡಿದೆ |

| ಕ್ರ ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಗುತ್ತಿಗೆ ನೀಡಿದ ಪ್ರಕ್ರಿಯೆ | ಗುತ್ತಿಗೆದಾರರ ವಿವರ | ಪ್ರಸ್ತುತ ಹಂತ |
|---|---|---|---|---|---|---|---|---|
| 29 | ಚಾಮರಾಜನಗರ | ಯಳಂದೂರು | ಗೌಡಳ್ಳಿ | ಗೌಡಳ್ಳಿ ಹಳೆ ಕೆರೆಅಭಿವೃದ್ಧಿ | 9.95 | ಟೆಂಡರ್ | ಶ್ರೀ ಡಿ.ನಾಗರಾಜು, 1 ನೇ ದರ್ಜೆ ಗುತ್ತಿಗೆದಾರರು, ರಾಮಾಪುರ, ಕೊಳ್ಳೇಗಾಲ | ಪೂರ್ಣಗೊಂಡಿದೆ |
| 30 | ಚಾಮರಾಜನಗರ | ಗುಂಡ್ಲುಪೇಟೆ | ಬೊಮ್ಮಲಾಪುರ | ಬೊಮ್ಮಲಾಪುರ ಕೆರೆ ಅಭಿವೃದ್ಧಿ | 50.00 | ಟೆಂಡರ್ | ಶ್ರೀ ಯು.ಮನೋಜ್‌ಕುಮಾರ್, 1 ನೇ ದರ್ಜೆ ಗುತ್ತಿಗೆದಾರರು, ಗುಂಡ್ಲುಪೇಟೆ | ಪೂರ್ಣಗೊಂಡಿದೆ |
| 31 | ಚಾಮರಾಜನಗರ | ಗುಂಡ್ಲುಪೇಟೆ | ಮೂಡಗೂರು | ಮೂಡಗೂರು ಕೆರೆ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ಎನ್.ಕೋಟಾರೆಡ್ಡಿ, 1 ನೇ ದರ್ಜೆ ಗುತ್ತಿಗೆದಾರರು, ಜೆ.ಪಿ.ನಗರ, ಮೈಸೂರು | ಪೂರ್ಣಗೊಂಡಿದೆ |
| 32 | ಚಾಮರಾಜನಗರ | ಗುಂಡ್ಲುಪೇಟೆ | ಭರಗಿ | ಭರಗಿ ಕೆರೆಯ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ಎಸಿ.ಎಚ್.ರಾಮರೆಡ್ಡಿ, 1 ನೇ ದರ್ಜೆ ಗುತ್ತಿಗೆದಾರರು, ಜೆ.ಪಿ.ನಗರ, ಮೈಸೂರು | ಪೂರ್ಣಗೊಂಡಿದೆ |
| 33 | ಚಾಮರಾಜನಗರ | ಗುಂಡ್ಲುಪೇಟೆ | ದೇವಲಾಪುರ | ದೇವಲಾಪುರ ಕೆರೆಯ ಕಾಲುವೆಗಳ ರಕ್ಷಣಾ ಕಾಮಗಾರಿ | 19.50 | ಟೆಂಡರ್ | ಶ್ರೀ ಮನೋಜ್‌ಕುಮಾರ್, 1 ನೇ ದರ್ಜೆ ಗುತ್ತಿಗೆದಾರರು, ಗುಂಡ್ಲುಪೇಟೆ | ಪೂರ್ಣಗೊಂಡಿದೆ |
| 34 | ಚಾಮರಾಜನಗರ | ಗುಂಡ್ಲುಪೇಟೆ | ಹೊನ್ನೇಗೌಡನಹಳ್ಳಿ | ಹೊನ್ನೇಗೌಡನಹಳ್ಳಿ ಕೆರೆಯ ಅಭಿವೃದ್ಧಿ | 18.80 | ಟೆಂಡರ್ | ಶ್ರೀ ಯು.ಮನೋಜ್‌ಕುಮಾರ್, 1 ನೇ ದರ್ಜೆ ಗುತ್ತಿಗೆದಾರರು, ಗುಂಡ್ಲುಪೇಟೆ | ಪೂರ್ಣಗೊಂಡಿದೆ |
| 35 | ಚಾಮರಾಜನಗರ | ಗುಂಡ್ಲುಪೇಟೆ | ಹೊಸಪುರ | ಹೊಸಪುರ ಕೆರೆ ಅಭಿವೃದ್ಧಿ. | 20.00 | ಟೆಂಡರ್ | ಶ್ರೀ ಎಸ್.ಬಸವರಾಜು, 1 ನೇ ದರ್ಜೆ ಗುತ್ತಿಗೆದಾರರು, ಹುಣಸೂರು | ಪೂರ್ಣಗೊಂಡಿದೆ |
| 36 | ಚಾಮರಾಜನಗರ | ಗುಂಡ್ಲುಪೇಟೆ | ವಡೆಯನಪುರ | ವಡೆಯನಪುರ ಬಸವನಕಟ್ಟೆ ಅಭಿವೃದ್ಧಿ. | 15.00 | ಟೆಂಡರ್ | ಶ್ರೀ ಎ.ಎಂ.ಮಹದೇವ, 1 ನೇ ದರ್ಜೆ ಗುತ್ತಿಗೆದಾರರು, ಬಸಪ್ಪನದೊಡ್ಡಿ, ಕೊಳ್ಳೇಗಾಲ | ಪೂರ್ಣಗೊಂಡಿದೆ |
| 37 | ಚಾಮರಾಜನಗರ | ಗುಂಡ್ಲುಪೇಟೆ | ಕಲ್ಕಟ್ಟೆ | ಕಲ್ಕಟ್ಟೆ ಕೆರೆ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ವಿ.ದಿನೇಶ್, 1 ನೇ ದರ್ಜೆ ಗುತ್ತಿಗೆದಾರರು, ಕುವೆಂಪುನಗರ, ಮೈಸೂರು | ಪೂರ್ಣಗೊಂಡಿದೆ |
| 38 | ಚಾಮರಾಜನಗರ | ಗುಂಡ್ಲುಪೇಟೆ | ವಿಜಯಪುರ | ವಿಜಯಪುರ ಅಮಾನಿ ಕೆರೆಯ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ವಿ.ದಿನೇಶ್, 1 ನೇ ದರ್ಜೆ ಗುತ್ತಿಗೆದಾರರು, ಕುವೆಂಪುನಗರ, ಮೈಸೂರು | ಪೂರ್ಣಗೊಂಡಿದೆ |
| 39 | ಚಾಮರಾಜನಗರ | ಕೊಳ್ಳೇಗಾಲ | ಶಿವನಸಮುದ್ರ | ಜಗೀರ್‌ದಾರ್ ಅಣೆಕಟ್ಟು 7 ಅಣೆಕಟ್ಟೆಯ ಹಾಗೂ ನಾಲೆಗಳ ದುರಸ್ಥಿ | 40.00 | ಟೆಂಡರ್ | ಶ್ರೀ ಬಿ.ವೆಂಕಟೇಶ್, 1 ನೇ ದರ್ಜೆ ಗುತ್ತಿಗೆದಾರರು, ಜೆ.ಪಿ.ನಗರ, ಮೈಸೂರು | ಪೂರ್ಣಗೊಂಡಿದೆ |
| 40 | ಚಾಮರಾಜನಗರ | ಚಾಮರಾಜನಗರ | ದೊಡ್ಡರಾಪೇಟೆ | ದೊಡ್ಡರಾಪೇಟೆ ಕೆರೆ ಏರಿ ಅಭಿವೃದ್ಧಿ | 5.00 | ತುಂಡು ಗುತ್ತಿಗೆ | ಶ್ರೀ ಹೆಚ್.ಸುರೇಶ್, 1 ನೇ ದರ್ಜೆ ಗುತ್ತಿಗೆದಾರರು, ಆಲತ್ತೂರು ಗ್ರಾಮ, ನಂಜನಗೂಡು ತಾ: | ಪೂರ್ಣಗೊಂಡಿದೆ |
| 41 | ಚಾಮರಾಜನಗರ | ಚಾಮರಾಜನಗರ | ಮರಗದ | ಮರಗದ ಕೆರೆ ಏರಿ ಅಭಿವೃದ್ಧಿ | 5.00 | ತುಂಡು ಗುತ್ತಿಗೆ | ಶ್ರೀ ಹೆಚ್.ಸುರೇಶ್, 1 ನೇ ದರ್ಜೆ ಗುತ್ತಿಗೆದಾರರು, ಆಲತ್ತೂರು ಗ್ರಾಮ, ನಂಜನಗೂಡು ತಾ: | ಪೂರ್ಣಗೊಂಡಿದೆ |

| ಕ್ರ ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಗುತ್ತಿಗೆ ನೀಡಿದ ಪ್ರಕ್ರಿಯೆ | ಗುತ್ತಿಗೆದಾರರ ವಿವರ | ಪ್ರಸ್ತುತ ಹಂತ |
|---|---|---|---|---|---|---|---|---|
| 42 | ಚಾಮರಾಜನಗರ | ಗುಂಡ್ಲುಪೇಟೆ | ಕೂತನೂರು | ಕೂತನೂರು ಕೆರೆ ಏರಿ ಅಭಿವೃದ್ಧಿ | 5.00 | ತುಂಡು ಗುತ್ತಿಗೆ | ಶ್ರೀ ಹೆಚ್.ಸುರೇಶ್, 1 ನೇ ದರ್ಜೆ ಗುತ್ತಿಗೆದಾರರು, ಆಲತ್ತೂರು ಗ್ರಾಮ, ನಂಜನಗೂಡು ತಾ: | ಪೂರ್ಣಗೊಂಡಿದೆ |
| 43 | ಚಾಮರಾಜನಗರ | ಗುಂಡ್ಲುಪೇಟೆ | ಉತ್ತೂರು | ಉತ್ತೂರು ಕೆರೆ ಏರಿ ಅಭಿವೃದ್ಧಿ | 5.00 | ತುಂಡು ಗುತ್ತಿಗೆ | ಶ್ರೀ ಹೆಚ್.ಸುರೇಶ್, 1 ನೇ ದರ್ಜೆ ಗುತ್ತಿಗೆದಾರರು, ಆಲತ್ತೂರು ಗ್ರಾಮ, ನಂಜನಗೂಡು ತಾ: | ಪೂರ್ಣಗೊಂಡಿದೆ |
| 44 | ಚಾಮರಾಜನಗರ | ಗುಂಡ್ಲುಪೇಟೆ | ಕುರುಬರಹುಂಡಿ | ಕುರುಬರಹುಂಡಿ ಕೆರೆ ಏರಿ ಅಭಿವೃದ್ಧಿ | 5.00 | ತುಂಡು ಗುತ್ತಿಗೆ | ಶ್ರೀ ಹೆಚ್.ಸುರೇಶ್, 1 ನೇ ದರ್ಜೆ ಗುತ್ತಿಗೆದಾರರು, ಆಲತ್ತೂರು ಗ್ರಾಮ, ನಂಜನಗೂಡು ತಾ: | ಪೂರ್ಣಗೊಂಡಿದೆ |
| 45 | ಚಾಮರಾಜನಗರ | ಯಳಂದೂರು | ಗೌಡಹಳ್ಳಿ | ಗೌಡಹಳ್ಳಿ ಹೊಸ ಕೆರೆ ಅಭಿವೃದ್ಧಿ | 10.00 | ಟೆಂಡರ್ | ಶ್ರೀ ಪಿ.ಹೆಚ್.ರಾಜೇಗೌಡ, 1 ನೇ ದರ್ಜೆ ಗುತ್ತಿಗೆದಾರರು, ಕೆ.ಎನ್.ಪುರ ಬಡಾವಣೆ, ಮೈಸೂರು | ಪೂರ್ಣಗೊಂಡಿದೆ |
| 46 | ಚಾಮರಾಜನಗರ | ಕೊಳ್ಳೇಗಾಲ | ತಿಮ್ಮರಾಜಪುರ | ಕೋಟೆಕೆರೆ ಪಿಕಪ್ ಅಭಿವೃದ್ಧಿ | 10.00 | ಟೆಂಡರ್ | ಶ್ರೀ ಎಂ.ಮಹೇಸ್, 2 ನೇ ದರ್ಜೆ ಗುತ್ತಿಗೆದಾರರು, ಹೊಂಡರಬಾಳು, ಕೊಳ್ಳೇಗಾಲ | ಪೂರ್ಣಗೊಂಡಿದೆ |
| 47 | ಚಾಮರಾಜನಗರ | ಯಳಂದೂರು | ಗಣಗನೂರು | ಗಣಗನೂರು ಕೆರೆ ಅಭಿವೃದ್ಧಿ | 20.00 | ಟೆಂಡರ್ | ಶ್ರೀ ಸಿ.ಪಿತಾಂಬರರಾಜು, 1 ನೇ ದರ್ಜೆ ಗುತ್ತಿಗೆದಾರರು, ಹಿನಕಲ್, ಮೈಸೂರು | ಪೂರ್ಣಗೊಂಡಿದೆ |
| 48 | ಚಾಮರಾಜನಗರ | ಚಾಮರಾಜನಗರ | ಕೆರೆಹಳ್ಳಿ | ಕೆರೆಹಳ್ಳಿ ಕೆರೆ ಫೀಡರ್ ಕಾಲುವೆ ಅಭಿವೃದ್ಧಿ | 15.00 | ಟೆಂಡರ್ | ಶ್ರೀ ಶಂಕರ್‌ನಾಯ್ಕ, 1 ನೇ ದರ್ಜೆ ಗುತ್ತಿಗೆದಾರರು, ನಂಜನಗೂಡು | ಪೂರ್ಣಗೊಂಡಿದೆ |
| 49 | ಚಾಮರಾಜನಗರ | ಚಾಮರಾಜನಗರ | ಅಮಚವಾಡಿ | ಆಮಚವಾಡಿ ಕೆರೆ ಕೋಡಿ ಅಭಿವೃದ್ಧಿ | 20.00 | ಟೆಂಡರ್ | ಶ್ರೀ ಪಿ.ರಂಗಾರೆಡ್ಡಿ, 1 ನೇ ದರ್ಜೆ ಗುತ್ತಿಗೆದಾರರು, ಟಿ.ನರಸೀಪುರ | ಪೂರ್ಣಗೊಂಡಿದೆ |
| 50 | ಚಾಮರಾಜನಗರ | ಚಾಮರಾಜನಗರ | ಮಾಲಗೆರೆ | ಮಾಲಗೆರೆ ಕೆರೆ ಫೀಡರ್ ಕಾಲುವೆ ಏರಿ ಹಾಗೂ ನಾಲೆ ಅಭಿವೃದ್ಧಿ | 20.00 | ಟೆಂಡರ್ | ಶ್ರೀ ಕೆ.ಬಿ.ಕುಮಾರ್, 1 ನೇ ದರ್ಜೆ ಗುತ್ತಿಗೆದಾರರು, ಸಿದ್ಧಾರ್ಥನಗರ, ಮೈಸೂರು | ಪೂರ್ಣಗೊಂಡಿದೆ |
| 51 | ಚಾಮರಾಜನಗರ | ಚಾಮರಾಜನಗರ | ನರಸಮಂಗಲ | ಮೂರುತೂಬಿನ ಕೆರೆ ಅಭಿವೃದ್ಧಿ | 20.00 | ಟೆಂಡರ್ | ಶ್ರೀ ಎಸ್.ಮಹದೇವ್, 1 ನೇ ದರ್ಜೆ ಗುತ್ತಿಗೆದಾರರು, ರಾಮಾಪುರ, ಕೊಳ್ಳೇಗಾಲ | ಪೂರ್ಣಗೊಂಡಿದೆ |
| 52 | ಚಾಮರಾಜನಗರ | ಗುಂಡ್ಲುಪೇಟೆ | ಗೋಪಾಲಪುರ | ಗೋಪಾಲಪುರ ಕೆರೆ ಕಾಲುವೆ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ಹೆಚ್.ಡಿ.ಕೃಷ್ಣಪ್ಪ, 1 ನೇ ದರ್ಜೆ ಗುತ್ತಿಗೆದಾರರು, ಚನ್ನರಾಯಪಟ್ಟಣ | ಪ್ರಗತಿಯಲ್ಲಿದೆ |
| 53 | ಚಾಮರಾಜನಗರ | ಗುಂಡ್ಲುಪೇಟೆ | ಮುಡುಗೂರು | ಮುಡುಗೂರು ಕೆರೆ ಕಾಲುವೆ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ಪಿ.ಸಿ.ಬಸಪ್ಪ, 2 ನೇ ದರ್ಜೆ ಗುತ್ತಿಗೆದಾರರು, ಗುಂಡ್ಲುಪೇಟೆ | ಪ್ರಗತಿಯಲ್ಲಿದೆ |
| 54 | ಚಾಮರಾಜನಗರ | ಗುಂಡ್ಲುಪೇಟೆ | ಬೊಮ್ಮಲಾಪುರ | ಬೊಮ್ಮಲಾಪುರ ಕೆರೆ ಕಾಲುವೆ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ಜಗದೀಸ್, 1 ನೇ ದರ್ಜೆ ಗುತ್ತಿಗೆದಾರರು, ಗುಂಡ್ಲುಪೇಟೆ | ಪೂರ್ಣಗೊಂಡಿದೆ |

| ಕ್ರ ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಗುತ್ತಿಗೆ ನೀಡಿದ ಪ್ರಕ್ರಿಯೆ | ಗುತ್ತಿಗೆದಾರರ ವಿವರ | ಪ್ರಸ್ತುತ ಹಂತ |
|---|---|---|---|---|---|---|---|---|
| 55 | ಚಾಮರಾಜನಗರ | ಗುಂಡ್ಲುಪೇಟೆ | ತಿಮ್ಮರಾಜಪುರ | ಕೋಟೆ ಕೆರೆ ಅಭಿವೃದ್ಧಿ | 45.00 | ಟೆಂಡರ್ | ಶ್ರೀ ಶಿವಸ್ವಾಮಿ, 1 ನೇ ದರ್ಜೆ ಗುತ್ತಿಗೆದಾರರು, ಕೊಳ್ಳೇಗಾಲ | ಪೂರ್ಣಗೊಂಡಿದೆ |
| 56 | ಚಾಮರಾಜನಗರ | ಚಾಮರಾಜನಗರ | ಗುಂಡಾಪುರ | ಉಡುತೊರೆ ಹಳ್ಳ ಪಿಕಪ್ ಕಾಲುವೆ ಅಭಿವೃದ್ಧಿ | 23.75 | ಟೆಂಡರ್ | ಶ್ರೀ ಆರ್.ನೀಲಿಸಿದ್ಧ, 2 ನೇ ದರ್ಜೆ ಗುತ್ತಿಗೆದಾರರು, ಅಜ್ಜೀಪುರ, ಕೊಳ್ಳೇಗಾಲ | ಪೂರ್ಣಗೊಂಡಿದೆ |
| 57 | ಚಾಮರಾಜನಗರ | ಕೊಳ್ಳೇಗಾಲ | ಹೂಗ್ಯಂ | ಮಿನತು ಹಳ್ಳ ಕೆರೆ ಏರಿ ಹಾಗೂ ನಾಲೆ ದುರಸ್ತಿ | 25.00 | ಟೆಂಡರ್ | ಶ್ರೀ ಪಿ.ರಾಜು, 2 ನೇ ದರ್ಜೆ ಗುತ್ತಿಗೆದಾರರು, ಗುಂಡಾಪುರ, ಕೊಳ್ಳೇಗಾಲ | ಪ್ರಗತಿಯಲ್ಲಿದೆ |
| 58 | ಚಾಮರಾಜನಗರ | ಯಳಂದೂರು | ಗೌಡಹಳ್ಳಿ | ಗೌಡಹಳ್ಳಿ ಹಳೆ ಕೆರೆ ಅಭಿವೃದ್ಧಿ | 15.00 | ಟೆಂಡರ್ | ಶ್ರೀ ಎ.ಚನ್ನಕೃಷ್ಣಯ್ಯ, 1 ನೇ ದರ್ಜೆ ಗುತ್ತಿಗೆದಾರರು, ಮೈಸೂರು | ಪೂರ್ಣಗೊಂಡಿದೆ |
| 59 | ಚಾಮರಾಜನಗರ | ಕೊಳ್ಳೇಗಾಲ | ಗೋಪಿನಾಥಂ | ಗೋಪಿನಾಥಂ ಕೆರೆ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ಅಪ್ಪಾದೊರೈ, 1 ನೇ ದರ್ಜೆ ಗುತ್ತಿಗೆದಾರರು, ಹಳೇಕೋಟೆ, ಕೊಳ್ಳೇಗಾಲ | ಪೂರ್ಣಗೊಂಡಿದೆ |
| 60 | ಚಾಮರಾಜನಗರ | ಕೊಳ್ಳೇಗಾಲ | ಶಿವನಸಮುದ್ರ | ಜಾಗೀರ್‌ದಾರ್ ಏಳು ಅಣೆಕಟ್ಟು ಕಾಲುವೆಗಳ ಅಭಿವೃದ್ಧಿ | 25.00 | ಟೆಂಡರ್ | ಶ್ರೀ ಶಿವಸ್ವಾಮಿ, 1 ನೇ ದರ್ಜೆ ಗುತ್ತಿಗೆದಾರರು, ಕೊಳ್ಳೇಗಾಲ | ಪ್ರಗತಿಯಲ್ಲಿದೆ |
| 61 | ಚಾಮರಾಜನಗರ | ಕೊಳ್ಳೇಗಾಲ | ಉದ್ದಟ್ಟಿ | ಮಸ್ಕತ್ತಿ ಪಿಕಪ್ ನಾಲೆ ಅಭಿವೃದ್ಧಿ | 8.00 | ಟೆಂಡರ್ | ಶ್ರೀ ಎಂ.ಮಹದೇವಯ್ಯ, 2 ನೇ ದರ್ಜೆ ಗುತ್ತಿಗೆದಾರರು, ಮೈಸೂರು | ಪೂರ್ಣಗೊಂಡಿದೆ |
| 62 | ಚಾಮರಾಜನಗರ | ಚಾಮರಾಜನಗರ | ಮೂಕನಪಾಳ್ಯ | ಮೂಕನಪಾಳ್ಯ ಕೆರೆ ಹಾಗೂ ಕಾಲುವೆ ಅಭಿವೃದ್ಧಿ ಕಾಮಗಾರಿ. | 8.00 | ಟೆಂಡರ್ | ಶ್ರೀ ಎಸ್.ಆರ್.ಶರತ್‌ಚಂದ್ರಬಾಬು, 3 ನೇ ದರ್ಜೆ ಗುತ್ತಿಗೆದಾರರು, ಶ್ರೀರಂಗಪಟ್ಟಣ | ಪೂರ್ಣಗೊಂಡಿದೆ |
| | **4702 ಕೆರೆಗಳ ದುರಸ್ಥಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ (2010-11)** | | | | | | | |
| 63 | ಚಾಮರಾಜನಗರ | ಗುಂಡ್ಲುಪೇಟೆ | ಕುರುಬರ ಹುಂಡಿ | ಕುರುಬರಹುಂಡಿ ಕೆರೆ ಏರಿ ಅಭಿವೃದ್ಧಿ | 29.50 | ಟೆಂಡರ್ | ಶ್ರೀ ಸಿ.ಕರೀಗೌಡ, 1 ನೇ ದರ್ಜೆ ಗುತ್ತಿಗೆದಾರರು, ಮೈಸೂರು | |
| 64 | ಚಾಮರಾಜನಗರ | ಗುಂಡ್ಲುಪೇಟೆ | ಕಳ್ಳೀಪುರ | ಕಳ್ಳಿಪುರ ಕೆರೆ ಅಭಿವೃದ್ಧಿ | 44.00 | ಟೆಂಡರ್ | ಶ್ರೀ ಸಿ.ಕರೀಗೌಡ, 1 ನೇ ದರ್ಜೆ ಗುತ್ತಿಗೆದಾರರು, ಮೈಸೂರು | |
| 65 | ಚಾಮರಾಜನಗರ | ಗುಂಡ್ಲುಪೇಟೆ | ರಾಘವಪುರ | ರಾಘವಪುರ ಕೆರೆ ಅಭಿವೃದ್ಧಿ | 35.70 | ಟೆಂಡರ್ | ಶ್ರೀ ಸಿ.ಕರೀಗೌಡ, 1 ನೇ ದರ್ಜೆ ಗುತ್ತಿಗೆದಾರರು, ಮೈಸೂರು | |
| 66 | ಚಾಮರಾಜನಗರ | ಗುಂಡ್ಲುಪೇಟೆ | ಬರಗಿ | ಬರಗಿ ಕೆರೆ ಅಭಿವೃದ್ಧಿ | 42.50 | ಟೆಂಡರ್ | ಶ್ರೀ ಸಿ.ಕರೀಗೌಡ, 1 ನೇ ದರ್ಜೆ ಗುತ್ತಿಗೆದಾರರು, ಮೈಸೂರು | |
| 67 | ಚಾಮರಾಜನಗರ | ಗುಂಡ್ಲುಪೇಟೆ | ಕಲ್ಲಟ್ಟಿ | ಕಲ್ಲಟ್ಟಿ ಕೆರೆ ಅಭಿವೃದ್ಧಿ | 50.00 | ಟೆಂಡರ್ | ಶ್ರೀ ಯು.ಮನೋಜ್‌ಕುಮಾರ್, 1 ನೇ ದರ್ಜೆ ಗುತ್ತಿಗೆದಾರರು, ಗುಂಡ್ಲುಪೇಟೆ | |
| 68 | ಚಾಮರಾಜನಗರ | ಗುಂಡ್ಲುಪೇಟೆ | ಮಂಟಿಪುರ | ಮಂಟಿಪುರ ಕೆರೆ ಅಭಿವೃದ್ಧಿ | 32.00 | ಟೆಂಡರ್ | ಶ್ರೀ ಯು.ಮನೋಜ್‌ಕುಮಾರ್, 1 ನೇ ದರ್ಜೆ ಗುತ್ತಿಗೆದಾರರು, ಗುಂಡ್ಲುಪೇಟೆ | |
| 69 | ಚಾಮರಾಜನಗರ | ಗುಂಡ್ಲುಪೇಟೆ | ಹೊಸಪುರ | ಹೊಸಪುರ (ಪೂರ್ವ) ಕೆರೆ ಅಭಿವೃದ್ಧಿ. | 30.00 | ಟೆಂಡರ್ | ಶ್ರೀ ಯು.ಮನೋಜ್‌ಕುಮಾರ್, 1 ನೇ ದರ್ಜೆ ಗುತ್ತಿಗೆದಾರರು, ಗುಂಡ್ಲುಪೇಟೆ | |

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಗುತ್ತಿಗೆ ನೀಡಿದ ಪ್ರಕ್ರಿಯೆ | ಗುತ್ತಿಗೆದಾರರ ವಿವರ | ಪ್ರಸ್ತುತ ಹಂತ |
|---|---|---|---|---|---|---|---|---|
| | ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ ಯೋಜನೆ | | | | | | | |
| 70 | ಚಾಮರಾಜನಗರ | ಚಾಮರಾಜನಗರ | ಕೋಡಿಮೋಳೆ | ಕೋಡಿಮೋಳೆ ಕೆರೆ ಪುನರುಜ್ಜೀವನ | 30.00 | ಟೆಂಡರ್ | ಮೆ: ವಿಜಯಲಕ್ಷ್ಮಿ ಕನ್‌ಸ್ಟ್ರಕ್ಷನ್ಸ್, ಪ್ರೊ. ಎಂ.ಶ್ರೀನಿವಾಸಲು ರೆಡ್ಡಿ, 1 ನೇ ದರ್ಜೆ ಗುತ್ತಿಗೆದಾರರು, ಮೈಸೂರು | ಪ್ರಗತಿಯಲ್ಲಿದೆ |
| 71 | ಚಾಮರಾಜನಗರ | ಚಾಮರಾಜನಗರ | ಕೆಂಪನಪುರ | ಕೆಂಪನಪುರ ಕೆರೆ ಪುನರುಜ್ಜೀವನ | 30.00 | | | ಪ್ರಗತಿಯಲ್ಲಿದೆ |
| 72 | ಚಾಮರಾಜನಗರ | ಯಳಂದೂರು | ಗಣಗನೂರು | ಗಣಗನೂರು ಕೆರೆ ಪುನರುಜ್ಜೀವನ | 40.00 | | | ಪ್ರಗತಿಯಲ್ಲಿದೆ |
| 73 | ಚಾಮರಾಜನಗರ | ಗುಂಡ್ಲುಪೇಟೆ | ಕಳ್ಳೀಗೌಡನಹಳ್ಳಿ | ಕಳ್ಳೀಗೌಡನಹಳ್ಳಿ ಕೆರೆ ಪುನರುಜ್ಜೀವನ | 30.00 | ಟೆಂಡರ್ | ಶ್ರೀ ಕೆ.ಕೃಷ್ಣನ್, 1 ನೇ ದರ್ಜೆ ಗುತ್ತಿಗೆದಾರರು, ಮೈಸೂರು | ಪೂರ್ಣಗೊಂಡಿದೆ |
| 74 | ಚಾಮರಾಜನಗರ | ಗುಂಡ್ಲುಪೇಟೆ | ಹೊಸಪುರ | ಹೊಸಪುರ ಕೆರೆ ಪುನರುಜ್ಜೀವನ | 40.00 | | | ಪೂರ್ಣಗೊಂಡಿದೆ |
| 75 | ಚಾಮರಾಜನಗರ | ಕೊಳ್ಳೇಗಾಲ | ಗುಂಡಾಪುರ | ಉಡುತೊರೆಹಳ್ಳ ಪಿಕಪ್ ಪುನರುಜ್ಜೀವನ | 20.00 | ಟೆಂಡರ್ | ಶ್ರೀ ಪಿ.ರಂಗಾರೆಡ್ಡಿ, 1 ನೇ ದರ್ಜೆ ಗುತ್ತಿಗೆದಾರರು, ಟಿ.ನರಸೀಪುರ | ಪೂರ್ಣಗೊಂಡಿದೆ |
| 76 | ಚಾಮರಾಜನಗರ | ಕೊಳ್ಳೇಗಾಲ | ಅಜ್ಜೀಪುರ | ಅಜ್ಜೀಪುರ ಪಿಕಪ್ ಪುನರುಜ್ಜೀವನ | 30.00 | | | ಪೂರ್ಣಗೊಂಡಿದೆ |
| 77 | ಚಾಮರಾಜನಗರ | ಕೊಳ್ಳೇಗಾಲ | ದೊಮ್ಮನಗದ್ದೆ | ದೊಮ್ಮನಗದ್ದೆ ಪಿಕಪ್ ಪುನರುಜ್ಜೀವನ | 20.00 | | | ಪೂರ್ಣಗೊಂಡಿದೆ |
| 78 | ಚಾಮರಾಜನಗರ | ಕೊಳ್ಳೇಗಾಲ | ಮತ್ತಿಪುರ | ಲಿಂಗಮ್ಮನಕೆರೆ ಕೆರೆ ಪುನರುಜ್ಜೀವನ | 40.00 | ಟೆಂಡರ್ | ಶ್ರೀ ಅಶ್ವತ್, 1 ನೇ ದರ್ಜೆ ಗುತ್ತಿಗೆದಾರರು, ಕಿತ್ತೂರು, ಪಿರಿಯಾಪಟ್ಟಣ ತಾಲ್ಲೂಕು | ಪ್ರಗತಿಯಲ್ಲಿದೆ |
| 79 | ಚಾಮರಾಜನಗರ | ಕೊಳ್ಳೇಗಾಲ | ಬಾಲಗುಣಸೆ | ಬಾಲಗುಣಸೆ ಕೆರೆ ಪುನರುಜ್ಜೀವನ | 35.00 | | | ಪ್ರಗತಿಯಲ್ಲಿದೆ |
| 80 | ಚಾಮರಾಜನಗರ | ಚಾಮರಾಜನಗರ | ಹೊಂಗನೂರು ಪಿರೇಕೆರೆ | ಹೊಂಗನೂರು ಪಿರೇಕೆರೆ ಕೆರೆ ಪುನರುಜ್ಜೀವನ | 220.00 | ಟೆಂಡರ್ | ಶ್ರೀ ಶಂಕರ್‌ರೆಡ್ಡಿ, 1 ನೇ ದರ್ಜೆ ಗುತ್ತಿಗೆದಾರರು, ತುಮಕೂರು | ಪ್ರಗತಿಯಲ್ಲಿದೆ |
| 81 | ಚಾಮರಾಜನಗರ | ಕೊಳ್ಳೇಗಾಲ | ಅಂಡಿಪಾಳ್ಯ | ಅಂಡಿಪಾಳ್ಯ ಪಿಕಪ್ ಪುನರುಜ್ಜೀವನ | 20.00 | ಟೆಂಡರ್ | ಶ್ರೀ ಕೆ.ಹೆಚ್.ತಮ್ಮೇಗೌಡ, 1 ನೇ ದರ್ಜೆ ಗುತ್ತಿಗೆದಾರರು, ಪಾಂಡವಪುರ | ಪ್ರಗತಿಯಲ್ಲಿದೆ |
| 82 | ಚಾಮರಾಜನಗರ | ಕೊಳ್ಳೇಗಾಲ | ಕೊನ್ನೇರಿಕೊಂಬು | ಕೊನ್ನೇರಿಕೊಂಬು ಪಿಕಪ್ ಪುನರುಜ್ಜೀವನ | 20.00 | | | ಪ್ರಗತಿಯಲ್ಲಿದೆ |
| 83 | ಚಾಮರಾಜನಗರ | ಕೊಳ್ಳೇಗಾಲ | ಗುಂಡಿಮಾಳ | ಗುಂಡಿಮಾಳ ಪಿಕಪ್ ಪುನರುಜ್ಜೀವನ | 20.00 | ಟೆಂಡರ್ | ಶ್ರೀ ಕೆ.ಹೆಚ್.ತಮ್ಮೇಗೌಡ, ! ನೇ ದರ್ಜೆ ಗುತಿಗೆದಾರರು, ಪಾಂಡವಪುರ | ಪ್ರಗತಿಯಲ್ಲಿದೆ |

## ಗುಲ್ಬರ್ಗಾ ಜಿಲ್ಲೆಯಲ್ಲಿ ಜವಳಿ ಪಾರ್ಕ್ ಸ್ಥಾಪನೆ ಮಾಡುವ ಬಗ್ಗೆ

**266; ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ರಾಜ್ಯದಲ್ಲಿ ಜವಳಿ ಇಲಾಖೆಯಿಂದ ಜವಳಿ ಪಾರ್ಕ್‌ಗಳು ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಗಳು ಯಾವುವು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಗುಲ್ಬರ್ಗಾ ಜಿಲ್ಲೆಯಲ್ಲಿ ಜವಳಿ ಪಾರ್ಕ್ ಸ್ಥಾಪಿಸಬೇಕೆಂದು ಬೇಡಿಕೆ ಸರ್ಕಾರದ ಗಮನದಲ್ಲಿದೆಯೇ; ಅದು ಪ್ರಗತಿಯಾಗದೆ ಇರಲು ಕಾರಣಗಳೇನು;

ಇ) ಜವಳಿ ಪಾರ್ಕ್ ಸ್ಥಾಪಿಸುವ ನಿಟ್ಟಿನಲ್ಲಿ ಸರ್ಕಾರದ ನಿಲುವು ಏನು?

**ಶ್ರೀ ಆರ್. ವರ್ತೂರು ಪ್ರಕಾಶ್ (ಜವಳಿ ಸಚಿವರು)**

ಅ) ಬೆಂಗಳೂರು ಗ್ರಾಮಾಂತರ –

1) ದೊಡ್ಡಬಳ್ಳಾಪುರ ಅಪೆರೆಲ್ ಪಾರ್ಕ್ ಫೇಸ್–1

2) ದೊಡ್ಡಬಳ್ಳಾಪುರ ಅಪೆರೆಲ್ ಪಾರ್ಕ್ ಫೇಸ್–2

3) ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್

ಆ) ಹೌದು, ಕೇಂದ್ರ ಪುರಸ್ಕೃತ ಸ್ಕೀಂ ಫಾರ್ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ (SITP) ಯೋಜನೆಯಲ್ಲಿ ಗುಲ್ಬರ್ಗಾ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆಗೆ ಕೇಂದ್ರ ಸರ್ಕಾರದ ಅನುಮೋದನೆ ದೊರೆತಿದ್ದು, ಪಾರ್ಕ್ ಸ್ಥಾಪನೆಯ ಚಟುವಟಿಕೆಯು ಪ್ರಗತಿಯಲ್ಲಿರುತ್ತದೆ.

ಇ) ಜವಳಿ ಪಾರ್ಕ್ ಸ್ಥಾಪನೆ ಮಾಡಲು ಉದ್ಯಮಿಗಳು ಸ್ಪೆಷಲ್ ಪರ್ಪಸ್ ವೆಹಿಕಲ್ (ಎಸ್.ಪಿ.ವಿ) ನೊಂದಾಯಿಸಿಕೊಂಡು ಬೇಡಿಕೆ ಬಂದಲ್ಲಿ ಹೆಚ್ಚಿನ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಿ ಜವಳಿ ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸುವುದು.

## ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ

**265; ಶ್ರೀ ಅಲ್ಲಮ್ಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಕೃಷ್ಣ ಮೇಲ್ದಂಡೆಯ ವ್ಯಾಪ್ತಿಗೆ ಬರುವ ನಾರಾಯಣಪುರ ಎಡದಂಡೆ ಕಾಲುವೆಯ ಸಾಮರ್ಥ್ಯ 11 ಸಾವಿರ ಕ್ಯೂಸೆಕ್ಸ್ ಇದ್ದು, ಪ್ರಸ್ತುತ ನೀರು ಹರಿಸುತ್ತಿರುವ ಸರಾಸರಿ ಸಾಮರ್ಥ್ಯ ಎಷ್ಟು;

ಆ) 1984 ರಿಂದ ಇಲ್ಲಿಯವರೆಗೆ ನಾರಾಯಣಪುರ ಎಡದಂಡೆಯ ಕಾಲುವೆಯಲ್ಲಿ ಸರಾಸರಿ ಹರಿದ ನೀರಿನ ಸಾಮರ್ಥ್ಯ ಎಷ್ಟು; ಅದರ ಸಾಮರ್ಥ್ಯಕ್ಕಿಂತ ಕಡಿಮೆ ಹರಿದಿದ್ದರೆ ಸಾಮರ್ಥ್ಯ ಸರಿದೂಗಿಸಲು ಸರ್ಕಾರ ಮಾಡಿದ ಪರ್ಯಾಯ ವ್ಯವಸ್ಥೆ ಏನು?

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)**

ಅ) ಕೃಷ್ಣಾ ಮೇಲ್ದಂಡೆ ಯೋಜನೆ ವ್ಯಾಪ್ತಿಯಲ್ಲಿ ಬರುವ ನಾರಾಯಣಪುರ ಎಡದಂಡೆ ಕಾಲುವೆಯ ಸಾಮರ್ಥ್ಯವು ವಿನ್ಯಾಸದ ಪ್ರಕಾರ 10,000 ಕ್ಯೂಸೆಕ್ಸ್ ಇರುತ್ತದೆ. ಪ್ರಸ್ತುತ ಕಾಲುವೆಯಲ್ಲಿ 8,500 ಕ್ಯೂಸೆಕ್ಸ್ ನೀರನ್ನು ಹರಿಸಲಾಗುತ್ತಿದೆ.

ಆ) ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ 1984 ರಿಂದ ವರ್ಷವಾರು ಕಲ್ಪಿಸಲಾದ ನೀರಾವರಿ ಸಾಮರ್ಥ್ಯ ಮತ್ತು ಅಧಿಸೂಚಿತ ಕ್ಷೇತ್ರಕ್ಕೆ ಅನುಗುಣವಾಗಿ ನೀರನ್ನು ಹರಿಸಲಾಗುತ್ತಿದೆ. 1984 ರ ಪ್ರಾರಂಭದಲ್ಲಿ ಸರಾಸರಿ 800 ಕ್ಯೂಸೆಕ್ಸ್ ನಿಂದ ಪ್ರಾರಂಭಗೊಂಡು ಇಲ್ಲಿಯವರೆಗೆ ಕಲ್ಪಿಸಲಾದ ನೀರಾವರಿ ಕ್ಷೇತ್ರಕ್ಕೆ ಅನುಗುಣವಾಗಿ 8,500 ಕ್ಯೂಸೆಕ್ಸ್ ಸಾಮರ್ಥ್ಯಕ್ಕೆ ನೀರನ್ನು ಹರಿಸಲಾಗುತ್ತಿದೆ.

ನಾರಾಯಣಪುರ ಎಡದಂಡೆ ಮುಖ್ಯ ಕಾಲುವೆ 1983 ರಲ್ಲಿ ಪೂರ್ಣಗೊಂಡಿದ್ದು, ಪ್ರಸ್ತುತ ಕಾಲುವೆಯನ್ನು ಹಂತ ಹಂತವಾಗಿ ಪುನಶ್ಚೇತನಗೊಳಿಸಲು (Remodelling) ಯೋಜಿಸಲಾಗಿದೆ. ಪ್ರಸ್ತುತ ಕಿಮೀ 40.00 ರಿಂದ 72.00 ಕಿಮೀವರೆಗೆ, 28.00 ಕಿಮೀ ಉದ್ದದ

ಮುಖ್ಯ ಕಾಲುವೆಯಲ್ಲಿನ ಕ್ರಿಟಿಕಲ್ ರೀಚ್‌ಗಳ ಪುನಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಸದರಿ ಪುನಶ್ಚೇತನ ಕಾಮಗಾರಿಯನ್ನು ಕೈಗೆತ್ತಿಕೊಂಡು ನೀರಿನ ಹರಿವಿನ ಸಾಮರ್ಥ್ಯವನ್ನು ಹೆಚ್ಚಿಸಬಹುದಾಗಿದೆ.

| | | |
|---|---|---|
| ಕಪನೂರು 2ನೇ ಹಂತದ ಉಪ ಬಡಾವಣೆ | 18 | 15–75 |
| ನಂದೂರು (ಕೆ) | 364 | 515–25 |
| **ಒಟ್ಟು** | **632** | **769–47** |
| **ಯಾದಗಿರಿ** | | |
| ಮುಂಡರಗಿ | 39 | 19–05 |
| **ಒಟ್ಟು** | **39** | **19–05** |

ಈ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆ ಪಡೆದಿರುವ ಘಟಕಗಳು ತಮ್ಮ ಉದ್ದೇಶಿತ ಯೋಜನೆಗಳನ್ನು ಮಂಡಳಿಯ ಹಂಚಿಕೆಯ ನಿಯಮಾನುಸಾರ ಮತ್ತು ಕರಾರು ಒಪ್ಪಂದದ ಅನ್ವಯ ನಿಗಧಿತ ಅವಧಿಯಲ್ಲಿ ಪ್ರಾರಂಭಿಸದೇ ಇದ್ದಲ್ಲಿ, ಸದರಿ ಹಂಚಿಕೆಯನ್ನು ರದ್ದುಪಡಿಸಿ, ಮಂಡಳಿಯ ವಶಕ್ಕೆ ವಾಪಸ್ಸು ಪಡೆಯಲಾಗುವುದು ಮತ್ತು ಬೇಡಿಕೆಯನ್ನು ಅನುಸರಿಸಿ, ಇತರೆ ಘಟಕಗಳಿಗೆ ಮರು ಹಂಚಿಕೆ ಮಾಡಲಾಗುವುದು.

**ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಅಭಿವೃದ್ಧಿ**

**262; ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಕನ್ನಡ ಅಭಿವೃದ್ಧಿಗಾಗಿ ವಲಯ ಕನ್ನಡ ಭವನ ಕಟ್ಟುವ ಯೋಜನೆ ಸರ್ಕಾರಕ್ಕಿದೆಯೇ;

**ಆ)** ಉತ್ತರ ಕರ್ನಾಟಕ ಗಡಿ ಭಾಗಗಳಲ್ಲಿ ಕನ್ನಡ ಅಭಿವೃದ್ಧಿಗಾಗಿ ಯಾವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ; ಗಡಿ ತಾಲ್ಲೂಕುಗಳಲ್ಲಿ ನಡೆಸುತ್ತಿರುವ ಕಾರ್ಯಕ್ರಮಗಳೇನು?

**ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು)**

**ಅ)** ವಲಯ ಕನ್ನಡ ಭವನ ಕಟ್ಟುವ ಪ್ರತ್ಯೇಕ ಯೋಜನೆ ಇಲ್ಲ. ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಈ ಕೆಳಕಂಡ ಸ್ಥಳಗಳಲ್ಲಿ ಕನ್ನಡ ಭವನ ಕಟ್ಟಲು ಅನುದಾನ ಮಂಜೂರು ಮಾಡಲಾಗಿದೆ.

| **ಅನುದಾನ ಬಿಡುಗಡೆ ಮಾಡಲಾಗಿರುವ ಜಿಲ್ಲೆ** | **ಸ್ಥಳ** |
|---|---|
| 1) ಬೀದರ್ | ಭಾಲ್ಕಿ ಬೀದರ್ ನಗರ |
| 2) ಗುಲ್ಬರ್ಗಾ | ಗುಲ್ಬರ್ಗಾ ನಗರ ನವದಗಿ ಆಳಂದ |
| 3) ಯಾದಗಿರಿ | ಯಾದಗಿರಿ ನಗರ |
| 4) ರಾಯಚೂರು | ಸಿಂಧನೂರು |
| 5) ಬಳ್ಳಾರಿ | ಸಿರಗುಪ್ಪ ಬಳ್ಳಾರಿ ನಗರ |

ಅದಲ್ಲದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಾಂಸ್ಕೃತಿಕ ಮಂದಿರ, ಬಯಲು ರಂಗಮಂದಿರ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಆ)

1) ಉತ್ತರ ಕರ್ನಾಟಕದ ಗಡಿ ಜಿಲ್ಲೆಗಳಾದ ಬೆಳಗಾವಿ, ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಕನ್ನಡದ ಅಭಿವೃದ್ಧಿಗಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕನ್ನಡ ನುಡಿತೇರು ಜಾಗೃತಿ ಜಾಥಾ, ಹಳೆಗನ್ನಡ ಕಾವ್ಯ ವಾಚನ, ಕನ್ನಡ ಕಲಿಕಾ ಕೇಂದ್ರ, ಕಾಲೇಜು ವಿದ್ಯಾರ್ಥಿಗಳಿಗೆ ಕನ್ನಡ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

2) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಬೀದರ್‌ನ ಚಿಲ್ಲರ್ಗಿ ಹಾಗೂ ಜೋಯಿಡಾದ ಕ್ಯಾಸಲ್ ರಾಕ್‌ನಲ್ಲಿ ಗಡಿ ಉತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ತಲಾ ರೂ. 4.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

3) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಾಂಸ್ಕೃತಿಕ ಮಂದಿರ/ಬಯಲು ರಂಗಮಂದಿರ ನಿರ್ಮಾಣಕ್ಕಾಗಿ ಅನುದಾನ ಹಾಗೂ ಜಿಲ್ಲಾ ಉತ್ಸವ ಹಾಗೂ ಸಂಘ ಸಂಸ್ಥೆಗಳ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

**ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಭ್ರಷ್ಟಾಚಾರದ ಬಗ್ಗೆ**

**296; ಶ್ರೀ ಕೆ.ಸಿ. ಕೊಂಡಯ್ಯ**

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಭ್ರಷ್ಟಾಚಾರ ನಡೆದಿರುವುದು ನಿಜವೇ; (ಪ್ರಕರಣವಾರು ವಿವರ ಒದಗಿಸುವುದು);

ಆ) ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಪ್ರಕರಣವಾರು ವಿವರ ಒದಗಿಸುವುದು);

ಇ) ಆರೋಪಕ್ಕೆ ಒಳಗಾಗಿರುವ ಅಧಿಕಾರಿಯೊಬ್ಬರನ್ನು ನಿಗಮಕ್ಕೆ ಮತ್ತೆ ನಿಯುಕ್ತಿಗೊಳಿಸಿರುವುದು ನಿಜವೇ? (ವಿವರ ಒದಗಿಸುವುದು)

**ಶ್ರೀ ನರಸಿಂಹ ನಾಯಕ (ರಾಜೂಗೌಡ) (ಸಣ್ಣ ಕೈಗಾರಿಕೆ ಸಚಿವರು)**

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯ ಕಾರ್ಯ ನಿರ್ವಹಣೆಯಲ್ಲಿ ಹಲವು ಲೋಪದೋಷಗಳಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು, ಈ ಬಗ್ಗೆ ಪರಿಶೀಲಿಸಲು ಸರ್ಕಾರದ ಮಟ್ಟದಲ್ಲಿ ಹಿರಿಯ ಮೂವರು ಅಧಿಕಾರಿಗಳ ಒಂದು ಸಮತಿಯನ್ನು ರಚಿಸಿದ್ದು, ಪರಿಶೀಲನೆ ಪ್ರಗತಿಯಲ್ಲಿದೆ.

ಆ) ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ.

ಇ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ಪ್ರಧಾನ ವ್ಯವಸ್ಥಾಪಕರೊಬ್ಬರನ್ನು ದಿನಾಂಕ: 03-08-2011 ರಂದು ನಿಗಮದ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು. ತದನಂತರ ಆದೇಶವನ್ನು ಹಿಂಪಡೆದು ಪ್ರಧಾನ ವ್ಯವಸ್ಥಾಪಕರ ಹುದ್ದೆಗೆ ದಿನಾಂಕ 15-09-2011 ರಂದು ನಿಯುಕ್ತಿಗೊಳಿಸಲಾಗಿದೆ.

**ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹೇಮಾವತಿ ನದಿಯಿಂದ ಅಥವಾ ಇನ್ನ್ಯಾವುದೇ ಪಶ್ಚಿಮ ಘಟ್ಟಗಳ ಮೂಲದಿಂದ ನೀರು ತರುವ ಬಗ್ಗೆ**

**303; ಶ್ರೀ ಆರ್.ವಿ. ವೆಂಕಟೇಶ್**

ಅ) ಬೆಂಗಳೂರು ಉತ್ತರ ಭಾಗಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ತಿಪ್ಪಗೊಂಡನಹಳ್ಳಿ ಜಲಾಶಯವು ಕಳೆದ 15 ವರ್ಷಗಳಿಂದ ಜಲಾನಯನ ಪ್ರದೇಶದ ನದಿ ಪಾತ್ರ ರಾಜಕಾಲುವೆ ಒತ್ತುವರಿಯಿಂದ ಹಾಗೂ ಮಳೆಯ ಅಭಾವದಿಂದ ತುಂಬದೇ ಕುಡಿಯುವ ನೀರಿನ ಅಭಾವಕ್ಕೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹೇಮಾವತಿ ನದಿ ನೀರು ಅಥವಾ ಪಶ್ಚಿಮ ಘಟ್ಟಗಳ ಇನ್ನ್ಯಾವುದೇ ಮೂಲದಿಂದ ನೀರನ್ನು ತರುವ ಯೋಜನೆ ಸರ್ಕಾರದ ಆಲೋಚನೆಯಲ್ಲಿದೆಯೇ;

ಇ) ಹಾಗಿದ್ದರೆ, ಸರ್ಕಾರ ಈ ಬಗ್ಗೆ ರೂಡಿಸಿಕೊಂಡಿರುವ ಕಾರ್ಯಕ್ರಮವೇನು? (ವಿವರ ನೀಡುವುದು)

**ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ ಸಚಿವರು)**

ಅ) ಹೌದು.

ಆ) ಹೌದು.

ಇ) ಬೆಂಗಳೂರು ನಗರದ ನೀರಿನ ಅವಶ್ಯಕತೆಗನುಗುಣವಾಗಿ ಕೌಶಲ್ಯಯುಕ್ತ ಯೋಜನೆ ರೂಪಿಸುವ ಬಗ್ಗೆ ಹಾಗೂ ಮುಂದಿನ 50 ವರ್ಷಗಳಿಗೆ ಬೆಂಗಳೂರು ನಗರಕ್ಕೆ ಬೇಕಾಗುವ ನೀರನ್ನು ಪೂರೈಸಲು ತಾಂತ್ರಿಕ ತಜ್ಞರ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 186 ಎಂಎನ್ಐ 2009, ದಿನಾಂಕ:25–11–2010ರಲ್ಲಿ ರಚಿಸಲಾಗಿದೆ.

ದಿನಾಂಕ:31–12–2011 ರಂದು ತಾಂತ್ರಿಕ ತಜ್ಞರ ಸಮಿತಿಯು ಮಧ್ಯಂತರ ವರದಿಯನ್ನು ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

**2012ರ ಜೂನ್ ಮಾಹೆಯಲ್ಲಿ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸುತ್ತಿರುವ ಬಗ್ಗೆ**

**ಶ್ರೀ ಆರ್.ವಿ. ವೆಂಕಟೇಶ್ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಜೂನ್ 2012ರಲ್ಲಿ ಸರ್ಕಾರವು ಬಂಡವಾಳ ಹೂಡಿಕೆ ಸಮಾವೇಶವನ್ನು ನಡೆಸಲು ಉದ್ದೇಶಿಸಿದೆಯೇ;

ಆ) ಉದ್ದೇಶಿಸಿದ್ದಲ್ಲಿ ಜೂನ್ 2010 ರಲ್ಲಿ ಬೆಂಗಳೂರಿನಲ್ಲಿ ನಡೆಸಿದ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶದಲ್ಲಿ ಹೂಡಿಕೆಗೆ ಒಪ್ಪಿಗೆ ಕೊಟ್ಟ 389 ಕಂಪನಿಗಳ ಪೈಕಿ ಈವರೆವಿಗೂ 22 ಯೋಜನೆಗಳು ಮಾತ್ರ ಅನುಷ್ಠಾನಗೊಂಡ ಇನ್ನು 367 ಕಂಪನಿಗಳು ಅನುಷ್ಠಾನಗೊಳಿಸಲು ಬಾಕಿಯಿರುವಾಗ ಮತ್ತೊಂದು ಬಂಡವಾಳ ಹೂಡಿಕೆ ಸಮಾವೇಶ ನಡೆಸುವುದು ಸಮಂಜಸವೇ;

ಇ) ಜೂನ್ 2010 ರಲ್ಲಿ ಒಪ್ಪಿಗೆ ಕೊಟ್ಟ 389 ಕಂಪನಿಗಳಿಗೆ ಅವಶ್ಯಕವಿರುವ ಜಮೀನು, ನೀರು, ವಿದ್ಯುಚ್ಛಕ್ತಿ ಮುಂತಾದವುಗಳನ್ನು ಒದಗಿಸಲಾಗಿದೆಯೇ; ಒದಗಿಸಿದ್ದಲ್ಲಿ ವಿವರಗಳನ್ನು ನೀಡುವುದು;

ಈ) ಜೂನ್ 2012 ರಲ್ಲಿ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸಲು ಉದ್ದೇಶಿಸಿದ್ದಲ್ಲಿ, ಅದಕ್ಕೆ ಅವಶ್ಯಕವಾಗಿರುವ ಜಮೀನು, ನೀರು ಮತ್ತು ವಿದ್ಯುಚ್ಛಕ್ತಿಗಳನ್ನು ಗುರುತಿಸಿ ಸಿದ್ದಪಡಿಸಿಕೊಳ್ಳಲಾಗಿದೆಯೇ? (ವಿವರ ನೀಡುವುದು)

**ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)**

ಅ) ಹೌದು.

ಆ) ದಿನಾಂಕ 31–12–2012 ಕ್ಕೆ ಅನ್ವಯಿಸುವಂತೆ ಅನುಮೋದಿತ 389 ಯೋಜನೆಗಳಲ್ಲಿ 31 ಯೋಜನೆಗಳು ಅನುಷ್ಠಾನಗೊಂಡಿವೆ. 287 ಯೋಜನೆಗಳು ಅನುಷ್ಠಾನದ ವಿವಿಧ ಹಂತದಲ್ಲಿವೆ.

ಕಳೆದ ವಿಶ್ವ ಬಂಡವಾಳ ಹೂಡಿಕೆ ಸಮಾವೇಶದಲ್ಲಿ, ಕರ್ನಾಟಕದಲ್ಲಿ ಬಂಡವಾಳ ಹೂಡಿಕೆಗೆ ಸಿಕ್ಕ ಪ್ರತಿಕ್ರಿಯೆ ಯಶಸ್ಸು ಹಾಗೂ ನಂತರ ಅನುಷ್ಠಾನ ಹಂತದಲ್ಲಿರುವ ಯೋಜನೆಗಳ ಸಂಖ್ಯೆಯನ್ನು ಪರಿಗಣಿಸಿದಾಗ ಹೆಚ್ಚುವರಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಇನ್ನೊಂದು ಸಮಾವೇಶವನ್ನು ನಡೆಸುವುದು ಸಮಂಜಸವೆಂದು ಭಾವಿಸಿದೆ.

ಕೈಗಾರಿಕೆಗಳಲ್ಲಿ ಬಂಡವಾಳವನ್ನು ಆಕರ್ಷಿಸುವುದು ಹಾಗೂ ತನ್ಮೂಲಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಕೆಲಸ ಸರ್ಕಾರವು ನಿರಂತರವಾಗಿ ಕೈಗೊಳ್ಳಬೇಕಾಗಿರುವುದರಿಂದ ಮತ್ತೊಂದು ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು 2012 ರಲ್ಲಿ ಹಮ್ಮಿಕೊಳ್ಳಲಾಗಿದೆ.

ಇ) ಜೂನ್ 2010 ರಲ್ಲಿ ಒಪ್ಪಿಗೆ ಕೊಟ್ಟ 389 ಕಂಪನಿಗಳ ಪೈಕಿ ಈಗಾಗಲೇ 31 ಯೋಜನೆಗಳು ಅನುಷ್ಠಾನಗೊಂಡಿದ್ದು, ಮುಂದುವರೆದಂತೆ, 287 ಕಂಪನಿಗಳು ಅನುಷ್ಠಾನದ ವಿವಿಧ ಹಂತದಲ್ಲಿದ್ದು, ಇವುಗಳಿಗೆ ಅವಶ್ಯಕವಿರುವ ಜಮೀನು, ನೀರು ಮತ್ತು ವಿದ್ಯುಚ್ಛಕ್ತಿಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

200 ಯೋಜನೆಗಳಿಗೆ ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿ, 73 ಯೋಜನೆಗಳಿಗೆ ಕೆಐಎಡಿಬಿ ಏಕಘಟಕ ಸಂಕೀರ್ಣದ ರೂಪದಲ್ಲಿ, 4 ಯೋಜನೆಗಳಿಗೆ ಸರ್ಕಾರಿ ಜಮೀನಿನಲ್ಲಿ, 48 ಯೋಜನೆಗಳು ಸೆಕ್ಷನ್ 109 ರಡಿ ಜಮೀನು ನೀಡಲಾಗಿದೆ. 64 ಯೋಜನೆಗಳು ಸ್ವಂತ ಜಮೀನಿನಲ್ಲಿ ಅನುಷ್ಠಾನಗೊಳ್ಳುವ ನಿರೀಕ್ಷೆ ಇದೆ.

ನೀರು ಮತ್ತು ವಿದ್ಯುಚ್ಛಕ್ತಿ ಹಂಚಿಕೆಗೆ ಜಲಸಂಪನ್ಮೂಲ ಹಾಗೂ ಇಂಧನ ಇಲಾಖೆಗಳಿಗೆ ಶಿಫಾರಸ್ಸು ಮಾಡಲಾಗಿರುತ್ತದೆ.

**ಈ)** ರಾಜ್ಯ ಸರ್ಕಾರವು 2012 ರ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದ ಪೂರ್ವಭಾವಿಯಾಗಿ ಲ್ಯಾಂಡ್ ಬ್ಯಾಂಕ್ ಯೋಜನೆಯಡಿ ವಿವಿಧ ಜಿಲ್ಲೆಗಳಲ್ಲಿ ಕೃಷಿಗೆ ಯೋಗ್ಯವಲ್ಲದ ಜಮೀನನ್ನು ಕೈಗಾರಿಕೆಗಳ ಸ್ಥಾಪನೆಗೆ ಗುರುತಿಸಲಾಗಿದೆ. ಉಳಿದಂತೆ ವಾಲಂಟರಿ ಲ್ಯಾಂಡ್ ಬ್ಯಾಂಕ್ ಯೋಜನೆಯನ್ನು ಕೂಡಾ ಹಮ್ಮಿಕೊಳ್ಳಲಾಗಿದ್ದು, ಈ ಯೋಜನೆಯಡಿ ಆಸಕ್ತ ಜಮೀನುದಾರರು ಸ್ವ ಇಚ್ಛೆಯಿಂದ ಭೂಮಿಯನ್ನು ನೇರವಾಗಿ ಕೈಗಾರಿಕೆಗಳಿಗೆ ನೀಡಬಹುದಾಗಿದೆ. ಅವಶ್ಯವಿರುವ ನೀರು ಮತ್ತು ವಿದ್ಯುಚ್ಛಕ್ತಿ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ. ರಾಜ್ಯಾದಂತ ಕೈಗಾರಿಕೆಗೆ ಗುರುತಿಸಿರುವ ಜಮೀನುಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

Annexure-I

## LAND BANK DETAILS ( As on 15-12-2011)

| Sl No | District | Land Identified in acres | Preliminary notification 28(1) issued by KIADB | | | Final notification 28(4) issued by KIADB | | | Total Extent in Acres-Guntas 28(1)+28(4) |
|---|---|---|---|---|---|---|---|---|---|
| | | | Govt land A-G | Private Land A-G | Total A-G | Govt land A-G | Private Land A-G | Total A-G | |
| 1 | Bangalore (U) | 1897-28 | --- | --- | --- | --- | 1897-28 | 1897-28 | 1897-28 |
| 2 | Bangalore (R) | 3011-26 | --- | --- | --- | --- | 3024-33 | 3024-33 | 3024-33 |
| 3 | Belgaum | 12973-24 | 1876-06 | 3662-21 | 5538-27 | --- | 648-17 | 648-17 | 6187-04 |
| 4 | Bidar | 2100-00 | | | --- | --- | | --- | --- |
| 5 | Bellary | 11245-06 | --- | 503-19 | 503-19 | --- | 9707-25½ | 9707-25½ | 10211-04½ |
| 6 | Bijapur | 10351-22 | 1010-17 | 6425-12 | 7435-29 | 54-02 | 2919-34 | 2973-36 | 10409-25 |
| 7 | Bagalkote | 266-13 | --- | 266-13 | 266-13 | --- | --- | --- | 266-13 |
| 8 | Chamarajanagar | 1362-09 | 166-39 | 1195-10 | 1362-09 | --- | --- | --- | 1362-09 |
| 9 | Chikkamagalur | 2689-00 | 590-34 | 998-07 | 1589-01 | | | --- | 1589-01 |
| 10 | Chitradurga | 2752-10 | 2172-10 | --- | 2172-10 | --- | --- | --- | 2172-10 |
| 11 | Chikkaballapura | 2690-11 | 1306-33 | 887-28 | 2194-21 | --- | 453-14 | 453-14 | 2647-35 |
| 12 | Davanagere | 400-36 | 400-36 | --- | 400-36 | --- | --- | --- | 400-36 |
| 13 | Dharawad | 9347-14 | 9-26 | 5200-02 | 5209-28 | 9-17 | 1534-25 | 1544-02 | 6753-30 |
| 14 | Dakshina Kannada | 2300-00 | --- | --- | --- | --- | --- | --- | --- |
| 15 | Gulbarga | 2200-00 | --- | 2438-23 | 2438-23 | --- | | --- | 2438-23 |
| 16 | Gadag | 7189-32 | --- | 5685-27 | 5685-27 | --- | --- | --- | 5685-27 |
| 17 | Haveri | 3010-21 | 177-39 | 2832-22 | 3010-21 | --- | --- | --- | 3010-21 |
| 18 | Hassan | 1296-05 | --- | --- | --- | --- | 1057-24 | 1057-24 | 1057-24 |
| 19 | Kolar | 2399-12 | 274-10 | 1284-30 | 1559-00 | --- | 1352-09 | 1352-09 | 2911-09¼ |
| 20 | Koppala | 2000-00 | --- | --- | --- | --- | --- | --- | --- |
| 21 | Kodagu | --- | --- | --- | --- | --- | --- | --- | --- |
| 22 | Mysore | 4478-34 | 863-08 | 3615-25 | 4478-34 | --- | --- | --- | 4478-33½ |
| 23 | Mandya | 2242-05 | | | --- | 123-29 | 598-16 | 722-05 | 722-05 |
| 24 | Ramanagar | 12205-32 | --- | --- | --- | --- | 1366-34 | 1366-34 | 1366-34 |
| 25 | Raichur | 2072-22 | --- | 2072-22 | 2072-22 | --- | --- | --- | 2072-22 |
| 26 | Shimoga | 3103-29 | 203-14 | 963-02 | 1166-16 | 177-14 | 1363-27 | 1541-01 | 2707-17 |
| 27 | Tumkur | 10089-31 | 1065-37 | 5538-04 | 6604-01 | 1189-18 | 2104-24 | 3294-03 | 9898-05 |
| 28 | Udupi | --- | --- | --- | --- | --- | --- | --- | --- |
| 29 | Uttarakannada | --- | --- | --- | --- | --- | --- | --- | --- |
| 30 | Yadgir | 3298-29 | 118-30 | 3179-39 | 3298-29 | --- | --- | --- | 3298-29 |
| | Total | 118975-11 | 10237-21 | 46749-36 | 56987-17 | 1554-00 | 28030-00 | 29584-01¼ | 86571-19 |

## 2012ರ ಜೂನ್ ಮಾಹೆಯಲ್ಲಿ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸುತ್ತಿರುವ ಬಗ್ಗೆ

**302; ಶ್ರೀ ಆರ್.ವಿ. ವೆಂಕಟೇಶ್ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಬೆಂಗಳೂರು ಉತ್ತರ ಭಾಗಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಮತ್ತು ಹೆಸರುಘಟ್ಟ ಕೆರೆಗೆ ನೀರಿನ ಮೂಲವಾದ ಅರ್ಕಾವತಿ ನದಿ ಪುನಶ್ಚೇತನ ಕಾರ್ಯಕ್ರಮ ನಿಧಾನಗತಿಯಿಂದ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕಾರ್ಯಕ್ಕೆ ಅಂದಾಜು ಮಾಡಿರುವ ಒಟ್ಟು ಹಣವೆಷ್ಟು; 2012ನೇ ಸಾಲಿನಲ್ಲಿ ಎಷ್ಟು ಹಣವನ್ನು ಅನುದಾನದಲ್ಲಿ ಒದಗಿಸಲಾಗಿದೆ ಹಾಗೂ ಇದುವರೆವಿಗೂ ಎಷ್ಟು ಹಣ ವೆಚ್ಚ ಮಾಡಲಾಗಿದೆ;

ಇ) ಈ ಕಾರ್ಯಕ್ರಮವನ್ನು ಎಷ್ಟು ವರ್ಷಗಳಲ್ಲಿ ಪೂರೈಸಲು ಉದ್ದೇಶಿಸಲಾಗಿದೆ; ಈ ಜಲಾಶಯಕ್ಕೆ ನೀರು ಒದಗಿಸುವ ಕುಮುದ್ವತಿ ನದಿಯ ಪುನಶ್ಚೇತನ ಕಾರ್ಯವನ್ನು ಸರ್ಕಾರ ಕೈಗೊಳ್ಳುವುದೇ?

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ) ಅರ್ಕಾವತಿ ನದಿಯ ಪುನಶ್ಚೇತನ ಕಾಮಗಾರಿಯ ಸರ್ವೆ ಕಾರ್ಯವನ್ನು ಕಾವೇರಿ ನೀರಾವರಿ ನಿಗಮದಿಂದ ಕೈಗೆತ್ತಿಕೊಳ್ಳಲಾಗಿದ್ದು, ಒಟ್ಟು 1448.62 ಚದರ ಕಿ.ಮೀ. ವಿಸ್ತೀರ್ಣವಿರುವ ಹೆಸರುಘಟ್ಟ ಜಲಾನಯನ ಪ್ರದೇಶ, ಕುಮುದ್ವತಿ ಜಲಾನಯನ ಪ್ರದೇಶ ಹಾಗೂ ಅರ್ಕಾವತಿ ಜಲಾನಯನ ಪ್ರದೇಶಗಳ ರಿಮೋಟ್ ಸೆನ್‌ಸಿಂಗ್ ಸರ್ವೆ ಕೈಗೊಳ್ಳಲಾಗಿರುತ್ತದೆ. ತದನಂತರ ಈ ಮೂರು ಜಲಾನಯನ ಪ್ರದೇಶದಲ್ಲಿ ಹರಿಯುವ ಅರ್ಕಾವತಿ ನದಿಗೆ ಸೇರುವ ತೊರೆ / ಹಳ್ಳಗಳ ಪಾತ್ರದಲ್ಲಿ ಇಂಜಿನಿಯರಿಂಗ್ ಸರ್ವೆಯನ್ನೂ ನಡೆಸಿ, ನಂತರ ಅರ್ಕಾವತಿ ನದಿ ಪಾತ್ರದ ಪುನಶ್ಚೇತನ ಕಾಮಗಾರಿಗೆ ತಯಾರಿಸಿದ

ರೂ. 22.43 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಸರ್ಕಾರವು ದಿನಾಂಕ: 19-10-2011 ರಂದು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಕಾವೇರಿ ನೀರಾವರಿ ನಿಗಮದ ವತಿಯಿಂದ ದಿನಾಂಕ:26-11-2011 ರಂದು e-procurement ಮೂಲಕ ಆಹ್ವಾನಿಸಿದ್ದ ಟೆಂಡರ್ ಪ್ರಕಟಣೆಗೆ ಯಾವುದೇ ಪ್ರತಿಕ್ರಿಯೆ ಇಲ್ಲದ ಕಾರಣ, ದಿನಾಂಕ:17-01-2012 ರಂದು e-procurement ಮೂಲಕವೇ ಎರಡನೇ ಬಾರಿ ಟೆಂಡರ್ ಕರೆಯಲಾಗಿದೆ.

ಇದು ವಿಶಿಷ್ಟ ತರಹದ ಯೋಜನೆಯಾದ ಕಾರಣ ಈ ಪುನಃಶ್ಚೇತನ ಯೋಜನೆಯ ಬಗ್ಗೆ ವಿವಿಧ ಇಲಾಖೆಗಳ ಹಲವಾರು ಸಭೆಗಳಲ್ಲಿ ಚರ್ಚಿಸಿದ ನಂತರ ಕೈಗೊಂಡ ನಿರ್ಣಯಕ್ಕೆ ಸಂಬಂಧಿಸಿದ ಕಾಲ, ಒಟ್ಟಾರೆ 1448.62 ಚದರ ಕಿ.ಮೀ ವಿಸ್ತೀರ್ಣದ ಮೂರು ಜಲಾನಯನ ಪ್ರದೇಶದಲ್ಲಿ ಮುಖ್ಯ ನದಿಗಳು, ತೊರೆ ಮತ್ತು ಹಳ್ಳಗಳ ಒಟ್ಟಾರೆ 1319 ಕಿ.ಮೀ ಉದ್ದದ ವಿವರವಾದ ಇಂಜಿನಿಯರಿಂಗ್ ಸರ್ವೆಕಾರ್ಯ ನಡೆಸಿ ಯೋಜನಾ ವರದಿಯನ್ನು ತಯಾರಿಸಲು ತೆಗೆದುಕೊಂಡ ಕಾಲ, ಮುಖ್ಯ ನದಿಗಳ ಒತ್ತುವರಿಯನ್ನು ಕಂದಾಯ ಇಲಾಖೆಯ ಮೂಲಕ ಗುರುತಿಸಿಕೊಂಡು ಗಡಿ ಕಲ್ಲುಗಳನ್ನು ಅಳವಡಿಸಲು ತಗುಲಿದ ಅವಧಿ ಮುಂತಾದ ವಿವಿಧ ಕೆಲಸ ಕಾರ್ಯಗಳಿಗೆ ಗಣನೀಯ ಅವಧಿ ತಗುಲಿದ್ದು, ಅದರಂತೆ ನಿಯತಕಾಲಿಕ ಕ್ರಮವಹಿಸಲಾಗಿದ್ದು, ಹಮ್ಮಿಕೊಂಡಿರುವ ಕಾರ್ಯಕ್ರಮವು ನಿಗದಿಪಡಿಸಿರುವಂತೆ ಸಾಗುತ್ತಿದೆ.

ಆ) ಈ ಪುನಶ್ಚೇತನ ಕಾಮಗಾರಿಯ ಅಡಿಯಲ್ಲಿ ಬರುವ ಮೂರು ಜಲಾನಯನ ಪ್ರದೇಶದ ಒಟ್ಟು ಅಂದಾಜು ಮೊತ್ತ ರೂ. 22.43 ಕೋಟಿಗಳು.

2011–12ನೇ ಸಾಲಿನಲ್ಲಿ ರೂ. 7.50 ಕೋಟಿ ಅನುದಾನವನ್ನು ನಿಗಧಿಪಡಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಸರ್ವೆ ಕಾಮಗಾರಿಗಳಿಗೆ ಈವರೆಗೂ ಆಗಿರುವ ಒಟ್ಟು ವೆಚ್ಚ ರೂ. 0.83 ಕೋಟಿ.

ಇ) ಈ ಕಾಮಗಾರಿಗೆ ಮೇಲೆ ತಿಳಿಸಿರುವಂತೆ 2ನೇ ಬಾರಿ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರು ನಿಗದಿಯಾದ ನಂತರ 9 ತಿಂಗಳ ಅವಧಿಯಲ್ಲಿ ಕೈಗೊಂಡು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಕುಮುದ್ವತಿ ನದಿಯ ಉಗಮ ಸ್ಥಾನದಿಂದ ತಿಪ್ಪಗೊಂಡನಹಳ್ಳಿ ಜಲಾಶಯದವರೆಗಿನ ಪುನಶ್ಚೇತನ ಕಾರ್ಯವೂ ಸಹಾ ಸೇರಿರುತ್ತದೆ.

**ಜಾನಪದ ಜಾತ್ರೆಯನ್ನು ಮುಂದುವರೆಸುವ ಬಗ್ಗೆ**

**306; ಶ್ರೀ ಆರ್.ವಿ. ವೆಂಕಟೇಶ್ (ವಿಧಾನಸಭೆಯಿಂದ ಚುನಾಯಿತರಾದವರು)**

ಅ) ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ಜಾನಪದ ಜಾತ್ರೆಯು ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದಕ್ಕೆ ಕಾರಣಗಳೇನು;

ಆ) ರಾಜ್ಯದಲ್ಲಿ ನಶಿಸಿ ಹೋಗುತ್ತಿರುವ ಜಾನಪದ ಕಲೆ ಜೀವಂತವಾಗಿ ಕಲಾವಿದರನ್ನು ಪ್ರೋತ್ಸಾಹಿಸುವ ಹಾಗೂ ಸಾರ್ವಜನಿಕರನ್ನು ರಂಜಿಸುವ ಜಾನಪದ ಜಾತ್ರೆಗಳನ್ನು ಸರ್ಕಾರವು ಮುಂದುವರಿಸುವುದೇ?

**ಶ್ರೀ ಗೋವಿಂದ ಎಂ. ಕಾರಜೋಳ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಣ್ಣ ನೀರಾವರಿ ಸಚಿವರು)**

ಅ) ಬಂದಿದೆ. ಬೆಳಗಾವಿಯಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ತಯಾರಿ ಹಿನ್ನೆಲೆಯಲ್ಲಿ ಒಂದೆರಡು ಭಾಗಗಳಲ್ಲಿ ಮಾತ್ರ ಜಾನಪದ ಜಾತ್ರೆಗಳನ್ನು ಆಚರಿಸಲಾಗಿದ್ದು ಪೂರ್ಣ ಪ್ರಮಾಣದಲ್ಲಿ ಆಚರಿಸಲಾಗಿರುವುದಿಲ್ಲ.

ಆ) ಹೌದು. ಮುಂದುವರಿಸಲಾಗುವುದು.

**ಮಾಂಜ್ರಾ ನದಿಯ ಬ್ಯಾರೇಜ್ ಕಾಮಗಾರಿ ಕುರಿತು**

**308; ಶ್ರೀ ಖಾಜಿ ಅರಶದ ಅಲಿ (ವಿ.ಸ.ಯಿಂದ ಚುನಾಯಿತರಾದವರು)**

ಅ) ಬೀದರ್ ಜಿಲ್ಲೆಯಲ್ಲಿ ಮಾಂಜ್ರಾ ನದಿಗೆ ಅಡ್ಡಲಾಗಿ ಜೀರ್ಣಾಳ, ಮಾಳಿಕೇಶ್ವರ, ಹಾಲಹಳ್ಳಿ ಮತ್ತು ಚಂದಾಪೂರ ಬ್ಯಾರೇಜ್‍ಗಳ ನಿರ್ಮಾಣ ಕಾರ್ಯ ನೆನೆಗುದಿಗೆ ಬಿದ್ದಿರುವುದಕ್ಕೆ ಕಾರಣಗಳೇನು;

ಆ) ಈ ಕಾಮಗಾರಿಗಳನ್ನು ಪೂರ್ಣಗೊಳಿಸುವುದು ಯಾವಾಗ?

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)**

ಅ) ಬೀದರ್ ಜಿಲ್ಲೆ ಮಾಂಜ್ರಾ ನದಿಗೆ ಅಡ್ಡಲಾಗಿ ಕೈಗೆತ್ತಿಕೊಳ್ಳಲಾದ 4 ಸರಣಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣದ ಪೈಕಿ, ಈಗಾಗಲೇ ಚಂದಾಪುರ ಬ್ರಿಡ್ಜ್ ಕಂ ಬ್ಯಾರೇಜ್ ಪೂರ್ಣಗೊಂಡಿರುತ್ತದೆ.

ಜೀರಿಗಿಹಾಳ್ ಮತ್ತು ಮಾಣಿಕೇಶ್ವರ್ ಬ್ಯಾರೇಜುಗಳಡಿ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, ಬಾಕಿ ಉಳಿದ ಡೆಕ್‍ಸ್ಲಾಬ್ ಮತ್ತು ಗೇಟುಗಳ ಅಳವಡಿಕೆ ಕಾಮಗಾರಿಗಳು ತೀವ್ರ ಪ್ರಗತಿಯಲ್ಲಿದೆ.

ಹಾಲಹಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್‍ನಡಿ ಸಿವಿಲ್ ಕಾಮಗಾರಿಗಳು ಮತ್ತು ಗೇಟ್ ಅಳವಡಿಕೆ ಕಾಮಗಾರಿಗಳು ಈ ಕೆಳಕಂಡ ಕಾರಣಗಳಿಂದ ಕುಂಠಿತಗೊಂಡಿದ್ದು, ಪ್ರಸ್ತುತ ಬ್ಯಾರೇಜಿನ ಬಾಕಿ ಕಾಮಗಾರಿಗಳ ತೀವ್ರ ಪ್ರಗತಿಗೆ ಕ್ರಮ ಜರುಗಿಸಲಾಗಿದೆ.

ಸದರಿ ಬ್ಯಾರೇಜುಗಳ ಪ್ರಗತಿಯು ಈ ಕೆಳಕಂಡ ಕಾರಣಗಳಿಂದ ಕುಂಠಿತಗೊಂಡಿರುತ್ತವೆ.

(1) ಪ್ರತಿ ಸಾಲಿನ ಮಳೆ ಹಾಗೂ ಮಾಂಜ್ರಾ ನದಿಯ ಪ್ರವಾಹದಿಂದಾಗಿ ಕಾಮಗಾರಿಯ ಪ್ರಗತಿಯಲ್ಲಿ ವಿಳಂಬವಾಗಿರುತ್ತದೆ.

(2) ಪ್ರತಿ ಸಾಲಿನ ಮಾರ್ಚ್ ತಿಂಗಳಿನಿಂದ ಜೂನ್ ತಿಂಗಳವರೆಗೆ ಬೀದರ್ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಕಾರಂಜಾ ನದಿಯಿಂದ ಮಾಂಜ್ರಾ ನದಿಗೆ ನೀರು ಹರಿಸಬೇಕಾಗಿದ್ದು, ಈ ಕಾರಣ ಬ್ಯಾರೇಜು ಕಾಮಗಾರಿಗಳ ಪ್ರಗತಿಯಲ್ಲಿ ವಿಳಂಬವಾಗಿರುತ್ತದೆ.

(3) ಬ್ಯಾರೇಜುಗಳ ಅಡಿಪಾಯಕ್ಕಾಗಿ ಕಪ್ಪು ಮಣ್ಣು ಬದಲಾಗಿ ಗಟ್ಟಿ ಕಲ್ಲು ಪದರಿನಲ್ಲಿ ಅಗೆತದಿಂದ ಹೆಚ್ಚಿನ ಕಾಲಾವಕಾಶ ಉಂಟಾಗಿರುತ್ತದೆ.

(4) ಬ್ಯಾರೇಜ್ ನಿರ್ಮಾಣದ ಕಾಮಗಾರಿಗಳಲ್ಲಿ ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ಕೆಲವು ಅನಿವಾರ್ಯ ಹೆಚ್ಚುವರಿ ಪರಿಮಾಣದ ನಿರ್ಮಾಣದಿಂದಾಗಿ ಹೆಚ್ಚಿನ ಕಾಲಾವಕಾಶ ಉಂಟಾಗಿರುತ್ತದೆ.

**ಆ)** ಜೀರಿಗಿಹಾಳ್, ಮಾಣೀಕೇಶ್ವರ ಹಾಗೂ ಹಾಲಹಳ್ಳಿ ಬ್ಯಾರೇಜುಗಳ ಕಾಮಗಾರಿಗಳನ್ನು ಮಾರ್ಚ್ 2012ರ ಅಂತ್ಯಕ್ಕೆ ಪೂರ್ಣಗೊಳಿಸಲು ಕೃಷ್ಣಾ ಭಾಗ್ಯ ಜಲ ನಿಗಮದಡಿ ಎಲ್ಲಾ ಕ್ರಮ ಕೈಗೊಳ್ಳಲಾಗಿದೆ.

**ಕಾರ್ಮಿಕ ಇಲಾಖೆಯ 2002ರ ಕ್ರಿಯಾ ಯೋಜನೆ ಕುರಿತು**

**332; ಶ್ರೀ ಮನೋಹರ್ ಮಸ್ಕಿ (ಪದವೀಧರರ ಕ್ಷೇತ್ರ)**

**ಅ)** ಕಾರ್ಮಿಕ ಇಲಾಖೆಯು ತನ್ನ 2002ರ ಕ್ರಿಯಾ ಯೋಜನೆಯ ಜಾರಿಯಲ್ಲಾದ ಲೋಪಗಳೇನು;

**ಆ)** ಈ ಕ್ರಿಯಾ ಯೋಜನೆಯ ಮಧ್ಯಂತರ ವಿಶ್ಲೇಷಣೆಯನ್ನು ನಡೆಸದಿರಲು ಕಾರಣವೇನು;

**ಇ)** 2007 ರೊಳಗೆ ಕರ್ನಾಟಕವನ್ನು ಬಾಲಕಾರ್ಮಿಕ ರಾಜ್ಯ ಮುಕ್ತವನ್ನಾಗಿಸುವುದಾಗಿ ಹೇಳಿದ್ದ ಇಲಾಖೆ ಈಗ ಅದನ್ನು 2012ಕ್ಕೆ ಮುಂದೂಡಲು ಕಾರಣವೇನು;

**ಈ)** ಇಲಾಖೆಯ ಈ ಕಾರ್ಯಕ್ಕೆ ಸರ್ಕಾರದಿಂದ ಸರಿಯಾದ ಪ್ರಮಾಣದ ಹಣಕಾಸು ಬಿಡುಗಡೆಯಾಗಿದೆಯೇ;

**ಉ)** ಬಾಲ ಕಾರ್ಮಿಕ ಪದ್ಧತಿಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು)**

**ಅ)** ಕ್ರಿಯಾ ಯೋಜನೆಯಲ್ಲಿ ಗುರುತರವಾದ ಲೋಪಗಳು ಇರುವುದಿಲ್ಲ.

**ಆ)** ಕ್ರಿಯಾ ಯೋಜನೆಯಲ್ಲಿ ಮಧ್ಯಂತರ ವಿಶ್ಲೇಷಣೆಯನ್ನು ನಡೆಸಲು ಅವಕಾಶವನ್ನು ಕಲ್ಪಿಸಲಾಗಿದ್ದು, ಅದರನ್ವಯ ಸ್ವತಂತ್ರ ಸಂಸ್ಥೆಯಾದ ಸಾಮಾಜಿಕ–ಆರ್ಥಿಕ (ISEC) ಬದಲಾವಣೆ ಸಂಸ್ಥೆಗೆ ಮೌಲ್ಯಮಾಪನ ಕೆಲಸವನ್ನು ವಹಿಸಿದ್ದು, ಸಾಮಾಜಿಕ–ಆರ್ಥಿಕ ಬದಲಾವಣೆ ಸಂಸ್ಥೆಯು ನೀಡಿದ ವರದಿ ಆಧಾರದ ಮೇಲೆ ಈ ಕೆಳಕಂಡ ಹೊಸ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ.

1) ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ ಅಡಿಯಲ್ಲಿ ನಡೆಯುತ್ತಿರುವ ಹಗಲು ಸೇತುಬಂಧು (ಎನ್‌ಸಿಎಲ್‌ಪಿ) ಶಾಲೆಗಳನ್ನು ವಸತಿ ಶಾಲೆಗಳನ್ನಾಗಿ ಪರಿವರ್ತಿಸಲಾಗುತ್ತಿದೆ.

2) ಬಾಲಕಾರ್ಮಿಕರ ಸಮರ್ಪಕ ಮಾಹಿತಿ ಮತ್ತು ನಿರ್ವಹಣೆಗಾಗಿ ಅಂತರ್‌ಜಾಲ ಆಧಾರಿತ ನಿಗಾ ವ್ಯವಸ್ಥೆ (Web based tracking system)ಯನ್ನು ಅಳವಡಿಸಲಾಗಿದೆ.

3) ಶಾಲಾ ಶಿಕ್ಷಕರ ಗೌರವಧನವನ್ನು ಹೆಚ್ಚಿಸಲಾಗಿದೆ.

4) ಶಾಲಾ ನಿರ್ವಹಣಾ ವೆಚ್ಚವನ್ನು ರೂ. 4,30,000/–ಗಳಿಂದ ರೂ. 8,04,000/–ಗಳಿಗೆ ಪರಿಷ್ಕರಿಸಲಾಗಿದೆ.

5) ಜಿಲ್ಲಾ ಮಟ್ಟದ ಬಾಲಕಾರ್ಮಿಕ ಯೋಜನಾ ಸೊಸೈಟಿಗಳ ಸಿಬ್ಬಂದಿಗಳ ದಕ್ಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಗೌರವಧನವನ್ನು ಪರಿಷ್ಕರಿಸಲಾಗಿದೆ.

6) ಯೋಜನಾ ಸೊಸೈಟಿಗಳ ಸಿಬ್ಬಂದಿಗಳ ವಿದ್ಯಾರ್ಹತೆ ಮತ್ತು ಇತರೆ ಷರತ್ತುಗಳನ್ನು ವಿಧಿಸುವುದರ ಮೂಲಕ ನುರಿತ ಸಿಬ್ಬಂದಿಗಳನ್ನು ನೇಮಿಸಲಾಗಿದೆ.

7) ಬಾಲ ಕಾರ್ಮಿಕರ ಸಾಂದ್ರತೆಯನ್ನು ಅರಿಯಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಮೀಕ್ಷೆ ಕಾರ್ಯವನ್ನು ನಡೆಸಲಾಗುತ್ತಿದೆ.

ಇ) ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗದ ಕಾರಣ ಕ್ರಿಯಾ ಯೋಜನೆಯನ್ನು 2012ರವರೆಗೆ ವಿಸ್ತರಿಸಲಾಗಿದೆ.

ಈ) ಆಗಿದೆ

ಉ) ಬಾಲಕಾರ್ಮಿಕ ಪದ್ಧತಿಯನ್ನು ನಿವಾರಿಸಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಬಾಲಕಾರ್ಮಿಕರನ್ನು ಪತ್ತೆಹಚ್ಚುವ ಮತ್ತು ಪುನರ್ವಸತಿಗೊಳಿಸುವ ಸಲುವಾಗಿ ನಿಯಮಿತವಾಗಿ ತಪಾಸಣೆಗಳನ್ನು ನಡೆಸಲಾಗುತ್ತಿದ್ದು, ಆಗಿಂದಾಗ್ಗೆ ಅನಿರೀಕ್ಷಿತ ತಪಾಸಣೆಗಳನ್ನೂ ಸಹ ನಡೆಸಲಾಗುತ್ತಿದೆ. ತಪ್ಪಿತಸ್ಥ ಮಾಲೀಕರ ವಿರುದ್ಧ ಸಕ್ಷಮ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ದಾಖಲು ಮಾಡಲಾಗುತ್ತಿದೆ.

2. ಪತ್ತೆಹಚ್ಚಲಾದ ಬಾಲಕಾರ್ಮಿಕರನ್ನು, ಕೇಂದ್ರ ಸರ್ಕಾರದ ರಾಷ್ಟ್ರೀಯ ಬಾಲಕಾರ್ಮಿಕ ಕ್ರಿಯಾಯೋಜನೆ (ಎನ್‌ಸಿಎಲ್‌ಪಿ) ಮತ್ತು ರಾಜ್ಯ ಸರ್ಕಾರದ ಬಾಲಕಾರ್ಮಿಕ ಕ್ರಿಯಾ ಯೋಜನೆಯಡಿಯಲ್ಲಿ ನಡೆಸುತ್ತಿರುವ ವಿಶೇಷ ವಸತಿ ಶಾಲೆಗಳಲ್ಲಿ

ಪುನರ್ವಸತಿ ಕಲ್ಪಿಸುವುದರ ಮೂಲಕ ವಿದ್ಯಾಭ್ಯಾಸವನ್ನು ನೀಡಲಾಗುತ್ತಿದೆ.

3. ರಾಜ್ಯದಲ್ಲಿ ಬಾಲಕಾರ್ಮಿಕರನ್ನು ಗುರುತಿಸುವ ಸಂಬಂಧ ಸಮೀಕ್ಷೆ ಕಾರ್ಯವನ್ನು ಹಮ್ಮಿಕೊಂಡಿದ್ದು, ಬಹುತೇಕ ಜಿಲ್ಲೆಗಳಲ್ಲಿ ಸಮೀಕ್ಷೆ ಕಾರ್ಯ ಸಂಪೂರ್ಣಗೊಂಡಿದ್ದು, ಬಾಲಕಾರ್ಮಿಕರ ಸಂಖ್ಯೆಗನುಗುಣವಾಗಿ ವಿಶೇಷ ಶಾಲೆಗಳನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗಿದೆ.

4. ಬಾಲಕಾರ್ಮಿಕರ ಸಂಪೂರ್ಣ ದಾಖಲೀಕರಣ ಮತ್ತು ನಿಯಂತ್ರಣಕ್ಕಾಗಿ Web based Child Labour Tracking System ಅನ್ನು ಅಳವಡಿಸಲಾಗುತ್ತಿದೆ.

5. ಸಾರ್ವಜನಿಕರಿಗೆ ಮಕ್ಕಳು ದುಡಿಯುತ್ತಿರುವುದು ಕಂಡುಬಂದಲ್ಲಿ, ದೂರುಗಳನ್ನು ನೀಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ನಿರ್ವಹಿಸುತ್ತಿರುವ ಉಚಿತ ದೂರವಾಣಿ ಸಂಖ್ಯೆ 1098 ಅನ್ನು ಬಳಸಿಕೊಳ್ಳಲಾಗುತ್ತಿದೆ.

6. ಬಾಲಕಾರ್ಮಿಕರ ನೇಮಕಾತಿ ಬಗ್ಗೆ ದೂರುಗಳನ್ನು ಸ್ವೀಕರಿಸಲು ಕೇಂದ್ರ ಕಚೇರಿಯಲ್ಲಿ ಕಂಟ್ರೋಲ್ ರೂಮ್ ಅನ್ನು ತೆರೆಯಲಾಗಿದೆ.

7. ಆನ್‌ಲೈನ್ ಮೂಲಕ ದೂರುಗಳನ್ನು ದಾಖಲಿಸುವ ವ್ಯವಸ್ಥೆಯನ್ನೂ ಸಹ ಕಲ್ಪಿಸಲಾಗಿದೆ.

8. ಸಾರ್ವಜನಿಕರಿಗೆ ಮತ್ತು ಸಂಘ ಸಂಸ್ಥೆಗಳಿಗೆ ಬಾಲಕಾರ್ಮಿಕತೆಯ ಕುರಿತು ಮಾಹಿತಿ ನೀಡುವ ಸಲುವಾಗಿ ವಿದ್ಯುನ್ಮಾನ ದ್ವೈಮಾಸಿಕ 'ಬಾಲವಾಣಿ' ಎಂಬ ಪತ್ರಿಕೆಯನ್ನು ಪ್ರಕಟಿಸಲಾಗುತ್ತಿದೆ.

9. ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಉದ್ದೇಶದಿಂದ ಕಾರ್ಮಿಕ ಇಲಾಖೆಯ ಅಧಿಕಾರಿಗಳಲ್ಲದೇ, ಇತರೆ 11 ಇಲಾಖೆಗಳ ಅಧಿಕಾರಿಗಳನ್ನು ನಿರೀಕ್ಷಕರನ್ನಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

10. ಅಪಾಯಕಾರಿ ಕೆಲಸಗಳಲ್ಲಿ, ಬಾಲಕಾರ್ಮಿಕರನ್ನು ನೇಮಿಸಿಕೊಂಡ ಮಾಲೀಕರಿಂದ ಪ್ರತಿ ಪ್ರಕರಣಕ್ಕೆ ರೂ. 20,000/– ಗಳಂತೆ ಪರಿಹಾರವನ್ನು ವಸೂಲಿ ಮಾಡಿ 'ಕಾರ್ಪಸ್ ನಿಧಿ'ಯನ್ನು ಸ್ಥಾಪಿಸಿ, 'ಕಾರ್ಪಸ್ ನಿಧಿ'ಯಿಂದ ಬರುವ ಬಡ್ಡಿಯನ್ನು ಬಾಲಕಾರ್ಮಿಕರ ಕುಟುಂಬಕ್ಕೆ ಪಾವತಿಸಲಾಗುತ್ತಿದೆ.

11. ಸಾರ್ವಜನಿಕರು ಮತ್ತು ಪೋಷಕರಲ್ಲಿ ಬಾಲಕಾರ್ಮಿಕ ಪದ್ಧತಿ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

## ಕೊಣನೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಕಾವೇರಿ ನದಿಗೆ ಸೋಪಾನ ಕಟ್ಟೆ ನಿರ್ಮಾಣ

**317; ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿ.ಸ.ಯಿಂದ ಚುನಾಯಿತರಾದವರು)**

ಅ) ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು, ಕೊಣನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾವೇರಿ ನದಿಗೆ ಸೋಪಾನ ಕಟ್ಟೆ ನಿರ್ಮಿಸಲು ಸರ್ಕಾರವು ಈಗಾಗಲೇ ಅನುದಾನವನ್ನು ಒದಗಿಸಿ ಮೂರು ವರ್ಷಗಳೇ ಕಳೆದಿದ್ದರೂ ಯಾವುದೇ ಪ್ರಗತಿಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರಸ್ತುತ ಈ ವಿಳಂಬಕ್ಕೆ ಕಾರಣವಾಗಿರುವವರ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;

ಇ) ಸದರಿ ಯೋಜನೆಯನ್ನು ಶೀಘ್ರವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಸರ್ಕಾರವು ಯಾವ ತುರ್ತು ಕ್ರಮಗಳನ್ನು ಕೈಗೊಳ್ಳುತ್ತದೆ? (ಸಂಪೂರ್ಣ ಮಾಹಿತಿ ನೀಡುವುದು)

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ) ಅರಕಲಗೂಡು ತಾಲ್ಲೂಕು, ಕೊಣನೂರು ಗ್ರಾಮದಲ್ಲಿರುವ ಈಶ್ವರಸ್ವಾಮಿ ದೇವಸ್ಥಾನದ ಬಳಿ ಕಾವೇರಿ ನದಿಗೆ ಒಂದು ಸೋಪಾನ ನಿರ್ಮಿಸಲು 2010-11ನೇ ಸಾಲಿನಲ್ಲಿ ಕಾವೇರಿ ನೀರಾವರಿ ನಿಗಮದಿಂದ ಆಡಳಿತಾತ್ಮಕ ಅನುಮೋದನೆಯನ್ನು ರೂ. 9.90 ಲಕ್ಷಗಳಿಗೆ ನೀಡಲಾಗಿರುತ್ತದೆ. ಸದರಿ ಕಾಮಗಾರಿಗೆ ಅಧೀಕ್ಷಕ ಅಭಿಯಂತರರು 2010-11ನೇ ಸಾಲಿನಲ್ಲಿ ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್ ಆಧಾರದ ಮೇಲೆ ಶ್ರೀ ಎಲ್.ಜೆ. ಅನಂತರಾಜು, 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ಗುತ್ತಿಗೆ ದಿನಾಂಕ:15-03-2011 ರಂದು 45 ದಿನಗಳ ಕಾಲಾವಧಿ ನೀಡಿ, ವಹಿಸಿಕೊಡಲಾಗಿತ್ತು. ಈ ಕಾಮಗಾರಿಯನ್ನು ಜೂನ್ 2011 ರಿಂದ ಪ್ರಾರಂಭಿಸಿದ್ದು, ಮುಂಗಾರಿನ ಮಳೆಯಿಂದ ನದಿಯಲ್ಲಿ ಪ್ರವಾಹ ಬಂದ ಕಾರಣ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ. ಈ ಕಾಮಗಾರಿಯಲ್ಲಿ ಇಲ್ಲಿಯವರೆಗೆ ಶೇ.70 ರಷ್ಟು ಭೌತಿಕವಾಗಿ ಪ್ರಗತಿಯನ್ನು ಸಾಧಿಸಲಾಗಿದೆ. ಇಲ್ಲಿಯವರೆಗೆ ರೂ. 6.73 ಲಕ್ಷ ವೆಚ್ಚ ಮಾಡಲಾಗಿದೆ.

ಆ) ಈ ಕಾಮಗಾರಿಯನ್ನು ತಡವಾಗಿ ಆರಂಭ ಮಾಡಿದ ಗುತ್ತಿಗೆದಾರರಿಗೆ ದಂಡವಿಧಿಸಲು ಕ್ರಮ ಕೈಗೊಳ್ಳಲಾಗುವುದು.

ಇ) 2011 ರ ಸಾಲಿನ ಮುಂಗಾರು ಮಳೆಯ ಅವಧಿಯಲ್ಲಿ ನದಿಯಲ್ಲಿ ಪ್ರವಾಹ ಬಂದಿದ್ದರಿಂದ ಕಾಮಗಾರಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದ್ದಾಗ 2011 ರ ಸಾಲಿನ ಮುಂಗಾರು ಮಳೆಯು ಪ್ರಾರಂಭಗೊಂಡು ನದಿಯಲ್ಲಿ ಪ್ರವಾಹ ಬಂದಾಗ ಸೋಪಾನದ ತಳಭಾಗದಲ್ಲಿನ ಮೂರು ಹಂತಗಳ ಮಟ್ಟಕ್ಕೆ

ನೀರಿನಲ್ಲಿ ಮುಳುಗಿ ಹೋಗಿದ್ದರಿಂದ ಈ ಸ್ಥಳದಲ್ಲಿ ಕಾಮಗಾರಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಪ್ರವಾಹದ ಮೇಲ್ಭಾಗದಲ್ಲಿ ಬರುವ ಸ್ಥಳದಲ್ಲಿ ಕಾಮಗಾರಿಯನ್ನು ಮುಂದುವರೆಸಲಾಯಿತು. ಪ್ರಸ್ತುತ ನದಿಯಲ್ಲಿ ನೀರು ಇಳಿಮುಖವಾಗಿರುತ್ತಿದ್ದು, ಕಾಮಗಾರಿಯನ್ನು ಪ್ರಾರಂಭಿಸಿ 2012 ರ ಫೆಬ್ರವರಿ 15 ರ ಒಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

4. ಗಿರಿಜನ ಉಪ ಯೋಜನೆ
5. ಜಿಲ್ಲಾ ಪಂಚಾಯತ್ ಯೋಜನೆಗಳು
6. ರೇಷ್ಮೆ ಹುಳು ಸಾಕಾಣಿಕೆ ಚಟುವಟಿಕೆ ಅಭಿವೃದ್ಧಿ
7. ರೇಷ್ಮೆ ವ್ಯವಸಾಯ ಅಭಿವೃದ್ಧಿ ಕ್ಲಸ್ಟರ್
8. ಬೈವೋಲ್ಟೈನ್ ಬಿತ್ತನೆ ಗೂಡು ಉತ್ತೇಜಕಗಳು
9. ದ್ವಿತಳಿ ಚಾಕಿ ಸಾಕಾಣಿಕೆ ವೆಚ್ಚಗಳು
10. ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ

**ಇತರೆ ಸೌಲಭ್ಯಗಳು**

1. ನೂತನ ತಾಂತ್ರಿಕತೆಗಳ ಅನುಸರಣೆಗಾಗಿ ತರಬೇತಿ ಮತ್ತು ಮಾರ್ಗದರ್ಶನ
2. ಉತ್ತಮ ಗುಣಮಟ್ಟದ ಮೊಟ್ಟೆಗಳ ಸರಬರಾಜು
3. ಬೆಳೆದ ಗೂಡುಗಳ ವಿಲೇವಾರಿಗಾಗಿ ಗೂಡು ಮಾರುಕಟ್ಟೆಗಳ ನಿರ್ವಹಣೆ
4. ರೇಷ್ಮೆ ವ್ಯವಸಾಯದ ಚಟುವಟಿಕೆಗಳಿಗಾಗಿ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ಸಹಾಯ.

## ITI ಕಾಲೇಜುಗಳ ಮಾಹಿತಿ ನೀಡುವ ಬಗ್ಗೆ

## 321; ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

**ಅ)** ರಾಜ್ಯದಲ್ಲಿರುವ ಸರ್ಕಾರಿ, ಅನುದಾನಿತ, ಅನುದಾನರಹಿತ ಐಟಿಐಗಳ ಸಂಖ್ಯೆ ಎಷ್ಟು; (ವಿವರಗಳೊಡನೆ ಒದಗಿಸುವುದು)

**ಆ)** ಸದರಿ ಐಟಿಐಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

**ಇ)** ಹೊಸದಾಗಿ ಐಟಿಐಗಳನ್ನು ತೆರೆಯಲು ಸರ್ಕಾರ ಚಿಂತನೆ ನಡೆಸಿದೆಯೇ;

**ಈ)** ಹಾಗಾದರೆ ಎಷ್ಟು ಐಟಿಐಗಳನ್ನು ಯಾವ ಕಾಲಮಿತಿಯಲ್ಲಿ ಪ್ರಾರಂಭಿಸಲಾಗುವುದು; (ವಿವರಗಳೊಡನೆ ಒದಗಿಸುವುದು)

**ಉ)** ಈ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಬೋಧಕೇತರದ ಸಿಬ್ಬಂದಿಗಳೆಷ್ಟು? (ವಿವರಗಳೊಡನೆ ಒದಗಿಸುವುದು)

### ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು)

**ಅ)** ಪ್ರಸ್ತುತ ರಾಜ್ಯದಲ್ಲಿ 158 ಸರ್ಕಾರಿ, 194 ಅನುದಾನಿತ ಹಾಗೂ 1087 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. (ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ)

**ಆ)** ಸರ್ಕಾರಿ ಐಟಿಐಗಳಲ್ಲಿ–34726 ಅನುದಾನಿತ ಐಟಿಐಗಳಲ್ಲಿ–35003 ಮತ್ತು ಅನುದಾನ ರಹಿತ ಐಟಿಐಗಳಲ್ಲಿ–89443 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ

**ಇ)** ಇಲ್ಲ

**ಈ)** ಅನುದಾನದ ಲಭ್ಯತೆ ಹಾಗೂ ಅವಶ್ಯಕತೆ ಆಧಾರದಲ್ಲಿ ಹಂತ ಹಂತವಾಗಿ ಐಟಿಐಗಳನ್ನು ತೆರೆಯುವ ಬಗ್ಗೆ ಪರಿಶೀಲಿಸಲಾಗುವುದು.

ಉ) ಸರ್ಕಾರಿ ಐಟಿಐಗಳಲ್ಲಿ

ಬೋಧಕ – 1440,

ಬೋಧಕೇತರ – 1071 ಸಿಬ್ಬಂದಿಗಳು

ಅನುದಾನಿತ ಐಟಿಐಗಳಲ್ಲಿ

ಬೋಧಕ – 1324

ಬೋಧಕೇತರ – 850

ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ

## ANNEXURE -1

| Division | District | No. of Govt. & Pvt. ITCs | | |
|---|---|---|---|---|
| | | Total Govt. | Aided | Un-aided |
| Bangalore | Bangalore Urban | 6 | 10 | 67 |
| | Bangalore Rural | 2 | 1 | 13 |
| | Ramanagar | 4 | 3 | 19 |
| | Chitradurga | 4 | 4 | 51 |
| | Davanagere | 3 | 6 | 41 |
| | Kolar | 4 | 7 | 20 |
| | Chikkaballapura | 4 | 1 | 13 |
| | Shimoga | 6 | 6 | 26 |
| | Tumkur | 8 | 12 | 48 |
| Gulbarga | Bellary | 8 | 8 | 70 |
| | Bidar | 4 | 6 | 64 |
| | Gulbarga | 6 | 9 | 71 |
| | Yadgiri | 1 | 2 | 23 |
| | Koppal | 7 | 3 | 37 |
| | Raichur | 4 | 2 | 33 |
| Hubli | Bagalkote | 4 | 10 | 53 |
| | Belgaum | 9 | 8 | 90 |
| | Bijapur | 3 | 7 | 80 |
| | Dharwad | 5 | 15 | 34 |
| | Gadag | 4 | 7 | 29 |
| | Haveri | 4 | 3 | 42 |
| | U.K. | 9 | 4 | 9 |
| Mysore | Chamarajanagar | 3 | 3 | 9 |
| | Chikkamagalur | 5 | 5 | 10 |
| | Dakshina Kannada | 5 | 13 | 11 |
| | Hassan | 13 | 20 | 53 |
| | Kodagu | 3 | 1 | 4 |
| | Mandya | 10 | 4 | 36 |
| | Mysore | 7 | 10 | 28 |
| | Udupi | 3 | 4 | 3 |
| Total | | 158 | 194 | 1087 |

**ತುಮಕೂರು ಜಿಲ್ಲೆಯ ಕೆರೆಗಳ ಹೂಳು ಎತ್ತುವ ಕಾರ್ಯಕ್ರಮ**

**337; ಡಾ॥ ದೊಡ್ಡರಂಗೇಗೌಡ (ನಾಮನಿರ್ದೇಶನ ಹೊಂದಿದವರು)**

ಅ) ತುಮಕೂರು ಜಿಲ್ಲೆಯಲ್ಲಿ ಕೆರೆಗಳ ಹೂಳು ಎತ್ತುವ ಕಾರ್ಯಕ್ರಮವು ಎಷ್ಟು ಕೆರೆಗಳಲ್ಲಿ ಪ್ರಗತಿಯಲ್ಲಿದೆ;

ಆ) ಯಾವ ಏಜೆನ್ಸಿ ಮೂಲಕ ಹೂಳು ಎತ್ತಿಸಲಾಗುತ್ತಿದೆ;

ಇ) ಹೂಳು ಎತ್ತಲು ಗುರ್ತಿಸಿರುವ ಜಿಲ್ಲೆಯ ಕೆರೆಗಳ ಸಂಖ್ಯೆಯನ್ನು ತಾಲ್ಲೂಕುವಾರು ಮಾಹಿತಿ ನೀಡುವುದು;

ಈ) ರಾಜ್ಯದ ಇತರ ಜಿಲ್ಲೆಗಳಲ್ಲಿ ಕೆರೆಗಳ ಹೂಳು ಎತ್ತುವ ಯೋಜನೆ ಸರ್ಕಾರದ ಮುಂದೆ ಇದೆಯೇ? (ವಿವರ ನೀಡುವುದು)

**ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)**

ಅ) ಹೂಳೆತ್ತುವ ಅಂಶವೂ ಸೇರಿದಂತೆ ಕೆರೆಗಳ ಸಮಗ್ರ ಅಭಿವೃದ್ಧಿಯನ್ನು ತುಮಕೂರು ಜಿಲ್ಲೆಯಲ್ಲಿ ಕೆಳಕಂಡ ಯೋಜನೆಗಳಡಿ ನಿರ್ವಹಿಸಲಾಗುತ್ತಿದೆ.

| ಕ್ರ.ಸಂ. | ಯೋಜನೆ | ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ |
|---|---|---|
| 1 | ಕೇಂದ್ರ ಸರ್ಕಾರದ ನೆರವಿನ ಕೆರೆಗಳ ದುರಸ್ಥಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ (ಆರ್.ಆರ್.ಆರ್.) | 15 |
| 2 | ಕೆರೆಗಳ ದುರಸ್ಥಿ ಮತ್ತು ಪುನಶ್ಚೇತನ ಯೋಜನೆ | 43 |
| 3 | ಜಲಸಂವರ್ಧನೆ ಯೋಜನಾ ಸಂಘ | 99 |

**ಆ)** ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

**ಇ)** ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

**ಈ)** ಪ್ರತ್ಯೇಕವಾಗಿ ಕೆರೆಗಳಲ್ಲಿ ಹೂಳೆತ್ತುವ ಯಾವುದೇ ಯೋಜನೆ ಇರುವುದಿಲ್ಲ. ಆದರೆ, ಮೇಲೆ ವಿವರಿಸಿರುವ ಯೋಜನೆಗಳಡಿ ನಬಾರ್ಡ್ ಸಾಲ ಸೌಲಭ್ಯದೊಂದಿಗೆ ಹಾಗೂ 13ನೇ ಹಣಕಾಸು ಆಯೋಗದ ಅನುದಾನದಡಿ ಹೂಳೆತ್ತುವ ಅಂಶವೂ ಸೇರಿದಂತೆ ಕೆರೆಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

## ಅನುಬಂಧ-1

| ಕ್ರ ಸಂ | ಜಿಲ್ಲೆ, / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| ಆರ್.ಆರ್.ಆರ್. ಯೋಜನೆ | | | | | | |
| 1 | ತುಮಕೂರು/ ತುಮಕೂರು | ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಹೊನ್ನುಡಿಕೆ ದೊಡ್ಡಕೆರೆ, ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 66.00 | 47.29 | ಶ್ರೀ ಕೃಷ್ಣ, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 2 | ತುಮಕೂರು/ ತುಮಕೂರು | ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು.ಕೆಂಬಳಲು ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 61.44 | 47.56 | ಶ್ರೀ ಕೃಷ್ಣ, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 3 | ತುಮಕೂರು/ ತುಮಕೂರು | ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಕಣಕುಪ್ಪೆ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 40.00 | 28.46 | ಶ್ರೀ ಕೃಷ್ಣ, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 4 | ತುಮಕೂರು/ ತುಮಕೂರು | ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಹರಳೂರು ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 26.00 | 18.40 | ಶ್ರೀ ಕೃಷ್ಣ, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 5 | ತುಮಕೂರು/ ತುಮಕೂರು | ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ದುರ್ಗದಹಳ್ಳಿ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 52.50 | 32.02 | ಶ್ರೀ ಕೃಷ್ಣ, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 6 | ತುಮಕೂರು/ ತುಮಕೂರು | ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಹಾಲುಗೊಂಡನಹಳ್ಳಿ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 25.00 | 18.07 | ಶ್ರೀ ಕೃಷ್ಣ, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 7 | ತುಮಕೂರು/ ತುಮಕೂರು | ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಶೆಟ್ಟಿಹಳ್ಳಿ ಉತ್ತರಘಟ್ಟ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 28.80 | 20.58 | ಶ್ರೀ ಕೃಷ್ಣ, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |

| ಕ್ರ ಸಂ | ಜಿಲ್ಲೆ / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 8 | ತುಮಕೂರು/ ತುಮಕೂರು | ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ದೇವಲಾಪುರ ಕೆರೆ, ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 38.00 | 31.53 | ಶ್ರೀ ಶಂಕರರೆಡ್ಡಿ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 9 | ತುಮಕೂರು/ ತುಮಕೂರು | ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಚಿಕ್ಕತೊಟ್ಲು ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 50.00 | 43.18 | ಶ್ರೀ ಶಂಕರರೆಡ್ಡಿ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 10 | ಕುಣಿಗಲ್/ ಕುಣಿಗಲ್ | ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ದೀಪಾಂಬುದಿ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 170.00 | 86.22 | ಶ್ರೀ ಎಸ್.ಮಾದವರೆಡ್ಡಿ 1ನೇ ದರ್ಜೆ ಗುತ್ತಿಗೆದಾರರು | ಕಾಮಗಾರಿ ಪ್ರಗತಿಯಲ್ಲಿದೆ |
| 11 | ಕುಣಿಗಲ್/ ಕುಣಿಗಲ್ | ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ನಿಡಸಾಲೆ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 120.00 | 56.26 | ಶ್ರೀ ಕಿಶೋರ್ ಕುಮಾರ್ ಹೆಗ್ಗಡೆ, ನಿರ್ಮಾಣ ಇಂಜಿನಿಯರ್ಸ್ | ಕಾಮಗಾರಿ ಪ್ರಗತಿಯಲ್ಲಿದೆ |
| 12 | ಕುಣಿಗಲ್/ ಕುಣಿಗಲ್ | ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಹಳೆವೂರು ಕೆರೆದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 50.00 | 27.65 | ಶ್ರೀ ವಿಜಯರಾಂ, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 13 | ಕುಣಿಗಲ್/ ಕುಣಿಗಲ್ | ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಯಲಿಯೂರು ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 75.00 | 42.93 | ಶ್ರೀ ವಿಜಯರಾಂ, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 14 | ಕುಣಿಗಲ್/ ಕುಣಿಗಲ್ | ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ನೀಲತ್ತನಹಳ್ಳಿ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 60.00 | 45.21 | ಶ್ರೀ ಕಿಶೋರ್ ಕುಮಾರ್ ಹೆಗ್ಗಡೆ, ನಿರ್ಮಾಣ ಇಂಜಿನಿಯರ್ಸ್ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 15 | ಕುಣಿಗಲ್/ ಕುಣಿಗಲ್ | ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ದೊಡ್ಡಮದುರೆ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 35.00 | 24.63 | ಶ್ರೀ ಕಿಶೋರ್ ಕುಮಾರ್ ಹೆಗ್ಗಡೆ, ನಿರ್ಮಾಣ ಇಂಜಿನಿಯರ್ಸ್ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |

| ಕ್ರ ಸಂ | ಜಿಲ್ಲೆ, / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 16 | ಕುಣಿಗಲ್/ ಕುಣಿಗಲ್ | ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಹೊಸೂರು ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 28.00 | 18.70 | ಶ್ರೀ ಕಿಶೋರ್ ಕುಮಾರ್ ಹೆಗ್ಗಡೆ, ನಿರ್ಮಾಣ ಇಂಜಿನಿಯರ್ಸ್ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 17 | ಕುಣಿಗಲ್/ ಕುಣಿಗಲ್ | ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಯಲಗಲವಾಡಿ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 25.00 | 19.98 | ಶ್ರೀ ಕಿಶೋರ್ ಕುಮಾರ್ ಹೆಗ್ಗಡೆ, ನಿರ್ಮಾಣ ಇಂಜಿನಿಯರ್ಸ್ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 18 | ಕುಣಿಗಲ್/ ಕುಣಿಗಲ್ | ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಕತ್ತರಿಘಟ್ಟ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 25.00 | 19.02 | ಶ್ರೀ ಕಿಶೋರ್ ಕುಮಾರ್ ಹೆಗ್ಗಡೆ, ನಿರ್ಮಾಣ ಇಂಜಿನಿಯರ್ಸ್ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 19 | ಕೊರಟಗೆರೆ/ ಕೊರಟಗೆರೆ | ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಅಕ್ಕಿರಾಂಪುರ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 35.00 | 28.31 | ಶ್ರೀ ಎಸ್.ಶಂಕರರೆಡ್ಡಿ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 20 | ಕೊರಟಗೆರೆ/ ಕೊರಟಗೆರೆ | ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಚಿಕ್ಕವಳ್ಳಿ ಧರ್ಮಸಾಗರ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 100.00 | 86.16 | ಶ್ರೀ ಎಸ್.ಶಂಕರರೆಡ್ಡಿ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 21 | ಕೊರಟಗೆರೆ/ ಕೊರಟಗೆರೆ | ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಹುಲಿಕುಂಟೆ ದೊಡ್ಡ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 30.00 | 27.29 | ಶ್ರೀ ಎಸ್.ಶಂಕರರೆಡ್ಡಿ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 22 | ಕೊರಟಗೆರೆ/ ಕೊರಟಗೆರೆ | ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಮಾವತ್ತೂರು ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 260.00 | 153.92 | ಶ್ರೀ ಎಸ್.ಶಂಕರರೆಡ್ಡಿ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 23 | ಕೊರಟಗೆರೆ/ ಕೊರಟಗೆರೆ | ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಕೋಳಾಲದೊಡ್ಡ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 26.00 | 17.45 | ಶ್ರೀ ಪಿ.ವೆಂಕಟೇಶ್ವರರಾವ್ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |

| ಕ್ರ ಸಂ | ಜಿಲ್ಲೆ, / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 24 | ಕೊರಟಗೆರೆ/ ಕೊರಟಗೆರೆ | ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಇರಕಸಂದ್ರ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 128.00 | 83.13 | ಶ್ರೀ ಪಿ.ವೆಂಕಟೇಶ್ವರರಾವ್ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 25 | ಕೊರಟಗೆರೆ/ ಕೊರಟಗೆರೆ | ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಅಗ್ರಹಾರ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 120.00 | 66.89 | ಶ್ರೀ ಎ.ಡಿ.ಬಲರಾಮಯ್ಯ 1ನೇ ದರ್ಜೆ ಗುತ್ತಿಗೆದಾರರು | ಕಾಮಗಾರಿ ಪ್ರಗತಿಯಲ್ಲಿದೆ |
| 26 | ಕೊರಟಗೆರೆ/ ಕೊರಟಗೆರೆ | ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಜಂಪೇನಹಳ್ಳಿ ಹೊಸ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 90.00 | 36.23 | ಶ್ರೀ ಎ.ಡಿ.ಬಲರಾಮಯ್ಯ 1ನೇ ದರ್ಜೆ ಗುತ್ತಿಗೆದಾರರು | ಕಾಮಗಾರಿ ಪ್ರಗತಿಯಲ್ಲಿದೆ |
| 27 | ಕೊರಟಗೆರೆ/ ಕೊರಟಗೆರೆ | ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ತುಂಬಾಡಿ ಹೊಸ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 128.00 | 33.80 | ಶ್ರೀ ಹೆಚ್.ನಾರಾಯಣಪ್ಪ 1ನೇ ದರ್ಜೆ ಗುತ್ತಿಗೆದಾರರು | ಕಾಮಗಾರಿ ಪ್ರಗತಿಯಲ್ಲಿದೆ |
| 28 | ಮಧುಗಿರಿ/ ಮಧುಗಿರಿ | ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ಚೋಳೆನಹಳ್ಳಿ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 56.00 | 34.83 | ಶ್ರೀ ಎಂ.ಶಿವಾನಂದ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 29 | ಮಧುಗಿರಿ/ ಮಧುಗಿರಿ | ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ಬಿಜವಾರ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 75.50 | 36.22 | ಶ್ರೀ ಎಂ.ಶಿವಾನಂದ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 30 | ಮಧುಗಿರಿ/ ಮಧುಗಿರಿ | ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ಕಡಗತ್ತೂರು ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 85.00 | 28.64 | ಶ್ರೀ ಹೆಚ್.ನಾರಾಯಣಪ್ಪ 1ನೇ ದರ್ಜೆ ಗುತ್ತಿಗೆದಾರರು | ಕಾಮಗಾರಿ ಪ್ರಗತಿಯಲ್ಲಿದೆ |
| 31 | ಮಧುಗಿರಿ/ ಮಧುಗಿರಿ | ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ಐ.ಡಿ.ಹಳ್ಳಿ ದೊಡ್ಡಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 45.00 | 9.98 | ಶ್ರೀ ಹೆಚ್.ನಾರಾಯಣಪ್ಪ 1ನೇ ದರ್ಜೆ ಗುತ್ತಿಗೆದಾರರು | ಕಾಮಗಾರಿ ಪ್ರಗತಿಯಲ್ಲಿದೆ |

| ಕ್ರ ಸಂ | ಜಿಲ್ಲೆ, / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 32 | ತಿಪಟೂರು /ತಿಪಟೂರು | ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ಹೊಗವನಘಟ್ಟ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 24.00 | 17.58 | ಶ್ರೀ ಹೆಚ್.ನಾರಾಯಣಪ್ಪ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 33 | ತಿಪಟೂರು /ತಿಪಟೂರು | ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ಕರಡಾಳು ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 32.00 | 7.23 | ಶ್ರೀ ಪಿ.ರಮೇಶ್, 1ನೇ ದರ್ಜೆ ಗುತ್ತಿಗೆದಾರರು | ಕಾಮಗಾರಿ ಪ್ರಗತಿಯಲ್ಲಿದೆ |
| 34 | ತಿಪಟೂರು /ತಿಪಟೂರು | ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ಜಾಬಘಟ್ಟ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 30.00 | 23.53 | ಶ್ರೀ ಪಿ.ರಮೇಶ್, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 35 | ತಿಪಟೂರು /ತಿಪಟೂರು | ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ಹೊನ್ನವಳ್ಳಿ ಹಿರೇ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 60.00 | 33.72 | ಶ್ರೀ ಪಿ.ರಮೇಶ್, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 36 | ತಿಪಟೂರು /ತಿಪಟೂರು | ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ಕರಡಿಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 50.00 | 30.20 | ಶ್ರೀ ಪಿ.ರಮೇಶ್, 1ನೇ ದರ್ಜೆ ಗುತ್ತಿಗೆದಾರರು | ಕಾಮಗಾರಿ ಪ್ರಗತಿಯಲ್ಲಿದೆ |
| 37 | ಗುಬ್ಬಿ/ ಗುಬ್ಬಿ | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಸಿ.ಎಸ್.ಪುರ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 259.00 | 178.49 | ನಿರ್ಮಾಣ ಇಂಜಿನಿಯರ್ಸ್ & ಕಂಟ್ರಾಕ್ಟರ್ಸ್, | ಕಾಮಗಾರಿ ಪ್ರಗತಿಯಲ್ಲಿದೆ |
| 38 | ಗುಬ್ಬಿ/ ಗುಬ್ಬಿ | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಮಾವಿನಹಳ್ಳಿ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 50.00 | 10.46 | ನಿರ್ಮಾಣ ಇಂಜಿನಿಯರ್ಸ್ & ಕಂಟ್ರಾಕ್ಟರ್ಸ್, | ಕಾಮಗಾರಿ ಪ್ರಗತಿಯಲ್ಲಿದೆ |
| 39 | ಗುಬ್ಬಿ/ ಗುಬ್ಬಿ | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಇಡಗೂರು ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 28.00 | 15.43 | ನಿರ್ಮಾಣ ಇಂಜಿನಿಯರ್ಸ್ & ಕಂಟ್ರಾಕ್ಟರ್ಸ್, | ಕಾಮಗಾರಿ ಪ್ರಗತಿಯಲ್ಲಿದೆ |

| ಕ್ರ ಸಂ | ಜಿಲ್ಲೆ, / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 40 | ಗುಬ್ಬಿ/ ಗುಬ್ಬಿ | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ದೊಡ್ಡಚೆಂಗಾವಿ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 60.00 | 10.34 | ನಿರ್ಮಾಣ ಇಂಜಿನಿಯರ್ಸ್ & ಕಂಟ್ರಾಕ್ಟರ್ಸ್, | ಕಾಮಗಾರಿ ಪ್ರಗತಿಯಲ್ಲಿದೆ |
| 41 | ಗುಬ್ಬಿ/ ಗುಬ್ಬಿ | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಕಲ್ಲೂರು ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 80.00 | 55.08 | ನಿರ್ಮಾಣ ಇಂಜಿನಿಯರ್ಸ್ & ಕಂಟ್ರಾಕ್ಟರ್ಸ್, | ಕಾಮಗಾರಿ ಪ್ರಗತಿಯಲ್ಲಿದೆ |
| 42 | ಗುಬ್ಬಿ/ ಗುಬ್ಬಿ | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಪ್ರಭುವಿನಹಳ್ಳಿ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 30.00 | 22.19 | ನಿರ್ಮಾಣ ಇಂಜಿನಿಯರ್ಸ್ & ಕಂಟ್ರಾಕ್ಟರ್ಸ್, | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 43 | ಗುಬ್ಬಿ/ ಗುಬ್ಬಿ | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಗಂಡೀಕೆರೆ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 63.00 | 31.17 | ಶ್ರೀ ಎನ್.ಈರಣ್ಣ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 44 | ಗುಬ್ಬಿ/ ಗುಬ್ಬಿ | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಹರದಗೆರೆ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 70.00 | 45.31 | ಶ್ರೀ ಎನ್.ಈರಣ್ಣ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 45 | ಗುಬ್ಬಿ/ ಗುಬ್ಬಿ | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಹೂವಿನಕಟ್ಟೆ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 26.00 | 15.97 | ಶ್ರೀ ಎನ್.ಈರಣ್ಣ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 46 | ಚಿ.ನಾ.ಹಳ್ಳಿ/ ಚಿ.ನಾ. ಹಳ್ಳಿ | ತುಮಕೂರು ಜಿಲ್ಲೆ, ಚಿ.ನಾ.ಹಳ್ಳಿ ತಾಲ್ಲೂಕು, ಸಿಂಗದಹಳ್ಳಿ ದಳವಾಯಿ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 92.00 | 63.21 | ಶ್ರೀ ರಾಜಣ್ಣ ಶಿವಕುಮಾರ್ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |

| ಕ್ರ ಸಂ | ಜಿಲ್ಲೆ, / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 47 | ಚಿ.ನಾ.ಹಳ್ಳಿ/ ಚಿ.ನಾ. ಹಳ್ಳಿ | ತುಮಕೂರು ಜಿಲ್ಲೆ, ಚಿ.ನಾ.ಹಳ್ಳಿ ತಾಲ್ಲೂಕು, ಗಂಟೇನಹಳ್ಳಿ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 170.00 | 36.24 | ಶ್ರೀ ರಾಜಣ್ಣ ಶಿವಕುಮಾರ್ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 48 | ಚಿ.ನಾ.ಹಳ್ಳಿ/ ಚಿ.ನಾ. ಹಳ್ಳಿ | ತುಮಕೂರು ಜಿಲ್ಲೆ, ಚಿ.ನಾ.ಹಳ್ಳಿ ತಾಲ್ಲೂಕು, ದೇವರಮರಡಿ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 100.00 | 69.81 | ಶ್ರೀ ಸಿ.ಹೆಚ್.ವಿ.ಎನ್. ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 49 | ಚಿ.ನಾ.ಹಳ್ಳಿ/ ಚಿ.ನಾ. ಹಳ್ಳಿ | ತುಮಕೂರು ಜಿಲ್ಲೆ, ಚಿ.ನಾ.ಹಳ್ಳಿ ತಾಲ್ಲೂಕು, ಹಂದನಕೆರೆ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 23.00 | 11.76 | ಶ್ರೀ ಸಿ.ಹೆಚ್.ವಿ.ಎನ್. ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 50 | ಚಿ.ನಾ.ಹಳ್ಳಿ/ ಚಿ.ನಾ. ಹಳ್ಳಿ | ತುಮಕೂರು ಜಿಲ್ಲೆ, ಚಿ.ನಾ.ಹಳ್ಳಿ ತಾಲ್ಲೂಕು, ಜೋಡಿತಿಮ್ಮಾಪುರ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 100.00 | 58.16 | ಶ್ರೀ ಸಿ.ಹೆಚ್.ವಿ.ಎನ್. ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 51 | ಶಿರಾ /ಶಿರಾ | ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಕಳ್ಳಂಬೆಳ್ಳ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 200.00 | 81.16 | ಶ್ರೀ ಹೆಚ್.ನಾರಾಯಣಪ್ಪ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 52 | ಶಿರಾ /ಶಿರಾ | ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಚಿಕ್ಕಸಂದ್ರ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 120.00 | 59.27 | ಶ್ರೀ ಹೆಚ್.ಪಿ.ಮದುಕರ್ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 53 | ಶಿರಾ /ಶಿರಾ | ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ದೊಡ್ಡಅಗ್ರಹಾರ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 58.00 | 15.17 | ಶ್ರೀ ಹೆಚ್.ಪಿ.ಮದುಕರ್ 1ನೇ ದರ್ಜೆ ಗುತ್ತಿಗೆದಾರರು | ಕಾಮಗಾರಿ ಪ್ರಗತಿಯಲ್ಲಿದೆ |

| ಕ್ರ ಸಂ | ಜಿಲ್ಲೆ, / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 54 | ಶಿರಾ /ಶಿರಾ | ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ದೊಡ್ಡಗುಳ ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 42.00 | 21.02 | ಶ್ರೀ ಎಸ್.ಡಿ.ಪಾಂಡುರಂಗ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 55 | ಶಿರಾ /ಶಿರಾ | ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಬರಗೂರು ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 32.00 | 12.90 | ಶ್ರೀ ಎಸ್.ಡಿ.ಪಾಂಡುರಂಗ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 56 | ಶಿರಾ /ಶಿರಾ | ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಮದಲೂರು ಕೆರೆ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿ | 62.00 | 31.82 | ಶ್ರೀ ಎಸ್.ಡಿ.ಪಾಂಡುರಂಗ 1ನೇ ದರ್ಜೆ ಗುತ್ತಿಗೆದಾರರು | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 4702 ಕೆರೆಗಳ ದುರಸ್ಥಿ ಮತ್ತು ಪುನಶ್ಚೇತನ ಯೋಜನೆ | | | | | | |
| 1 | ತುಮಕೂರು / ತುಮಕೂರು | ನಾಗವಲ್ಲಿ ಕೆರೆಯ ಪುನರುಜ್ಜೀವನ | 30.00 | 14.89 | ಕೆ.ಕೃಷ್ಣ | ಕಾಮಗಾರಿ ಪ್ರಗತಿಯಲ್ಲಿದೆ |
| 2 | ತುಮಕೂರು / ತುಮಕೂರು | ಹೊನಸಗೆರೆ ಕೆರೆ ಪುನರುಜ್ಜೀವನ | 24.00 | 11.26 | ಕೆ.ಕೃಷ್ಣ | ಕಾಮಗಾರಿ ಪ್ರಗತಿಯಲ್ಲಿದೆ |
| 3 | ತುಮಕೂರು / ತುಮಕೂರು | ಬೆಳ್ಳಾವಿ ಕೆರೆ ಪುನರುಜ್ಜೀವನ | 28.00 | 14.98 | ಕೆ.ಕೃಷ್ಣ | ಕಾಮಗಾರಿ ಪ್ರಗತಿಯಲ್ಲಿದೆ |
| 4 | ತುಮಕೂರು / ತುಮಕೂರು | ಕೋಳಿಹಳ್ಳಿ ಕೆರೆ ಪುನರುಜ್ಜೀವನ | 28.00 | 22.77 | ಕೆ.ಕೃಷ್ಣ | ಕಾಮಗಾರಿ ಪ್ರಗತಿಯಲ್ಲಿದೆ |
| 5 | ತುಮಕೂರು / ತುಮಕೂರು | ಹೆಬ್ಬೂರು ಕೆರೆ ಪುನರುಜ್ಜೀವನ | 30.00 | 0.21 | ಕೆ.ಕೃಷ್ಣ | ಕಾಮಗಾರಿ ಪ್ರಗತಿಯಲ್ಲಿದೆ |

| ಕ್ರ ಸಂ | ಜಿಲ್ಲೆ, / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 6 | ತುಮಕೂರು / ತುಮಕೂರು | ಸಾಸಲು ಕೆರೆ ಪುನರುಜ್ಜೀವನ | 30.00 | 19.78 | ಕೆ.ಕೃಷ್ಣ | ಕಾಮಗಾರಿ ಪ್ರಗತಿಯಲ್ಲಿದೆ |
| 7 | ತುಮಕೂರು / ತುಮಕೂರು | ತಿಮ್ಮನಾಯಕನಹಳ್ಳಿ ಕೆರೆ ಪುನರುಜ್ಜೀವನ | 30.00 | 23.19 | ಕೆ.ಕೃಷ್ಣ | ಕಾಮಗಾರಿ ಪ್ರಗತಿಯಲ್ಲಿದೆ |
| 8 | ತುಮಕೂರು / ತುಮಕೂರು | ಮರಳೂರು ಕೆರೆ ಪುನರುಜ್ಜೀವನ | 250.00 | 1.75 | ಹೆಚ್.ವೆಂಕಟಕೃಷ್ಣರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 9 | ತುಮಕೂರು / ಕುಣಿಗಲ್ | ಶೆಟ್ಟಿಗೆರೆ ಕೆರೆ ಪುನರುಜ್ಜೀವನ | 50.00 | 4.89 | ಶ್ರೀ ಸಿ.ನಾರಾಯಣಪ್ಪ | ಕಾಮಗಾರಿ ಪ್ರಗತಿಯಲ್ಲಿದೆ |
| 10 | ತುಮಕೂರು / ಕುಣಿಗಲ್ | ಚೆನ್ನಾಪುರ ಕೆರೆ ಪುನರುಜ್ಜೀವನ | 50.00 | 20.05 | ಎನ್.ಈರಣ್ಣ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 11 | ತುಮಕೂರು / ಕುಣಿಗಲ್ | ಕಿತ್ನಾಮಂಗಲ ಕೆರೆ ಪುನರುಜ್ಜೀವನ | 50.00 | 14.76 | ಆರ್.ಟಿ.ವೆಂಕಟೇಗೌಡ | ಕಾಮಗಾರಿ ಪ್ರಗತಿಯಲ್ಲಿದೆ |
| 12 | ತುಮಕೂರು / ಕುಣಿಗಲ್ | ಬಂಡಿಹಳ್ಳಿ ಕೆರೆ ಪುನರುಜ್ಜೀವನ | 50.00 | 18.63 | ಆರ್.ಟಿ.ವೆಂಕಟೇಗೌಡ | ಕಾಮಗಾರಿ ಪ್ರಗತಿಯಲ್ಲಿದೆ |
| 13 | ತುಮಕೂರು / ಕೊರಟಗೆರೆ | ಕುರಿಹಳ್ಳಿ ಕೆರೆ ಪುನರುಜ್ಜೀವನ | 30.00 | 0.00 | ಟಿ.ಎಲ್.ರಾಜೇಂದ್ರನ್ | ಕಾಮಗಾರಿ ಪ್ರಗತಿಯಲ್ಲಿದೆ |
| 14 | ತುಮಕೂರು / ಕೊರಟಗೆರೆ | ತೋವಿನಕೆರೆ ಕೆರೆ ಪುನರುಜ್ಜೀವನ | 20.00 | 0.00 | ಟಿ.ಎಲ್.ರಾಜೇಂದ್ರನ್ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 15 | ತುಮಕೂರು / ಕೊರಟಗೆರೆ | ದೇವರಹಳ್ಳಿ ಕೆರೆ ಪುನರುಜ್ಜೀವನ | 20.00 | 9.67 | ಟಿ.ಎಲ್.ರಾಜೇಂದ್ರನ್ | ಕಾಮಗಾರಿ ಪ್ರಗತಿಯಲ್ಲಿದೆ |
| 16 | ತುಮಕೂರು / ಕೊರಟಗೆರೆ | ಕೆಸ್ತೂರು ಅಮಾನಿಕೆರೆ ಪುನರುಜ್ಜೀವನ | 30.00 | 7.58 | ಟಿ.ಎಲ್.ರಾಜೇಂದ್ರನ್ | ಕಾಮಗಾರಿ ಪ್ರಗತಿಯಲ್ಲಿದೆ |
| 17 | ತುಮಕೂರು / ಕೊರಟಗೆರೆ | ಹಿರೆತೊಟ್ಲುಕೆರೆ ಕೆರೆ ಪುನರುಜ್ಜೀವನ | 25.00 | 0.18 | ಎನ್.ಮಲ್ಲಿಕಾರ್ಜುನಯ್ಯ | ಕಾಮಗಾರಿ ಪ್ರಗತಿಯಲ್ಲಿದೆ |

| ಕ್ರ ಸಂ | ಜಿಲ್ಲೆ, / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 18 | ತುಮಕೂರು / ಕೊರಟಗೆರೆ | ಕೋರಾ ಅಮಾನಿಕೆರೆ ಪುನರುಜ್ಜೀವನ | 25.00 | 0.18 | ಎನ್.ಮಲ್ಲಿಕಾರ್ಜುನಯ್ಯ | ಕಾಮಗಾರಿ ಪ್ರಗತಿಯಲ್ಲಿದೆ |
| 19 | ತುಮಕೂರು / ಕೊರಟಗೆರೆ | ಮಾವುಕೆರೆ ಕೆರೆ ಪುನರುಜ್ಜೀವನ | 30.00 | 0.21 | ಎನ್.ಮಲ್ಲಿಕಾರ್ಜುನಯ್ಯ | ಕಾಮಗಾರಿ ಪ್ರಗತಿಯಲ್ಲಿದೆ |
| 20 | ತುಮಕೂರು / ಕೊರಟಗೆರೆ | ಚಿಕ್ಕಗುಂಡಗಲ್ ಕೆರೆ ಪುನರುಜ್ಜೀವನ | 20.00 | 0.14 | ಎನ್.ಮಲ್ಲಿಕಾರ್ಜುನಯ್ಯ | ಕಾಮಗಾರಿ ಪ್ರಗತಿಯಲ್ಲಿದೆ |
| 21 | ತುಮಕೂರು / ಮಧುಗಿರಿ | ದೊಡ್ಡೇರಿ ಹಿರೇಕೆರೆ ಪುನರುಜ್ಜೀವನ | 50.00 | 13.49 | ವಿ.ವೆಂಕಟೇಶರೆಡ್ಡಿ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 22 | ತುಮಕೂರು / ಮಧುಗಿರಿ | ಸಿದ್ದಾಪುರ ಕೆರೆ ಪುನರುಜ್ಜೀವನ | 50.00 | 0.35 | ಎಂ.ಶಿವಾನಂದ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 23 | ತುಮಕೂರು / ಮಧುಗಿರಿ | ಪೋಲೆನಹಳ್ಳಿ ಕೆರೆ ಪುನರುಜ್ಜೀವನ | 50.00 | 0.35 | ಎಂ.ಸಿ.ದೇವರಾಜ್ | ಕಾಮಗಾರಿ ಪ್ರಗತಿಯಲ್ಲಿದೆ |
| 24 | ತುಮಕೂರು / ಪಾವಗಡ | ಕಾಮನದುರ್ಗ ಅಕ್ಕಮ್ಮನಕೆರೆ ಪುನರುಜ್ಜೀವನ | 48.00 | 9.27 | ಹೆಚ್.ನಾರಾಯಣಪ್ಪ | ಕಾಮಗಾರಿ ಪ್ರಗತಿಯಲ್ಲಿದೆ |
| 25 | ತುಮಕೂರು / ಪಾವಗಡ | ಗೊಲ್ಲನಕುಂಟೆ ಕರೆಕಲ್ ಕೆರೆ ಪುನರುಜ್ಜೀವನ | 48.00 | 18.84 | ಹೆಚ್.ನಾರಾಯಣಪ್ಪ | ಕಾಮಗಾರಿ ಪ್ರಗತಿಯಲ್ಲಿದೆ |
| 26 | ತುಮಕೂರು / ಪಾವಗಡ | ಜಾಲೋಡು ಗೋಪಾಲಸ್ವಾಮಿ ಕೆರೆ ಪುನರುಜ್ಜೀವನ | 45.00 | 8.44 | ಬಿ.ಹೆಚ್.ಕೃಷ್ಣಾರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 27 | ತುಮಕೂರು / ಪಾವಗಡ | ರಂಗಸಮುದ್ರ ಕೆರೆ ಪುನರುಜ್ಜೀವನ | 46.00 | 10.96 | ಬಿ.ಹೆಚ್.ಕೃಷ್ಣಾರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 28 | ತುಮಕೂರು / ಪಾವಗಡ | ಮಂಗಳವಾಡ ಅಕ್ಕಗಲ್ ಕೆರೆ ಪುನರುಜ್ಜೀವನ | 45.00 | 10.15 | ಪಾಂಡುರಂಗ | ಕಾಮಗಾರಿ ಪ್ರಗತಿಯಲ್ಲಿದೆ |
| 29 | ತುಮಕೂರು / ಪಾವಗಡ | ತುಮಕುಂಟೆ ಆಂಜನೇಯಸ್ವಾಮಿ ಕೆರೆ ಪುನರುಜ್ಜೀವನ | 45.00 | 7.07 | ಪಾಂಡುರಂಗ | ಕಾಮಗಾರಿ ಪ್ರಗತಿಯಲ್ಲಿದೆ |

| ಕ್ರ ಸಂ | ಜಿಲ್ಲೆ, / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 30 | ತುಮಕೂರು / ಪಾವಗಡ | ಮದ್ದೆಈರಗಾನಕೆರೆ | 47.00 | 21.26 | ಸಿ.ಆರ್.ಹರೀಶ್ | ಕಾಮಗಾರಿ ಪ್ರಗತಿಯಲ್ಲಿದೆ |
| 31 | ತುಮಕೂರು / ಪಾವಗಡ | ಅರಸೀಕೆರೆ ಹಂಪಯ್ಯನಕೆರೆ | 46.00 | 22.97 | ಸಿ.ಆರ್.ಹರೀಶ್ | ಕಾಮಗಾರಿ ಪ್ರಗತಿಯಲ್ಲಿದೆ |
| 32 | ತುಮಕೂರು / ಪಾವಗಡ | ಅರಸೀಕೆರೆ ಗುಜ್ಜಾರಪ್ಪನ ಕೆರೆ | 47.00 | 15.12 | ಎ.ಶಂಕರರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 33 | ತುಮಕೂರು / ಪಾವಗಡ | ಕೊತ್ತೂರು ಕರಿಯಣ್ಣನ ಕೆರೆ | 47.00 | 17.22 | ಎ.ಶಂಕರರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 34 | ತುಮಕೂರು / ಶಿರಾ | ಕೊಟ್ಟಿ ಕೆರೆ | 25.00 | 0.00 | ಟಿ.ಎಲ್.ರಾಜೇಂದ್ರನ್ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 35 | ತುಮಕೂರು / ಶಿರಾ | ಮೆಳೆಕೋಟೆ ಕೆರೆ | 25.00 | 13.90 | ಟಿ.ಎಲ್.ರಾಜೇಂದ್ರನ್ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 36 | ತುಮಕೂರು / ಶಿರಾ | ಗಿರಿನಾಥನಹಳ್ಳಿ ಕೆರೆ | 25.00 | 7.31 | ಜಿ.ಎಂ.ಶಿವಲಿಂಗಯ್ಯ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 37 | ತುಮಕೂರು / ಶಿರಾ | ಗುಮ್ಮನಹಳ್ಳಿ ವೀರಾಪುರ ಕೆರೆ | 25.00 | 12.43 | ಜಿ.ಎಂ.ಶಿವಲಿಂಗಯ್ಯ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 38 | ತುಮಕೂರು / ಶಿರಾ | ಗುಳಿಗೇನಹಳ್ಳಿ ಕೆರೆ | 25.00 | 11.26 | ಟಿ.ಎಲ್.ರಾಜೇಂದ್ರನ್ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 39 | ತುಮಕೂರು / ಶಿರಾ | ಹಲ್ಲೂರು ಕೆರೆ | 25.00 | 2.07 | ಟಿ.ಎಲ್.ರಾಜೇಂದ್ರನ್ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 40 | ತುಮಕೂರು / ಶಿರಾ | ನರಸಿಂಹಜ್ಜಿ ಕಟ್ಟೆ ಕೆರೆ | 25.00 | 13.24 | ಜಿ.ಎಂ.ಶಿವಲಿಂಗಯ್ಯ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 41 | ತುಮಕೂರು / ಶಿರಾ | ತರೂರು ಊರಮುಂದಿನ ಕೆರೆ | 25.00 | 7.69 | ಜಿ.ಎಂ.ಶಿವಲಿಂಗಯ್ಯ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |

| ಕ್ರ ಸಂ | ಜಿಲ್ಲೆ / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 42 | ತುಮಕೂರು / ಚಿ.ನಾ.ಹಳ್ಳಿ | ಹುಳಿಯಾರು ಅಮಾನಿಕೆರೆ ಕೆರೆ | 40.00 | 15.64 | ಸಿ.ಹೆಚ್.ವಿ.ಎನ್.ರೆಡ್ಡಿ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 43 | ತುಮಕೂರು / ಚಿ.ನಾ.ಹಳ್ಳಿ | ಚಿಕ್ಕಬದರೆ ಕೆರೆ | 40.00 | 0.00 | ಸಿ.ಹೆಚ್.ವಿ.ಎನ್.ರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 44 | ತುಮಕೂರು / ಚಿ.ನಾ.ಹಳ್ಳಿ | ಸೀಡ್ಯಾ ಅಕ್ಕನವರ ಕೆರೆ | 40.00 | 0.00 | ಕೆ.ಜಯದೇವಪ್ಪ | ಕಾಮಗಾರಿ ಪ್ರಗತಿಯಲ್ಲಿದೆ |
| 45 | ತುಮಕೂರು / ಗುಬ್ಬಿ | ಪಂಕಜನಹಳ್ಳಿ ಕೆರೆ | 40.00 | 10.72 | ಸಿ.ಹೆಚ್.ವಿ.ಎನ್.ರೆಡ್ಡಿ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 46 | ತುಮಕೂರು / ಗುಬ್ಬಿ | ಸೋಮನಹಳ್ಳಿ ಗಾಣದಾಳ್ ಕೆರೆ | 40.00 | 14.90 | ಸಿ.ಹೆಚ್.ವಿ.ಎನ್.ರೆಡ್ಡಿ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 47 | ತುಮಕೂರು / ಗುಬ್ಬಿ | ದೊಡ್ಡಗುಣಿ ಕೆರೆ | 40.00 | 14.74 | ಎಂ.ಸಿ.ದೇವರಾಜ್ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 48 | ತುಮಕೂರು / ಗುಬ್ಬಿ | ಚೇಳೂರು ಊರಮುಂದಿನ ಕೆರೆ | 32.00 | 0.00 | ಸಿ.ಹೆಚ್.ವಿ.ಎನ್.ರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 49 | ತುಮಕೂರು / ಗುಬ್ಬಿ | ಗಳಿಗಾದೊಡ್ಡಕೆರೆ | 32.00 | 0.00 | ಸಿ.ಹೆಚ್.ವಿ.ಎನ್.ರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 50 | ತುಮಕೂರು / ಗುಬ್ಬಿ | ಪೆರಮಸಂದ್ರ ಕೆರೆ | 31.00 | 15.88 | ಸಿ.ಹೆಚ್.ವಿ.ಎನ್.ರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 51 | ತುಮಕೂರು / ತಿಪಟೂರು | ಹೊಸಕೆರೆ ದೊಡ್ಡಕೆರೆ | 32.00 | 3.01 | ಸಿ.ಹೆಚ್.ವಿ.ಎನ್.ರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 52 | ತುಮಕೂರು / ತಿಪಟೂರು | ಹಾಗಲವಾಡಿ ಕೆರೆ | 33.00 | 17.73 | ಸಿ.ಹೆಚ್.ವಿ.ಎನ್.ರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 53 | ತುಮಕೂರು / ತಿಪಟೂರು | ಕಿಬ್ಬನಹಳ್ಳಿ ಅಮಾನಿಕೆರೆ | 50.00 | 20.68 | ಟಿ.ಜಿ.ರೇಣುಕಯ್ಯ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |

| ಕ್ರ ಸಂ | ಜಿಲ್ಲೆ, / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 54 | ತುಮಕೂರು / ತಿಪಟೂರು | ಬಿಳಿಗೆರೆ ಕೆರೆ | 50.00 | 16.92 | ಕೆ.ಜಯದೇವಪ್ಪ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 55 | ತುಮಕೂರು / ತಿಪಟೂರು | ಬೆಸುಗೆಗೌಡನಕೆರೆ | 40.00 | 10.48 | ಹೆಚ್.ಆರ್.ರಾಧಾಕೃಷ್ಣ | ಕಾಮಗಾರಿ ಪ್ರಗತಿಯಲ್ಲಿದೆ |
| 56 | ತುಮಕೂರು / ತುರುವೇಕೆರೆ | ಹಿಂಡಿಸ್ಕೆರೆ ಊರಮುಂದಿನ ಕೆರೆ | 25.00 | 0.18 | ಹೆಚ್.ಆರ್.ರಾಧಾಕೃಷ್ಣ | ಕಾಮಗಾರಿ ಪ್ರಗತಿಯಲ್ಲಿದೆ |
| 57 | ತುಮಕೂರು / ತುರುವೇಕೆರೆ | ಹೊನ್ನವಳ್ಳಿ ಬಡಗೀಕೆರೆ | 35.00 | 11.92 | ಹೆಚ್.ಆರ್.ರಾಧಾಕೃಷ್ಣ | ಕಾಮಗಾರಿ ಪ್ರಗತಿಯಲ್ಲಿದೆ |
| 58 | ತುಮಕೂರು / ತುರುವೇಕೆರೆ | ಗೊಟ್ಟಿಕೆರೆ ಕೆರೆ | 40.00 | 20.47 | ಸಿಹೆಚ್.ವಿ.ಎನ್.ರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 59 | ತುಮಕೂರು / ಗುಬ್ಬಿ | ಅಬ್ಬಕ್ಕನಹಳ್ಳಿ ಕೆರೆ | 45.00 | 28.15 | ಸಿಹೆಚ್.ವಿ.ಎನ್.ರೆಡ್ಡಿ | ಕಾಮಗಾರಿ ಪ್ರಗತಿಯಲ್ಲಿದೆ |
| 60 | ತುಮಕೂರು / ಗುಬ್ಬಿ | ಡೊಂಕಿಹಳ್ಳಿ ಅಣೆ | 45.00 | 12.29 | ಬಿ.ಎಸ್.ದೇವರಾಜ್ | ಕಾಮಗಾರಿ ಪ್ರಗತಿಯಲ್ಲಿದೆ |
| 61 | ತುಮಕೂರು / ಗುಬ್ಬಿ | ಅಡಿಕೆಕೆರೆ ಕೆರೆ | 30.00 | 0.00 | ಪಿ..ರಮೇಶ್ | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ |
| 62 | ತುಮಕೂರು / ಗುಬ್ಬಿ | ವಿ.ಕೋಡಿಹಳ್ಳಿ ಕೆರೆ | 40.00 | 0.00 | ಪಿ..ರಮೇಶ್ | ಕಾಮಗಾರಿ ಪ್ರಗತಿಯಲ್ಲಿದೆ |
| 13ನೇ ಹಣಕಾಸು ಆಯೋಗದ ಯೋಜನೆ | | | | | | |
| 1 | ತುಮಕೂರು / ತಿಪಟೂರು | ತಿಪಟೂರು ಊರಮುಂದಿನ ಕೆರೆಯ ಪುನಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿ | 350.00 | - | | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ |

| ಕ್ರ ಸಂ | ಜಿಲ್ಲೆ / ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಜನವರಿ 15ರ 2012ರ ಅಂತ್ಯಕ್ಕೆ ಆಗಿರುವ ವೆಚ್ಚ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಏಜೆನ್ಸಿ | ಷರಾ |
|---|---|---|---|---|---|---|
| 1 | 2 | 4 | 5 | 6 | 7 | 8 |
| 2 | ತುಮಕೂರು / ತುಮಕೂರು | ಗೂಳೂರು ಅಮಾನಿ ಕೆರೆ ಅಭಿವೃದ್ಧಿ ಕಾಮಗಾರಿ | 50.00 | - | | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ |
| 3 | ತುಮಕೂರು / ತುಮಕೂರು | ನೀಡುವಳಲು ಕೆರೆ ಅಭಿವೃದ್ಧಿ ಕಾಮಗಾರಿ | 25.50 | - | | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ |
| 4 | ತುಮಕೂರು / ತುಮಕೂರು | ಹೊಳಕಲ್ ಕೆರೆ ಅಭಿವೃದ್ಧಿ ಕಾಮಗಾರಿ | 34.00 | - | | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ |
| 5 | ತುಮಕೂರು / ತುಮಕೂರು | ಹುಲ್ಲೇನಹಳ್ಳಿ ಕೆರೆ ಅಭಿವೃದ್ಧಿ | 36.00 | - | | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ |
| 6 | ತುಮಕೂರು / ತುಮಕೂರು | ಹೆಬ್ಬೂರು ಹೋಬಳಿ ಕೋಲಾರ ರಂಗಯ್ಯನ ಅಣೆ ಸಮಗ್ರ ಅಭಿವೃದ್ಧಿ | 37.00 | - | | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ |
| 7 | ತುಮಕೂರು / ತುಮಕೂರು | ನಾಗವಲ್ಲಿ ಅಮಾನಿಕೆರೆ ಅಭಿವೃದ್ಧಿ ಕಾಮಗಾರಿ | 83.00 | - | | ಬದಲಿ ಪ್ರಸ್ತಾವನೆ |
| 8 | ತುಮಕೂರು / ತುಮಕೂರು | ಹೆಬ್ಬೂರು ಕೆರೆ ಅಭಿವೃದ್ಧಿ ಕಾಮಗಾರಿ | 28.00 | - | | ಬದಲಿ ಪ್ರಸ್ತಾವನೆ |
| 9 | ತುಮಕೂರು / ತುಮಕೂರು | ಸಾಸಲು ಕೆರೆ ಅಭಿವೃದ್ಧಿ ಕಾಮಗಾರಿ | 35.00 | - | | ಬದಲಿ ಪ್ರಸ್ತಾವನೆ |

| ಜಲಸಂವರ್ಧನ ಯೋಜನಾ ಸಂಘದಡಿ ಪ್ರಗತಿಯಲ್ಲಿರುವ ಕೆರೆಗಳ ವಿವರ | | | | | | | | |
|---|---|---|---|---|---|---|---|---|
| ಕ್ರ.ಸಂಖ್ಯೆ | ಜಿಲ್ಲೆ | ತಾಲ್ಲೂಕು | ಹಳ್ಳಿ | ಕೆರೆ | ಅಂದಾಜು ಮೊತ್ತ (ರೂಪಾಯಿಗಳಲ್ಲಿ) | ಸಾದಿಸಿರುವ ಮೊತ್ತ | ಎಜೆನ್ಸಿ ಹೆಸರು (ಗುತ್ತಿಗೆದಾರರು) | ಷರಾ |
| 1 | ತುಮಕೂರು | ಮಧುಗಿರಿ | ದಬ್ಬೇಘಟ್ಟ | ದಬ್ಬೇಘಟ್ಟ ಕೆರೆ | 300000 | 161325 | ಕೆ.ಜಿ.ರಾಜಗೋಪಾಲರೆಡ್ಡಿ | ಪ್ರಗತಿಯಲ್ಲಿದೆ |
| 2 | ತುಮಕೂರು | ಮಧುಗಿರಿ | ಹೊಸಕೆರೆ | ಹೊಸಕೆರೆ ಕೆರೆ | 804420 | 277244 | ಎಂ.ಪಿ.ರಾಧಶಾಮ್ | ಪ್ರಗತಿಯಲ್ಲಿದೆ |
| 3 | ತುಮಕೂರು | ಮಧುಗಿರಿ | ತಿಪ್ಪನಹಳ್ಳಿ | ತಿಪ್ಪನಹಳ್ಳಿ ಕೆರೆ | 558000 | 141600 | ಕೆ.ಮಂಜುನಾಥ | ಪ್ರಗತಿಯಲ್ಲಿದೆ |
| 4 | ತುಮಕೂರು | ಮಧುಗಿರಿ | ವಜ್ರದಹಳ್ಳಿ | ವಜ್ರದಹಳ್ಳಿ ಕೆರೆ | 1025000 | 1070000 | ಆರ್.ರಂಗನಾಥ | ಪೂರ್ಣಗೊಂಡಿದೆ |
| 5 | ತುಮಕೂರು | ಮಧುಗಿರಿ | ಮೂಡಗಾನಹಟ್ಟಿ | ಪಟ್ಟೇನಹಳ್ಳಿ ಕೆರೆ | 690000 | 690000 | ಆರ್.ರಂಗನಾಥ | ಪೂರ್ಣಗೊಂಡಿದೆ |
| 6 | ತುಮಕೂರು | ಮಧುಗಿರಿ | ಕುಲುಮೇನಹಳ್ಳಿ | ಕುಲುಮೇನಹಳ್ಳಿ ಕೆರೆ | 360000 | 229579 | ಹೆಚ್.ಕೆ.ಮಲ್ಲಿಕಾರ್ಜುನ | ಪ್ರಗತಿಯಲ್ಲಿದೆ |
| 7 | ತುಮಕೂರು | ಮಧುಗಿರಿ | ಮಿಡಿಗೇಶಿ | ದೊಡ್ಡಕೆರೆ | 1695000 | 1350000 | ಹೆಚ.ವಿ. ವೆಂಕಟಕೃಷ್ಣರೆಡ್ಡಿ | ಪ್ರಗತಿಯಲ್ಲಿದೆ |
| 8 | ತುಮಕೂರು | ಕೊರಟಗೆರೆ | ಬುಕ್ಕಪಟ್ಟಣ | ಬುಕ್ಕಪಟ್ಟಣ ಕೆರೆ | 750000 | 0 | ಹೆಚ.ವಿ. ವೆಂಕಟಕೃಷ್ಣರೆಡ್ಡಿ | ಪ್ರಗತಿಯಲ್ಲಿದೆ |
| 9 | ತುಮಕೂರು | ಕೊರಟಗೆರೆ | ಹೊಸಕೋಟೆ | ಹೊಸಕೋಟೆ ಕೆರೆ | 900000 | 218016 | ಸಿ.ಎನ್.ರಾಮಕೃಷ್ಣಯ್ಯ | ಪ್ರಗತಿಯಲ್ಲಿದೆ |
| 10 | ತುಮಕೂರು | ಕೊರಟಗೆರೆ | ನವಿಲಕುರಿಕೆ | ನವಿಲಕುರಿಕೆ ಕೆರೆ | 600000 | 146370 | ಸಿ.ಎನ್.ರಾಮಕೃಷ್ಣಯ್ಯ | ಪ್ರಗತಿಯಲ್ಲಿದೆ |
| 11 | ತುಮಕೂರು | ಕೊರಟಗೆರೆ | ಮುಡಲಕೆರೆಪಾಳ್ಯ | ಮುಡಲಕೆರೆಪಾಳ್ಯ ಕೆರೆ | 450000 | 240684 | ಸಿ.ಎನ್.ರಾಮಕೃಷ್ಣಯ್ಯ | ಪ್ರಗತಿಯಲ್ಲಿದೆ |
| 12 | ತುಮಕೂರು | ಪಾವಗಡ | ಹುಸೇನ್ ಪುರ | ಚೌಡೇಶ್ವರಿ ಕೆರೆ | 390000 | 161887 | ಸುಬ್ಬರೆಡ್ಡಿ | ಪ್ರಗತಿಯಲ್ಲಿದೆ |
| 13 | ತುಮಕೂರು | ಪಾವಗಡ | ರ್‍ಯಾಪ್ಟೆ | ರ್‍ಯಾಪ್ಟೆ ಕೆರೆ | 480000 | 392626 | ವಿ.ಪೋತರೆಡ್ಡಿ | ಪ್ರಗತಿಯಲ್ಲಿದೆ |
| 14 | ತುಮಕೂರು | ಪಾವಗಡ | ನಾಗಲಮಡಿಕೆ | ಚೋಳರಾಯನ ಕೆರೆ | 675000 | 138832 | ಕೆ.ಜಿ.ರಾಜಗೋಪಾಲರೆಡ್ಡಿ | ಪ್ರಗತಿಯಲ್ಲಿದೆ |

| ಕ್ರ.ಸಂಖ್ಯೆ | ಜಿಲ್ಲೆ | ತಾಲ್ಲೂಕು | ಹಳ್ಳಿ | ಕೆರೆ | ಅಂದಾಜು ಮೊತ್ತ (ರೂಪಾಯಿಗಳಲ್ಲಿ) | ಸಾದಿಸಿರುವ ಮೊತ್ತ | ಎಜೆನ್ಸಿ ಹೆಸರು (ಗುತ್ತಿಗೆದಾರರು) | ಷರಾ |
|---|---|---|---|---|---|---|---|---|
| 15 | ತುಮಕೂರು | ಪಾವಗಡ | ಬಳ್ಳಸಮುದ್ರ | ಚಾಮಲಕೆರೆ | 595000 | 115500 | ಲೋಹಿಯ | ಪ್ರಗತಿಯಲ್ಲಿದೆ |
| 16 | ತುಮಕೂರು | ಪಾವಗಡ | ಬಳ್ಳಸಮುದ್ರ | ಊರಮುಂದಿನಕೆರೆ | 350000 | 0 | ವಿ.ಸಿ.ಬ್ರಹ್ಮನಂದರೆಡ್ಡಿ | ಪ್ರಗತಿಯಲ್ಲಿದೆ |
| 17 | ತುಮಕೂರು | ಪಾವಗಡ | ಪೋತಗಾನಹಳ್ಳಿ | ತಾಗಲಮರದಕೆರೆ | 450000 | 186922 | ಬಿ.ಗಂಗಪ್ಪ | ಪ್ರಗತಿಯಲ್ಲಿದೆ |
| 18 | ತುಮಕೂರು | ಪಾವಗಡ | ಗುಮ್ಮಘಟ್ಟ | ಗುಮ್ಮಘಟ್ಟ ಕೆರೆ | 2550000 | 2010000 | ಹನುಮಂತರಾಯಪ್ಪ, ಆರ್.ಎ | ಪ್ರಗತಿಯಲ್ಲಿದೆ |
| 19 | ತುಮಕೂರು | ಪಾವಗಡ | ನಾಗಲಲಾಪುರ | ನಾಗೋಜಿಕೆರೆ | 280000 | 0 | ಲೋಹಿಯ | ಪ್ರಗತಿಯಲ್ಲಿದೆ |
| 20 | ತುಮಕೂರು | ಪಾವಗಡ | ಮುರರಾಯನಹಳ್ಳಿ | ಮುರರಾಯನಹಳ್ಳಿಕೆರೆ | 1225000 | 676530 | ಕೆ.ಜಿ.ರಾಜಗೋಪಾಲರೆಡ್ಡಿ | ಪ್ರಗತಿಯಲ್ಲಿದೆ |
| 21 | ತುಮಕೂರು | ಪಾವಗಡ | ಬಿ.ಕೆ.ಹಳ್ಳಿ | ಹೊಸಕೆರೆ | 480000 | 247943 | ಬ್ರಹ್ಮನಂದ ರೆಡ್ಡಿ ಪಿ | ಪ್ರಗತಿಯಲ್ಲಿದೆ |
| 22 | ತುಮಕೂರು | ಪಾವಗಡ | ಕಡಮಲಕುಂಟೆ | ಅಕ್ಕಮ್ಮನ ಕೆರೆ | 600000 | 300000 | ಕೆ.ಸುಬ್ಬರಾಯಪ್ಪ | ಪ್ರಗತಿಯಲ್ಲಿದೆ |
| 23 | ತುಮಕೂರು | ಪಾವಗಡ | ಅರಳೀಕುಂಟೆ | ಕೃಷ್ಣಂಬುಧಿ ಕೆರೆ | 700000 | 0 | ವೆಂಕಟಸುಬ್ಬಯ್ಯ | ಪ್ರಗತಿಯಲ್ಲಿದೆ |
| 24 | ತುಮಕೂರು | ಪಾವಗಡ | ಬುಡಸನಹಳ್ಳಿ | ಕಂಬಾಲಪ್ಪನಕೆರೆ | 240000 | 233700 | ಗೀರಿನಾರಾಯಣ ಗೌಡ | ಪ್ರಗತಿಯಲ್ಲಿದೆ |
| 25 | ತುಮಕೂರು | ಪಾವಗಡ | ಜೆ.ರಂಗನಾಥಪುರ | ಚಾಲಿಕಟ್ಟೆ | 240000 | 206407 | ರಮೇಶ್ ಕುಮಾರ್ ಪಿ.ಎನ್ | ಪ್ರಗತಿಯಲ್ಲಿದೆ |
| 26 | ತುಮಕೂರು | ಪಾವಗಡ | ಹೊಟ್ಟೆಬೊಮ್ಮನಹಳ್ಳಿ | ನರಸಣ್ಣನಕುಂಟೆ ಕೆರೆ | 450000 | 299448 | ರಾಮಾಂಜನಯ್ಯ | ಪ್ರಗತಿಯಲ್ಲಿದೆ |
| 27 | ತುಮಕೂರು | ಪಾವಗಡ | ತಪ್ಪಗಾನದೊಡ್ಡಿ | ಹೊಸಕೆರೆ | 240000 | 233700 | ಪಾಲ ನಾಯ್ಕ | ಪ್ರಗತಿಯಲ್ಲಿದೆ |
| 28 | ತುಮಕೂರು | ಪಾವಗಡ | ಮದ್ದಿಬಂಡೆ | ಶ್ರೀನಿವಾಸಚಾರಿಕಟ್ಟೆ ಕೆರೆ | 180000 | 0 | ಮಲ್ಲರೆಡ್ಡಿ | ಪ್ರಗತಿಯಲ್ಲಿದೆ |
| 29 | ತುಮಕೂರು | ಪಾವಗಡ | ಮದ್ದಿಬಂಡೆ | ಶ್ರೀನಿವಾಸಚಾರಿಕಟ್ಟೆ ಕೆರೆ | 195000 | 61293 | ಆರ್.ಪಿ. ಜ್ಞಾನಮೂರ್ತಿ | ಪ್ರಗತಿಯಲ್ಲಿದೆ |

| ಸಂಖ್ಯೆ | ಜಿಲ್ಲೆ | ತಾಲ್ಲೂಕು | ಹಳ್ಳಿ | ಕೆರೆ | ಅಂದಾಜು ಮೊತ್ತ (ರೂಪಾಯಿಗಳಲ್ಲಿ) | ಸಾದಿಸಿರುವ ಮೊತ್ತ | ಎಜೆನ್ಸಿ ಹೆಸರು (ಗುತ್ತಿಗೆದಾರರು) | ಷರಾ |
|---|---|---|---|---|---|---|---|---|
| 30 | ತುಮಕೂರು | ಶಿರಾ | ಕಳುವರಹಳ್ಳಿ | ಕಳುವರಹಳ್ಳಿ ಕೆರೆ | 450000 | 217248 | ತಿಪ್ಪೇಸ್ವಾಮಿ | ಪ್ರಗತಿಯಲ್ಲಿದೆ |
| 31 | ತುಮಕೂರು | ಶಿರಾ | ಬ್ರಹ್ಮಸಂದ್ರ | ಬ್ರಹ್ಮಸಂದ್ರ ಕೆರೆ | 810000 | 95040 | ಎಸ್.ಪಿ.ಪಾಂಡುರಂಗರೆಡ್ಡಿ | ಪ್ರಗತಿಯಲ್ಲಿದೆ |
| 32 | ತುಮಕೂರು | ಶಿರಾ | ಬಿದರೆಕೆರೆ | ಬಿದರೆಕೆರೆ ಕೆರೆ | 390000 | 322475 | ಜಿ.ತಿಪ್ಪೇಸ್ವಾಮಿ | ಪ್ರಗತಿಯಲ್ಲಿದೆ |
| 33 | ತುಮಕೂರು | ಶಿರಾ | ಗೌಡಗೆರೆ | ದೊಡ್ಡಕೆರೆ | 441240 | 420240 | ಕೆ.ಭೈರೆಗೌಡ | ಪ್ರಗತಿಯಲ್ಲಿದೆ |
| 34 | ತುಮಕೂರು | ಶಿರಾ | ಕಗ್ಗಲಡು | ದೊಡ್ಡಕೆರೆ | 1170000 | 1170000 | ಗೀರಿನಾರಾಯಣ ಗೌಡ | ಪೂರ್ಣಗೊಂಡಿದೆ |
| 35 | ತುಮಕೂರು | ಶಿರಾ | ಕೊಟ್ಟ | ದೊಡ್ಡಕೆರೆ | 586064 | 297326 | ಜಿ.ಎನ್.ದೇವರಾಜು | ಪ್ರಗತಿಯಲ್ಲಿದೆ |
| 36 | ತುಮಕೂರು | ಶಿರಾ | ಮದಲೂರು | ಚಿಕ್ಕಕೆರೆ | 600000 | 420000 | ಜಿ.ತಿಮ್ಮೆಗೌಡ | ಪ್ರಗತಿಯಲ್ಲಿದೆ |
| 37 | ತುಮಕೂರು | ಶಿರಾ | ಕೆರೆಯಾಗಲಹಳ್ಳಿ | ಕೆರೆಯಾಗಲಹಳ್ಳಿ ಕೆರೆ | 240000 | 239317 | ಕೆ.ಆರ್.ಚಂದ್ರಶೇಖರ್ | ಪ್ರಗತಿಯಲ್ಲಿದೆ |
| 38 | ತುಮಕೂರು | ಶಿರಾ | ಹಂದಿಕುಂಟೆ | ಹಂದಿಕುಂಟೆ ಕೆರೆ | 429510 | 408510 | ಕೆ.ಮಂಜುನಾಥ | ಪ್ರಗತಿಯಲ್ಲಿದೆ |
| 39 | ತುಮಕೂರು | ಶಿರಾ | ಕಲ್ಲಹಳ್ಳಿ | ಕಲ್ಲಹಳ್ಳಿ ಕೆರೆ | 194400 | 123750 | ಬೊಮ್ಮಣ್ಣ | ಪ್ರಗತಿಯಲ್ಲಿದೆ |
| 40 | ತುಮಕೂರು | ಶಿರಾ | ನಿಡಕಟ್ಟೆ | ನಿಡಕಟ್ಟೆ ಸಣ್ಣಕೆರೆ | 735000 | 735000 | ಉಗ್ರಪ್ಪ ಗೀರಿಶ್ | ಪೂರ್ಣಗೊಂಡಿದೆ |
| 41 | ತುಮಕೂರು | ಶಿರಾ | ಕರೀಕ್ಯಾತನಹಳ್ಳಿ | ಸಣ್ಣಕೆರೆ | 450000 | 438468 | ಲಕ್ಷ್ಮೀಕಾಂತ | ಪ್ರಗತಿಯಲ್ಲಿದೆ |
| 42 | ತುಮಕೂರು | ಶಿರಾ | ಓಜಗುಂಟೆ | ಓಜಗುಂಟೆ ಕೆರೆ | 300000 | 299240 | ಟಿ.ಡಿ.ಮಲ್ಲೇಶ | ಪ್ರಗತಿಯಲ್ಲಿದೆ |
| 43 | ತುಮಕೂರು | ಶಿರಾ | ಹಳೇಬಿಜ್ಜನಬೇಳ್ಳ | ಹಳೇಬಿಜ್ಜನಬೇಳ್ಳ ಕೆರೆ | 276693 | 29610 | ಟಿ.ಜಗದೀಶ್ | ಪ್ರಗತಿಯಲ್ಲಿದೆ |
| 44 | ತುಮಕೂರು | ಶಿರಾ | ಗೋಣಿಹಳ್ಳಿ | ಗೋಣಿಹಳ್ಳಿ ಕೆರೆ | 300000 | 232569 | ದೊಡ್ಡಬೋರಪ್ಪ | ಪ್ರಗತಿಯಲ್ಲಿದೆ |

| ಕ್ರ.ಸಂಖ್ಯೆ | ಜಿಲ್ಲೆ | ತಾಲ್ಲೂಕು | ಹಳ್ಳಿ | ಕೆರೆ | ಅಂದಾಜು ಮೊತ್ತ (ರೂಪಾಯಿಗಳಲ್ಲಿ) | ಸಾಧಿಸಿರುವ ಮೊತ್ತ | ಎಜೆನ್ಸಿ ಹೆಸರು (ಗುತ್ತಿಗೆದಾರರು) | ಷರಾ |
|---|---|---|---|---|---|---|---|---|
| 45 | ತುಮಕೂರು | ಶಿರಾ | ಗಜ್ಜರಹಳ್ಳಿ | ಗಜ್ಜರಹಳ್ಳಿ ಕೆರೆ | 350000 | 302874 | ಕೆ.ಬೈರೆಗೌಡ | ಪ್ರಗತಿಯಲ್ಲಿದೆ |
| 46 | ತುಮಕೂರು | ಶಿರಾ | ಕೂಸುಕುಂಟೆ | ಕೂಸುಕುಂಟೆ ಕೆರೆ | 210000 | 209389 | ದ್ವಾರಕನಾಥ ಡಿ | ಪ್ರಗತಿಯಲ್ಲಿದೆ |
| 47 | ತುಮಕೂರು | ಶಿರಾ | ನೇರಳಗುಡ್ಡ | ಚೌಲಹಲ್ಲ ಕೆರೆ | 570288 | 514308 | ಗೋಪಣ್ಣ | ಪ್ರಗತಿಯಲ್ಲಿದೆ |
| 48 | ತುಮಕೂರು | ಶಿರಾ | ದ್ಯಾಗೇನಹಳ್ಳಿ | ದ್ಯಾಗೇನಹಳ್ಳಿ ಕೆರೆ | 983910 | 983910 | ಕೆ.ರಮೇಶ್ | ಪೂರ್ಣಗೊಂಡಿದೆ |
| 49 | ತುಮಕೂರು | ಶಿರಾ | ಕಾಳಾಪುರ | ಕಾಳಾಪುರಕೆರೆ | 300000 | 39659 | ಕೆ.ಎಸ್.ಜಗದೀಶ್ | ಪ್ರಗತಿಯಲ್ಲಿದೆ |
| 50 | ತುಮಕೂರು | ಶಿರಾ | ಡಿ.ತಾಂಡ | ಡಿ.ತಾಂಡಕೆರೆ | 300000 | 79532 | ಕೆ.ಗೋಪಣ್ಣ | ಪ್ರಗತಿಯಲ್ಲಿದೆ |
| 51 | ತುಮಕೂರು | ಶಿರಾ | ದೊಡ್ಡಬಾಣಗೆರೆ | ದೊಡ್ಡಕೆರೆ | 1125495 | 964023 | ಲಕ್ಷ್ಮೀಕಾಂತ | ಪ್ರಗತಿಯಲ್ಲಿದೆ |
| 52 | ತುಮಕೂರು | ತುಮಕೂರು | ಬೆಳಧರ | ಬೆಳಧರ ಕೆರೆ | 875000 | 776185 | ಟಿ.ಎಸ್.ಮಂಜುನಾಥಕುಮಾರ್ | ಪ್ರಗತಿಯಲ್ಲಿದೆ |
| 53 | ತುಮಕೂರು | ತುಮಕೂರು | ಅವಳಿಪಾಳ್ಯ | ಅವಳಿಪಾಳ್ಯ ಕೆರೆ | 450000 | 450000 | ಎನ್.ಮುದ್ದಯ್ಯ | ಪೂರ್ಣಗೊಂಡಿದೆ |
| 54 | ತುಮಕೂರು | ತುಮಕೂರು | ಎಂ.ಗೋಲ್ಲಹಳ್ಳಿ | ಎಂ.ಗೋಲ್ಲಹಳ್ಳಿ ಕೆರೆ | 645000 | 511320 | ಶಿವಲಿಂಗಯ್ಯ ಜಿ.ಎಂ | ಪ್ರಗತಿಯಲ್ಲಿದೆ |
| 55 | ತುಮಕೂರು | ತುಮಕೂರು | ಸೋರೆಕುಂಟೆ | ಸೋರೆಕುಂಟೆ ಕೆರೆ | 420000 | 401445 | ಉದಯರವಿ ಹೆಚ್.ಜಿ | ಪ್ರಗತಿಯಲ್ಲಿದೆ |
| 56 | ತುಮಕೂರು | ಗುಬ್ಬಿ | ರೇವನಾಳು | ರೇವನಾಳು ಕೆರೆ | 150000 | 190346 | ಶಿವಲಿಂಗಯ್ಯ ಜಿ.ಎಂ | ಪೂರ್ಣಗೊಂಡಿದೆ |
| 57 | ತುಮಕೂರು | ಗುಬ್ಬಿ | ಅಂಕಸಂದ್ರ | ಕುರುಬರಹಳ್ಳಿ | 577500 | 390000 | ಎನ್.ಮುದ್ದಯ್ಯ | ಪ್ರಗತಿಯಲ್ಲಿದೆ |
| 58 | ತುಮಕೂರು | ಗುಬ್ಬಿ | ಶಿವರಾಂಪುರ | ಶಿವರಾಂಪುರ ಕೆರೆ | 450000 | 403120 | ಕುಮಾರ್ ಜಿ.ಕೆ | ಪ್ರಗತಿಯಲ್ಲಿದೆ |
| 59 | ತುಮಕೂರು | ಗುಬ್ಬಿ | ದೇವರಹಳ್ಳಿ | ದೇವರಹಳ್ಳಿ ಕೆರೆ | 750000 | 450000 | ಶಿವಲಿಂಗಯ್ಯ ಜಿ.ಎಂ | ಪ್ರಗತಿಯಲ್ಲಿದೆ |

| ಕ್ರ.ಸಂಖ್ಯೆ | ಜಿಲ್ಲೆ | ತಾಲ್ಲೂಕು | ಹಳ್ಳಿ | ಕೆರೆ | ಅಂದಾಜು ಮೊತ್ತ (ರೂಪಾಯಿಗಳಲ್ಲಿ) | ಸಾಧಿಸಿರುವ ಮೊತ್ತ | ಏಜೆನ್ಸಿ ಹೆಸರು (ಗುತ್ತಿಗೆದಾರರು) | ಷರಾ |
|---|---|---|---|---|---|---|---|---|
| 60 | ತುಮಕೂರು | ಗುಬ್ಬಿ | ಬೋಗಸಂದ್ರ | ಬೋಗಸಂದ್ರ ಕೆರೆ | 713630 | 713630 | ಎಂ.ಸಿ.ದೇವರಾಜ | ಪೂರ್ಣಗೊಂಡಿದೆ |
| 61 | ತುಮಕೂರು | ಸಿ.ಎನ್.ಹಳ್ಳಿ | ಬಂಗಾರಗೆರೆ | ಬಂಗಾರಗೆರೆ ಕೆರೆ | 1050000 | 856596.6 | ಲಕ್ಷ್ಮೀಕಾಂತ ಬಿ.ಹೆಚ್ | ಪ್ರಗತಿಯಲ್ಲಿದೆ |
| 62 | ತುಮಕೂರು | ಸಿ.ಎನ್.ಹಳ್ಳಿ | ಹೊಸಕೆರೆ | ಹೊಸಕೆರೆ | 495000 | 75090 | ಎಸ್.ಮುದ್ದಯ್ಯ, ಆರ್ ರೇಣುಕಯ್ಯ | ಪ್ರಗತಿಯಲ್ಲಿದೆ |
| 63 | ತುಮಕೂರು | ಸಿ.ಎನ್.ಹಳ್ಳಿ | ಗೋಪಾಲನಹಳ್ಳಿ | ಹೊಸಕೆರೆ | 479330 | 0 | ಲಕ್ಷ್ಮಿಕಾಂತ ಬಿ.ಹೆಚ್. | ಪ್ರಗತಿಯಲ್ಲಿದೆ |
| 64 | ತುಮಕೂರು | ಸಿ.ಎನ್.ಹಳ್ಳಿ | ದಗ್ಗೇನಹಳ್ಳಿ | ದಗ್ಗೇನಹಳ್ಳಿ ಕೆರೆ | 900000 | 181102 | ಎಸ್.ಸುರೇಶ್ ಬಾಬು | ಪ್ರಗತಿಯಲ್ಲಿದೆ |
| 65 | ತುಮಕೂರು | ಸಿ.ಎನ್.ಹಳ್ಳಿ | ಮೇಲನಹಳ್ಳಿ | ಮೇಲನಹಳ್ಳಿ ಕೆರೆ | 630000 | 215515 | ಟಿ.ಜಜಿ.ತಿಮ್ಮಯ್ಯ | ಪ್ರಗತಿಯಲ್ಲಿದೆ |
| 66 | ತುಮಕೂರು | ಸಿ.ಎನ್.ಹಳ್ಳಿ | ಮುದ್ದೇನಹಳ್ಳಿ | ಉರಮುನದಿನಕೆರೆ | 420000 | 631199 | ಜಯದೇವಪ್ಪ.ಕೆ | ಪ್ರಗತಿಯಲ್ಲಿದೆ |
| 67 | ತುಮಕೂರು | ಸಿ.ಎನ್.ಹಳ್ಳಿ | ಮುದ್ದೇನಹಳ್ಳಿ | ಮೆಲಿನಕೆರೆ | 1334400 | 416500 | ತಿಮ್ಮಣ್ಣ ಸಾಲಿಕಟ್ಟೆ | ಪ್ರಗತಿಯಲ್ಲಿದೆ |
| 68 | ತುಮಕೂರು | ಸಿ.ಎನ್.ಹಳ್ಳಿ | ಮಾದಿಹಳ್ಳಿ | ವೀರಶೆಟ್ಟಿಕೆರೆ | 416500 | 0 | ಪದ್ಮನಾಭ, ಬಿ.ಎನ್, ಟಿ.ಬಿ. ಸದಾಶಿವ | ಪ್ರಗತಿಯಲ್ಲಿದೆ |
| 69 | ತುಮಕೂರು | ಸಿ.ಎನ್.ಹಳ್ಳಿ | ಅಣೆಕಟ್ಟೆ | ಅಣೆಕಟ್ಟೆ ಕೆರೆ | 68100 | 922106 | ಕೆ.ಜಯದೇವಪ್ಪ | ಪ್ರಗತಿಯಲ್ಲಿದೆ |
| 70 | ತುಮಕೂರು | ಸಿ.ಎನ್.ಹಳ್ಳಿ | ಕೂಪ್ಪುರು | ಕೂಪ್ಪುರು ಕೆರೆ | 1884300 | 232202 | ಎಸ್.ಆರ್.ರೇಣುಕಯ್ಯ | ಪ್ರಗತಿಯಲ್ಲಿದೆ |
| 71 | ತುಮಕೂರು | ಸಿ.ಎನ್.ಹಳ್ಳಿ | ಬೇವಿನಹಳ್ಳಿ | ಬೇವಿನಹಳ್ಳಿ ಕೆರೆ | 700000 | 440000 | ಟಿ.ಕೃಷ್ಣಯ್ಯ | ಪ್ರಗತಿಯಲ್ಲಿದೆ |
| 72 | ತುಮಕೂರು | ಸಿ.ಎನ್.ಹಳ್ಳಿ | ಗೌರಸಾಗರ | ಗೌರಸಾಗರ ಕೆರೆ | 585813 | 585813 | ವಿಜಯಕುಮಾರ್ | ಪೂರ್ಣಗೊಂಡಿದೆ |
| 73 | ತುಮಕೂರು | ಸಿ.ಎನ್.ಹಳ್ಳಿ | ಮಾರಸಂದ್ರ | ಜಾಲದಕೆರೆ | 1461250 | 1119097 | ಶಿವಣ್ಣ .ಬಿ | ಪ್ರಗತಿಯಲ್ಲಿದೆ |
| 74 | ತುಮಕೂರು | ಸಿ.ಎನ್.ಹಳ್ಳಿ | ಶೆಟ್ಟಿಕೆರೆ | ಆಜ್ಜನಕೆರೆ | 1460000 | 450379 | ಚಂದ್ರಶೇಖರ್ | ಪ್ರಗತಿಯಲ್ಲಿದೆ |

| ಕ್ರಮಸಂಖ್ಯೆ | ಜಿಲ್ಲೆ | ತಾಲ್ಲೂಕು | ಹಳ್ಳಿ | ಕೆರೆ | ಅಂದಾಜು ಮೊತ್ತ (ರೂಪಾಯಿಗಳಲ್ಲಿ) | ಸಾದಿಸಿರುವ ಮೊತ್ತ | ಎಜೆನ್ಸಿ ಹೆಸರು (ಗುತ್ತಿಗೆದಾರರು) | ಷರಾ |
|---|---|---|---|---|---|---|---|---|
| 75 | ತುಮಕೂರು | ಸಿ.ಎನ್.ಹಳ್ಳಿ | ಭಾವನಹಳ್ಳಿ | ದುರ್ಗದಕೆರೆ | 1655380 | 50355 | ಸಿದ್ದನಕಟ್ಟೆ ಸತೀಶ | ಪ್ರಗತಿಯಲ್ಲಿದೆ |
| 76 | ತುಮಕೂರು | ಸಿ.ಎನ್.ಹಳ್ಳಿ | ಸಾದರಹಳ್ಳಿ | ರಂಗನಕೆರೆ | 839328 | 103889 | ಬಿ.ಸಣ್ಣಯ್ಯ | ಪ್ರಗತಿಯಲ್ಲಿದೆ |
| 77 | ತುಮಕೂರು | ಸಿ.ಎನ್.ಹಳ್ಳಿ | ಉಪಲಿಕನಹಳ್ಳಿ | ಉಪಲಿಕನಹಳ್ಳಿ ಕೆರೆ | 441443 | 199170 | ವಿಜಯಕುಮಾರ್ | ಪ್ರಗತಿಯಲ್ಲಿದೆ |
| 78 | ತುಮಕೂರು | ಸಿ.ಎನ್.ಹಳ್ಳಿ | ಚುಂಗನಹಳ್ಳಿ | ಚುಂಗನಹಳ್ಳಿ ಕೆರೆ | 450000 | 300000 | ಕೃಷ್ಣಯ್ಯ.ಟಿ | ಪ್ರಗತಿಯಲ್ಲಿದೆ |
| 79 | ತುಮಕೂರು | ಸಿ.ಎನ್.ಹಳ್ಳಿ | ಕಮಲಪುರ | ಕಮಲಾಪುರಾ ಕೆರೆ | 735000 | 221912 | ಎಸ್.ಸುರೇಶ್ ಬಾಬು | ಪ್ರಗತಿಯಲ್ಲಿದೆ |
| 80 | ತುಮಕೂರು | ಸಿ.ಎನ್.ಹಳ್ಳಿ | ಮೋಚಕಟ್ಟೆ | ಯಮ್ಮೆಲಕ್ಕನಕೆರೆ | 739344 | 199170 | ಎಸ್. ಸುರೇಶ್ ಬಾಬು | ಪ್ರಗತಿಯಲ್ಲಿದೆ |
| 81 | ತುಮಕೂರು | ಸಿ.ಎನ್.ಹಳ್ಳಿ | ನದುವನಹಲ್ಲಿ | ನದುವನಹಲ್ಲಿ ಕೆರೆ | 350000 | 349951 | ಮಂಜುನಾಥಸ್ವಾಮಿ | ಪೂರ್ಣಗೊಂಡಿದೆ |
| 82 | ತುಮಕೂರು | ಸಿ.ಎನ್.ಹಳ್ಳಿ | ಕೊಡಗಲಾರ | ದೊಡ್ಡಜ್ಜಿಕೆರೆ | 451500 | 449505 | ಶಿಮಕುಮಾರಸ್ವಾಮಿ | ಪ್ರಗತಿಯಲ್ಲಿದೆ |
| 83 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಬರಕನಾಳು | ಬರಕನಾಳುಕೆರೆ | 350000 | 0 | ಹೆಚ್.ಆಶೋಕ್ | ಪ್ರಗತಿಯಲ್ಲಿದೆ |
| 84 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಚಟ್ಟಸಂದ್ರ | ಚಟ್ಟಸಂದ್ರ ಕೆರೆ | 450000 | 300000 | ವಿಜಯಕುಮಾರ್ | ಪ್ರಗತಿಯಲ್ಲಿದೆ |
| 85 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಸೋರಲಾಮವು | ಹಳೇಮಾವು | 563850 | 563850 | ಶರಣ್ಯ ಎಚಿಟರ್ ಪ್ರೈಸಸ್ | ಪೂರ್ಣಗೊಂಡಿದೆ |
| 86 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಸೋರಲಾಮವು | ಹಳೇಮಾವು | 454846 | 396069 | ಟಿ.ಎಸ್.ಮಂಜುನಾಥಕುಮಾರ್ | ಪ್ರಗತಿಯಲ್ಲಿದೆ |
| 87 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಹನುಮಂತನಹಳ್ಳಿ | ಹನುಮಂತನಹಳ್ಳಿ ಕೆರೆ | 150000 | 0 | ಸತೀಶ್ ಪಿ | ಪ್ರಗತಿಯಲ್ಲಿದೆ |
| 88 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ತಾರೀಕಟ್ಟೆ | ಸಿದ್ದನಕಟ್ಟೆ ಕೆರೆ. | 150000 | 150000 | ಸುರೇಶ್‌ಬಾಬು | ಪೂರ್ಣಗೊಂಡಿದೆ |
| 89 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಸೀಗೆಬಾಗಿ | ಉರಮುಂದಿನಕೆರೆ | 465000 | 175500 | ಸತೀಶ್ ಪಿ | ಪ್ರಗತಿಯಲ್ಲಿದೆ |

| ಕ್ರ.ಸಂಖ್ಯೆ | ಜಿಲ್ಲೆ | ತಾಲ್ಲೂಕು | ಹಳ್ಳಿ | ಕೆರೆ | ಅಂದಾಜು ಮೊತ್ತ (ರೂಪಾಯಿಗಳಲ್ಲಿ) | ಸಾದಿಸಿರುವ ಮೊತ್ತ | ಎಜೆನ್ಸಿ ಹೆಸರು (ಗುತ್ತಿಗೆದಾರರು) | ಷರಾ |
|---|---|---|---|---|---|---|---|---|
| 90 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ದೊಡ್ಡಬಿದರೆ | ದೊಡ್ಡಬಿದರೆ ಕೆರೆ | 405000 | 315000 | ಆಶೋಕ ಸುಧಾಕರ ಸಿರಸಿಕರ | ಪ್ರಗತಿಯಲ್ಲಿದೆ |
| 91 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಬೆಳ್ಳಾರ | ಹೊಸಕೆರೆ | 195000 | 176700 | ತಿಪ್ಪೇಸ್ವಾಮಿ | ಪ್ರಗತಿಯಲ್ಲಿದೆ |
| 92 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಕೋರಗೆರೆ | ಕೋರಗೆರೆ ಕೆರೆ | 510000 | 315000 | ಎನ್. ಮುದ್ದಯ್ಯ | ಪ್ರಗತಿಯಲ್ಲಿದೆ |
| 93 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಹಂದಿಗನಡು | ಹಂದಿಗನಡು ಕೆರೆ | 270000 | 0 | ಶ್ರೀನಿವಾಸ ಹೆಚ್ | ಪ್ರಗತಿಯಲ್ಲಿದೆ |
| 94 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಸಿದ್ದನಕಟ್ಟೆ | ಸಿದ್ದನಕಟ್ಟೆ ಕೆರೆ | 750000 | 632940 | ಟಿ. ಕೃಷ್ಣಯ್ಯ, ಎಸ್.ಸತೀಶ್ | ಪ್ರಗತಿಯಲ್ಲಿದೆ |
| 95 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಚಿಕ್ಕೆಣ್ಣೆಗೆರೆ | ಉರಮುಂದಿನಕೆರೆ | 750000 | 0 | ಕೆ. ಭೈರೆಗೌಡ | ಪ್ರಗತಿಯಲ್ಲಿದೆ |
| 96 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಬೆಳಗುಲಿ | ಬೆಳಗುಲಿ ಕೆರೆ | 420000 | 0 | ಸತೀಶ್ | ಪ್ರಗತಿಯಲ್ಲಿದೆ |
| 97 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಎಳ್ಳೆನಹಳ್ಳಿ | ತಿಮ್ಮನಾಯಕನ ಕೆರೆ | 539700 | 494278.8 | ಎಸ್.ಸತೀಶ್ | ಪ್ರಗತಿಯಲ್ಲಿದೆ |
| 98 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಮರೆನಡು | ಮರೆನಡುಕೆರೆ | 450000 | 0 | ಎನ್.ಮುದ್ದಯ್ಯ | ಪ್ರಗತಿಯಲ್ಲಿದೆ |
| 99 | ತುಮಕೂರು | ಸಿ.ಎನ್.ಹಳ್ಳಿ (ಹುಲಿಯಾರ) | ಮಾದಪುರ | ಮಾದಪುರ ಕೆರೆ | 455000 | 150000 | ಎಸ್.ಸುರೇಶ್ ಬಾಬು | ಪ್ರಗತಿಯಲ್ಲಿದೆ |
| 100 | ತುಮಕೂರು | ತಿಪಟೂರು | ಬಿ.ಹೊಸಳ್ಳಿ | ದೊಡ್ಡಕೆರೆ | 749250 | 749250 | ಮುದ್ದಪ್ಪ | ಪೂರ್ಣಗೊಂಡಿದೆ |
| 101 | ತುಮಕೂರು | ತಿಪಟೂರು | ಬಿ.ಹೊಸೂರು | ಕಂಚೀಕೆರೆ | 578340 | 0 | ಆರ್. ನಾರಾಯಣ | ಪ್ರಗತಿಯಲ್ಲಿದೆ |
| 102 | ತುಮಕೂರು | ತಿಪಟೂರು | ಹೂಲಿಹಳ್ಳಿ | ಸಾಗಯ್ಯನಕೆರೆ | 450557 | 385615 | ಆರ್ ನಾರಾಯಣ | ಪ್ರಗತಿಯಲ್ಲಿದೆ |
| 103 | ತುಮಕೂರು | ತಿಪಟೂರು | ಹೂಲಿಹಳ್ಳಿ | ಊರಮುಂದಿನಕೆರೆ | 315000 | 312179 | ಮೈಕ್ರೋ ಅಸೋಸಿಯೇಟ್ಸ್ | ಪ್ರಗತಿಯಲ್ಲಿದೆ |
| 104 | ತುಮಕೂರು | ತಿಪಟೂರು | ನೆಲಗೂಂಡನಹಳ್ಳಿ | ನೆಲಗೂಂಡನಹಳ್ಳಿ ಕೆರೆ | 263841 | 208236 | ಪದ್ಮನಾಭ.ಬಿ.ಎನ್ | ಪ್ರಗತಿಯಲ್ಲಿದೆ |

| ಕ್ರಸಂಖ್ಯೆ | ಜಿಲ್ಲೆ | ತಾಲ್ಲೂಕು | ಹಳ್ಳಿ | ಕೆರೆ | ಅಂದಾಜು ಮೊತ್ತ (ರೂಪಾಯಿಗಳಲ್ಲಿ) | ಸಾಧಿಸಿರುವ ಮೊತ್ತ | ಏಜೆನ್ಸಿ ಹೆಸರು (ಗುತ್ತಿಗೆದಾರರು) | ಷರಾ |
|---|---|---|---|---|---|---|---|---|
| 105 | ತುಮಕೂರು | ತಿಪಟೂರು | ಆಲೂರು | ಹೊಸಕೆರೆ | 489993 | 489030 | ಮಂಜುನಾಥ ವಿಶ್ವೇಶ್ವರ ಮರಣೀಕ್ | ಪ್ರಗತಿಯಲ್ಲಿದೆ |
| 106 | ತುಮಕೂಥು | ತಿಪಟೂರು | ಆಲೂರು | ಊರಮುಂದಿನಕೆರೆ | 300000 | 300000 | ಎಂ.ಪಿ. ವಿನಯ್ | ಪ್ರಗತಿಯಲ್ಲಿದೆ |
| 107 | ತುಮಕೂರು | ತಿಪಟೂರು | ಆಲೂರು | ತಮ್ಮನಕಟ್ಟೆ | 191000 | 175000 | ಎಂ.ಪಿ.ವಿನಯ್ | ಪ್ರಗತಿಯಲ್ಲಿದೆ |
| 108 | ತುಮಕೂರು | ತಿಪಟೂರು | ಚೌಲಿಹಳ್ಳಿ | ಚೌಲಿಹಳ್ಳಿ ಕೆರೆ | 300000 | 300000 | ಬಿ. ಶಿವಣ್ಣ | ಪೂರ್ಣಗೊಂಡಿದೆ |
| 109 | ತುಮಕೂರು | ತಿಪಟೂರು | ಭೈರಾಪುರ | ಆಪನಕಟ್ಟೆ | 522830 | 522830 | ಹೆಚ್.ಎನ್ ಬಸವರಾಜು | ಪೂರ್ಣಗೊಂಡಿದೆ |
| 110 | ತುಮಕೂರು | ತಿಪಟೂರು | ಮಾಯಗೊಂಡನಹಳ್ಳಿ | ಸಿಂಗೇನಹಳ್ಳಿ ಕೆರೆ | 300000 | 0 | ಬಸವರಾಜು | ಪ್ರಗತಿಯಲ್ಲಿದೆ |
| 111 | ತುಮಕೂರು | ತಿಪಟೂರು | ಕೊಡಗಿಹಳ್ಳಿ | ಕೊಡಗಿಹಳ್ಳಿ ಕೆರೆ | 300000 | 179000 | ಸಿ.ಹೆಚ್. ಮೂರ್ತಿ | ಪ್ರಗತಿಯಲ್ಲಿದೆ |
| 112 | ತುಮಕೂರು | ತಿಪಟೂರು | ಘಟಿಕಿನಕೆರೆ | ಘಟಿಕಿನಕೆರೆ ಕೆರೆ | 159000 | 239931 | ಮಂಜುನಾಥ ವಿಶ್ವೇಶ್ವರ ಮರಣೀಕ್ | ಪ್ರಗತಿಯಲ್ಲಿದೆ |
| 113 | ತುಮಕೂರು | ತಿಪಟೂರು | ಘಟಿಕಿನಕೆರೆ | ಗೋಪಾಲನಕೆರೆ | 175000 | 0 | ಮೈಕ್ರೋ ಅಸೋಸಿಯೇಟ್ಸ್ | ಪ್ರಗತಿಯಲ್ಲಿದೆ |
| 114 | ತುಮಕೂರು | ತಿಪಟೂರು | ವಿರೂಪಾಕ್ಷಪುರ | ಗಂಗಮ್ಮನ ಕೆರೆ | 166890 | 0 | ಎಂ.ಪಿ.ವಿನಯ್ | ಪ್ರಗತಿಯಲ್ಲಿದೆ |

ಅನುಬಂಧ -2

| ಕ್ರ.ಸಂ. | ಜಿಲ್ಲೆ/ ತಾಲ್ಲೂಕು | ಕೇಂದ್ರ ಸರ್ಕಾರದ ನೆರವಿನ ಕೆರೆಗಳ ದುರಸ್ಥಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ (ಆರ್.ಆರ್.ಆರ್.)ಯೋಜನೆಯಡಿ ಕೈಗೆತ್ತಿಕೊಂಡಿರುವ ಕೆರೆಗಳ ಸಂಖ್ಯೆ | ಕೆರೆಗಳ ದುರಸ್ಥಿ ಮತ್ತು ಪುನಶ್ಚೇತನ ಯೋಜನೆಯಡಿ ಕೈಗೆತ್ತಿಕೊಂಡಿರುವ ಕೆರೆಗಳ ಸಂಖ್ಯೆ | ಜಲಸಂವರ್ಧನೆ ಯೋಜನಾ ಸಂಘದ ವತಿಯಿಂದ ಕೈಗೆತ್ತಿಕೊಂಡಿರುವ ಕೆರೆಗಳ ಸಂಖ್ಯೆ |
|---|---|---|---|---|
| 1 | ತುಮಕೂರು | 9 | 14 | 4 |
| 2 | ಕುಣಿಗಲ್ | 9 | 4 | 0 |
| 3 | ಕೊರಟಗೆರೆ | 9 | 2 | 4 |
| 4 | ಮಧುಗಿರಿ | 4 | 3 | 7 |
| 5 | ಪಾವಗಡ | 0 | 10 | 18 |
| 6 | ತಿಪಟೂರು | 5 | 5 | 15 |
| 7 | ಚಿಕ್ಕನಾಯಕನ ಹಳ್ಳಿ | 5 | 5 | 38 |
| 8 | ಶಿರಾ | 6 | 8 | 23 |
| 9 | ಗುಬ್ಬಿ | 9 | 8 | 5 |
| 10 | ತುರುವೇಕೆರೆ | 0 | 3 | 0 |

## ರಾಜ್ಯದ ಉಣ್ಣೆ ನೇಕಾರರಿಗೆ ಸೌಲಭ್ಯಗಳ ಕುರಿತು

**338; ಡಾ॥ ದೊಡ್ಡರಂಗೇಗೌಡ (ನಾಮನಿರ್ದೇಶನ ಹೊಂದಿದವರು)**

ಅ) ರಾಜ್ಯದಲ್ಲಿರುವ ಉಣ್ಣೆ ನೇಕಾರರ ಸಂಖ್ಯೆ ಎಷ್ಟು;

ಆ) ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಸುದ್ದೇಕುಂಟೆಯಲ್ಲಿ 20 ವರ್ಷಗಳ ಹಿಂದೆ ಜವಳಿ ಇಲಾಖೆ ವತಿಯಿಂದ ಒಂದು ಸುಸಜ್ಜಿತ ಕಟ್ಟಡವನ್ನು ಉಣ್ಣೆ ಕೈಮಗ್ಗದ ಉದ್ದೇಶಕ್ಕಾಗಿ ನಿರ್ಮಿಸಲಾಗಿದ್ದು, ಈ ಕಟ್ಟಡದಲ್ಲಿ ಉಣ್ಣೆ ಕೈಮಗ್ಗಗಳು ಕಾರ್ಯನಿರ್ವಹಿಸುತ್ತಿವೆಯೇ;

ಇ) ಕಾರ್ಯನಿರ್ವಹಿಸದೇ ಇದ್ದಲ್ಲಿ ಇದಕ್ಕೆ ಕಾರಣಗಳೇನು; ಇದಕ್ಕೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರವಾದ ಮಾಹಿತಿ ನೀಡುವುದು)

**ಶ್ರೀ ಆರ್. ವರ್ತೂರು ಪ್ರಕಾಶ್ (ಜವಳಿ ಸಚಿವರು)**

ಅ) ರಾಜ್ಯದಲ್ಲಿ 17,390 ಉಣ್ಣೆ ನೇಕಾರರು ಇರುತ್ತಾರೆ.

There are 17390 wool weavers in the state.

ಆ) ಜವಳಿ ಇಲಾಖೆಯಿಂದ ಉಣ್ಣೆ ಕೈಮಗ್ಗದ ಉದ್ದೇಶಕ್ಕಾಗಿ ಮಧುಗಿರಿ ತಾಲ್ಲೂಕಿನ ಸುದ್ದೇಕುಂಟೆಯಲ್ಲಿ ಯಾವುದೇ ಕಟ್ಟಡವನ್ನು ನಿರ್ಮಿಸಲಾಗಿರುವುದಿಲ್ಲ.

No building has been constructed in Suddekunte of Madhugiri taluk by the textile department for the benefit of wool weavers.

ಇ) ಅನ್ವಯಿಸುವುದಿಲ್ಲ.

Not applicable.

**ಮಧುಗಿರಿ ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆ ಬಗ್ಗೆ**

**339; ಡಾ॥ ದೊಡ್ಡರಂಗೇಗೌಡ (ನಾಮನಿರ್ದೇಶನ ಹೊಂದಿದವರು)**

ಅ) ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ಕೇಂದ್ರದ ಆಸು–ಪಾಸಿನಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಬರಪೀಡಿತ ತಾಲ್ಲೂಕು ಮಧುಗಿರಿಯಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆಯ ಅಗತ್ಯತೆ ಸರ್ಕಾರಕ್ಕೆ ಕಂಡು ಬಂದಿಲ್ಲವೇ? (ವಿವರವಾದ ಮಾಹಿತಿಯನ್ನು ನೀಡುವುದು)

**ಶ್ರೀ ನರಸಿಂಹ ನಾಯಕ (ರಾಜೂಗೌಡ)**

ಅ) ಮಧುಗಿರಿಯಲ್ಲಿ ಈಗಾಗಲೇ ಒಂದು ಕೈಗಾರಿಕಾ ವಸಾಹತನ್ನು ಸ್ಥಾಪಿಸಲಾಗಿರುತ್ತದೆ. ಬೇಡಿಕೆಯನ್ನಾಧರಿಸಿ 2ನೇ ಹಂತದ ಕೈಗಾರಿಕಾ ವಸಾಹತು ಸ್ಥಾಪನೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

One Industrial Estate has been established at Madhugiri. Establishment of 2nd Stage Industrial Estate is will be examined, based on the demand.

ಆ) ಹೌದು. ಈಗಾಗಲೇ ಮಧುಗಿರಿ ಪಟ್ಟಣದಲ್ಲಿ 1994ರಲ್ಲಿ 6.37 ಎಕರೆ ಜಾಗದಲ್ಲಿ ಕೈಗಾರಿಕಾ ವಸಾಹತುವನ್ನು ಅಭಿವೃದ್ಧಿಪಡಿಸಿ, 14 ಮಳಿಗೆ ಮತ್ತು 20 ನಿವೇಶನಗಳನ್ನು ನಿರ್ಮಾಣ ಮಾಡಿ, ಸಣ್ಣ ಕೈಗಾರಿಕಾ ಘಟಕಗಳಿಗೆ ಹಂಚಿಕೆ ಮಾಡಲಾಗಿದೆ.

Yes, KSSIDC has already established an Industrial Estate at Madhugiri town during the year 1994. 14 sheds and 20 plots have been allotted to the SSI units.

## ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ಚಿಕ್ಕ ಮಾಲೂರು ಸಮೀಪದ ರೇಷ್ಮೆ ಹುಳು ಸಾಕಾಣಿಕೆ ಕೇಂದ್ರದ ಪ್ರಗತಿ ಬಗ್ಗೆ

**336; ಡಾ॥ ದೊಡ್ಡರಂಗೇಗೌಡ (ನಾಮನಿರ್ದೇಶನ ಹೊಂದಿದವರು)**

ಅ) ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ಚಿಕ್ಕಮಾಲೂರು ಸಮೀಪ ರೇಷ್ಮೆ ಹುಳು ಸಾಕಾಣಿಕೆ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆಯೇ;

ಆ) ಈ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ ಎಷ್ಟು;

ಇ) ಈ ಕೇಂದ್ರದಲ್ಲಿ ಎಷ್ಟು ಪ್ರಮಾಣದಲ್ಲಿ ರೇಷ್ಮೆ ಹುಳು ಸಾಕಾಣಿಕೆ ಮಾಡಲಾಗುತ್ತಿದೆ? (ವಿವರವಾದ ಮಾಹಿತಿ ನೀಡುವುದು)

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು)**

ಅ) ಪ್ರಸ್ತುತ ಕಾರ್ಯನಿರ್ವಹಿಸುತ್ತಿಲ್ಲ.

ಆ) ಈ ಕೇಂದ್ರಕ್ಕೆ ಒಂದು ರೇಷ್ಮೆ ನಿರೀಕ್ಷಕರ ಹುದ್ದೆ ಮಂಜೂರಾಗಿದ್ದು, ಈ ಹುದ್ದೆಯಲ್ಲಿದ್ದ ರೇಷ್ಮೆ ನಿರೀಕ್ಷಕರು ಅನ್ಯ ಕಾರ್ಯ ನಿಮಿತ್ತ ತಾಂತ್ರಿಕ ಸೇವಾ ಕೇಂದ್ರ ಗುಬ್ಬಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಒಬ್ಬ ದಿನಗೂಲಿ ನೌಕರರು ಪಹರೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇ) ನೀರಿನ ಕೊರತೆಯಿಂದ ರೇಷ್ಮೆ ತೋಟ ಒಣಗಿ ಹೋಗಿದ್ದು, ಹುಳು ಸಾಕಾಣಿಕೆ ಮಾಡಲಾಗುತ್ತಿಲ್ಲ.

## ಹೊಸಕೆರೆಗಳ ನಿರ್ಮಾಣದ ಬಗ್ಗೆ

**335; ಶ್ರೀ ಎಸ್. ನಾಗರಾಜ್ (ಸಂದೇಶ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ಎಷ್ಟು ಕೆರೆಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ; ಹಾಗೂ ಇದಕ್ಕಾಗಿ ಈ ಆರ್ಥಿಕ ವರ್ಷದಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

**ಆ)** ಈ ಹೊಸ ಕೆರೆಗಳ ನಿರ್ಮಾಣದಿಂದ ಎಷ್ಟು ಅಚ್ಚುಕಟ್ಟು ಪ್ರದೇಶ ವ್ಯವಸಾಯಕ್ಕೆ ಒಳಪಡುವುದು ಹಾಗೂ ಎಷ್ಟು ನೀರನ್ನು ಶೇಖರಿಸಿಡಬಹುದು; (ವಿವರ ನೀಡುವುದು)

**ಇ)** ಸಮುದಾಯ ದತ್ತು ಕೆರೆಗಳ ನಿರ್ಮಾಣಕ್ಕೆ ಗುರುತಿಸಿರುವ ಕೆರೆಗಳ ವಿವರವನ್ನು ಈ 2 ಜಿಲ್ಲೆಗಳ ತಾಲ್ಲೂಕುವಾರು ವಿವರ ನೀಡುವುದು;

**ಈ)** ಪ್ರತಿಯೊಂದು ಕೆರೆಯ ನಿರ್ಮಾಣಕ್ಕೆ ಮತ್ತು ಅಭಿವೃದ್ಧಿಗೆ ನಿಗದಿಪಡಿಸಿರುವ ಅಂದಾಜು ಮೊತ್ತವೆಷ್ಟು? (ವಿವರ ಒದಗಿಸುವುದು)

**ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)**

**ಅ)** ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸಣ್ಣ ನೀರಾವರಿ ಇಲಾಖೆಯ ವತಿಯಿಂದ 2011–12ನೇ ಸಾಲಿನಲ್ಲಿ ಯಾವುದೇ ಹೊಸ ಕೆರೆಯನ್ನು ನಿರ್ಮಿಸುವ ಉದ್ದೇಶವಿರುವುದಿಲ್ಲ.

**ಆ)** ಪ್ರಶ್ನೆ ಉದ್ಭವಿಸುವುದಿಲ್ಲ.

**ಇ)** ಇಲಾಖೆಯಲ್ಲಿ ಇಂತಹ ಯೋಜನೆ ಇರುವುದಿಲ್ಲ

**ಈ)** ಪ್ರಶ್ನೆ ಉದ್ಭವಿಸುವುದಿಲ್ಲ.

**ಕಬಿನಿ ಜಲಾಶಯದಲ್ಲಿ ಹೂಳು ತುಂಬಿರುವ ಬಗ್ಗೆ**

**334; ಶ್ರೀ ಎಸ್. ನಾಗರಾಜ್ (ಸ್ಥ. ಸಂಸ್ಥೆಗಳ ಕ್ಷೇತ್ರ)**

**ಅ)** ಕಬಿನಿ ಜಲಾಶಯದಲ್ಲಿ ಹೂಳು ತುಂಬಿರುವ ಬಗ್ಗೆ ಹೈಡ್ರಾಲಿಕ್ ಸಮೀಕ್ಷೆಯನ್ನು ನಡೆಸಲಾಗುವುದೇ; ಹಾಗಿದ್ದಲ್ಲಿ, ಹೂಳು ತೆಗೆಸಲು ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಲಾಗಿದೆ;

**ಆ)** ಕಬಿನಿ ಜಲಾಶಯಕ್ಕೆ ಸೇರಿದ ನಾಲೆಗಳನ್ನು ಇದುವರೆವಿಗೂ ಎಷ್ಟು ಬಾರಿ ದುರಸ್ತಿಪಡಿಸಿ ಹೂಳನ್ನು ತೆಗೆಸಲಾಗಿದೆ; ಇದಕ್ಕಾಗಿ ಇಲ್ಲಿಯವರೆವಿಗೂ ಖರ್ಚು ಮಾಡಿರುವ ಹಣವೆಷ್ಟು;

ಇ) ಇನ್ನೂ ಎಷ್ಟು ಉದ್ದದ ನಾಲೆಗಳ ಹೂಳನ್ನು ತೆಗೆದು ದುರಸ್ತಿಪಡಿಸಬೇಕಾಗಿದೆ, ಇದಕ್ಕಾಗಿ ಬೇಕಾಗಿರುವ ಹಣವೆಷ್ಟು?

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ) ಕಬಿನಿ ಜಲಾಶಯದಲ್ಲಿ ಹೂಳಿನ ಪ್ರಮಾಣವನ್ನು ಕಂಡುಹಿಡಿಯಲು ಹೈಡ್ರೋಗ್ರಾಫಿಕ್ ಸರ್ವೆ ಕಾರ್ಯವನ್ನು ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರದ ವತಿಯಿಂದ ನಡೆಸಲಾಗಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ. ವರದಿ ಸ್ವೀಕೃತವಾದ ನಂತರ ಹೂಳು ತೆಗೆಯುವ ಬಗ್ಗೆ ಪರಿಶೀಲಿಸಿ ಕಾರ್ಯಕ್ರಮ ರೂಪಿಸಲಾಗುವುದು.

ಆ) 2003–04 ರಲ್ಲಿ ಕಬಿನಿ ಬಲದಂಡೆ ನಾಲೆಯ ಸ: 77.00 ಕಿ.ಮೀ. ನಿಂದ 160.00 ಕಿ.ಮೀ. ರವರೆಗೆ ಹೂಳು ತೆಗೆಸಲಾಗಿದ್ದು, ರೂ. 309.51 ಲಕ್ಷಗಳ ವೆಚ್ಚವಾಗಿದೆ. ಕಬಿನಿ ಬಲದಂಡೆ ನಾಲೆಯ ಲೈನಿಂಗ್ ಕಾಮಗಾರಿಯನ್ನು ಕೈಗೊಂಡ ಸಂದರ್ಭದಲ್ಲಿ 2009–10ನೇ ಸಾಲಿನಲ್ಲಿ ಕಬಿನಿ ಬಲದಂಡೆ ನಾಲೆಯ ಸರಪಳಿ 0.00 ಕಿ.ಮೀ. ಯಿಂದ 40.00 ಕಿ.ಮೀ.ವರೆಗೆ ರೂ. 89.35 ಲಕ್ಷಗಳನ್ನು ಹೂಳು ತೆಗೆಯಲು ಮತ್ತು ಸರಪಳಿ: 40.00 ಕಿ.ಮೀ. ಯಿಂದ 100.00 ಕಿ.ಮೀ. ವರೆಗೆ ರೂ. 171.27 ಲಕ್ಷಗಳನ್ನು ಹೂಳು ತೆಗೆಯಲು ವೆಚ್ಚ ಮಾಡಲಾಗಿದೆ.

ಇ) **ಕಬಿನಿ ಬಲದಂಡೆ ನಾಲೆ:**

ಕಬಿನಿ ಬಲದಂಡೆ ನಾಲೆಯ ಸ: 100.00 ಕಿ.ಮೀ. ಯಿಂದ 140.00 ಕಿ.ಮೀ. ವರೆಗೆ (40 ಕಿ.ಮೀ. ಉದ್ದ) ಲೈನಿಂಗ್ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಿದ್ದು, ಕಿ.ಮೀ. 130 ರಿಂದ 140 ರವರೆಗಿನ ಲೈನಿಂಗ್ ಕಾಮಗಾರಿಯು ಪ್ರಗತಿಯಲ್ಲಿದೆ.

ಕಿ.ಮೀ. 100 ರಿಂದ 130 ರ ವರೆಗಿನ ಲೈನಿಂಗ್ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿದೆ. ಸದರಿ ರೀಚ್‌ಗಳಲ್ಲಿ (ಕಿ.ಮೀ. 100–140) ಹೂಳು ತೆಗೆಯಲು ಒಟ್ಟಾರೆ ರೂ. 66.67 ಲಕ್ಷಗಳನ್ನು ನಿಗಧಿಪಡಿಸಲಾಗಿದೆ.

ಸರಪಳಿ: 140.00 ಕಿ.ಮೀ. ಯಿಂದ 180.00 ಕಿ.ಮೀ. ವರೆಗೆ ಹೆಚ್ಚಾಗಿ ಹೂಳು ತುಂಬಿರುವುದಿಲ್ಲ.

**ಕಬಿನಿ ಎಡದಂಡೆ ನಾಲೆ:**

ಕಬಿನಿ ಎಡದಂಡೆ ನಾಲೆಯ ಸರಪಳಿ: 0.00 ಕಿ.ಮೀ. ಯಿಂದ 26.00 ಕಿ.ಮೀ. ವರೆಗೆ ಲೈನಿಂಗ್ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದೆ. ಸದರಿ ನಾಲೆಯಲ್ಲಿ ಹೂಳು ತೆಗೆಯಲು ರೂ. 11.84 ಲಕ್ಷಗಳನ್ನು ನಿಗಧಿಪಡಿಸಲಾಗಿದೆ.

**ಸಭಾಪತಿಯವರು:–** ಮಂಡಿಸಲಾಯಿತು. ಈಗ ಶೂನ್ಯವೇಳೆ ಪ್ರಸ್ತಾವಗಳು.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೇ, ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾನು ಕಳುಹಿಸಿಕೊಟ್ಟಿದ್ದಂತಹ ಪ್ರಶ್ನೆಯನ್ನು ಚುಕ್ಕೆರಹಿತ ಪ್ರಶ್ನೆಗಳ ಪಟ್ಟಿಯಲ್ಲಿ ಸೇರಿಸಲ್ಪಟ್ಟಿದೆ, ಆದರೆ ಅದಕ್ಕೆ ಕೂಡ ಸರ್ಕಾರದಿಂದ ಉತ್ತರ ಬಂದಿಲ್ಲ.

**ಸಭಾಪತಿಯವರು:–** ನಾನು ಈಗಾಗಲೇ ಹೇಳಿದ್ದೇನೆ, ಗೌರವಾನ್ವಿತ ಸದಸ್ಯರು ಕಳುಹಿಸಿಕೊಂಡುವಂತಹ ಪ್ರಶ್ನೆಗಳಲ್ಲಿ ಕೆಲವು ಚುಕ್ಕೆ ಗುರುತಿನ ಪ್ರಶ್ನೆಗಳ ಪಟ್ಟಿಯಲ್ಲಿಯೂ ಮತ್ತು ಕೆಲವು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಯಲ್ಲಿಯೂ ಬರುತ್ತವೆ. ಆದರೆ ಮಾನ್ಯ ಸದಸ್ಯರ ಎಲ್ಲ ಪ್ರಶ್ನೆಗಳಿಗೂ ಉತ್ತರಗಳನ್ನು ಕಳುಹಿಸಿಕೊಡಲೇಬೇಕು. ಆ ಪ್ರಶ್ನೆಗಳಿಗೆ ಉತ್ತರ ಕೊಡಲು ಸರ್ಕಾರದ ವತಿಯಿಂದ ಸಮಯಾವಕಾಶವನ್ನು ಕೇಳುತ್ತಿದ್ದಾರೆ. ಈ ವಿಚಾರವನ್ನು ಸರ್ಕಾರದ ಪರವಾಗಿ ಮುಖ್ಯಮಂತ್ರಿಯವರು ಗಮನಿಸಬೇಕು.

ನಮ್ಮ ಸದನದ ಸದಸ್ಯರ ಒಂದು ಅಭಿಪ್ರಾಯ ಹೀಗಿದೆ, ಸಮಯ ತೆಗೆದುಕೊಂಡಂತಹ ಪ್ರಶ್ನೆಗಳಿಗೆ ಕೂಡ ಅವರು ತೆಗೆದುಕೊಂಡಂತಹ ಸಮಯದಲ್ಲಿ ಉತ್ತರಗಳನ್ನು ಕಳುಹಿಸಿಕೊಡಬೇಕು. ಉತ್ತರಗಳನ್ನು ಕಳುಹಿಸದೆ ಇರುವುದು ಸರಿಯಲ್ಲ, ಅದನ್ನು ಕಳುಹಿಸುವಂತಹ ವ್ಯವಸ್ಥೆ ಆಗಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ದಯಮಾಡಿ ತಾವು ಆ ವಿಚಾರವಾಗಿ ಏನಾದರೂ ಪ್ರತಿಕ್ರಿಯೆ ವ್ಯಕ್ತಪಡಿಸುವುದಿದ್ದರೆ ವ್ಯಕ್ತಪಡಿಸಬಹುದು.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು):–** ಮಾನ್ಯ ಸಭಾಪತಿಯವರೇ, ಇಷ್ಟರವರೆಗೆ ಆ ರೀತಿಯ ವ್ಯತ್ಯಾಸಗಳಾಗಿದ್ದಲ್ಲಿ ದಯವಿಟ್ಟು ಮನ್ನಿಸಬೇಕು. ಇನ್ನು ಮುಂದೆ ಯಾವುದೇ ಪ್ರಶ್ನೆಗಳಿಗೆ ಉತ್ತರ ಕೊಡಲು ಕಾಲಾವಕಾಶ ಕೇಳಿದ್ದರೂ ಕೂಡ ಆ ಕಾಲಾವಕಾಶದಲ್ಲಿ ಅಂದರೆ ಮುಂದಿನ 15 ದಿವಸಗಳಲ್ಲಿ ಎಲ್ಲ ಉತ್ತರಗಳನ್ನು ಸದನದಲ್ಲಿಯೇ ಕೊಡುತ್ತೇವೆ. ಒಂದು ವೇಳೆ ಅಧಿವೇಶನ ಮುಗಿದರೆ, ಮಾನ್ಯ ಸದಸ್ಯರಿಗೆ ಆ ಉತ್ತರಗಳ ಒಂದು ಪ್ರತಿಯನ್ನು ಕಳುಹಿಸಿಕೊಡುವಂತಹ ಕೆಲಸಕಾರ್ಯಗಳನ್ನು ನಾವು ಮಾಡುತ್ತೇವೆ.

**ಶ್ರೀ ಎಚ್.ಸಿ. ನೀರಾವರಿ:–** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ನಾನು ಕೇಳಿದಂತಹ ಪ್ರಶ್ನೆಗಳು ಮುಖ್ಯಮಂತ್ರಿಯವರ ಕಾರ್ಯಾಲಯದ ಬಗ್ಗೆಯೇ ಇದ್ದವು. ಅವರು ಹೊರಗಡೆಯಿಂದ ಮಾಹಿತಿ ಸಂಗ್ರಹಿಸುವಂತಹ ಅವಶ್ಯಕತೆಯೇನೂ ಇರಲಿಲ್ಲ. ಆದರೂ ಅದಕ್ಕೆ ಉತ್ತರ ಕೊಡಲು ಎರಡು ವಾರಗಳ ಸಮಯಾವಕಾಶವನ್ನು ಕೇಳಿದ್ದರು. ನಂತರ ಅಧಿವೇಶನ ಮುಗಿದು ಒಂದು ತಿಂಗಳು ಕೂಡ ಕಳೆಯಿತು. ಈಗಲೂ ಕೂಡ ಉತ್ತರ ಬಂದಿಲ್ಲ ಎನ್ನುವುದಾದರೆ ನಾವು ಪ್ರಶ್ನೆಗಳನ್ನು ಕೇಳುವುದೇ ಬೇಡವೆಂದು ತೀರ್ಮಾನ ಮಾಡಬೇಕೋ ಹೇಗೆ?

**ಸಭಾಪತಿಯವರು:–** ಹಳೆಯದನ್ನೆಲ್ಲಾ ಮರೆತುಬಿಡಿ. ಇನ್ನು ಮುಂದೆ ಆ ರೀತಿ ಆಗದಂತೆ ಸರಿಪಡಿಸುತ್ತೇವೆ ಎನ್ನುವಂತಹ ಮಾತನ್ನು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು):-** ಮಾನ್ಯ ಸಭಾಪತಿಯವರೇ, ಈಗ ಆಗಿರುವಂತಹ ಸ್ವಲ್ಪಮಟ್ಟಿನ ವ್ಯತ್ಯಾಸವನ್ನು ದಯವಿಟ್ಟು ಬಿಟ್ಟುಬಿಡಿ. ಮುಂದಕ್ಕೆ ಆ ರೀತಿ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದು. ನಾನು ಸಂಬಂಧಪಟ್ಟಂತಹ ಎಲ್ಲ ಮಂತ್ರಿಗಳಿಗೆ ಇವೊತ್ತೇ ಪತ್ರ ಬರೆಯುತ್ತೇನೆ. ಅವರು ಬಂದಂತಹ ಪ್ರಶ್ನೆಗಳಿಗೆ ತಕ್ಷಣ ಉತ್ತರ ಕೊಡಲು ಸಾಧ್ಯವಾಗದಿದ್ದಲ್ಲಿ ಅದಕ್ಕೆ ಬೇಕಾದರೆ ಕಾಲಾವಕಾಶ ತೆಗೆದುಕೊಳ್ಳಲಿ, ಆದರೆ ಉತ್ತರ ನೀಡದೆ ಇದ್ದಂತಹ ಪ್ರಶ್ನೆಗಳಿಗೆ ಮುಂದಿನ 15 ದಿವಸಗಳಲ್ಲಿ ಕಡ್ಡಾಯವಾಗಿ ಸಂಬಂಧಪಟ್ಟ ಸದಸ್ಯರಿಗೆ ಉತ್ತರವನ್ನು ಕಳುಹಿಸಿಕೊಡಲು ಸೂಚಿಸಿ ಸದರಿ ಉತ್ತರದ ಒಂದು ನಕಲನ್ನು ತಮ್ಮ ಕಾರ್ಯಾಲಯಕ್ಕೆ ಕಳುಹಿಸಿಕೊಡಲಿಕ್ಕೆ ನಾನು ಆದೇಶ ಮಾಡುತ್ತೇನೆ.

**ಡಾ॥ ಎಸ್.ಆರ್. ಲೀಲಾ:-** ಮಾನ್ಯ ಸಭಾಪತಿಯವರೇ, ...

**ಶ್ರೀ ಪಟೇಲ್ ಶಿವರಾಂ:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರು ಉತ್ತರ ಬರದಿರುವಂತಹ ಎಲ್ಲ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ತಿಳಿಸಿದಂತಹ ವಿಚಾರವನ್ನು ತಾವು ಕೇಳಿಸಿಕೊಳ್ಳಲಿಲ್ಲ ಎನಿಸುತ್ತಿದೆ. ಅವರು ಏನು ಹೇಳಿದರೆಂದರೆ, ಯಾರ್‍ಯಾರ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲವೊ ಅವರೆಲ್ಲರ ಪ್ರಶ್ನೆಗಳನ್ನು ಉತ್ತರಸಹಿತವಾಗಿ ಸದನ ನಡೆಯುತ್ತಿದ್ದರೆ ಸದನದಲ್ಲಿ ಅಥವಾ ಅಧಿವೇಶನ ಮುಗಿದಿದ್ದರೆ ಸಂಬಂಧಪಟ್ಟ ಸದಸ್ಯರಿಗೆ ಕಳುಹಿಸಿಕೊಟ್ಟು ಅದರ ಪ್ರತಿಯನ್ನು ನನ್ನ ಕಚೇರಿಗೆ ಕಳುಹಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ತಿಳಿಸಿದ್ದಾರೆ. ಈ ವಿಚಾರವನ್ನು ಅವರು ಉತ್ತರಗಳು ಬಂದಿಲ್ಲದಿರುವಂತಹ ಎಲ್ಲ ಸದಸ್ಯರಿಗೆ ಸಂಬಂಧಪಟ್ಟಂತೆಯೇ ತಿಳಿಸಿದ್ದಾರೆ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಮುಖ್ಯಮಂತ್ರಿಯವರೇ, ನಾನು ತಮ್ಮ ಜೊತೆಯಲ್ಲಿಯೇ ಮಾತನಾಡಿದ್ದೇನೆ. ಇದು ಸುಮಾರು 4 ವರ್ಷಗಳ ಕೈಗಾರಿಕಾ ಕೇಂದ್ರದ ಪ್ರಶ್ನೆ. ಈಗ ಅದು ಒಂದು ಹಂತಕ್ಕೆ ಬಂದಿದೆ, ಸರ್ಕಾರದಲ್ಲಿ ಅಂತಿಮ ಆದೇಶ ಕೂಡ ಆಗಿದೆ.

**ಸಭಾಪತಿಯವರು:–** ಅದರ ಬಗ್ಗೆ ಈಗ ಚರ್ಚೆ ಹೇಗೆ ಸರಿಯಾಗುತ್ತದೆ?

**ಶ್ರೀ ವಿ.ಆರ್. ಸುದರ್ಶನ್:–** ನಮ್ಮ ಊರಿಗೆ ಸಂಬಂಧಪಟ್ಟಿರುವ ಆ ವಿಚಾರದ ಬಗ್ಗೆ ತಾವು ಅಧಿಕಾರಿಗಳ ಒಂದು ಸಭೆಯನ್ನು ಕರೆದು ಮಾತನಾಡಿ ಅದನ್ನು ಇತ್ಯರ್ಥಪಡಿಸಬೇಕಾಗುತ್ತದೆ. ದಯಮಾಡಿ ಅದಕ್ಕೆ ತಾವು ಒಂದು ದಿನಾಂಕವನ್ನು ನಿಗದಿಪಡಿಸಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಂತೆಯೇ ನಾನು ಪ್ರಶ್ನೆಯನ್ನು ಕೇಳಿರುವಂಥದ್ದು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರಗಳು ಎಂದರೆ ಕೇವಲ ಪ್ರಶ್ನೋತ್ತರ ಅವಧಿಯಲ್ಲಿ ಕೇಳಿರುವಂತಹ ಪ್ರಶ್ನೆಗಳಿಗೆ ನೀಡುವಂತಹ ಉತ್ತರಗಳು ಮಾತ್ರವಲ್ಲ. ನಿಯಮ 330ರ ಅಡಿಯಲ್ಲಿ ಪ್ರಸ್ತಾಪಿಸುವಂತಹ ವಿಷಯಗಳು, ಗಮನ ಸೆಳೆಯುವ ಸೂಚನೆಗಳ ಅಡಿಯಲ್ಲಿ ಪ್ರಸ್ತಾಪಿಸಿರುವಂತಹ ವಿಷಯಗಳು ಇತ್ಯಾದಿಗಳಿಗೆ ಉತ್ತರ ನೀಡಲು ಸರ್ಕಾರ ಏನು ಕಾಲಾವಕಾಶವನ್ನು ತೆಗೆದುಕೊಂಡಿರುತ್ತದೆ ಆ ಎಲ್ಲ ಪ್ರಶ್ನೆಗಳಿಗೆ ಸಹ ಸರ್ಕಾರದಿಂದ ನಿಗದಿತ ಸಮಯದಲ್ಲಿ ಉತ್ತರಗಳು ಬರಬೇಕು. ಇಲ್ಲವಾದರೆ ಅಧಿಕಾರಿಗಳೇನು ಮಾಡುತ್ತಾರೆ ಎಂದರೆ ಪ್ರಶ್ನೋತ್ತರ ಅವಧಿಯಲ್ಲಿನ ಪ್ರಶ್ನೆಗಳಿಗೆ ಉತ್ತರ ಕಳುಹಿಸಿಕೊಡುವಂತೆ ಮುಖ್ಯಮಂತ್ರಿಯವರು ತಿಳಿಸಿದ್ದಾರೆ. ಆದ್ದರಿಂದ ನಾವು ಪ್ರಶ್ನೋತ್ತರ ಅವಧಿಯಲ್ಲಿ ಕೇಳಲಾಗಿರುವ ಪ್ರಶ್ನೆಗಳಿಗಷ್ಟೇ ಉತ್ತರವನ್ನು ಕಳುಹಿಸಿಕೊಡುತ್ತೇವೆ ಎಂದು ಕಳುಹಿಸಿಬಿಡುತ್ತಾರೆ. ಬೇರೆ ನಿಯಮಗಳ ಅಡಿಯಲ್ಲಿ ಪ್ರಸ್ತಾಪಿಸಿರುವಂತಹ ವಿಷಯಗಳಿಗೆ ಉತ್ತರಗಳನ್ನು ಕಳುಹಿಸಿಕೊಡುವುದಿಲ್ಲ.

ಆದ್ದರಿಂದ ಈ ಸದನದಲ್ಲಿ ಚರ್ಚೆಯಾದಂತಹ ಎಲ್ಲ ವಿಷಯಗಳ ಬಗ್ಗೆಯೂ ಉತ್ತರ ಬರಬೇಕು.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಇದು ಸದನದ ಎಲ್ಲ ಸದಸ್ಯರ ಹಕ್ಕು. ಅವರ ಹಕ್ಕನ್ನು ಮೊಟಕುಗೊಳಿಸುವಂತಹ ಯಾವುದೇ ಕೆಲಸಕಾರ್ಯಗಳನ್ನು ನಮ್ಮ ಸರ್ಕಾರ ಮಾಡುವುದಿಲ್ಲ. ಈ ಹಿಂದೆ ಆ ರೀತಿ ಏನಾದರೂ ನಡೆದಿದ್ದರೆ, ಅದನ್ನು ಇನ್ನು ಮುಂದಕ್ಕೆ ಆಗದಂತೆ ನೋಡಿಕೊಳ್ಳುತ್ತೇವೆ. ಅದು ನಿಯಮ 330ರ ಅಡಿಯಲ್ಲಿ ಪ್ರಸ್ತಾಪಿಸಿರುವಂತಹ ವಿಷಯ ಇರಬಹುದು, ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಿರುವಂತಹ ವಿಷಯ ಇರಬಹುದು, ಈ ರೀತಿ ಯಾವುದೇ ಆಗಿದ್ದರೂ ಸಹ ಸದನದ ಕಲಾಪಗಳಲ್ಲಿ ಆ ಬಗ್ಗೆ ತಕ್ಷಣವೇ ಹೇಳಿಕೆ ಮಾಡುವುದಕ್ಕಾಗದಿದ್ದರೂ ಸಹ ಮುಂದಿನ ಹದಿನೈದು ದಿವಸಗಳಲ್ಲಿ ಅದಕ್ಕೆ ಸಮರ್ಪಕವಾದಂತಹ ಉತ್ತರವನ್ನು ಕೊಡುತ್ತೇವೆ. ನಮ್ಮ ಸದಸ್ಯರ ಯಾವುದೇ ಹಕ್ಕನ್ನು ಮೊಟಕುಗೊಳಿಸುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡುವುದಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿ ಮುಗಿದ ನಂತರ ವಿಷಯವನ್ನು ಪ್ರಸ್ತಾಪಿಸಲು ತಾವು ನನಗೆ ಅವಕಾಶ ನೀಡುವುದಾಗಿ ತಿಳಿಸಿದ್ದಿರಿ.

**ಸಭಾಪತಿಯವರು:–** ತಾವು ಅದನ್ನು ಮರೆತುಬಿಡುತ್ತೀರಿ ಎಂದುಕೊಂಡಿದ್ದೆ.

**ಶ್ರೀ ಎಂ.ಸಿ. ನಾಣಯ್ಯ:–** ಇಲ್ಲ, ಇಲ್ಲ, ನಾನು ಮರೆಯುವುದಿಲ್ಲ, ಮಾನ್ಯ ಸಭಾಪತಿಗಳೇ ನಾನು ಕೇಳಬಯಸುವುದಿಷ್ಟೆ. ದಯವಿಟ್ಟು ಮಂತ್ರಿಗಳು ಅನಿವಾರ್ಯ ಕಾರಣಗಳಿಂದ ಸದನಕ್ಕೆ ಹಾಜರಾಗದೆ ಇರತಕ್ಕಂತಹ ಪರಿಸ್ಥಿತಿ ನಿರ್ಮಾಣವಾದರೆ, ತಮಗಿರುವ ಅಧಿಕಾರವನ್ನು ಖಂಡಿತವಾಗಿಯೂ ತಾವು ಚಲಾವಣೆ ಮಾಡಬಹುದು. ಆದರೆ ಸದನ ನಡೆಯುತ್ತಿರುವಾಗ ಕೇವಲ ಕೆಲವೇ ಕೆಲವು ಲಘು ಕಾರಣಗಳಿಗೋಸ್ಕರ ಪತ್ರ ಬರೆದು, ಅವರು

ಸದನದಿಂದ ಹೊರಗಡೆ ಉಳಿಯುತ್ತಿರತಕ್ಕಂಥದ್ದು, ಪ್ರಶ್ನೆಗಳಿಗೆ ಉತ್ತರ ನೀಡಲು ಮತ್ತೊಬ್ಬರಿಗೆ ಅಧಿಕಾರವನ್ನು ಕೊಡುತ್ತಿರುವುದು ಖಂಡಿತವಾಗಿಯೂ ಸರಿಯಾದಂತಹ ಕ್ರಮವಲ್ಲ. ಆದ್ದರಿಂದ ಮಂತ್ರಿಗಳು ಯಾವ ಕಾರಣದಿಂದಾಗಿ ಇವೊತ್ತು ಸದನದಿಂದ ಹೊರಗಡೆ ಉಳಿದಿದ್ದಾರೆ ಎಂಬುದು ಈ ಸದನಕ್ಕೆ ಗೊತ್ತಾಗಬೇಕಾಗುತ್ತದೆ. ಅದು ಅನಿವಾರ್ಯವಾದಂತಹ ಕಾರಣವಾಗಿದ್ದರೆ ಖಂಡಿತವಾಗಿಯೂ ನಾವು ಅದನ್ನು ಒಪ್ಪುತ್ತೇವೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಿಂದ ಅದನ್ನು ಹೇಳಿಸುವುದರ ಬದಲು, ಸಭಾಪತಿಗಳಾದ ತಾವೇ ಅವರಿಗೆ ಈ ಅಧಿಕಾರವನ್ನು ಕೊಟ್ಟಿರುವುದರಿಂದ ಈ ವಿಚಾರ ತಮ್ಮ ಬಾಯಿಂದಲೇ ಬಂದರೆ ಒಳ್ಳೆಯದೆಂದು ನಾವು ಭಾವಿಸುತ್ತೇವೆ. ಇದರಲ್ಲಿ ಮುಖ್ಯಮಂತ್ರಿಯವರನ್ನು ಸಿಕ್ಕಿಸಬಾರದು.

**ಸಭಾಪತಿಯವರು:–** ಮುಖ್ಯಮಂತ್ರಿಯವರು ಕಾರಣ ಏನೆಂಬುದನ್ನು ಹೇಳಬಯಸುತ್ತಿದ್ದಾರೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ತಾವು ಮುಖ್ಯಮಂತ್ರಿಗಳನ್ನು ಸಿಕ್ಕಿಸಬಾರದು. ಏಕೆಂದರೆ ಮಂತ್ರಿಗಳು ಪತ್ರ ಬರೆದಿರುವುದು ನಿಮಗೆ, ನೀವು ಮಾನ್ಯ ಬಸವರಾಜ ಬೊಮ್ಮಾಯಿಯವರಿಗೆ ಅಧಿಕಾರ ಕೊಟ್ಟಿರುವಂಥದ್ದು. ಆದ್ದರಿಂದ ಅದನ್ನು ನೀವೇ ಹೇಳಿಬಿಟ್ಟರೆ ಒಳ್ಳೆಯದು, ಏಕೆಂದರೆ ಆ ಕಾರಣ ಅನಿವಾರ್ಯವೇ ಅಲ್ಲವೇ ಎಂಬುದನ್ನು ತೀರ್ಮಾನ ಮಾಡಬೇಕಾದವರು ನೀವೇ ಹೊರತು ಮುಖ್ಯಮಂತ್ರಿಗಳಲ್ಲ.

**ಸಭಾಪತಿಯವರು:–** ಅವರು ತೀರ್ಮಾನ ಮಾಡುವುದಿಲ್ಲ, ವಿಷಯ ಹೇಳುತ್ತಾರೆ ಅಷ್ಟೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು):–** ಮಾನ್ಯ ಸಭಾಪತಿಯವರೇ, ಇದರಲ್ಲಿ ನನ್ನ ಪಾಲು ಕೂಡ ಸ್ವಲ್ಪ ಇದೆ. ಅದಕ್ಕಾಗಿಯೆ ನಾನು ಮಾತನಾಡುತ್ತಿದ್ದೇನೆ. ಇದೇ ಜೂನ್ ತಿಂಗಳಿನಲ್ಲಿ ನಮ್ಮ ಇನ್ನೊಂದು ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್ ನಡೆಯುತ್ತಿದೆ. ಅದಕ್ಕೆ ಪೂರ್ವಭಾವಿಯಾಗಿ ಇವೊತ್ತು 10ನೇ ಅಂತರರಾಷ್ಟ್ರೀಯ ಸ್ಟೋನಾ 2012ರ ಒಂದು ದೊಡ್ಡ

ಕಾರ್ಯಕ್ರಮ ನಡೆಯುತ್ತಿದೆ. ಅಲ್ಲಿ ಒಂದು ವಸ್ತುಪ್ರದರ್ಶನ ಇದೆ. ನಾನು ಅದರ ಉದ್ಘಾಟನೆಗೆ ಹೋಗಬೇಕಾಗಿತ್ತು, ಅವರು ಮುಖ್ಯ ಅತಿಥಿಗಳಾಗಿದ್ದರು. ಆದರೆ ನನಗೆ ಆ ಕಾರ್ಯಕ್ರಮಕ್ಕೆ ಹೋಗುವುದಕ್ಕಾಗದಿರುವುದರಿಂದ ಅವರೇ ಉದ್ಘಾಟನೆಗೆ ಹೋಗಿದ್ದಾರೆ. ಇವತ್ತು ಬೆಳಿಗ್ಗೆ ನಾನು ಸದನಕ್ಕೆ ಬಂದಾಗ ಒಂದು ಮಾತನ್ನು ಹೇಳಿದೆ. ಏನೆಂದರೆ, ಇವತ್ತು ಸದನದಲ್ಲಿ ಮಾನ್ಯ ನಾಣಯ್ಯನವರು ವಿಶೇಷವಾದಂತಹ ಪ್ರಸ್ತಾಪಗಳನ್ನು ಮಾಡುತ್ತಾರೆಂದು ಗೊತ್ತಾಗಿದೆ. ಆದಕಾರಣ ನಾನು ಈ ಸದನದಲ್ಲಿ ಮುಖ್ಯಮಂತ್ರಿಯಾಗಿ ಇರಲೇ ಬೇಕಾದಂತಹ ಅನಿವಾರ್ಯತೆ ಇದೆ. ಆದಕಾರಣ ನೀವು ಹೋಗಿ ಬನ್ನಿ ಎಂದು ಹೇಳಿದೆ. ಆದಕಾರಣ ಅವರು ಸದನಕ್ಕೆ ಬರುವುದಕ್ಕೆ ಆಗಲಿಲ್ಲ. ನನ್ನದೇ ಆದಂತಹ ಪಾಲು ಇದರಲ್ಲಿತ್ತು. ಆದರೆ ಇನ್ನು ಮುಂದೆ ತಮ್ಮ ಸೂಚನೆಯನ್ನು ನಾವು ಪಾಲಿಸುತ್ತೇವೆ.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ಬಹಳ ಸಂದರ್ಭದಲ್ಲಿ ಮಾನ್ಯ ಸಚಿವರುಗಳು ಅನಿವಾರ್ಯತೆ ಇಲ್ಲದೆ ಇದ್ದರೂ ಸಹ ಹೊರಗಡೆ ಉಳಿಯುವುದನ್ನು ತಾವು ಗಮನಿಸಿದರೆ ಸಾಕು.

## 2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

(ಅ) ಅರಣ್ಯ ಗ್ರಾಮಗಳಲ್ಲಿ "ಜೆ.ಬಿ. ಸಿಂಡ್ರೋಮ್" ಕಾಯಿಲೆ ಹರಡುತ್ತಿದ್ದು, ಅದನ್ನು ತಡೆಗಟ್ಟುವ ಕುರಿತು "ಶೂನ್ಯ ವೇಳೆ"ಯಲ್ಲಿ ಪ್ರಸ್ತಾವಿಸುವುದಕ್ಕಾಗಿ ಅನುಮತಿ ನೀಡುವ ಕುರಿತು.

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 31.01.2012ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟವಾದಂತೆ ಜೊಯಿಡಾ ತಾಲ್ಲೂಕಿನ ಕೆಲ ಅರಣ್ಯ ಗ್ರಾಮಗಳಲ್ಲಿ "ಜೆ.ಬಿ. ಸಿಂಡ್ರೋಮ್" (Guillain-Barre Syndrome) ಎಂಬ ಕಾಯಿಲೆ ಕಂಡು ಬಂದಿದ್ದು, ಇದು ನರಸಂಬಂಧಿತ ರೋಗವಾಗಿದ್ದು, ಕೈ-ಕಾಲುಗಳು ನಿಶ್ಯಕ್ತವಾಗಿ ರೋಗಿ ಸ್ಪರ್ಶಜ್ಞಾನವಿಲ್ಲದಂತಾಗಿ ನಿಷ್ಕ್ರೀಯವಾಗುತ್ತಾನೆ. ವಿವಿಧ ರೀತಿಯ

ಬ್ಯಾಕ್ಟೀರಿಯಾ–ವೈರಸ್‌ಗಳಿಂದ ಹರಡುವ ಈ ರೋಗವು ಪಾರ್ಶ್ವವಾಯುಗೆ ಕಾರಣವಾಗಿ ಶ್ವಾಸಕೋಶಗಳಿಗೆ ತಲುಪಿ ಉಸಿರಾಟದ ತೊಂದರೆಯಿಂದಾಗಿ ಸಾವನ್ನಪ್ಪುತ್ತಾನೆ.

ಅತ್ಯಂತ ಮಾರಕ ರೋಗವಾದ "ಜೆ.ಬಿ. ಸಿಂಡ್ರೋಮ್" ಕಾಯಿಲೆಗೆ ಚಿಕಿತ್ಸೆಗೆ ನಗರದ ಆಸ್ಪತ್ರೆಗಳಲ್ಲಿ ಸುಮಾರು 1 ಲಕ್ಷ ರೂ.ಗಳ ವೆಚ್ಚವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರವು ತಾಲ್ಲೂಕು ಮಟ್ಟದಲ್ಲಿಯೂ ಸಹ ಈ ಮಾರಕ ರೋಗಕ್ಕೆ ಔಷಧಿಗಳನ್ನು ಪೂರೈಸುವಲ್ಲಿ ಮತ್ತು ಅಗತ್ಯವಿರುವ ಇನ್ನಿತರೇ ಸೂಕ್ತ ಚಿಕಿತ್ಸೆಗೆ ಬೇಗನೆ ವ್ಯವಸ್ಥೆ ಮಾಡುವ ನಿಟ್ಟಿನಲ್ಲಿ ಅಲ್ಲಿನ ಗ್ರಾಮಸ್ಥರ ಆರೋಗ್ಯದ ಹಿತದೃಷ್ಟಿಯಿಂದ ಮಾಡಬೇಕೆಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿಸಲು ಇಚ್ಛಿಸುತ್ತೇನೆ. ಏಕೆಂದರೆ ಈ ರೋಗಕ್ಕೆ ತುತ್ತಾಗುವವರೆಲ್ಲರೂ ಸಾಮಾನ್ಯ ಜನರು ಅರಣ್ಯಗಳಲ್ಲಿ ವಾಸ ಮಾಡುವಂತಹ ಎಸ್‌ಸಿ/ಎಸ್‌ಟಿ ಹಾಗೂ ಕೂಲಿಕಾರ್ಮಿಕರು ಜಾಸ್ತಿ ಇದ್ದಾರೆ. ದಯಮಾಡಿ ಸರ್ಕಾರ ಅದರ ಬಗ್ಗೆ ತೀವ್ರವಾದಂತಹ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಕೋರುತ್ತಾನೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಈಗ ಇದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳ ಲಭ್ಯವಿಲ್ಲ. ಆದಕಾರಣ ಮಧ್ಯಾಹ್ನ ಮೂರು ಗಂಟೆಯ ಒಳಗೆ ಇದಕ್ಕೆ ಸಂಬಂಧಪಟ್ಟಂತಹ ಪೂರ್ಣ ಉತ್ತರವನ್ನು ಒದಗಿಸಲಾಗುವುದು.

**(ಆ)** ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ವೇತನ ವಿಳಂಬವಾಗುತ್ತಿರುವ ಬಗ್ಗೆ.

**ಶ್ರೀ ಬಸವರಾಜ್ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವವರಿಗೆ ಪ್ರತೀ ತಿಂಗಳು ಸರಿಯಾಗಿ ಸಂಬಳ ಸಿಗುತ್ತಿಲ್ಲ. ಅಲ್ಲದೇ ನೇಮಕಾತಿಗಳನ್ನು ಸಂದರ್ಶನದ ಮೂಲಕ

ಮಾಡುತ್ತಿರುವುದರಿಂದ ನಾನ್ ಸೆಮಿಸ್ಟರ್‌ನಲ್ಲಿ ಅಧ್ಯಯನ ಮಾಡಿದವರಿಗೆ ಅನ್ಯಾಯವಾಗುತ್ತಿದೆ.

ಅತಿಥಿ ಉಪನ್ಯಾಸಕರನ್ನು ಹಾಗೂ ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸಲು ಕೂಡಾ ಅವರು ಸರಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಇವರು ಬಹಳ ದಿನಗಳಿಂದ ಕಡಿಮೆ ಸಂಬಳದಲ್ಲಿ ಕೆಲಸ ಮಾಡುತ್ತಿದ್ದು, ಇವರ ಸಮಸ್ಯೆಗಳನ್ನು ಪರಿಹರಿಸಲು ಸರಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಡಾ|| ವಿ.ಎಸ್. ಆಚಾರ್ಯರು ಕೆಳಮನೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದಾರೆ. ಅವರು ಬಂದ ನಂತರ ಆ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಕೊಡುತ್ತಾರೆ.

**ಸಭಾಪತಿಯವರು:–** ಈ ಸಂದರ್ಭದಲ್ಲಿ ನಾನು ಈ ಸದನದಲ್ಲಿ ಗಮನಿಸಿದಂತಹ ಎರಡು ವಿಷಯಗಳನ್ನು ಮಾನ್ಯ ಸಚಿವರುಗಳಿಗೆ ತಿಳಿಸಲಿಚ್ಛಿಸುತ್ತೇನೆ. ಮೊದಲನೆಯದಾಗಿ ಪ್ರಶ್ನೋತ್ತರ ಅವಧಿಯಲ್ಲಿ ತುಂಬಾ ಜನರಿದ್ದೀರಿ, ತುಂಬಾ ಸಂತೋಷವಾಗುತ್ತದೆ. ಆದರೆ ಕೆಲವು ಸದಸ್ಯರು, ಅಂದರೆ ಅವರ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ ಅವರುಗಳು ತಮ್ಮ ಪ್ರಶ್ನೆಗೆ ಉತ್ತರ ಬಂದ ತಕ್ಷಣ ಸದನದಿಂದ ಎದ್ದು ಹೊರಗಡೆ ಹೋಗುತ್ತಾರೆ. ನಾನು ಹೋಗಬೇಡಿ ಎಂದು ಹೇಳುವುದಿಲ್ಲ. ಹೋಗಿ ಕಾಫಿ ಕುಡಿದು ಐದತ್ತು ನಿಮಿಷಗಳಲ್ಲಿ ವಾಪಸ್ಸು ಬರಬೇಕು. ಆದರೆ, ನಾವು ಹೋಗಿಯೇ ಬಿಡುತ್ತೇವೆ ಎಂದು ಹೇಳುವಂತಹ ಪದ್ಧತಿಯೇ ಸರಿಯಲ್ಲ.

ಇನ್ನು ಎರಡನೆಯ ವಿಷಯವೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾರೆ. ನಮ್ಮ ಸದನದ ತುಂಬಾ ಜನ ಸದಸ್ಯರುಗಳು ಪ್ರತ್ಯೇಕವಾಗಿ ಬಂದು ಭೇಟಿ ಮಾಡಿ ಹೇಳುತ್ತಿದ್ದಾರೆ, ಸರ್ಕಾರದಲ್ಲಿ ಸುಮಾರು 24 ರಿಂದ 25 ಜನ ಸಚಿವರುಗಳಿದ್ದಾರೆ. ಎರಡೂ ಸದನ ಏಕಕಾಲಕ್ಕೆ ಅಧಿವೇಶನ ಸೇರಿದರೆ ಒಂದು ಸದನದಲ್ಲಿ 10 ರಿಂದ 12 ಜನ ಮಂತ್ರಿಗಳು ಹಾಜರಿರಬೇಕು. ಕಡ್ಡಾಯವಾಗಿ ಇರಲೇ ಬೇಕೆಂದು ನಾವು ಹೇಳಿದ್ದರೂ ಸರಿ,

ಹೇಳದೆ ಇದ್ದರೂ ಸರಿ. ಕೆಳಮನೆಯಲ್ಲಿ ಕೆಲಸ ಇದ್ದರೆ ಅಲ್ಲಿ ಇರಲಿ, ಈ ಸದನದಲ್ಲಿ ಕೆಲಸ ಇದ್ದರೆ ಇಲ್ಲಿ ಇರಲಿ. ನಿನ್ನೆ ದಿವಸ ಮಾಧ್ಯಮ ಮಿತ್ರರು ನನಗೆ ಒಂದು ಮಾತು ಹೇಳಿದರು. ವಿಧಾನಸಭೆಯು ಬೇಗ ಮುಗಿಯಿತು, ಹಾಗಾಗಿ ಅವರು ವಿಧಾನ ಪರಿಷತ್ತಿಗೆ ಬರಬಹುದಾಗಿತ್ತು. ಆದರೆ ನಿನ್ನೆ ಮಧ್ಯಾಹ್ನ ಈ ಸದನದಲ್ಲಿ ಇದ್ದಂತಹವರು ಕೇವಲ ಮೂರು ಜನ ಸಚಿವರುಗಳು ಮಾತ್ರ ಇದು ಸರಿಯಲ್ಲ, ಇದನ್ನು ಗಮನಿಸಿ ಎಂದು ಮಾನ್ಯ ಸದಸ್ಯರುಗಳೂ ನನಗೆ ಹೇಳಿದರು. ಈ ವಿಷಯವನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ನೇರವಾಗಿ ಹೇಳುತ್ತಿದ್ದೇನೆ.

ಮೂರನೇ ವಿಷಯವೇನೆಂದರೆ, ಶೂನ್ಯವೇಳೆಯಲ್ಲಿ ಕೊಡುವಂತಹ ವಿಷಯಗಳನ್ನು ಮಾನ್ಯ ಸದಸ್ಯರುಗಳು ಚರ್ಚೆ ಮಾಡುವುದಕ್ಕೆ ಪ್ರಯತ್ನ ಮಾಡಬಾರದು. ಆ ರೀತಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಒಂದು ವೇಳೆ ಆ ವಿಷಯದ ಬಗ್ಗೆ ಚರ್ಚೆ ಆಗಲೇಬೇಕು ಎನ್ನುವುದಾದರೆ, ಅದಕ್ಕಾಗಿ ಪ್ರತ್ಯೇಕ ನೊಟೀಸ್ ಕೊಡಿ, ನೋಡೋಣ. ಬಹಳ ಗಂಭೀರವಾಗಿರುವಂತಹ ವಿಷಯಗಳನ್ನು ನಾವು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುತ್ತೇವೆ. ಆದರೆ ಆ ವಿಷಯಗಳಿಗೆ ನಾವು ನ್ಯಾಯ ಒದಗಿಸಿಕೊಡುವುದಕ್ಕೆ ಆಗುವುದಿಲ್ಲವಲ್ಲ ಎಂಬ ಸಂಕಟ ಉಂಟಾಗುತ್ತದೆ. ಆ ವಿಷಯ ಸರಿಯಾದ ರೀತಿಯಲ್ಲಿ ಚರ್ಚೆ ಆದರೆ ಸಂಬಂಧಪಟ್ಟಂತಹ ಸಚಿವರಿಂದ ಉತ್ತರ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಚರ್ಚೆ ನಡೆಯುವಾಗ ಸಯಮ ನಿಯಂತ್ರ ಮಾಡಿದರೆ ಹೆಚ್ಚಿನ ವಿಷಯ ಚರ್ಚೆ ಆಗುತ್ತದೆ. ಒಂದೇ ವಿಷಯಕ್ಕೆ ಎರಡು ಗಂಟೆಗಳ ಕಾಲಾವಾಕಾಶವನ್ನು ತೆಗೆದುಕೊಂಡರೆ ಬೇರೆ ವಿಷಯಗಳು ಚರ್ಚೆ ಆಗುವುದಿಲ್ಲ. ಆದಕಾರಣ ನಿಮ್ಮೆಲ್ಲರ ಸಹಕಾರವು ನನಗೆ ಬೇಕು. ನನ್ನಿಂದ ಏನಾದರು ತೊಂದರೆ ಆಗಿದ್ದರೆ ನನ್ನ ಗಮನಕ್ಕೆ ತರಬೇಕೆಂದು ತಮಗೆಲ್ಲರಿಗೂ ತಿಳಿಸುತ್ತೇನೆ.

(ಇ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಎಲ್.ಪಿ.ಜಿ. ಗ್ಯಾಸ್ ಸಂಪರ್ಕದ ಬಗ್ಗೆ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯ ಬಗ್ಗೆ.

**ಶ್ರೀ ಆರ್.ವಿ. ವೆಂಕಟೇಶ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ವಿದ್ಯುತ್ ಬಿಲ್‌ನ ಆರ್.ಆರ್. ನಂಬರ್ ಆಧರಿಸಿ ಅನಧಿಕೃತ ಅನಿಲ ಸಂಪರ್ಕಗಳನ್ನು ಪತ್ತೆ ಮಾಡಲಾಗಿದೆ. ಆದರೆ, ಹತ್ತಾರು ಮನೆಗಳಿರುವ ವಠಾರದಲ್ಲಿ ವಾಸ ಇರುವವರು ಮತ್ತು ಕೆಲವೆಡೆ ಅಪಾರ್ಟ್‌ಮೆಂಟ್‌ಗಳಲ್ಲಿ ಇರುವವರು ಒಂದೇ ಮೀಟರ್‌ನ ಆರ್.ಆರ್. ನಂಬರ್ ತೋರಿಸಿದ್ದಾರೆ. ಒಂದು ಆರ್.ಆರ್. ನಂಬರ್‌ಗೆ ಒಂದೇ ಅನಿಲ ಸಂಪರ್ಕ ಎಂಬ ನಿಯಮ ಅವರ ಪಾಲಿಗೆ ಸಂಕಷ್ಟ ತಂದೊಡ್ಡಿದೆ.

ರಾಜ್ಯದಲ್ಲಿ ಒಟ್ಟು 79,26,313 ಅಡುಗೆ ಅನಿಲ ಸಂಪರ್ಕಗಳಿವೆ. ಇವುಗಳಲ್ಲಿ 24 ಲಕ್ಷ ಸಂಪರ್ಕಗಳನ್ನು ವಿದ್ಯುತ್ ಮೀಟರ್‌ನ ಆರ್.ಆರ್. ನಂಬರ್ ಆಧರಿಸಿ ಅನಧಿಕೃತ ಎಂದು ನಿರ್ಧರಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆಯೊಂದರಲ್ಲೇ 33 ಸಾವಿರ ಸಂಪರ್ಕಗಳನ್ನು ಅನಧಿಕೃತ ಎಂದು ಗುರುತಿಸಲಾಗಿದೆ. ಇವುಗಳ ಪೈಕಿ 3000 ಗ್ರಾಹಕರು ತಮ್ಮ ಸಂಪರ್ಕ ಅಧಿಕೃತ ಎಂದು ಸಮರ್ಥಿಸಲು ಅರ್ಜಿ ಸಲ್ಲಿಸಿದ್ದಾರೆ. ಉಳಿದ 30,000 ಮಂದಿ ಸಂಪರ್ಕ ಸರಿಪಡಿಸಿಕೊಂಡಿಲ್ಲ. ಈಗ ತಾಲ್ಲೂಕಿಗೆ ಒಬ್ಬ ಆಹಾರ ಪರಿವೀಕ್ಷಕ ಇದ್ದಾರೆ. ಇವರು ಅನಧಿಕೃತ ಸಂಪರ್ಕಗಳ ದಾಖಲೆ ಪರಿಶೀಲಿಸಬೇಕು. ಆದ್ದರಿಂದ ಆರ್.ಆರ್. ನಂಬರ್‌ನಿಂದಲೇ ನಿರೀಕ್ಷಿತ ರೀತಿಯಲ್ಲಿ ಅಕ್ರಮ ಪತ್ತೆ ಕಷ್ಟವಾಗಿದೆ ಎಂದು ಅಧಿಕಾರಿಗಳೇ ಹೇಳುತ್ತಾರೆ. ಆದರೆ, ಲಕ್ಷಾಂತರ ಗ್ರಾಹಕರು ಅಡಕತ್ತರಿಯಲ್ಲಿ ಸಿಲುಕಿಕೊಂಡಿದ್ದು, ಈ ಸಮಸ್ಯೆ ಪರಿಹರಿಸಲು ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯಲ್ಲಿ ಅಗತ್ಯ ಸಿಬ್ಬಂದಿ ಇಲ್ಲದಿರುವುದರಿಂದ ತಲೆನೋವಾಗಿ ಪರಿಣಮಿಸಿದೆ. ಬೆಂಗಳೂರು ನಗರದಲ್ಲಿ ಒಂದೇ ಮೀಟರ್ ಹೊಂದಿದ ವಠಾರ, ಅಪಾರ್ಟ್‌ಮೆಂಟ್ ಕುಟುಂಬಗಳು ಇದ್ದು, ಇವರ ಗ್ಯಾಸ್ ಸಿಲೆಂಡರ್ ಪೂರೈಕೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಈ ಸಮಸ್ಯೆಯು ಅನೇಕ ಕುಟುಂಬಗಳಿಗೆ ತೊಂದರೆಯುಂಟು ಮಾಡಿದೆ. ಈ ಸಾರ್ವಜನಿಕ

ಸಮಸ್ಯೆಯನ್ನು ಬಗೆಹರಿಸಲು ಒಂದೇ ಆರ್.ಆರ್. ನಂಬರ್ ಒಂದೇ ಅನಿಲ ಸಂಪರ್ಕ ಎಂಬ ನಿಯಮವನ್ನು ಸಡಿಲಗೊಳಿಸಿ ನ್ಯಾಯಯುತವಾಗಿ ಅನಿಲ ಸಂಪರ್ಕ ವಂಚಿತ ಬಡ ಕುಟುಂಬಗಳಿಗೆ ದಿನನಿತ್ಯದ ಬದುಕಿನಲ್ಲಿ ಉಂಟಾಗಿರುವ ಸಮಸ್ಯೆಯನ್ನು ಈ ಕೂಡಲೇ ಬಗೆಹರಿಸಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಕುಮಾರಿ ಶೋಭಾ ಕರ್ಲಂದಾಜೆ (ಇಂಧನ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ವಿ. ವೆಂಕಟೇಶ್‌ರವರು ಹೇಳಿರುವಂತೆ ರಾಜ್ಯದಲ್ಲಿ ಸುಮಾರು 79 ಲಕ್ಷ ಅಡುಗೆ ಅನಿಲ ಸಂಪರ್ಕಗಳಿವೆ. ಇವುಗಳಲ್ಲಿ ಅವರು 24 ಲಕ್ಷ ಎಂದು ಹೇಳಿದ್ದಾರೆ. ಆದರೆ 21,50,000 ಜನ ಇನ್ನೂ ಕೂಡ ಯಾವುದೇ ರೀತಿಯ ಆರ್.ಆರ್. ಸಂಖ್ಯೆಯನ್ನು ಕೊಟ್ಟಿಲ್ಲ. ಆದರೆ ಮಾನ್ಯ ಸದಸ್ಯರು ಏನು ಆತಂಕ ವ್ಯಕ್ತಪಡಿಸಿದ್ದಾರೆ. ಅಂದರೆ ವಠಾರದಲ್ಲಿ, ಅಪಾರ್ಟ್‌ಮೆಂಟ್‌ಗಳಲ್ಲಿ ಇರುತ್ತಾರೆ, ಇಂಥವರಿಗೆ ಒಂದು ಆರ್.ಆರ್. ನಂಬರ್ ಇದ್ದರೆ ಅನಿಲ ಸಂಪರ್ಕವನ್ನು ಕಡಿತ ಮಾಡುತ್ತಾರೆ ಎಂಬ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ ಸಧ್ಯಕ್ಕೆ ಇದ್ಯಾವುದು ಪ್ರಸ್ತುತವಲ್ಲ. ಏಕೆಂದರೆ ಇದಕ್ಕೆ ಬೇರೆಯೇ ಆದೇಶ ಹೋಗಿದೆ. ಆದರೂ ಸಹ ಸದನಕ್ಕೆ ಹಾಗೂ ರಾಜ್ಯದ ಜನತೆಗೆ ಮಾಹಿತಿಯನ್ನು ಕೊಡಬಯಸುತ್ತೇನೆ. ಮುಖ್ಯವಾಗಿ ನಾವು ಈ ಒಂದು ಪ್ರಕ್ರಿಯೆಯನ್ನು ಏಕೆ ಆರಂಭ ಮಾಡಿದೆವು ಎಂಬುದನ್ನು ಒಂದು ವಾಕ್ಯದಲ್ಲಿ ಹೇಳಬಯಸುತ್ತೇನೆ. ನಾವು ಇದನ್ನು ಎರಡು ಕಾರಣಕ್ಕಾಗಿ ಮಾಡಿದೆವು. ಒಂದು ಈ ರಾಜ್ಯದಲ್ಲಿ 79 ಲಕ್ಷ ಅನಿಲ ಸಂಪರ್ಕಗಳಿವೆ. ಇದರಲ್ಲಿ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಅಕ್ರಮ ಆಗುತ್ತಿದೆ. ಒಂದು ಆಟೋ ರಿಕ್ಷಾದ ರೀ–ಫಿಲಿಂಗ್‌ಗೆ ಹೋಗುತ್ತದೆ. ಇನ್ನೊಂದು ಹೊಟೆಲ್‌ಗಳಿಗೆ ಮಾರಾಟವಾಗುತ್ತಿದೆ. ಮೂರನೆಯದಾಗಿ ಬೇರೆ ಬೇರೆ ಕಡೆ ಟೈರ್ ಪಂಕ್ಚರ್ ಅಂಗಡಿಗಳಿಗೆ ಹೋಗುತ್ತದೆ. ಯಾವ ಕಮರ್ಷಿಯೆಲ್ ಗ್ಯಾಸ್ ಅನ್ನು ಅವರು ತೆಗೆದುಕೊಳ್ಳಬೇಕಾಗಿತ್ತೋ ಅದರ ಬದಲಿಗೆ domestic ಗ್ಯಾಸ್ ತೆಗೆದುಕೊಂಡು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಇವತ್ತು ಹೊಸದಾಗಿ ಬೆಂಗಳೂರು ನಗರಕ್ಕೆ ಬರುವವರು

1200 ರೂ.ಯಿಂದ 1500 ರೂಪಾಯಿಯವರೆಗೆ ಹಣ ಕೊಟ್ಟು ಬ್ಲಾಕ್‌ನಲ್ಲಿ ಒಂದು ಸಿಲಿಂಡರ್ ಅನ್ನು ಪಡೆಯುತ್ತಿದ್ದಾರೆ. ಇದನ್ನು ತಡೆಗಟ್ಟಬೇಕೆನ್ನುವುದು ನಮ್ಮ ಉದ್ದೇಶವಾಗಿತ್ತು. ಮಾನ್ಯ ಸದಸ್ಯರೆಲ್ಲರೂ ಒಂದು ವಿಚಾರವನ್ನು ದಯವಿಟ್ಟು ಗಮನಿಸಬೇಕು. ಈ ಗ್ಯಾಸ್ ಕನೆಕ್ಷನ್ ಪ್ರಮಾಣ ಹೆಚ್ಚಾಗುತ್ತಿದ್ದ ಹಾಗೆ ನಮ್ಮ ರಾಜ್ಯಕ್ಕೆ ನೀಡುತ್ತಿದ್ದ ಸೀಮೆಎಣ್ಣೆಯ ಪ್ರಮಾಣವನ್ನು ಕಡಿಮೆ ಮಾಡಿದ್ದಾರೆ. ಇದು ನಮಗೆ ಆತಂಕವನ್ನು ತರತಕ್ಕ ವಿಚಾರ. ಇವತ್ತು ಇಡೀ ರಾಜ್ಯದಲ್ಲಿ ಸೀಮೆಎಣ್ಣೆಗೆ ಬಹಳ ಬೇಡಿಕೆ ಇದೆ. ಗ್ಯಾಸ್ ಕನೆಕ್ಷನ್ ಇರುವವರು ಸಹ ನಮಗೆ ಎರಡು ಲೀಟರ್ ಸೀಮೆಎಣ್ಣೆಯನ್ನು ಕೊಡಿ ಎಂದು ಕೇಳುತ್ತಿರುವುದು ಎಲ್ಲಾ ಭಾಗಗಳಲ್ಲಿ ಇದೆ ಎನ್ನುವುದು ಮಾನ್ಯ ಸದಸ್ಯರೆಲ್ಲರಿಗೂ ತಿಳಿದಿದೆ. ನಮ್ಮ ರಾಜ್ಯದಲ್ಲಿ ಶೇಕಡ 55ರಷ್ಟು ಜನರು ಗ್ಯಾಸ್ ಕನೆಕ್ಷನ್ ಅನ್ನು ಹೊಂದಿದ್ದಾರೆ. ಆ ಕಾರಣಕ್ಕಾಗಿ ಹಿಂದೆ ಕೇಂದ್ರಸರ್ಕಾರ ನೀಡುತ್ತಿದ್ದ 50,000 ಕಿ.ಲೀ. ಸೀಮೆಎಣ್ಣೆಯ ಪ್ರಮಾಣ 45,000 ಕಿ.ಲೀ ಗೆ ಇಳಿದಿದೆ. ನಮ್ಮ ಜನಸಂಖ್ಯೆಯ ಆಧಾರದ ಮೇಲೆ ನಮಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸೀಮೆಎಣ್ಣೆಯನ್ನು ವಿತರಣೆ ಮಾಡಬೇಕಾಗಿತ್ತು. ಆದರೆ ಗ್ಯಾಸ್ ಕನೆಕ್ಷನ್ ಜಾಸ್ತಿಯಾದ ಕಾರಣಕ್ಕಾಗಿ ಅದಕ್ಕೆ ಸರಿಸಮಾನವಾಗಿ ಸೀಮೆಎಣ್ಣೆ ಹಂಚಿಕೆಯನ್ನು ನಮ್ಮ ರಾಜ್ಯಕ್ಕೆ ಕೇಂದ್ರಸರ್ಕಾರದವರು ಕಡಿಮೆ ಮಾಡಿದ್ದಾರೆ. ಆ ಕಾರಣಕ್ಕಾಗಿಯೇ ಅಕ್ರಮವಾಗಿ ಗ್ಯಾಸ್ ಕನೆಕ್ಷನ್ ಹೊಂದಿರುವುದನ್ನು ತಡೆಗಟ್ಟಲೇ ಬೇಕೆನ್ನುವ ಉದ್ದೇಶ ನಮ್ಮದಾಗಿತ್ತು. ಹಾಗಾಗಿ ಗ್ಯಾಸ್ ಸಂಪರ್ಕಕ್ಕೆ ಒಂದು ರೀತಿಯ ತಡೆಯನ್ನು ಮಾಡಲಾಯಿತು. ಆದರೆ ಅಪಾರ್ಟ್‌ಮೆಂಟ್‌ನಲ್ಲಿರುವವರಿಗೆ ಯಾವುದೇ ತೊಂದರೆ ಆಗದ ಹಾಗೆ ನಾವು ವ್ಯವಸ್ಥೆಯನ್ನು ಮಾಡಿದ್ದೇವೆ. ಈಗ ನಾನೂ ಸಹ ಬಾಡಿಗೆ ಮನೆಯಲ್ಲಿರುವುದು. ಅಲ್ಲಿ ನನ್ನ ಆರ್.ಆರ್. ಸಂಖ್ಯೆಯಲ್ಲಿ ನಮ್ಮ ಓನರ್‌ನ ಹೆಸರು ಇದೆ. ಹಾಗಾಗಿ ನನ್ನ ಗ್ಯಾಸ್ ಕನೆಕ್ಷನ್ ಏನು ಡಿಸ್‌ಕನೆಕ್ಟ್ ಆಗಿಲ್ಲ. ಅದರಲ್ಲಿ ನಾವು ಇಂತಹ ಓನರ್ ಮನೆಯಲ್ಲಿದ್ದೇವೆ ಅಥವಾ ಒಂದೇ ಆರ್.ಆರ್. ನಂಬರ್‌ನಲ್ಲಿ ನಾವು ವಾಸ ಇದ್ದೇವೆ ಎನ್ನುವುದನ್ನು ಉಲ್ಲೇಖ ಮಾಡುವುದಕ್ಕೆ ಅವಕಾಶವಿತ್ತು.

ಇವತ್ತು ನಮ್ಮ ರಾಜ್ಯದಲ್ಲಿ ಬಹುತೇಕ ಗ್ಯಾಸ್ ಏಜೆನ್ಸಿಗಳು ದುರುದ್ದೇಶಪೂರಿತವಾಗಿ ಈ ಅಕ್ರಮ ಗ್ಯಾಸ್ ಕನೆಕ್ಷನ್ ಹೊಂದುವುದರಲ್ಲಿ ಅವರ ಪಾತ್ರ ಬಹಳ ದೊಡ್ಡದಿದೆ. ಏಕೆಂದರೆ ಜನರಿಗೆ 425 ರೂಪಾಯಿಗಳ ಹಾಗೆ ನೇರವಾಗಿ ಗ್ಯಾಸ್ ನೀಡಿದಲ್ಲಿ ಅವರಿಗೆ ಕೇಂದ್ರಸರ್ಕಾರದಿಂದ ಕಮೀಷನ್ ಮಾತ್ರ ದೊರೆಯುತ್ತದೆ. ಆದರೆ ಅದೇ ಸಿಲಿಂಡರ್ ಅನ್ನು 800 ರೂ. ಯಿಂದ 1200 ರೂಪಾಯಿಗಳವರೆಗೆ ಬ್ಲಾಕ್‌ನಲ್ಲಿ ಮಾರಿಕೊಂಡಲ್ಲಿ ಅವರಿಗೆ ಎಷ್ಟು ಪ್ರಮಾಣದ ಲಾಭ ದೊರೆಯುತ್ತದೆ ಎನ್ನುವುದನ್ನು ಈ ಸದನ ಗಮನಿಸಬೇಕು. ಇದರ ಹಿಂದೆ ಬಹಳ ದೊಡ್ಡ ಷಡ್ಯಂತ್ರವಿದೆ. ಆದ್ದರಿಂದ ಈ ವ್ಯವಸ್ಥೆಯನ್ನೇ ಸರಿಪಡಿಸಬೇಕಾದ ಅಗತ್ಯವಿದೆ ಎನ್ನುವುದು ನಮ್ಮ ಉದ್ದೇಶ. ಇಡೀ ರಾಜ್ಯದಲ್ಲಿ ಸೀಮೆಎಣ್ಣೆಗೆ ಬಹಳ ಬೇಡಿಕೆಯಿದೆ. ಇಂತಹ ಸಂದರ್ಭದಲ್ಲಿ ಅಕ್ರಮವಾಗಿ ಹೊಂದಿರುವ ಗ್ಯಾಸ್‌ನಿಂದಾಗಿ ಸೀಮೆಎಣ್ಣೆಗೆ ಕಡಿತ ಬಿದ್ದಿದೆ. ಇದು ಸಕ್ರಮ ಆಗಿದ್ದಲ್ಲಿ ತೊಂದರೆ ಇಲ್ಲ, ಏಕೆಂದರೆ ಅವರು ಗ್ಯಾಸ್ ಕನೆಕ್ಷನ್ ಅನ್ನು ಹೊಂದಿರುತ್ತಾರೆ. ಆದರೆ ಅಕ್ರಮ ಗ್ಯಾಸ್‌ನಿಂದಾಗಿ ನಮ್ಮ ರಾಜ್ಯಕ್ಕೆ ದೊರೆಯಬೇಕಾದ ಸೀಮೆಎಣ್ಣೆ ಪ್ರಮಾಣ ಕಡಿಮೆ ಆಗಿರುವ ಕಾರಣ ನಾವು ಈ ಪ್ರಯತ್ನವನ್ನು ಮಾಡಿದ್ದೇವೆ. ಆದರೆ ಜನರಿಗೆ ಉದ್ದೇಶಪೂರ್ವಕವಾಗಿ ತೊಂದರೆಯನ್ನು ನೀಡುವುದನ್ನು ತಪ್ಪಿಸಲು ನಾನು ಸಂಬಂಧಪಟ್ಟವರಿಗೆ ಸೂಚನೆಯನ್ನು ನೀಡುತ್ತೇನೆ. ಅಂತಹವರ ಮೇಲೆ ನಾವು ಉಗ್ರವಾದ ಕ್ರಮವನ್ನು ಕೂಡ ಕೈಗೊಳ್ಳುತ್ತೇವೆ. ಈಗ ಕೇಂದ್ರಸರ್ಕಾರದ ಪೆಟ್ರೋಲಿಯಂ ಇಲಾಖೆಯವರು ಹೊಸದಾಗಿ ಒಂದು ಕಾಯಿದೆಯನ್ನು ತಂದಿರುವುದಾಗಿ ಹೇಳಲಾಗುತ್ತಿದೆ. ಆದರೆ ನಮಗೆ ಅದರ ಬಗೆಗೆ ಸರಿಯಾದ ಮಾಹಿತಿ ಇರುವುದಿಲ್ಲ. ಈ ಅಕ್ರಮ ಗ್ಯಾಸ್ ಸಂಪರ್ಕವನ್ನು ತಡೆಹಿಡಿಯಲು ಕೇಂದ್ರಸರ್ಕಾರ ಮೂರು ಪೆಟ್ರೋಲಿಯಂ ಕಂಪನಿಗಳಿಗೂ ಸಹ ಕೇಂದ್ರಸರ್ಕಾರದವರು ಸೂಚನೆಯನ್ನು ನೀಡಿದ್ದಾರೆ. ಅದರಲ್ಲಿ ನಮ್ಮ ರಾಜ್ಯಸರ್ಕಾರದ ಪಾತ್ರ ಏನೂ ಇಲ್ಲ. ನಮ್ಮ ಕಡೆಯಿಂದಲೂ ಸಹ ಗ್ಯಾಸ್ ಏಜೆನ್ಸಿಯವರಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗುವುದು.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಗಳೇ, ಗ್ಯಾಸ್ ಕನೆಕ್ಷನ್ ಜಾಸ್ತಿಯಾದ ಹಿನ್ನಲೆಯಲ್ಲಿ ರಾಜ್ಯಕ್ಕೆ ನೀಡುತ್ತಿದ್ದ ಸೀಮೆಎಣ್ಣೆ ಪ್ರಮಾಣವನ್ನು ಕಡಿಮೆ ಮಾಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದರು.

**ಸಭಾಪತಿಯವರು:–** ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಗಳೇ, ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶ ಇಲ್ಲವೆಂದು ತಾವು ಹೇಳಿದಿರಿ. ಆದರೆ ಇಂತಹ ವಿಚಾರಗಳ ಬಗ್ಗೆ ಸಾಕಷ್ಟು ಚರ್ಚೆಯ ಅವಶ್ಯಕತೆ ಇರುತ್ತದೆ. ನಾವೆಲ್ಲರೂ ಒಟ್ಟಾಗಿ ಈ ವಿಚಾರದ ಬಗ್ಗೆ ಚರ್ಚೆ ನಡೆಸಲು ಸೂಚನೆ ನೀಡುತ್ತೇವೆ. ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಹಾಗೂ ಇಂಧನ ಸಚಿವರು ಇರಬೇಕಾಗುತ್ತದೆ.

**ಸಭಾಪತಿಯವರು:–** ನೀವು ಇಂದೇ ನೋಟೀಸ್ ನೀಡಿದಲ್ಲಿ ನಾನು ನಾಳೆ ಅಥವಾ ನಾಡಿದ್ದು ಇದರ ಬಗ್ಗೆ ಚರ್ಚೆಗೆ ಅವಕಾಶ ನೀಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ರಾಜ್ಯ ಸರ್ಕಾರ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ವತಿಯಿಂದ ಬೆಂಬಲ ಬೆಲೆ ನೀಡಿ ಭತ್ತ ಖರೀದಿಗೆ ಅವಕಾಶ ಮಾಡಿಕೊಟ್ಟಿರುವುದು ಸರಿಯಷ್ಟೆ. ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಇದುವರೆಗೂ ಭತ್ತ ಮಾರಾಟ ಮಾಡಿರುವ ರೈತರಿಗೆ ಶೇಕಡ 25ರಷ್ಟು ಹಣ ಸಂದಾಯವಾಗಿರುವುದಿಲ್ಲ ಮತ್ತು ಗೋಡನ್‌ಗಳಲ್ಲಿ ಸ್ಥಳಾವಕಾಶವಿಲ್ಲವೆಂದು ಮಂಡ್ಯ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಭತ್ತ ಖರೀದಿಯನ್ನು ನಿಗಮ ಸ್ಥಗಿತಗೊಳಿಸಿದೆ. ಇದರಿಂದ ಭತ್ತ ಸರಬರಾಜು ಮಾಡಿದ ರೈತರಿಗೆ ಹಣ ಪಾವತಿ ಮಾಡುವಲ್ಲಿ ತುಂಬ ವಿಳಂಬವುಂಟಾಗುತ್ತಿದೆ. ಭತ್ತ ಖರೀದಿ ಸ್ಥಗಿತಗೊಳಿಸಿರುವುದರಿಂದ ರೈತರು ತುಂಬಾ ಸಂಕಷ್ಟಕ್ಕೀಡಾಗಿದ್ದಾರೆ. ಆದುದರಿಂದ ಘನ ಸರ್ಕಾರ ರೈತರಿಗೆ ನೀಡಬೇಕಾಗಿರುವ ಬಾಕಿ ಮೊತ್ತವನ್ನು ಕೂಡಲೇ ಪಾವತಿಸಬೇಕು ಮತ್ತಿ ನಿರಂತರವಾಗಿ ಭತ್ತ ಖರೀದಿಸಲು ಸೂಕ್ತ ನಿರ್ದೇಶನ ನೀಡಬೇಕು.

ರಾಜ್ಯ ಸರ್ಕಾರ ನಿಗಮದ ಮೂಲಕ ರಾಜ್ಯದಲ್ಲಿ ರೈಸ್‌ಮಿಲ್‌ಗಳಿಂದ ಲೆವಿ ರೂಪದಲ್ಲಿ ಅಕ್ಕಿಯನ್ನು ಖರೀದಿಸಲಾಗುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ಇದುವರೆವಿಗೆ ಖರೀದಿಸಿರುವ ಅಕ್ಕಿಗೆ ಸಕಾಲದಲ್ಲಿ ಹಣ ಪಾವತಿಸುವಲ್ಲಿ ವಿಳಂಬ ಉಂಟಾಗಿದೆ ಮತ್ತು ಲೆವಿ ಪಡೆಯುವುದು ಗೋಡನ್‌ಗಳ ಕೊರತೆಯಿಂದ ಮಂದಗತಿಯಲ್ಲಿ ಸಾಗಿದೆ. ಇದರಿಂದ ಲೆವಿ ಅಕ್ಕಿ ನೀಡುವ ರೈಸ್ ಮಿಲ್ ಮಾಲೀಕರಿಗೆ ತುಂಬಾ ತೊಂದರೆ ಉಂಟಾಗಿದೆ.

ಬೆಂಬಲ ಬೆಲೆಯಲ್ಲಿ ಭತ್ತ ಖರೀದಿ ಮತ್ತು ರೈಸ್ ಮಿಲ್‌ಗಳಿಂದ ಲೆವಿ ಅಕ್ಕಿ ಖರೀದಿ ಸಂಬಂಧ ಅಗತ್ಯ ಇರುವ ಹಣಕಾಸಿನ ನೆರವನ್ನು ತಕ್ಷಣ ನೀಡುವುದರ ಮೂಲಕ ರೈತರ ಹಿತದೃಷ್ಟಿಯಿಂದ ಸ್ಥಗಿತಗೊಂಡಿರುವ ಭತ್ತ ಖರೀದಿ ಮತ್ತು ಲೆವಿ ಅಕ್ಕಿ ಖರೀದಿಯನ್ನು ನಿರಂತರವಾಗಿ ಖರೀದಿಸುವಂತೆ ಸರ್ಕಾರ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಲ್ಲಿ ಒತ್ತಾಯಿಸುತ್ತೇನೆ.

**ಕು. ಶೋಭಾ (ಇಂಧನ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಮರಿತಿಬ್ಬೇಗೌಡರು ಪ್ರಸ್ತಾಪಿಸಿದಂತಹ ವಿಚಾರದಲ್ಲಿ ಸತ್ಯವಿದೆ. ಆಹಾರ ಮತ್ತು ನಾಗರೀಕ ಸರಬರಾಜು ನಿಗಮದಿಂದ ಆಯಾ ಜಿಲ್ಲೆಗಳಿಗೆ 24 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಆದರೆ ಇನ್ನೂ 57 ಕೋಟಿ ರೂಪಾಯಿಗಳ ಕೊರತೆಯಿದೆ. ಈ ಕೊರತೆ ಹೀಗೆಯೇ ಮುಂದುವರೆಯುವುದಕ್ಕೆ ಎರಡು ಕಾರಣಗಳಿವೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು 100 ಕೋಟಿ ರೂಪಾಯಿಗಳ ಸಾಲವನ್ನು 11.65 ರ ಬಡ್ಡಿ ದರದಲ್ಲಿ ನೀಡುವುದಕ್ಕೆ ಒಪ್ಪಿಕೊಂಡಿದ್ದರು. ಅಲ್ಲಿಂದ ಹಣ ಬರುತ್ತದೆ ಎನ್ನುವ ಕಾರಣದಿಂದ ಇದನ್ನು ನಾವು ಮುಂದುವರೆಸಿಕೊಂಡು ಬಂದೆವು. ಅವರು ಸಾಲ ಕೊಡುತ್ತಾರೋ ಇಲ್ಲವೋ ಎನ್ನುವುದನ್ನು ಕನ್‌ಫರ್ಮ್ ಮಾಡಿಕೊಳ್ಳಲು ಇವತ್ತು ನಮ್ಮ ಅಧಿಕಾರಿಗಳು ದೆಹಲಿಯ ರಿಸರ್ವ್ ಬ್ಯಾಂಕಿಗೆ ಹೋಗಿದ್ದಾರೆ. ಅವರ ಜೊತೆಯಲ್ಲಿ ಈ ಬಗ್ಗೆ ಸಮಾಲೋಚನೆಯನ್ನು ನಡೆಸುತ್ತಿದ್ದಾರೆ. ಒಂದು ಪಕ್ಷ ಅವರು ನಮಗೆ ಸಾಲವನ್ನು ನೀಡಲು ಒಪ್ಪದಿದ್ದಲ್ಲಿ ಖಾಸಗಿ ಬ್ಯಾಂಕಿನಿಂದ

ಸಾಲವನ್ನು ಪಡೆಯಲು ನಾವು ಮುಂದಾಗಿದ್ದೇವೆ. ಆದರೆ ಅವರು 13.5% ಬಡ್ಡಿದರದಲ್ಲಿ ಸಾಲವನ್ನು ನೀಡಲು ಮುಂದಾಗಿದ್ದಾರೆ. ಆದರೆ ರಿಸರ್ವ್ ಬ್ಯಾಂಕಿನಿಂದ ಸಾಲ ಪಡೆದಲ್ಲಿ ನಮಗೆ ಹೆಚ್ಚು ಲಾಭದಾಯಕ ಎನ್ನುವ ದೃಷ್ಟಿಯಿಂದ ನಾವು ಈ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಒಟ್ಟಿನಿಂದ ರಿಸರ್ವ್ ಬ್ಯಾಂಕಿನಿಂದಾಗಲೀ ಅಥವಾ ಖಾಸಗಿ ಬ್ಯಾಂಕಿನಿಂದಾಗಲೀ 100 ಕೋಟಿ ರೂಪಾಯಿಗಳ ಸಾಲವನ್ನು ಪಡೆದು ಈ 57 ಕೋಟಿ ರೂಪಾಯಿಗಳ ಬಾಯಿಯನ್ನು ನೀಡುವ ಪ್ರಯತ್ನವನ್ನು ಮಾಡುತ್ತೇವೆ. ತಮ್ಮೆಗೆಲ್ಲರಿಗೂ ತಿಳಿದಿರುವ ಹಾಗೆ ಸಾಮಾನ್ಯ ಭತ್ತಕ್ಕೆ ಕೇಂದ್ರಸರ್ಕಾರ 1080 ರೂಪಾಯಿಗಳನ್ನು ಮತ್ತು ಫಸ್ಟ್ ಗ್ರೇಡ್ ಭತ್ತಕ್ಕೆ 1110 ರೂಪಾಯಿಗಳನ್ನು ನಿಗದಿ ಮಾಡಿದೆ. ಆದರೆ ನಮ್ಮ ರಾಜ್ಯದ ರೈತರಿಗೆ ಅನುಕೂಲವಾಗಬೇಕೆನ್ನುವ ದೃಷ್ಟಿಯಿಂದ ನಮ್ಮ ರಾಜ್ಯಸರ್ಕಾರ 250 ರೂಪಾಯಿಗಳನ್ನು ಹೆಚ್ಚುವರಿಯಾಗಿ ನೀಡಿದೆ. ಹೀಗೆ ರಾಜ್ಯಸರ್ಕಾರ 250 ರೂಪಾಯಿಗಳ ಹೆಚ್ಚುವರಿ ನೀಡಲಿಕ್ಕೆ ಸುರು ಮಾಡಿದ ಮೇಲೆ ನಮ್ಮಲ್ಲಿ ಹೆಚ್ಚುವರಿ ಭತ್ತ ಸಂಗ್ರಹವಾಗಿದೆ. ಕಳೆದ ವರ್ಷ ಇದೇ ಸಂದರ್ಭದಲ್ಲಿ ನಾವು 30 ಟನ್ ಭತ್ತವನ್ನು ಪಡೆದಿದ್ದಲ್ಲಿ ಈ ವರ್ಷ 60 ಟನ್ ಭತ್ತವನ್ನು ಪಡೆದಿದ್ದೇವೆ. ಗೋಡಾನ್‌ಗಳ ಸಮಸ್ಯೆ ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿದ್ದು ಅದು ಬಹಳ ವರ್ಷಗಳಿಂದ ನಿರಂತರವಾಗಿದೆ. ಮಂಡ್ಯ, ಶಿವಮೊಗ್ಗ, ಜಿಲ್ಲೆಗಳಲ್ಲಿ ಗೋಡಾನ್ ಸಮಸ್ಯೆ ಹೆಚ್ಚಾಗಿದೆ. ಆದರೆ ಎಲ್ಲಿಲ್ಲಿ ನಮಗೆ ಖಾಸಗಿ ಗೋಡಾನ್‌ಗಳಿವೆ ಅವರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭತ್ತವನ್ನು ಖರೀದಿ ಮಾಡಬೇಕೆಂದು ನಾವು ಸೂಚನೆಯನ್ನು ನೀಡಿದ್ದೇವೆ. ಏಕೆಂದರೆ ಸಣ್ಣಪುಟ್ಟ ರಾಜ್ಯಗಳು ಸಹ ನಮಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಭತ್ತವನ್ನು ಖರೀದಿ ಮಾಡುತ್ತಿವೆ. ಇನ್ನೂ ಬಾಕಿಯಿರುವ 57 ಕೋಟಿ ರೂಪಾಯಿಗಳನ್ನು ಇನ್ನು ಒಂದು ವಾರದಲ್ಲಿ ರಿಸರ್ವ್ ಬ್ಯಾಂಕ್ ಅಥವಾ ಖಾಸಗಿ ಬ್ಯಾಂಕಿನಿಂದಾಗಲೀ ಸಾಲವನ್ನು ಪಡೆದು ರೈತರ ಬಾಕಿಯನ್ನು ನೀಡಲಾಗುವುದು.

## 3. ಪ್ರಕಟಣೆ

**ಸಭಾಪತಿಯವರು:–** ಮುಖ್ಯಮಂತ್ರಿಗಳು ನಮ್ಮ ಸದನದ ಸದಸ್ಯರಾದ ಮೇಲೆ ನಮ್ಮ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ ಪ್ರಕಾರ ಅವರು ಈ ಸದನದ ಸಭಾನಾಯಕರಾಗುತ್ತಾರೆ. ಆದರೆ ಅವರು ಇಚ್ಛೆಪಟ್ಟಲ್ಲಿ ಬೇರೆಯವರನ್ನು ಸಭಾನಾಯಕರನ್ನಾಗಿ ಅವರು ನೇಮಕ ಮಾಡಬಹುದೆಂದು ನಮ್ಮ ನಿಯಮಗಳಲ್ಲಿ ಅವಕಾಶವಿದೆ. ಈ ಹಿನ್ನಲೆಯಲ್ಲಿ ಅವರು ನನಗೊಂದು ಪತ್ರವನ್ನು ಬರೆದು ಸದನದ ನಿಯಮ 2ರ ರೀತ್ಯಾ ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಉನ್ನತ ಶಿಕ್ಷಣ, ಯೋಜನಾ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಸಚಿವರಾದ ಡಾ॥ ವಿ.ಎಸ್. ಆಚಾರ್ಯರವರನ್ನು ವಿಧಾನ ಪರಿಷತ್ತಿನ ಸಭಾನಾಯಕರನ್ನಾಗಿ ನಾಮ ನಿರ್ದೇಶನ ಮಾಡಿದ್ದಾರೆ. ಹಾಗಾಗಿ ಡಾ॥ ವಿ.ಎಸ್. ಆಚಾರ್ಯರವರನ್ನು ವಿಧಾನ ಪರಿಷತ್ತಿನ ಸಭಾನಾಯಕರೆಂದು ನಾನು ಘೋಷಿಸುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಗಳೇ, ತಾವು ಡಾ॥ ವಿ.ಎಸ್. ಆಚಾರ್ಯರವರನ್ನು ಈ ಸದನದ ಸಭಾನಾಯಕರನ್ನಾಗಿ ಘೋಷಣೆ ಮಾಡಿದ ಮೇಲೆ, ಸಭಾನಾಯಕರು ಸದನಕ್ಕೆ ಹಾಜರಾಗಿ, ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸದನಕ್ಕೆ ಬರಲಾರದ ಪರಿಸ್ಥಿತಿ ನಿರ್ಮಾಣ ಆದಲ್ಲಿ ಏನು ಮಾಡುವುದು?

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳೇ, ಈ ಸದನದ ಸಭಾನಾಯಕರಾಗಿ ಇರುತ್ತಾರೆಂದು ನಾವೆಲ್ಲರೂ ಎಕ್ಸ್‌ಪೆಕ್ಟ್ ಮಾಡಿದ್ದೆವು.

(1.00 ಗಂಟೆ)

**ಸಭಾಪತಿಯವರು:–** ಮಾನ್ಯ ನಾಣಯ್ಯನವರು ಹೇಳುವ ಪ್ರಕಾರ, ಈಗ ಇಬ್ಬರೂ ಈ ಸದನದಲ್ಲಿರುತ್ತಾರೆ. ಸಭಾನಾಯಕರಾಗಿ ಡಾ॥ ಆಚಾರ್ಯರವರು ಈ ಸದನದಲ್ಲಿ ಜಾಸ್ತಿ ಇರುತ್ತಾರೆ, ಮುಖ್ಯಮಂತ್ರಿಗಳು ಈ ಸದನದ ಸದಸ್ಯರಾಗಿ ಈ ಮನೆಯಲ್ಲಿ ಜಾಸ್ತಿ ಇರಲು ಪ್ರಯತ್ನ ಮಾಡಿದರೆ ಸದನ ಇನ್ನಷ್ಟು ಚೆನ್ನಾಗಿ ನಡೆಯುತ್ತದೆ.

**ಶ್ರೀ ಎಂ.ಸಿ. ನಾಣಯ್ಯ:–** ಯಾರೇ ಇದ್ದರೂ ಮೊದಲ ಛೇರ್ ಅವರಿಗೆ ತಾನೆ?

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಖಂಡಿತವಾಗಿ ಮಾನ್ಯ ಮುಖ್ಯಮಂತ್ರಿಗಳು ಇದೇ ಮನೆಯಲ್ಲಿರುತ್ತಾರೆ. ಏಕೆಂದರೆ ಇಲ್ಲಿ ಉನ್ನತ ಮಟ್ಟದ ಚರ್ಚೆಯಾಗುತ್ತದೆ. ಆ ದೃಷ್ಟಿಯಿಂದ ಅವರು ಇಲ್ಲೇ ಇರುತ್ತಾರೆ.

**ಸಭಾಪತಿಯವರು:–** ಇನ್ನೊಂದು ವಿಚಾರ ಎಂದರೆ, ತಾವು ಮುಂದೆ ಕುಳಿತವರು ಹಿಂದೆ ತಿರುಗಿ ಸ್ವಲ್ಪ ನೋಡಬೇಕು. ನಿಮ್ಮ ಹಿಂದಿನ ಬೆಂಚ್‌ನಲ್ಲಿ ಕುಳಿತವರು ಬಹಳ ಬೇಗ ಜಾಗ ಖಾಲಿ ಮಾಡುತ್ತಾರೆ, ಏನು ಕಾರಣ ಎಂದು ಗೊತ್ತಿಲ್ಲ. ಮುಂದೆ ನಾಣಯ್ಯನವರು, ಸುದರ್ಶನ್‌ರವರು, ಮೋಟಮ್ಮನವರು, ಹೊರಟ್ಟಿಯವರು, ಮತ್ತೀಕಟ್ಟಿಯವರು, ಪಾಟೀಲ್‌ರವರು ಕುಳಿತೇ ಇರುತ್ತಾರೆ ಹಿಂದಿನವರು ಜಾಗ ಖಾಲಿ ಮಾಡಿರುತ್ತಾರೆ.

**ಶ್ರೀ ಎಚ್.ಸಿ. ನೀರಾವರಿ:–** ಮಾನ್ಯ ಸಭಾಪತಿಗಳೆ, ನಮಗೆ ಇಲ್ಲಿ ಕೆಲಸವೇ ಇಲ್ಲ.

**ಸಭಾಪತಿಯವರು:–** ಕುಳಿತ್ತಿರುವುದೇ ಒಂದು ಕೆಲಸ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳಾದರು ಮತ್ತು ನಮ್ಮ ಸದನದ ಸದಸ್ಯರಾದರು ಆದರೂ ಎಲ್ಲ ಸದಸ್ಯರನ್ನು ಕರೆದು ಒಂದು ಟೀ ಕೂಡ

ಕೊಡಲಿಲ್ಲ. ಹೀಗೆ ಮಾಡಿದರೆ ಹೇಗೆ? ನಾವೇ ಎಲ್ಲ ಸದಸ್ಯರು ಸೇರಿ ಅವರಿಗೆ host ಮಾಡುತ್ತೇವೆ ಬಿಡಿ.

**ಶ್ರೀ ಡಿ.ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೆ, ಮನೆಗೆ ಯಾರಾದರೂ ನೆಂಟರು ಬಂದರೆ, ಮೊದಲು ಮನೆಯವರೆಲ್ಲರು ಸೇರಿ ಅವರಿಗೆ ಊಟ ಹಾಕುವುದು ಸಂಪ್ರದಾಯ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಈ ಮನೆಯ ಸದಸ್ಯರಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಈ ಮನೆಯವರೆ, ಅವರು ನೆಂಟರಲ್ಲ.

**ಶ್ರೀ ಡಿ.ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು):–** ನಿಮ್ಮ ಮನೆಗೆ ಸೊಸೆಯಾಗಿ ಬಂದು ಅಧಿಕಾರವನ್ನು ಸ್ವೀಕಾರ ಮಾಡಿದ್ದೇನೆ. ಸೊಸೆ ಬರುವಾಗ ತಾವು ಸ್ವಲ್ಪ ನೋಡಿಕೊಳ್ಳಬೇಕಾಗಿತ್ತು.

**ಶ್ರೀ ವಿ.ಆರ್. ಸುದರ್ಶನ್:–** ಇಲ್ಲಿ ಅತ್ತೆಯಂದಿರು ಜಾಸ್ತಿ ಇದ್ದಾರೆ ಸ್ವಲ್ಪ ಹುಷಾರಾಗಿ ಇರಿ.

## 4. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಚರ್ಚೆ

**ವಿಷಯ:** ಲೋಕಾಯುಕ್ತರನ್ನು ನೇಮಕ ಮಾಡುವ ಬಗ್ಗೆ

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಮಾನ್ಯ ನಾಣಯ್ಯನವರೂ ಒಂದು ನೋಟಿಸ್‌ನ್ನು ಕೊಟ್ಟಿದ್ದಾರೆ. ಎರಡೂ ವಿಷಯಗಳು ಒಂದಕ್ಕೊಂದು ಸಂಬಂಧವಿದೆ, ಆದರೆ ಬೇರೆ–ಬೇರೆ ಇವೆ. ಪದ್ಧತಿ ಪ್ರಕಾರ ವಿರೋಧ ಪಕ್ಷದ ನಾಯಕರಿಗೆ ಮೊದಲು ಆದ್ಯತೆ ಕೊಡಲಾಗುತ್ತದೆ.

**ಶ್ರೀ ಎಂ.ಸಿ. ನಾಣಯ್ಯ:–** ನಾನು ಲೋಕಾಯುಕ್ತಕ್ಕೆ ಸಂಬಂಧಪಟ್ಟ ಹಾಗೆ ನೋಟೀಸನ್ನು ಕೊಟ್ಟಿದ್ದೇನೆ, ವಿರೋಧ ಪಕ್ಷದ ನಾಯಕರು ಲೋಕಾಯುಕ್ತಕ್ಕೆ ಸಂಬಂಧಪಟ್ಟ ಹಾಗೆ ನೋಟಿಸ್ ಕೊಟ್ಟಿದ್ದಾರೆ. ಇವು ಎರಡೂ ಒಂದೇ ವಿಷಯ. ಆದ್ದರಿಂದ ಅವರು ಮಾತನಾಡಿದ ಮೇಲೆ ನನಗೆ ಒಂದು ಅವಕಾಶವನ್ನು ಕೊಡಿ. That’s all. ಅದನ್ನು club ಮಾಡಿಬಿಡಿ.

**ಸಭಾಪತಿಯವರು:–** ಅದನ್ನು club ಮಾಡೋಣ.

**ಶ್ರೀ ವಿ.ಆರ್. ಸುದರ್ಶನ್:–** ನಾವು ಎರಡು–ಮೂರು ಜನ ಅದಕ್ಕೆ ಸಹಿ ಮಾಡಿದ್ದೇವೆ.

**ಸಭಾಪತಿಯವರು:–** ಸದಸ್ಯರು ಸಹಿ ಮಾಡಿರುವುದನ್ನು ನಾನು ನೋಡಿದೆ. ಈ ವಿಚಾರವಾಗಿ ನಾನು ಆಗಲೇ ಸೂಚ್ಯವಾಗಿ ಹೇಳಿದೆ, ಈ ವಿಚಾರದ ಬಗ್ಗೆ ಮಾತನಾಡಲು ಎಲ್ಲರಿಗೂ ಅವಕಾಶ ಕೊಡಬೇಕು ಎನ್ನುವುದಾದ್ದರೆ ಮೊದಲು ಮಾತನಾಡುವವರು ಬೇಗ–ಬೇಗ ಮಾತನಾಡಿ ಮುಗಿಸಿದರೆ ಬೇರೆಯವರಿಗೂ ಮಾತನಾಡಲು ಅವಕಾಶ ಸಿಗುತ್ತದೆ. ಇದನ್ನು ಏಕೆ ನಿಲುವಳಿ ಸೂಚನೆಯಲ್ಲಿ ತರಲಾಗಿದೆ ಎನ್ನುವುದನ್ನು ವಿರೋಧ ಪಕ್ಷದ ನಾಯಕರು ತಮ್ಮ ಪ್ರಾರಂಭಿಕ ಭಾಷಣದಲ್ಲಿ ಪ್ರಸ್ತಾಪ ಮಾಡಲಿ, ಅದಕ್ಕೆ ಸರ್ಕಾರ ಏನು ಹೇಳುತ್ತದೆ ಎನ್ನುವುದನ್ನು ಕೇಳಿ ನಂತರ ನಾನು ನನ್ನ ತೀರ್ಮಾನವನ್ನು ಹೇಳುತ್ತೇನೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಲೋಕಾಯುಕ್ತರಾಗಿದ್ದ ನ್ಯಾಯಮೂರ್ತಿ ಸಂತೋಷ ಹೆಗಡೆಯವರು ದಿನಾಂಕ:20–7–2011ರಂದು ಅಕ್ರಮ ಗಣಿಗಾರಿಕೆ ಬಗ್ಗೆ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ವರದಿ ಸಲ್ಲಿಸಿದ ಮೂರು ತಿಂಗಳ ಒಳಗೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು, ಆದರೆ ಇದುವರೆಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಸದರಿ ವರದಿ ಮೇಲೆ ಕ್ರಮ ತೆಗೆದುಕೊಂಡು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕಾಗಿದೆ. ಹಾಗೂ ಸರ್ಕಾರಕ್ಕೆ ಉಂಟಾಗಿರುವ ನಷ್ಟದ 5 ಪಟ್ಟು ವಸೂಲಿ ಮಾಡಬೇಕಾಗಿದೆ. ಇದೊಂದು ಸಾರ್ವಜನಿಕ ಮಹತ್ವದ ಮತ್ತು ನಿರ್ಧಿಷ್ಟವಾದ ವಿಷಯವಾಗಿರುವುದರಿಂದ ಈ ದಿನದ ಎಲ್ಲಾ ಕಲಾಪಗಳನ್ನು ಬದಿಗೊತ್ತಿ ನಿಯಮ 59ರಲ್ಲಿ ಈ ವಿಚಾರವನ್ನು ಚರ್ಚಿಸಲು ಅನುಮತಿ ಕೋರಿ ಈ ನಿಲುವಳಿ ಸೂಚನೆಯನ್ನು ತಂದಿರುತ್ತೇನೆ.

**ಸಭಾಪತಿಯವರು:–** ಮಾನ್ಯ ನಾಣಯ್ಯನವರೆ ನಿಮ್ಮ ನೋಟಿಸ್‌ನ್ನು ಓದಿ ಬಿಡಿ.

**ಶ್ರೀ ಎಂ.ಸಿ. ನಾಣಯ್ಯ (ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಗಳೇ, ಹೊಸ ಲೋಕಾಯುಕ್ತರನ್ನು ಇದುವರೆಗೂ ನೇಮಕಾತಿ ಮಾಡದೆ ಇರುವುದರಿಂದ, ಮತ್ತು ನೇಮಕ ಮಾಡಬೇಕೆಂದು ಶಿಫಾರಸ್ ಮಾಡಿರುವ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ಬಗ್ಗೆ ಕೆಲವು ಗುರುತರವಾದ ಆರೋಪಗಳು ಇರುವುದರಿಂದ ಅವರ ನೇಮಕಾತಿಯನ್ನು ಕಾನೂನಿನ ಅಡಿಯಲ್ಲಿ ಮಾಡಲು ಮಾನ್ಯ ರಾಜ್ಯಪಾಲರು ಅಸಮ್ಮತಿಯನ್ನು ಸೂಚಿಸಿ, ಒಬ್ಬ ದಕ್ಷ ಹಾಗೂ ಪ್ರಾಮಾಣಿಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನಾಗಲಿ, ಅಥವಾ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನಾಗಲಿ, ಮುಖ್ಯಮಂತ್ರಿಗಳ ನೇತ್ರತ್ವದಲ್ಲಿರುವ ಲೋಕಾಯುಕ್ತ ನೇಮಕಾತಿ ಸಮಿತಿ ಶಿಫಾರಸ್ ಮಾಡಿದ ತಕ್ಷಣ ಲೋಕಾಯುಕ್ತರನ್ನು ನೇಮಕ ಮಾಡುವುದಾಗಿ ಮಾನ್ಯ ರಾಜ್ಯಪಾಲರು ಸರ್ಕಾರಕ್ಕೆ ಸ್ಪಷ್ಟವಾಗಿ ತಿಳಿಸಿರುವುದರಿಂದ ಮತ್ತು ಈ ವಿಚಾರದಲ್ಲಿ ರಾಜ್ಯಸರ್ಕಾರ ಅನಗತ್ಯವಾಗಿ ತಾವು ಶಿಫಾರಸ್ ಮಾಡಿ ಕಳುಹಿಸಿರುವ ವ್ಯಕ್ತಿಯನ್ನೆ ನೇಮಕ ಮಾಡಬೇಕೆಂದು ಪಟ್ಟುಹಿಡಿದು ಲೋಕಾಯುಕ್ತ ಸಂಸ್ಥೆಯನ್ನು ಸಂಪೂರ್ಣವಾಗಿ ನಿಷ್ಕ್ರಿಯಗೊಳಿಸಿ, ಹಿಂದಿನ ಲೋಕಾಯುಕ್ತರು ನೀಡಿರುವ ವರದಿಯಲ್ಲಿ ಕಾಣಿಸಿರುವ ಹಲವಾರು ರಾಜಕಾರಣಿಗಳ ಭ್ರಷ್ಟಾಚಾರವನ್ನು ಮತ್ತು ಈಗಾಗಲೇ ಲೋಕಾಯುಕ್ತ ನ್ಯಾಯಾಲಯದಲ್ಲಿ ದಾಖಲಾಗಿರುವ ಹಲವಾರು ಪ್ರಭಾವಿ ರಾಜಕಾರಣಿಗಳ ಭ್ರಷ್ಟಾಚಾರದ ಬಗ್ಗೆ ಪ್ರಮಾಣಿಕವಾಗಿ ತನಿಖೆ ಮಾಡಿ ವರದಿಯನ್ನು ಸಲ್ಲಿಸದೆ, ಸರ್ಕಾರದ ಆದೇಶದ ಪ್ರಕಾರ 'ಬಿ' ರಿಪೋರ್ಟ್‌ನ್ನು ಸಲ್ಲಿಸುತ್ತಿರುವುದು ಮತ್ತು ಭ್ರಷ್ಟಾಚಾರ ನಿಯಂತ್ರಣ ಸಂಸ್ಥೆಯನ್ನು ಸರ್ಕಾರ ಉದ್ದೇಶಪೂರ್ವಕವಾಗಿಯೇ ನಿಷ್ಕ್ರಿಯಗೊಳಿಸುವ ಒಂದು ಗಂಭೀರ ಸ್ವರೂಪದ ಪ್ರಕರಣವನ್ನು ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿಯನ್ನು ಕೋರುತ್ತೇನೆ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಗಳೆ, I would like to raise a point of order. ಎರಡು ವಿಷಯಗಳು ಬೇರೆ–ಬೇರೆ ಇವೆ. It may be under the same roof. ಎರಡಲ್ಲಿ ಒಂದನ್ನು ಮಾತ್ರ consider ಮಾಡಬೇಕೇ ವಿನಃ ಎರಡನ್ನೂ consider ಮಾಡಲು ಬರುವುದಿಲ್ಲ.

**ಸಭಾಪತಿಯವರು:–** ಮೊದಲನೆಯದಾಗಿ ಇಬ್ಬರು ಸದಸ್ಯರು ತಮ್ಮ ತಮ್ಮ ನೋಟಿಸ್ ಕೊಟ್ಟಿದ್ದಾರೆ. ವಿಷಯ ಒಂದೇ ಆದರೆ ಬೇರೆ–ಬೇರೆ ಆಯಾಮಗಳಲ್ಲಿ ಕೊಟ್ಟಿದ್ದಾರೆ ಎಂದು ನಾನು ಹೇಳಿದೆ. ಇವತ್ತು ಇರುವ ಎಲ್ಲಾ ಕಲಾಪಗಳನ್ನು ಬದಿಗೊತ್ತಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಅವರು ಹೇಳಿದ್ದಾರೆ. 59ನೇ ನಿಯಮದ ಅಡಿಯಲ್ಲಿ ಅವರುಗಳು ನೋಟಿಸ್ ಕೊಟ್ಟಿದ್ದಾರೆ. ಅವರು ಎತ್ತಿರುವ ಈ ವಿಷಯಗಳು ಆ ನಿಯಮದ ವ್ಯಾಪ್ತಿಯ ಅಡಿಯಲ್ಲಿ ಬರುತ್ತವೆಯೇ ಇಲ್ಲವೆ ಎನ್ನುವ ತೀರ್ಮಾನವನ್ನು ನಾನು ಮಾಡುತ್ತೇನೆ. ನಾನು ತೀರ್ಮಾನ ಮಾಡುವುದಕ್ಕಿಂತ ಮೊದಲು, ಏಕೆ ನಾನು ಇವತ್ತಿನ ಎಲ್ಲ ಕಲಾಪಗಳನ್ನು ಬದಿಗೊತ್ತಬೇಕು ಎನ್ನುವುದನ್ನು ಹೇಳಲು ಅವರಿಗೆ ಒಂದು ಅವಕಾಶವನ್ನು ಕೊಡುತ್ತೇನೆ. ಅವರು ಮಾತನಾಡಿದ ಮೇಲೆ ನಾನು ನನ್ನ ನಿರ್ಣಯವನ್ನು ಹೇಳುತ್ತೇನೆ. ನಂತರ ನಾನು ಅವರಿಗೆ ಚರ್ಚೆಗೆ ಅನುಮತಿ ಕೊಟ್ಟರೇ, ಅದರಲ್ಲಿ ಮಾನ್ಯ ನಾಣಯ್ಯನವರ ವಿಚಾರ ಬರಬೇಕೊ ಬೇಡವೊ ಎನ್ನುವುದನ್ನು ಚರ್ಚೆ ಮಾಡೋಣ. ಈ ನೋಟಿಸ್ ಏಕೆ ಮಹತ್ವದಾಗಿದೆ ಎನ್ನುವುದನ್ನು ಹೇಳಲು ವಿರೋಧ ಪಕ್ಷದ ನಾಯಕರಿಗೆ ಒಂದು ಅವಕಾಶವನ್ನು ಕೊಡುತ್ತೇನೆ. ಏಕೆಂದರೆ ನಮ್ಮ Rules of Procedure book ನ್ನು ಎಲ್ಲರಿಗೂ ಕೊಡಲಾಗಿದೆ, ಎಲ್ಲರೂ ಓದಿದ್ದೀರಿ ಎಂದು ತಿಳಿದಿದ್ದೇನೆ. Rules of Procedure book ಬಹಳ ಪಕ್ಕಾ ಇದೆ, ಬಹಳ ಚೆನ್ನಾಗಿದೆ. ಈ ವಿಷಯ ಅದರಲ್ಲಿ fit in ಆಗಿರುತ್ತದೆಯೇ ಇಲ್ಲವೆ ಎನ್ನುವುದನ್ನು ಹೇಳಲು ನಾನು ಅವರಿಗೆ ಒಂದು ಅವಕಾಶವನ್ನು ಕೊಡಬೇಕಾಗುತ್ತದೆ. Fit in ಆಗುವುದಿಲ್ಲ ಎನ್ನುವುದಾದ್ದರೆ ಅವರಿಗೆ ಅವಕಾಶವನ್ನು ಕೊಡುವುದಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಇದನ್ನು club ಮಾಡಲು ಬರುವುದಿಲ್ಲ.

**ಸಭಾಪತಿಯವರು:–** ನಾನು ಏನು ಹೇಳಿದೆ ಎಂದರೆ, ಲೋಕಾಯುಕ್ತ ವಿಷಯವಾಗಿಯೇ ಎರಡು ಆಯಾಮಗಳಲ್ಲಿ ನೋಟಿಸ್‌ಗಳು ಬಂದಿವೆ, ಚರ್ಚೆಗೆ ತೆಗೆದುಕೊಂಡರೆ ನನಗೂ ಅವಕಾಶ ಕೊಡಿ ಎಂದು ನಾಣಯ್ಯನವರು ಹೇಳಿದರು, ಅವರು ಏನು ಹೇಳುತ್ತಾರೆ ಎನ್ನುವುದು ಸದನದಕ್ಕೆ ಗೊತ್ತಾಗಲಿ ಎಂದು ಅವರಿಗೆ ಓದಲು ಅವಕಾಶವನ್ನು ಕೊಡಲಾಯಿತು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಅವುಗಳನ್ನು club ಮಾಡಿ ಎಂದು ಹೇಳಿದರು.

**ಸಭಾಪತಿಯವರು:–** ನಾನು ಒಂದು ನೋಟಿಸ್ ಕೊಟ್ಟಿದ್ದೇನೆ ನನಗೂ ಅವಕಾಶ ಕೊಡಿ ಎಂದು ಅವರು ಕೇಳಿದ್ದಾರೆ. ಆ ವಿಚಾರ ಚರ್ಚೆಗೆ ಬಂದಾಗ ನೋಡೋಣ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಮಾನ್ಯ ಸಭಾಪತಿಗಳೆ, ಇದು ಟೆಕ್ನಿಕಲ್ ಪ್ರಶ್ನೆಯಲ್ಲ, ಇದು ನೇರವಾಗಿ ಲೋಕಾಯುಕ್ತ ನೇಮಕಾತಿ ಹಾಗು ಲೋಕಾಯುಕ್ತ ವರದಿಗೆ ಸಂಬಂಧಪಟ್ಟದು. ಎರಡೂ ಒಂದೆ ವಿಷಯದಲ್ಲಿ ಬರುತ್ತವೆ. ಈಗ ಕಾನೂನಿನ ಪುಸ್ತಕವನ್ನು ಹಿಡಿದುಕೊಂಡು ನೇಮಕಾತಿಯೇ ಬೇರೆ, ಅದರ ಪರಿಣಾಮವೇ ಬೇರೆ ಈ ರೀತಿ ವಿಚಾರ ಮಾಡುವುದು ಬಹಳ ತಪ್ಪು. ನಿಮ್ಮ ಅವಗಾಹನೆಗೆ ಕೊಟ್ಟಾಗ ನೀವು ವಿಚಾರ ಮಾಡಿ ತೀರ್ಮಾನ ಕೊಡಿ.

**ಸಭಾಪತಿಯವರು:–** ನಾನು ನನ್ನ ತೀರ್ಮಾನ ಹೇಳುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸದನಕ್ಕೆ ಬಂದಿರುವುದೇ ಈ ಎರಡೂ ನೋಟಿಸ್‌ಗಳು ಅವರ ಗಮನಕ್ಕೆ ಹೋಗಿರುವುದರಿಂದ. ದಯಮಾಡಿ ಆಡಳಿತ ಪಕ್ಷದ ಸದಸ್ಯರಿಗೆ ಹೇಳುತ್ತೇನೆ, ದಯಮಾಡಿ ಇಲ್ಲಿ ಮುಖ್ಯಮಂತ್ರಿಗಳು ನಾವು ತಂದಿರುವ ನೋಟಿಸ್ ಬಗ್ಗೆ ಸರ್ಕಾರಕ್ಕೆ ಇರುವ ನೀತಿ–ನಿಲುವನ್ನು ಸ್ಪಷ್ಟವಾಗಿ ಹೇಳಲು ಬಂದಿದ್ದಾರೆ.

**ಸಭಾಪತಿಯವರು:–** ನಾಣಯ್ಯನವರಿಗೆ mind reading, face reading ಬರುತ್ತದೆಯೇ? ಅವರು ತಯಾರಾಗಿದ್ದಾರೆ ಎಂದು ಹೇಗೆ ಹೇಳುತ್ತೀರಿ? ನೋಡೋಣ ಹೇಳಲು ತಯಾರಾಗಿದ್ದಾರೊ ಇಲ್ಲವೊ ಎನ್ನುವುದು ಗೊತ್ತಿಲ್ಲ. ಸಿದ್ರಾಮಣ್ಣನವರು ಪುಸ್ತಕ ಹಿಡಿದುಕೊಂಡು ನಿಂತಿದ್ದಾರೆ ಅವರು ಏನು ಹೇಳುತ್ತಾರೆ ಕೇಳೋಣ. ವಿರೋಧ ಪಕ್ಷದ ನಾಯಕರಿಗೆ ಅವಕಾಶವನ್ನು ಕೊಟ್ಟೆ ಕೊಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೆ, ಮೊದಲು ತಾವು ವಿರೋಧ ಪಕ್ಷದ ನಾಯಕರಿಗೆ ಅವಕಾಶವನ್ನು ಕೊಡಿ.

**ಶ್ರೀ ಡಿ.ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೆ, ನಾನು ಇವತ್ತು ಇಲ್ಲಿಗೆ ಬಂದಿರುವುದೇ ಮಾನ್ಯ ಸದಸ್ಯರಿಬ್ಬರು ನೋಟಿಸ್‌ನ್ನು ಕೊಟ್ಟಿದ್ದಾರೆ ಎನ್ನುವ ಹಿನ್ನೆಲೆಯಲ್ಲಿ. ನಮ್ಮ ಸರ್ಕಾರ ಯಾವುದೇ ವಿಚಾರವನ್ನು, ಯಾವುದೇ ಹಂತದಲ್ಲಿ ಚರ್ಚೆ ಮಾಡಲು ಹಿಂದೆ–ಮುಂದೆ ನೋಡುವುದಿಲ್ಲ. ಕಾನೂನಿನ ಪುಸ್ತಕದ ಅಡಿಯಲ್ಲಿ ಏನು ಬರುತ್ತದೆ ಎನ್ನುವುದನ್ನು ಹೇಳಿ, ಆ ಕಾನೂನಿನ ವ್ಯಾಪ್ತಿಯಲ್ಲಿ ಬರುವುದಾದ್ದರೆ ಅದರ ಬಗ್ಗೆ ಚರ್ಚೆ ಮಾಡಲು ನಾವು ತಯಾರಿದ್ದೇವೆ. ಸನ್ಮಾನ್ಯ ಸಭಾಪತಿಯವರೇ, ಇಬ್ಬರು ಸದಸ್ಯರು ಕೊಟ್ಟಿರುವಂತಹ ನಿಲುವಳಿ ಸೂಚನೆಯಲ್ಲಿ ಸ್ವಲ್ಪ ಮಟ್ಟಿದೆ ವ್ಯತ್ಯಾಸ ಇದೆ. ಲೋಕಾಯುಕ್ತರು ನೀಡಿರುವಂತಹ ವರದಿಯ ಮೇಲೆ ಕ್ರಮ ಕೈಗೊಂಡಿರುವ ಬಗ್ಗೆ ಒಂದು ನಿಲುವಳಿ ಸೂಚನೆ ಇದೆ. ಮತ್ತೊಂದು ನಿಲುವಳಿ ಸೂಚನೆ ಲೋಕಾಯುಕ್ತರ ನೇಮಕಾತಿಗೆ ಸಂಬಂಧಪಟ್ಟಂತೆ ಇದೆ.

ತಾವು ಈ ಎರಡೂ ವಿಚಾರಗಳನ್ನು club ಮಾಡಿ ಚರ್ಚೆಗೆ ತೆಗೆದುಕೊಳ್ಳಬೇಕೇ ಬೇಡವೇ ಎನ್ನುವುದರ ಬಗ್ಗೆ ತಿಳಿಸಬೇಕಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಆ ಭಾಗದಲ್ಲಿ ಇರುವವರಿಗೆ ಇನ್ನೂ ಸ್ವಲ್ಪ ಮಟ್ಟಿನ ತರಬೇತಿಯ ಅವಶ್ಯಕತೆ ಇದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಸನ್ಮಾನ್ಯ ಸಭಾಪತಿಯವರೇ, ಒಂದು ನಿಲುವಳಿ ಸೂಚನೆ ಲೋಕಾಯುಕ್ತರ ನೇಮಕಾತಿಗೆ ಸಂಬಂಧಪಟ್ಟಿರುವುದು. ಮತ್ತೊಂದು ನಿಲುವಳಿ ಸೂಚನೆ ಸರ್ಕಾರದ ಮುಂದಿರುವಂತಹ ಲೋಕಾಯುಕ್ತ ವರದಿಗೆ ಸಂಬಂಧಪಟ್ಟಿರುತ್ತದೆ. ಈ ಎರಡೂ ನಿಲುವಳಿ ಸೂಚನೆಗಳು ಅತ್ಯಂತ ಮಹತ್ವಪೂರ್ಣವಾಗಿವೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳಲ್ಲಿ ನಿಯಮ 59ರಲ್ಲಿ ನಿಲುವಳಿ ಸೂಚನೆ ತರಲು ಪ್ರಸ್ತಾಪ ಇದೆ. ಅದೇ ರೀತಿ ನಿಯಮ 61ರಲ್ಲಿ ಕೆಲವೊಂದು ಅಂಶಗಳಿವೆ. ಅವುಗಳನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. "ಒಂದೇ ಉಪವೇಶನದಲ್ಲಿ ಅಂಥ ಒಂದಕ್ಕಿಂತ ಹೆಚ್ಚು ನಿಲುವಳಿ ಸೂಚನೆಯನ್ನು ತರಕೂಡದು," ಎಂದು ಇದೆ. ಈಗ ಪ್ರಸ್ತಾಪಿಸಲು ಹೊರಟಿರುವಂತಹ ನಿಲುವಳಿ ಸೂಚನೆಗಳ ವಿಚಾರಗಳು ಬೇರೆ ಬೇರೆಯಾಗಿರುವುದರಿಂದ ಯಾವುದಾದರು ಒಂದನ್ನು ನಾವು ಚರ್ಚೆಗೆ ತೆಗೆದುಕೊಳ್ಳಬಹುದೇ ವಿನಃ ಎರಡೂ ವಿಷಯಗಳನ್ನು ಒಟ್ಟಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಮಾತನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ನೋಟೀಸ್‌ನ ಬಗ್ಗೆ ಮಾತನಾಡುತ್ತಾರೆ. ಪೂರ್ವಭಾವಿ ಪ್ರಸ್ತಾವದಲ್ಲಿ ನೇರವಾಗಿ ವಿಷಯಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಈ ನಿಲುವಳಿ ಸೂಚನೆಯ ಮೇಲೆ ಚರ್ಚೆಗೆ ನಾನು ಏತಕ್ಕೋಸ್ಕರ ತಮಗೆ ಅವಕಾಶವನ್ನು ನೀಡಬೇಕು ಎನ್ನುವ ನಿಟ್ಟಿನಲ್ಲಿ ತಾವು ನನ್ನನ್ನು ಒಪ್ಪಿಸುವಂತಹ ಪ್ರಯತ್ನವನ್ನು ಮಾಡಬೇಕಾಗಿದೆ.

ನೇರವಾಗಿ ವಿಷಯಕ್ಕೆ ಹೋದರೆ, ವಿಷಯ ಪ್ರಸ್ತಾಪ ಮಾಡಿದ ಹಾಗೆ ಆಗುತ್ತದೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ನೇರವಾಗಿ ವಿಷಯವನ್ನು ಪ್ರಸ್ತಾಪ ಮಾಡಿದರೆ ಮಾತ್ರ ಚರ್ಚೆಗೆ ಅವಕಾಶವನ್ನು ಕೊಡಬೇಕೋ ಬೇಡವೋ ಎನ್ನುವುದರ ಬಗ್ಗೆ ತಾವು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

**ಸಭಾಪತಿಯವರು:-** ತಾವು ನೋಟೀಸ್‌ನ್ನು ಓದಿದ್ದೀರಿ. ಯಾವ ಕಾರಣಕ್ಕಾಗಿ ಈ ನಿಲುವಳಿ ಸೂಚನೆಯನ್ನು ನೀಡಲಾಗಿದೆ ಎನ್ನುವುದನ್ನು ಹೇಳಿ.

**ಶ್ರೀಮತಿ ಮೋಟಮ್ಮ:-** ಸನ್ಮಾನ್ಯ ಸಭಾಪತಿಯವರೇ, ಇದೊಂದು ಸಾರ್ವಜನಿಕ ಮಹತ್ವದ ವಿಚಾರವಾಗಿದೆ. ರಾಜ್ಯದಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟಬೇಕು ಮತ್ತು ಭ್ರಷ್ಟಾಚಾರದಲ್ಲಿ ತೊಡಗಿರುವವರಿಗೆ ಶಿಕ್ಷೆ ಆಗಬೇಕು ಎನ್ನುವಂತಹ ಉದ್ದೇಶದಿಂದ ಸರ್ಕಾರ ಲೋಕಾಯುಕ್ತ ಸಂಸ್ಥೆಯನ್ನು ಸ್ಥಾಪನೆ ಮಾಡಿತು. ಅದರನ್ವಯ ಕೆಲಸವಾಗಿದೆ. ಲೋಕಾಯುಕ್ತದ ಹಿಂದಿನ ನ್ಯಾಯಮೂರ್ತಿಗಳಾದ ಸಂತೋಷ ಹೆಗಡೆಯವರು ಬಹಳ ಸುದೀರ್ಘವಾಗಿರುವಂತಹ ಒಂದು ವರದಿಯನ್ನು ಗಣಿ ಅಕ್ರಮದ ಬಗ್ಗೆ ಮತ್ತು ರಾಜ್ಯದ ನೈಸರ್ಗಿಕ ಸಂಪತ್ತು ಲೂಟಿ ಆಗಿರುವ ಬಗ್ಗೆ ವರದಿಯನ್ನು ನೀಡಿದ್ದಾರೆ. ನೂರಾರು ಸರ್ಕಾರಿ ಅಧಿಕಾರಿಗಳು, 4-5 ಜನ ಮಂತ್ರಿಗಳು ಅದರಲ್ಲಿ ಭಾಗಿಗಳಾಗಿ ಈ ರಾಜ್ಯದ ಸಂಪತ್ತನ್ನು ಕೊಳ್ಳೆ ಹೊಡೆದಿದ್ದಾರೆ ಮತ್ತು ಸರ್ಕಾರದ ಬೊಕ್ಕಸಕ್ಕೆ ಎಷ್ಟು ನಷ್ಟವಾಗಿದೆ ಎನ್ನುವಂತಹ ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯ ಬಗ್ಗೆ ಸರ್ಕಾರ ತಾತ್ಸಾರದ ಭಾವನೆಯನ್ನು ತಳೆದಿದೆ ಎನ್ನುವುದು ಇಲ್ಲಿ ಬಹಳ ಮುಖ್ಯವಾಗಿರುವಂತಹ ಸಂಗತಿಯಾಗಿದೆ. ಲೋಕಾಯುಕ್ತದವರು ವರದಿಯನ್ನು ಕೊಟ್ಟ ಮೂರು ತಿಂಗಳೊಳಗಾಗಿ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು ಮತ್ತು ಅದರಲ್ಲಿ ಭಾಗಿಯಾಗಿರುವಂತಹ ಅಪರಾಧಿಗಳನ್ನು ಶಿಕ್ಷೆಗೆ ಒಳಪಡಿಸಬೇಕಾಗಿತ್ತು.

ಇಂತಹ ಕ್ರಮವನ್ನು ತೆಗೆದುಕೊಳ್ಳದೇ ಸರ್ಕಾರ ಕೈಕಟ್ಟಿ ಕುಳಿತುಕೊಂಡಿರುವ ಉದ್ದೇಶವೇನು ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ಲೋಕಾಯುಕ್ತ ಸಂಸ್ಥೆ ಬೇಕೋ ಬೇಡವೋ ಎನ್ನುವ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳುತ್ತಿದೆ ಎನ್ನುವುದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ನಾಣಯ್ಯನವರು ತಂದಿರುವಂತಹ ವಿಚಾರವನ್ನು ಈ ವಿಚಾರದೊಡನೆ ಪರಸ್ಪರ ಸಂಬಂಧಿಸಿ ಮಾತನಾಡಬೇಕಾಗುತ್ತದೆ. ಲೋಕಾಯುಕ್ತ ಸಂಸ್ಥೆ ಬೇಕೋ ಬೇಡವೋ ಎನ್ನುವಂತಹ ಪ್ರಶ್ನೆ ಏತಕ್ಕೋಸ್ಕರ ಉದ್ಭವಾಗುತ್ತದೆ ಎಂದರೆ, ಇಂತಹ ಮಹತ್ತರವಾಗಿರುವಂತಹ ಸಂಸ್ಥೆಗೆ ಲೋಕಾಯುಕ್ತರನ್ನು ನೇಮಕ ಮಾಡಬೇಕಾಗಿದೆ.

**ಶ್ರೀ ವಿ.ಆರ್. ಸುದರ್ಶನ್:–** ಸನ್ಮಾನ್ಯ ಸಭಾಪತಿಯವರೇ, ಎರಡೂ ವಿಚಾರಗಳು ಪರಸ್ಪರ ಒಂದಕ್ಕೊಂದು ಸಂಬಂಧಪಟ್ಟಿವೆ ಮತ್ತು ಲೋಕಾಯುಕ್ತಕ್ಕೆ ಸಂಬಂಧಪಟ್ಟ ವಿಷಯ ಸಾರ್ವಜನಿಕ ಮಹತ್ವದ ವಿಷಯವಾಗಿದೆ.

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ (ಸರ್ಕಾರಿ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಒಂದು ನಿಲುವಳಿ ಸೂಚನೆಗೆ ತಾವು ಅವಕಾಶವನ್ನು ನೀಡಿದ ಮೇಲೆ, ಆ ನಿಲುವಳಿ ಸೂಚನೆಯ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ. ಆ ಎರಡು ವಿಚಾರಗಳು ಒಂದಕ್ಕೊಂದು ಸಂಬಂಧಪಟ್ಟಿವೆ ಎನ್ನುವಂತಹ ಪ್ರಶ್ನೆ ಬರುವುದಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಎರಡೂ ವಿಚಾರಗಳನ್ನು club ಮಾಡಬಹುದು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಗೆರೆ ಎಳೆದು ಮಾತನಾಡುವಂತಹ ವಿಚಾರವಲ್ಲ. ಇಂತಹ ಹಲವಾರು ವಿಚಾರಗಳು ಹಿಂದೆ ಈ ಸದನದಲ್ಲಿ ಪ್ರಸ್ತಾಪಕ್ಕೆ ಬಂದಾಗ, ನಾನು ಸಭಾಪತಿಯಾಗಿದ್ದಾಗ ಮತ್ತು ಮಾನ್ಯ ಸುದರ್ಶನ್‌ರವರು ಸಭಾಪತಿಗಳಾಗಿದ್ದಾಗ ಅಥವಾ ಬೇರೆಯವರು ಸಭಾಪತಿಗಳಾಗಿದ್ದಾಗ ಲೋಕಾಯುಕ್ತಕ್ಕೆ ಸಂಬಂಧಪಟ್ಟ ಎರಡು ನಿಲುವಳಿ

ಸೂಚನೆಗಳು ಬಂದಾಗ ನಾವು ಎರಡೂ ವಿಚಾರಗಳನ್ನು club ಮಾಡಿದ್ದೇವೆ. ಆದ್ದರಿಂದ ವಸ್ತು ವಿಚಾರವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಇದೊಂದು ಸಾಮಾನ್ಯ ಜ್ಞಾನ. ಅದನ್ನು ಮುಂದಕ್ಕೆ ಹಾಕು, ಇದನ್ನು ಮುಂದಕ್ಕೆ ಹಾಕು ಎನ್ನುವಂತಹ ಪ್ರಶ್ನೆಯೇ ಇಲ್ಲ. ಎರಡೂ ವಿಚಾರಗಳೂ ನೇರವಾಗಿ ಲೋಕಾಯುಕ್ತ ಸಂಸ್ಥೆಗೆ ಸಂಬಂಧಪಟ್ಟಿರುವ ವಿಚಾರಗಳಾಗಿವೆ. ಲೋಕಾಯುಕ್ತದವರು ಈಗಾಗಲೇ ಕೊಟ್ಟಿರುವಂತಹ ವರದಿಯ ಮೇಲೆ ಸರ್ಕಾರ ಕ್ರಮ ಕೈಗೊಳ್ಳದೇ ನಿಷ್ಕ್ರಿಯವಾಗಿದೆ. ಈ ನಿಷ್ಕ್ರಿಯತೆಗೆ ಮತ್ತೊಂದು ಕಾರಣವೆಂದರೆ, ಲೋಕಾಯುಕ್ತರನ್ನು ನೇಮಕ ಮಾಡಿಲ್ಲ. ಇದು ನೇರವಾಗಿ ಈ ರಾಜ್ಯದ ಜನತೆಯ ಹಿತದೃಷ್ಟಿಗೆ ಸಂಬಂಧಪಟ್ಟಿರುವಂತಹ ವಿಷಯವಾಗಿದೆ. ಈ ರಾಜ್ಯದ ಮತ್ತು ಈ ರಾಷ್ಟ್ರದ ಸಂಪತ್ತು ಲೂಟಿ ಆಗುತ್ತಿರುವಾಗ ಯಾವುದೇ ಚುನಾಯಿತ ಸರ್ಕಾರದ ಜವಾಬ್ದಾರಿ, ಈ ರಾಜ್ಯದ ಸರ್ವಸಂಪತ್ತನ್ನು ಉಳಿಸುವುದಾಗಿದೆ. ಈ ರಾಜ್ಯದಲ್ಲಿ ಸಂವಿಧಾನಬದ್ಧವಾಗಿ ಸರ್ಕಾರವನ್ನು ನಡೆಸಬೇಕಾಗುತ್ತದೆ. ಆ ದೃಷ್ಟಿಯಿಂದ ಈಗ ಕೊಟ್ಟಿರುವಂತಹ ಎರಡು ನಿಲುವಳಿ ಸೂಚನೆಗಳ ವಿಚಾರಗಳು ಒಂದೇ ಆಗಿರುವುದರಿಂದ, ತಾವು ಈ ಎರಡನ್ನೂ link ಮಾಡಿ ಇದಕ್ಕೆ ಅವಕಾಶವನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ ಸರ್ಕಾರ ಉತ್ತರವನ್ನು ಹೇಳಬಹುದು.

**ಶ್ರೀ ಎಸ್.ಆರ್. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಪೂರ್ವಭಾವಿ ಪ್ರಸ್ತಾವನೆ ಮಾಡುವುದಕ್ಕೆ ತಾವು ವಿರೋಧ ಪಕ್ಷದ ನಾಯಕರಿಗೆ ಅವಕಾಶವನ್ನು ಕೊಡಬೇಕಾಗುತ್ತದೆ.

(ಗೊಂದಲ)

**ಸಭಾಪತಿಯವರು:–** ಖಂಡಿತ ಅವಕಾಶವನ್ನು ಕೊಡುತ್ತೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಲು ಎದ್ದು ನಿಂತಿದ್ದಾರೆ. ಅವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

**ಶ್ರೀ ಡಿ.ವಿ. ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದವರು submit ಮಾಡಲಿ ಅನಂತರ ನಾನು submit ಮಾಡುತ್ತೇನೆ. Thereafter, we will go ahead.

**ಸಭಾಪತಿಯವರು:–** ಸರಿ ಈಗ ವಿರೋಧ ಪಕ್ಷದ ನಾಯಕರು ಮಾತನಾಡಬೇಕು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಗೆ ಒಳ್ಳೆ statesmanship ಇದೆ, ಒಳ್ಳೆ spirit ಇದೆ.

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, ಅಕ್ರಮ ಗಣಿಗಾರಿಕೆ ವರದಿಯಿಂದ ನಮಗೆ ಏನು ಗೊತ್ತಾಗುತ್ತದೆ ಎಂದರೆ, ಅಧಿಕಾರ ದುರುಪಯೋಗ ಮಾಡಿಕೊಂಡು ಈ ರಾಜ್ಯದ ಜನತೆಗೆ ಅನ್ಯಾಯ ಮಾಡಿರುವ ಮತ್ತು ಮೋಸ ಮಾಡಿರುವ ಭ್ರಷ್ಟ ಅಧಿಕಾರಿಗಳು, ರಾಜಕಾರಣಿಗಳು, ಸಚಿವರು ಮತ್ತು ಸಂಸದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಇರುವಂತಹ ತೊಂದರೆ ಏನು, ಅಡ್ಡಿ ಆತಂಕಗಳೇನು ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ಲೋಕಾಯುಕ್ತರು ತಮ್ಮ ವರದಿಯನ್ನು ಕೊಟ್ಟು ಇಲ್ಲಿಗೆ ಸುಮಾರು 6 ತಿಂಗಳು ಆಗುತ್ತಾ ಬರುತ್ತಿದೆ. ಆ ವರದಿಯನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಅಪರ ಕಾರ್ಯದರ್ಶಿ ಮಟ್ಟದ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದಾರೆ. ಲೋಕಾಯುಕ್ತರು ಸಂಪೂರ್ಣವಾಗಿರುವಂತಹ ವರದಿಯನ್ನು ಕೊಟ್ಟ ನಂತರ ಅದರ ಮರು ಪರಿಶೀಲನೆಯ ಅಗತ್ಯವಿದೆಯೇ? ಸರ್ಕಾರದ ವತಿಯಿಂದ ವರದಿಯನ್ನು ಕೊಡಲು ಆದೇಶವನ್ನು ನೀಡಿದ ಹಿನ್ನೆಲೆಯಲ್ಲಿ ಅವರು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಮರು ಪರಿಶೀಲನೆ ಮಾಡುವುದರಲ್ಲಿ

ಅರ್ಥವೇನಿದೆ ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ಈ ವರದಿಯನ್ನು ಮರು ಪರಿಶೀಲನೆ ಮಾಡುವುದಕ್ಕೆ ಸರ್ಕಾರಕ್ಕೆ ಎಷ್ಟು ಕಾಲಾವಕಾಶ ಬೇಕಾಗುತ್ತದೆ? 'ಕಳ್ಳನಿಗೊಂದು ಪಿಳ್ಳೆ ನೆವ' ಎಂಬ ಗಾದೆ ಮಾತಿದೆ. ಆ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳುವುದು ಸರಿಯಲ್ಲ. ಲೋಕಾಯುಕ್ತದವರು ಶಿಫಾರಸ್ಸು ಮಾಡಿರುವಂತೆ, ಭ್ರಷ್ಟಾಚಾರ ನಿಯಂತ್ರಣ ಕಾಯಿದೆ ಅನ್ವಯ ಅಂದಿನ ಮುಖ್ಯಮಂತ್ರಿಗಳಾಗಿರುವಂತಹ ಮಾನ್ಯ ಯಡಿಯೂರಪ್ಪನವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಹಾಗೆಯೇ ಯಾರು 600 ಅಧಿಕಾರಿಗಳು ಇದರಲ್ಲಿ ಭಾಗಿಗಳಾಗಿದ್ದಾರೆ ಅವರ ಮೇಲೂ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಯಾರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ ಅವರು ಕೆಳ ಮನೆಯ ಸದಸ್ಯರಾಗಿದ್ದಾರೆ.

**ಶ್ರೀಮತಿ ಮೋಟಮ್ಮ:-** ಸನ್ಮಾನ್ಯ ಸಭಾಪತಿಯವರೇ, ಅವರು ಕೆಳಗಿನ ಮನೆಯ ಸದಸ್ಯರು ಎನ್ನುವುದು ನನಗೆ ಗೊತ್ತು ಆದರೆ, ವರದಿಯಲ್ಲಿ ಅವರ ಹೆಸರಿದೆ, ಅದಕ್ಕಾಗಿ ನಾನು ಅವರ ಹೆಸರನ್ನು ಉಲ್ಲೇಖ ಮಾಡಿದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಸನ್ಮಾನ್ಯ ಸಭಾಪತಿಯವರೇ, ಹಾಗಾದರೆ, ನಾವು ಬೇರೆಯವರ ಹೆಸರುಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಇದು ಪೂರ್ವಭಾವಿ ಪ್ರಸ್ತಾವವಾಗಿದೆ. ನಿಯಮದ ಅಡಿಯಲ್ಲಿ ನಿಲುವಳಿ ಸೂಚನೆಯನ್ನು ಯಾವ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದು ಎನ್ನುವುದನ್ನು ತಮಗೆ convince ಮಾಡುವುದಕ್ಕೆ ಸೀಮಿತವಾಗಿ ಅವರು ಮಾತನಾಡಬೇಕಾಗಿದೆ. ಅದರಿಂದ ಮುಂದಿನ ಕಾರ್ಯಕಲಾಪಗಳಿಗೆ ಅನುಕೂಲವಾಗುತ್ತದೆ.

**Sri M.C. NANAIAH:-** Mr. Chairman Sir, shall I raise a point of order? The Chief Minister is very much present in the House. ನಾವು ಈ ಪ್ರಶ್ನೆಯನ್ನು ಎತ್ತಿದ ಮೇಲೆ, ತಾವು ವಿಚಾರವನ್ನು ಮಾಡಿದ ಮೇಲೆ, it's the prerogative of the Chief Minister today. The Chief Minister is the person who makes the recommendation to the Governor. It is the Chief Minister who ultimately takes the decision in respect of any report now. When the Chief Minister has agreed and told, "O.K, I am prepared to answer on behalf of the Government, being the Chief Minister sitting in the Chair now", why should my learned friend object to it?

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:-** ಸನ್ಮಾನ್ಯ ಸಭಾಪತಿಯವರೇ, I have not objected for submission. ಇದೇ ಸದನದಲ್ಲಿ ಇದೇ ಸ್ಥಾನದಲ್ಲಿ ಮಾನ್ಯ ನಾಣಯ್ಯನವರು ನಿಂತು ಕೆಳಗಿನ ಮನೆಯ ಸದಸ್ಯರ ಬಗ್ಗೆ ಆರೋಪವನ್ನು ಮಾಡಿದಂತಹ ಸಂದರ್ಭದಲ್ಲಿ ಅವರು ಆಕ್ಷೇಪವನ್ನು ಎತ್ತಿದ್ದಾರೆ. ಅದೇ ಕೆಲಸವನ್ನು ಈಗ ನಾನು ಮಾಡುತ್ತಿದ್ದೇನೆ. ಈಗ ಅವರು ಯಾರ ಹೆಸರನ್ನು ತೆಗೆದುಕೊಂಡರೋ ಅವರು ಕೆಳಮನೆಯ ಸದಸ್ಯರೂ ಸಹ ಆಗಿದ್ದಾರೆ. ಇಂತಹ ಸಂದರ್ಭದಲ್ಲಿ ಅವರು ಇದೇ ಸದನದಲ್ಲಿ ಇದೇ ಸ್ಥಾನದಲ್ಲಿ ನಿಂತು ಹಿಂದೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದರು. ಅದು ರೆಕಾರ್ಡ್‌ನಲ್ಲಿದೆ. ಅದೇ ಕೆಲಸವನ್ನು ನಾವು ಮಾಡುತ್ತಿದ್ದೇನೆ. I am not objecting. It is as simple as this.

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೆಳಗಿನ ಮನೆಯ ಸದಸ್ಯರಾಗಿರುವಂಥವರು ಹಿಂದೆಯೂ ಕೆಳ ಮನೆಯ ಸದಸ್ಯರಾಗಿದ್ದರು. The question is, he is the former Chief Minister, against whom the Lokayukta made certain very cautious and caustic remarks. That is a public document now. It shall be the prerogative of every one of us to refer to the Minister, previous Minister and previous Chief Minister in relation to that report. No one can object for raising that motter.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ತಾವು ಇದರ ಬಗ್ಗೆ ರೂಲಿಂಗ್‌ನ್ನು ಕೊಡಿ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಈಗ ಇಲ್ಲಿ ಎರಡು ಕೆಲಸಗಳಾಗಬೇಕು. ಒಂದು ಅವರು submission ಮಾಡುವಂಥಾದ್ದು ಮತ್ತು ಇದು admit ಮಾಡಬೇಕೋ ಬೇಡವೋ ಎನ್ನುವಂಥಾದ್ದು. Not only on the merits. ಇದನ್ನು ತೆಗೆದುಕೊಳ್ಳಬೇಕೋ ಬೇಡವೋ ಎನ್ನುವುದನ್ನೂ ನಿರ್ಣಯ ಮಾಡಬೇಕು. ಇಲ್ಲಿ ಅವರು over all merits ಬಗ್ಗೆ ಮಾತನಾಡುವುದಿದ್ದರೆ ಆ ಸಬ್ಮಿಶನ್‌ಗೆ ಅರ್ಥವೇ ಇರುವುದಿಲ್ಲ. ಎರಡನೆಯದಾಗಿ, the privilege of a member cannot be taken away, even if it is a public document. It cannot be taken away. ಅವರು ಶ್ರೀ ಬಿ.ಎಸ್. ಯಡಿಯೂರಪ್ಪ ಕೆಳಮನೆಯ ಸದಸ್ಯರಾಗಿರುವ ಕಾರಣ ಅವರ ಹೆಸರನ್ನು ಪ್ರಸ್ತಾಪಿಸಿ ಮಾತನಾಡುವುದು ಖಂಡಿತವಾಗಿ ಕಾನೂನಿನ ಪ್ರಕಾರ ಸರಿಯಾಗುವುದಿಲ್ಲ.

**Sri M.C. NANAIAH:-** Refer to him as a former Chief Minister, not by his name.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರದ ಮುಖ್ಯಮಂತ್ರಿಗಳು, ಮಂತ್ರಿಗಳು ಅವರೆಲ್ಲರ ಹೆಸರು ವರದಿಯಲ್ಲಿದೆ. ಇದು ಎಲ್ಲಿಂದ ಪ್ರಾರಂಭವಾಗಿದೆ, ಗಣಿ ಗರ್ಭ ಎಲ್ಲಿಂದ ಹುಟ್ಟಿದೆ ಎನ್ನುವುದು ಕೂಡ ಇದೆ. ಅದು ಕೂಡ ನಡೆಯುತ್ತಿದೆ. ಇದರ ಪಿತಾಮಹರು ಯಾರ್ಯಾರು ಎನ್ನುವುದು ಕೂಡ ಇದೆ. ಇದರ ಬಗ್ಗೆ ದಾಖಲೆಗಳಿವೆ, ಕೇಸ್ ಇದೆ, ರೂಲಿಂಗ್ ಇದೆ, ಎಲ್ಲವೂ ಇದೆ.

**ಸಭಾಪತಿಯವರು-** ಒಬ್ಬರಿಗಿಂತ ಹೆಚ್ಚು ಜನ ಮಾತನಾಡಿದರೆ ಯಾವುದೂ ಸಹ ಕಡತಕ್ಕೆ ಹೋಗುವುದಿಲ್ಲ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಬೊಮ್ಮಾಯಿಯವರು ಹಲವಾರು ವಿಚಾರಗಳನ್ನು ಹೇಳಿದರು, ಸಂತೋಷ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಸತ್ಯ ಕಾಲದಿಂದ ಹೊರಗಡೆ ಬರುತ್ತದೆ. ಆದ್ದರಿಂದ ನಾನೇನು ಹೇಳುತ್ತಿದ್ದೇನೆಂದರೆ, "ಮಸಿಯಿಂದ ಇಬ್ಬನಿಗೆ ಬುದ್ಧಿ ಕಲಿಯುವ ಅವಶ್ಯಕತೆ ಇಲ್ಲ." ಆ ರೀತಿಯ ಅವಶ್ಯಕತೆ ನಮಗೆ ಇಲ್ಲ.

(ಗೊಂದಲ)

**ಸಭಾಪತಿಯವರು:-** ಮತ್ತೊಮ್ಮೆ ಹೇಳುತ್ತಿದ್ದೇನೆ. ಒಬ್ಬರಿಗಿಂತ ಹೆಚ್ಚು ಜನ ಮಾತನಾಡಿದರೆ ಯಾವುದೂ ಸಹ ಕಡತಕ್ಕೆ ಹೋಗುವುದಿಲ್ಲ. ಒಬ್ಬರೇ ಮಾತನಾಡಿದಾಗ ಮಾತ್ರ ಅದು ಕಡತಕ್ಕೆ ಹೋಗುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ನಾವು ಒಪ್ಪುತ್ತೇವೆ, ಸತ್ಯ ಹೊರಗಡೆ ಬರಲಿ. ಯಾರೇ ಇರಲಿ ಲೋಕಾಯುಕ್ತ ವರದಿ ಬಗ್ಗೆ ಚಿಂತನೆಯಾಗಿ ನಿರ್ಧಾರವಾಗಲಿ. ಅದಕ್ಕೆ ಸಬ್ಮಿಶನ್ ಮಾಡುತ್ತಿದ್ದಾರೆ. ನೀವು ಸಬ್ಮಿಶನ್‌ಗೆ ಅವಕಾಶ ಮಾಡಿಕೊಡಿ, ನಾವು ಚರ್ಚೆ ಮಾಡೋಣ. ಹಾಗಾದರೆ ಅವರು ನೇರವಾಗಿ ಧೈರ್ಯದಿಂದ ಹೇಳುತ್ತಿದ್ದಾರೆ. ನೀವಿದಕ್ಕೆ

ಅವಕಾಶ ಮಾಡಿಕೊಡಿ, ಚರ್ಚೆಯಾಗಲಿ. ಹಿಂದಿನವರಾಗಲಿ, ಮುಂದಿನವರಾಗಲಿ ಮುಂದೆ ಯಾವ ರೀತಿ ಈ ರಾಜ್ಯದಲ್ಲಿ ಸರ್ಕಾರ ನಡೆಯಬೇಕು ಎನ್ನುವುದು ಚರ್ಚೆಯಾಗಲಿ.

**ಸಭಾಪತಿಯವರು:-** ಯಾರಾದರೂ ಒಬ್ಬರು ಮಾತನಾಡಿದರೆ ನಾನು ಕೇಳುತ್ತೇನೆ. ಎಲ್ಲರೂ ಮಾತನಾಡಿದರೆ ಅದಕ್ಕೂ ನನಗೂ ಸಂಬಂಧವಿಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಬೊಮ್ಮಾಯಿಯವರು ಸರ್ಕಾರದ ಪರವಾಗಿ ಏನು ಹೇಳಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಎರಡನೆಯದಾಗಿ ಅದರ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಲಿ. ಅವರು ಆ ರೀತಿಯಾಗಿ ಮಾತನಾಡಿದರೆ ಅವರು ಚರ್ಚೆಗೆ ಒಪ್ಪಿಕೊಂಡ ಹಾಗಾಯಿತು. ದಯಮಾಡಿ ತಾವು ಸಬ್ಮಿಶನ್‌ಗೆ ಅವಕಾಶ ಮಾಡಿಕೊಡಿ, ನಾವು ಈ ವಿಚಾರವನ್ನು ಚರ್ಚೆ ಮಾಡೋಣ. What's wrong with this? The Minister says it goes to the deep of the truth, ಅದಕ್ಕೆ ನಾವು ತಯಾರಿದ್ದೇವೆ, ಚರ್ಚೆಯಾಗಲಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಚರ್ಚೆಯಾಗುವುದು ಬೇಕಾಗಿಲ್ಲ, ಅಂತಿಮ ಆಗುವುದು ಬೇಕಾಗಿಲ್ಲ. ಏಕೆಂದರೆ ಅವರು ನಿಮಗೆ convince ಮಾಡಿ...

**Sri VEERANNA MATTIKATTI:-** Mr Chairman Sir, we are submitting They are not submitting. We have agreed for What the Minister has said.

**ಶ್ರೀ ಬಸವರಾಜ ಬೊಮ್ಮಾಯಿ:-** ಜೋರಾಗಿ ಮಾತನಾಡಿದರೆ ಏನೂ ಆಗುವುದಿಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಬಾಯಿ ಮಾತಿನಿಂದ ಎಲ್ಲವನ್ನು ಮುಚ್ಚುವುದಕ್ಕಾಗುವುದಿಲ್ಲ. ಚರ್ಚೆಯಾಗಲಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಅವರು ಪ್ರಿಲಿಮಿನರಿ ಸಬ್ಮಿಶನ್ ಮಾಡುವುದಕ್ಕೆ ನಿಮಗೆ ಅವಕಾಶವನ್ನು ಕೇಳುತ್ತಿದ್ದಾರೆ. ಅವರು ನಿಜವಾಗಿಯೂ ಈ ವಿಷಯದ ಬಗ್ಗೆ ನಿಮಗೆ convince ಮಾಡಿ ವಿಸ್ತೃತವಾಗಿ ಚರ್ಚೆಯಾಗಲಿ ಎನ್ನುವ ಹಾಗಿದ್ದರೆ ಪ್ರಿಲಿಮಿನರಿ ಸಬ್ಮಿಶನ್‌ಗೆ ಏನೇನು ಬೇಕು ಎನ್ನುವುದಕ್ಕೆ ನಿಮಗೆ convince ಮಾಡುವುದರ ಬಗ್ಗೆ ಲಕ್ಷ್ಯ ಕೊಡುತ್ತಿದ್ದರು. ಅದನ್ನು ಬಿಟ್ಟು ಪ್ರಿಲಿಮಿನರಿ ಸಬ್ಮಿಶನ್‌ನಲ್ಲಿಯೇ ಹೆಸರುಗಳನ್ನು ಪ್ರಸ್ತಾಪ ಮಾಡಿ, ಯಾವುದೂ ಅಂತಿಮವಾಗದಂತೆ, ಚರ್ಚೆಯಾಗದಂತೆ ನೋಡಿಕೊಳ್ಳುವುದಕ್ಕೆ, ಕೇವಲ ಸುದ್ದಿಗಳನ್ನು ಮಾಡಿ ತಾವು ಓಡಿ ಹೋಗಬೇಕೆನ್ನುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅವರು ಈ ವಿಷಯವಾಗಿ ನಿಜವಾಗಿಯೂ ಗಂಭೀರವಾಗಿದ್ದರೆ ಪ್ರಿಲಿಮಿನರಿ ಸಬ್ಮಿಶನ್ ಮಾಡಲು ಸೀರಿಯಸ್ ಆಗಿ ನಿಮ್ಮನ್ನು convince ಮಾಡಲಿ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ನಿಮ್ಮ ನಿರ್ಣಯಕ್ಕೆ ನಾವು ತಲೆಬಾಗುತ್ತೇವೆ. ನಾವು ಎಲ್ಲದಕ್ಕೂ ಸಿದ್ಧರಿದ್ದೇವೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು:–** ಮಾನ್ಯ ಸಭಾಪತಿಯವರೇ, ಇವರು ಹೇಳುವ ರೀತಿಯಲ್ಲಿಯೇ ನಾವು convince ಮಾಡುವುದಕ್ಕಾಗುವುದಿಲ್ಲ. ಲೋಕಾಯುಕ್ತ ವರದಿ ಎಷ್ಟು ಮುಖ್ಯ ಎನ್ನುವುದರ ಬಗ್ಗೆ.....

**ಶ್ರೀ ಬಸವರಾಜ ಬೊಮ್ಮಾಯಿ:–** ವಿರೋಧ ಪಕ್ಷದ ನಾಯಕರೆ, ನೀವು ಬಹಳ ಹಿರಿಯ ಸದಸ್ಯರಿದ್ದೀರಿ, ಮಂತ್ರಿಯಾಗಿಯೂ ಸಹ ಕೆಲಸವನ್ನು ಮಾಡಿದ್ದೀರಿ. ನೀವು ನೂರಾರು ಪ್ರಿಲಿಮಿನರಿ ಸಬ್ಮಿಶನ್‌ಗಳನ್ನು ನೋಡಿದ್ದೀರಿ, ಮಾಡಿದ್ದೀರಿ. ದಯವಿಟ್ಟು ನೀವು ನಿಜವಾಗಿಯೂ ಈ ಬಗ್ಗೆ ಸೀರಿಯಸ್ ಆಗಿದ್ದರೆ ಪ್ರಿಲಿಮಿನರಿ ಸಬ್ಮಿಶನ್‌ಗೆ ಸಭಾಪತಿಯವರನ್ನು convince ಮಾಡುವುದಕ್ಕೆ ಯಾವ ರೀತಿಯಲ್ಲಿ ಮಾಡಬೇಕೆನ್ನುವುದೆಲ್ಲಾ ನಿಮಗೆ ಗೊತ್ತಿದೆ, ನೀವು ಮಾಡಿ.

**Sri S.R. PATIL:-** Mr Chairman Sir, Hon'ble. Minister is suspecting the very integrity. He is questioning the very integrity of the Leader of Opposition.

**ಶ್ರೀ ಮೋಟಮ್ಮ:-** ಈ ವರದಿಗೆ ಎಷ್ಟು ಕಿಮ್ಮತ್ತು ಇದೆ? ನಮ್ಮ ಮಾಜಿ ಮುಖ್ಯಮಂತ್ರಿಗಳು...

**ಶ್ರೀ ಬಸವರಾಜ ಬೊಮ್ಮಾಯಿ:-** ಅದರಲ್ಲಿ ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್‌ರವರ ಹೆಸರು ಸಹ ಇದೆ.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈ ವಿಷಯದ ಬಗ್ಗೆ ನಿಯಮ 59ರ ಅಡಿಯಲ್ಲಿ ಏಕೆ ಚರ್ಚೆಯಾಗಬೇಕು ಎನ್ನುವುದನ್ನು ಮಾತ್ರ ಹೇಳಿ. ನಾನು ಒಪ್ಪಿಕೊಂಡರೆ ನಿಯಮ 59ರ ಅಡಿಯಲ್ಲಿ ಚರ್ಚೆ ಮಾಡೋಣ. ನನ್ನನ್ನು ಒಪ್ಪಿಸುವುದರಲ್ಲಿ ನೀವು ವಿಫಲರಾದರೆ ಬೇರೆ ಏನು ಎನ್ನುವುದನ್ನು ನಂತರ ಹೇಳುತ್ತೇನೆ. ನನ್ನ ನಿರ್ಣಯ ಬಂದ ಮೇಲೆ ಈ ಬಗ್ಗೆ ಚರ್ಚೆ ಬರುತ್ತದೆ ಹೊರತು ನನ್ನ ನಿರ್ಣಯ ಬರುವ ತನಕ ಏಕೆ ನಾನು ನಿಮ್ಮ ಪರವಾಗಿ ನಿರ್ಣಯವನ್ನು ಕೊಡಬೇಕು ಎನ್ನುವುದನ್ನು ಮಾತ್ರ ಹೇಳಿ. ಬೇರೆ ವಿಷಯವನ್ನು ದಯವಿಟ್ಟು ಯಾರೂ ಚರ್ಚೆ ಮಾಡಬೇಡಿ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಅವರು ಸಬ್ಮಿಶನ್ ಮಾಡುವಂಥ ಸಂದರ್ಭದಲ್ಲಿಯೂ ಯಾವುದೇ ಬೇರೆ ಮನೆಯ ಸದಸ್ಯರ ಪ್ರಿವಿಲೇಜ್‌ಗೆ ಯಾವುದೇ ತೊಂದರೆ ಬರದ ರೀತಿಯಲ್ಲಿ, ಅವರ ಹೆಸರನ್ನು ಉಲ್ಲೇಖ ಮಾಡದ ರೀತಿಯಲ್ಲಿ ಸಬ್ಮಿಶನ್ ಮಾಡಬೇಕು.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ನಾನು ವರದಿಯಲ್ಲಿರುವುದನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ನಾವು ಆ ಮನೆಯ ಸದಸ್ಯರು ನಡೆದುಕೊಂಡಿದ್ದರ ಬಗ್ಗೆ ಹೇಳುತ್ತಿಲ್ಲ. ಈ ರಾಜ್ಯದ ಮುಖ್ಯಮಂತ್ರಿಯಾಗಿ, ಮಂತ್ರಿಯಾಗಿ ಮಾಡಿದ ಕೆಲಸ–ಕಾರ್ಯಗಳ ಬಗ್ಗೆ ಅವರು ಹೇಳುತ್ತಿದ್ದಾರೆ. We are not questioning the prestige. . .

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದಾರೆಂದು ಕೇಳೋಣ.

(ಗೊಂದಲ)

**Sri M.C. NANAIAH:-** Mr Chairman Sir, unquestionable loyalty of some of the Ministers is known. Former Chief Minister is known for the unquestionable loyalty. Why do they want to demonstrate the loyalty on the floor of the House?

**Sri S.R. PATIL:-** It is a divided cabinet in other way.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಮಾತನಾಡಬೇಕೆಂದು ಎದ್ದು ನಿಂತಿದ್ದಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆಂಬುದನ್ನು ಎಲ್ಲರೂ ಕೇಳೋಣ.

(ಗೊಂದಲ)

**Sri M.C. NANAIAH:-** It is a divided Cabinet and divided Ministry.

(ಗೊಂದಲ)

**ಸಭಾಪತಿಯವರು:–** ಈಗ ಮುಖ್ಯ ಮಂತ್ರಿಗಳು ಮಾತನಾಡುತ್ತಾರೆ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

(1.30 ಗಂಟೆ)

**ಶ್ರೀ ಡಿ.ವಿ. ಸದಾನಂದಗೌಡ:–** ಚರ್ಚೆಗಳನ್ನು ಹಾದಿ ತಪ್ಪಿಸುವಂಥದ್ದು ಮತ್ತು ಹಾದಿ ತಪ್ಪುವಂಥದ್ದು ಒಳ್ಳೆಯ ಸಂಪ್ರದಾಯವಲ್ಲ. ನಾನು ಈ ಮಾತನ್ನು ಇಡೀ ಸದನದ ಸದಸ್ಯರಿಗೆ ಹೇಳುತ್ತಿದ್ದೇನೆ. ಸದನದ ಕಲಾಪಗಳು ಚೆನ್ನಾಗಿ ನಡೆಯಬೇಕು, ಎಲ್ಲಾ ವಿಚಾರಗಳು ಚರ್ಚೆ ಆಗಬೇಕು. ಆದರೆ ಅದು ಕಾನೂನಿನ ಚೌಕಟ್ಟಿನಲ್ಲಿರಬೇಕು, ನಮ್ಮ ನಿಯಮಗಳ ಪುಸ್ತಕದ ವ್ಯಾಪ್ತಿಯಲ್ಲಿರಬೇಕು. ಇದು ನನ್ನ ಉದ್ದೇಶ. ಇಡೀ ಸದನ ಯಾವುದೇ ಸಂದರ್ಭದಲ್ಲಿ ಯಾವುದೇ ವಿಚಾರಗಳನ್ನು ಎತ್ತಿದಾಗ, ನಾವು ಉತ್ತರ ಕೊಡುವುದಿಲ್ಲ ಎನ್ನುವ, ನಾವು ಚರ್ಚೆಯಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳುವ ಅಥವಾ ಚರ್ಚೆಯ ಹಾದಿಯನ್ನು ತಪ್ಪಿಸಬೇಕು ಎನ್ನುವ ಇರಾದೆ ಆಡಳಿತ ಪಕ್ಷಕ್ಕೆ ನೂರಕ್ಕೆ ನೂರರಷ್ಟಿಲ್ಲ. ಕಳೆದ ಅಧಿವೇಶನವನ್ನು 10 ದಿನ ಮತ್ತು ಈ ಅಧಿವೇಶನವನ್ನು 10 ದಿನ ಹಾಗೂ ಬಜೆಟ್ ಮಂಡಿಸುವ ಸಂದರ್ಭದಲ್ಲಿ ಮತ್ತಷ್ಟು ದಿನ ನಡೆಸಿ ಚರ್ಚೆಗಳನ್ನು ಮಾಡಬೇಕು, ಸದನ ಮಾತಿನ ಮನೆ ಆಗಬೇಕು, ಬೀದಿಯಲ್ಲಿ ಮಾತನಾಡುವ ಹಾಗೆ ಮಾತನಾಡಿ ರಾಜಕಾರಣ ಮಾಡಬಾರದು, ಜನಪ್ರತಿನಿಧಿಗಳು ಸದನವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎನ್ನುವ ಸದುದ್ದೇಶದಿಂದ ಸರ್ಕಾರ ಕಾರ್ಯಕಲಾಪಗಳನ್ನು ನಡೆಸುತ್ತಿದೆ. ಆದರೆ ಅದು ಕಾನೂನಿನ ಚೌಕಟ್ಟಿನೊಳಗೆ, ನಿಯಮಗಳ ಪುಸ್ತಕದೊಳಗೆ ಇರಬೇಕು ಎನ್ನುವುದು ನನ್ನ ಆಶಯವಾಗಿದೆ. ಸಂಪ್ರದಾಯಗಳನ್ನು ಮೀರಿ ಮಾತನಾಡುವುದು ಅಷ್ಟು ಒಳ್ಳೆಯ ಸಂಗತಿಗಳಲ್ಲ. ಮಾನ್ಯ ಸದಸ್ಯರುಗಳು ಇವತ್ತೇನು ನೋಟಿಸ್ ಕೊಟ್ಟಿದ್ದಾರೋ ಆ ಕುರಿತು ಪ್ರಿಲಿಮಿನರಿ ಸಬ್‌ಮಿಷನ್ ಮಾಡಲಿ. ನಾವು ಅದನ್ನು ಕೇಳುವುದಕ್ಕೆ ತಯಾರಿದ್ದೇವೆ. ಇದನ್ನು ತೆಗೆದುಕೊಳ್ಳಬೇಕೋ ಬೇಡವೋ ಎಂಬ ಬಗ್ಗೆ ನಾನೂ ಸಬ್‌ಮಿಷನ್ ಮಾಡಬೇಕು. ನನ್ನ ಸರ್ಕಾರ ಈ ನಿಟ್ಟಿನಲ್ಲಿ ಹೇಗೆ ಕೆಲಸಗಳನ್ನು ಕೈಗೊಂಡಿದೆ ಎಂಬ ಬಗ್ಗೆ ಹೇಳಬೇಕಾಗುತ್ತದೆ. ನಾನು ಒಂದು ವೇಳೆ ಮಾತನಾಡ ಬಯಸಿದರೆ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಮಾತನಾಡಬಹುದು, ಆದರೆ ಈ ವಿಚಾರವನ್ನು ಈ ಸಂದರ್ಭದಲ್ಲಿ

ತೆಗೆದುಕೊಳ್ಳದೇ ಇರುವಂತಹ ಪರಿಸ್ಥಿತಿ ಇದೆ. ಆದರೂ ಪ್ರಿಲಿಮಿನರಿ ಸಬ್‌ಮಿಷನ್ ಮಾಡಲಿ. ಇದರಲ್ಲಿ ನಮಗೇನು ತಕರಾರಿಲ್ಲ. ಆದರೆ, ಕೆಳಗಿನ ಮನೆ ಸದಸ್ಯರ ಹೆಸರನ್ನು ಎತ್ತಿ ಮಾತನಾಡುವಂಥದ್ದು ನಮ್ಮ ನಿಯಮಗಳ ಪುಸ್ತಕದಲ್ಲಿ ಇಲ್ಲ. ಮಾನ್ಯ ಸಭಾಪತಿಗಳೆ, ಇವರು ಪ್ರಿಲಿಮಿನರಿ ಸಬ್‌ಮಿಷನ್ ಮಾಡಲಿ. ನಾನು ಉತ್ತರ ಕೊಡುತ್ತೇನೆ. ನಂತರ ತಾವು ತೀರ್ಮಾನ ತೆಗೆದುಕೊಳ್ಳಿ.

**ಸಭಾಪತಿಯವರು:–** ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಮಾತ್ರ ಅಲೋ ಮಾಡಿದ್ದೇನೆ. ಗೌರವಾನ್ವಿತ ಎಲ್ಲಾ ಸದಸ್ಯರು ಒಂದು ವಿಷಯವನ್ನು ಗಮನಿಸಬೇಕು. ಈ ಸದನದ ಸದಸ್ಯರಿರಬಹುದು, ಬೇರೆ ಸದನದ ಸದಸ್ಯರಿರಬಹುದು ಅಥವಾ ಹೊರಗಡೆಯವರಿರಬಹುದು, ಅವರ ಯಾರ ಹೆಸರನ್ನೂ ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ಹೇಳುವುದಕ್ಕೆ ಅವಕಾಶವಿಲ್ಲ. ಚರ್ಚೆ ಪ್ರಾರಂಭವಾದಾಗ, ಉದ್ದೇಶಿತ ವಿಚಾರವನ್ನು ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ, ಕೊಟ್ಟಾಗ, ಅವಶ್ಯಕತೆ ಇರುವ ಹೆಸರುಗಳನ್ನು ಹೇಳುವುದು ಸಮಂಜಸವೋ ಅಲ್ಲವೋ ಎನ್ನುವುದರ ಬಗ್ಗೆ ನಿರ್ಣಯ ಮಾಡಬಹುದು. ಆದರೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವ ಸಮಯದಲ್ಲೇ ಹೆಸರುಗಳನ್ನು ತೆಗೆದುಕೊಂಡು ಬಂದು ಚರ್ಚೆಯ ಹಾದಿ ತಪ್ಪುವ ಹಾಗೆ ಮಾಡುವುದು ಸರಿಯಲ್ಲ. ಈಗ ನಿಯಮ 59ರ ಅಡಿಯಲ್ಲಿ ಈ ವಿಚಾರವನ್ನು ಏಕೆ ತರಬೇಕು ಎಂಬ ಬಗ್ಗೆ ಹೇಳಿ.

**ಶ್ರೀ ಮನೋಹರ ಮಸ್ಕಿ:–** ನೇರವಾಗಿ ಸಭಾಪತಿಗಳಿಗೆ ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ನನಗೆ ಹೇಳುವುದಕ್ಕೆ ಅವಕಾಶ ಕೊಡಬೇಕು. ನಮ್ಮ ಸದನದ ನಿಯಮಾವಳಿ ಪುಸ್ತಕದ ನಿಯಮ 61 (1) ಮತ್ತು (2)ರಲ್ಲಿ ಹೇಳಿರುವ ವಿಷಯಗಳನ್ನು ಸ್ಪಷ್ಟಪಡಿಸುತ್ತೇನೆ. ತಾವು, ಇದು ಬರುವುದಿಲ್ಲ ಎಂದು ಹೇಳುವುದಾದರೆ ನಾನು ಕುಳಿತುಕೊಂಡು ಬಿಡುತ್ತೇನೆ. (ಗೊಂದಲ) ನಾನು ಒಬ್ಬ ಸದಸ್ಯನಾಗಿ, ನಿಯಮಗಳ ಪುಸ್ತಕದ ಪ್ರಕಾರ ಸದನ ನಡೆಯಬೇಕು ಎನ್ನುವ ನನ್ನ ಕಳಕಳಿಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಮುಖ್ಯಮಂತ್ರಿಗಳೇ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಒಪ್ಪಿರುವಾಗ ಮತ್ತೆ ಇದು ಬೇಕೇ?

**ಸಭಾಪತಿಯವರು:-** ಮಾನ್ಯ ಸದಸ್ಯರು ಏನು ಹೇಳುತ್ತಾರೋ ಕೇಳೋಣ. ದಯವಿಟ್ಟು ಬೇರೆಯವರಲ್ಲರೂ ಕುಳಿತುಕೊಳ್ಳಿ.

**Sri M.C. NANAIAH:-** Sir, Chief Minister has already accepted. There is no need to explain it.

**Sri MANOHARA MASKI:-** Sri, first thing is I am also a member of this House.

(ಗೊಂದಲ)

**ಸಭಾಪತಿಯವರು:-** ಮಾನ್ಯ ಮಸ್ಕಿಯವರು ಒಂದು ವಿಷಯವನ್ನು . . .

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:-** ಆಡಳಿತ ಪಕ್ಷದವರು ಇಲ್ಲಿ ಗುಂಪುಗಾರಿಕೆಯನ್ನು ಪ್ರದರ್ಶನ ಮಾಡಿಬಿಟ್ಟರು. Divided Cabinet and divided Ministry, they have no respect of the Chief Minister.

**ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ. ನಾನು ಮಾನ್ಯ ಮಸ್ಕಿಯವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಮಸ್ಕಿಯವರು ಹೇಳಿದ್ದನ್ನು ನಾನು ಒಪ್ಪಿದರೆ ಅದು ಕಾನೂನು ಆಗುತ್ತದೆ. ಒಪ್ಪುವುದು ಬಿಡುವುದು ನನಗೆ ಬಿಟ್ಟದ್ದು. ಅವರು ಏನು ಹೇಳುತ್ತಾರೆ ಎನ್ನುವುದು ನನಗೂ ಗೊತ್ತಿಲ್ಲ, ನಿಮಗೂ ಗೊತ್ತಿಲ್ಲ. ಅವರು ಏನು ಹೇಳುತ್ತಾರೋ ಹೇಳಲಿ.

**ಶ್ರೀ ಮನೋಹರ ಮಸ್ಕಿ:–** ಮಾನ್ಯ ಸಭಾಪತಿಗಳೆ, ನಿಯಮ 61ರಲ್ಲಿ 'ಸಾರ್ವಜನಿಕ ಮಹತ್ವವುಳ್ಳ ಒಂದು ಜರೂರು ವಿಷಯದ ಮೇಲೆ ಪರಿಷತ್ತಿನಲ್ಲಿ ಚರ್ಚೆ ನಡೆಸುವ ಉದ್ದೇಶಕ್ಕಾಗಿ ನಿಲುವಳಿ ಸೂಚನೆಯನ್ನು ತರುವ ಹಕ್ಕು ಕೆಳಕಂಡ ನಿರ್ಬಂಧಗಳಿಗೆ ಒಳಪಟ್ಟಿರತಕ್ಕದ್ದು" ಎಂದಿದೆ. ಆ ನಿರ್ಬಂಧವೇನು? ನಿರ್ಬಂಧ (1) "ಒಂದೇ ಉಪವೇಶನದಲ್ಲಿ ಅಂಥ ಒಂದಕ್ಕಿಂತ ಹೆಚ್ಚು ನಿಲುವಳಿ ಸೂಚನೆಯನ್ನು ತರಕೂಡದು." ಈಗ ಎರಡು ನೋಟಿಸ್‌ಗಳನ್ನು ಓದಲಾಗಿದೆ. . .

**ಸಭಾಪತಿಯವರು:–** ಎರಡು ನೋಟಿಸ್‌ಗಳು ಬಂದಿವೆ, ಇವು ಹೆಚ್ಚು–ಕಡಿಮೆ ಒಂದೇ ವಿಷಯಗಳನ್ನೊಳಗೊಂಡಿವೆ, ಆದ್ದರಿಂದ ಇಬ್ಬರಿಗೂ ಒಟ್ಟಾಗಿ ಮಾತನಾಡುವುದಕ್ಕೆ ಅವಕಾಶ ಕೊಡೋಣ ಎಂದು ಆಗಲೇ ನಾನು ಹೇಳಿದೆ, ಆದರೆ ತಾವುಗಳು ಅಕ್ಸೆಪ್ಟ್ ಮಾಡಿಲ್ಲ. ಮೊದಲನೆಯದು ರಿಜೆಕ್ಟ್ ಆಗಬಹುದು, ಎರಡನೆಯದು ರಿಜೆಕ್ಟ್ ಆಗಬಹುದು, ನೋಡೋಣ ಎಂಬ ಮಾತನ್ನು ಹೇಳಿದೆ. ಈ ವಿಷಯ ನಾನು ಹೇಳಿರುವ ಆ ವಿಷಯಕ್ಕೆ attract ಆಗುವುದಿಲ್ಲ.

**ಶ್ರೀ ಮನೋಹರ ಮಸ್ಕಿ:–** ಮಾನ್ಯ ಸಭಾಪತಿಗಳೆ, ನಿಯಮ (11), "ಒಂದು ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯ ಚರ್ಚಿಸಕೂಡದು" ಎಂದಿದೆ. ಅಂದರೆ ತಾವೇನಾದರೂ ಎರಡು ನೋಟಿಸ್‌ಗಳನ್ನೂ ಕ್ಲಬ್ ಮಾಡುವುದಾದರೆ . . .

**ಸಭಾಪತಿಯವರು:–** ಮಾಡುವುದಿಲ್ಲ . . .

**ಶ್ರೀ ಮನೋಹರ ಮಸ್ಕಿ:–** ಒಂದರಲ್ಲೇ ಎರಡು ವಿಷಯಗಳನ್ನು ಚರ್ಚೆ ಮಾಡುವುದರ ಬಗ್ಗೆ ನಿರ್ಧಾರವಾಗದೆ ಇದ್ದರೆ ಹೇಗೆ? ಪ್ರಿಲಿಮಿನರಿ ಸಬ್‌ಮಿಷನ್ ಆಗುವಂಥದ್ದು ನಿಯಮ 62ರ ಅಡಿಯಲ್ಲಿ. ಈಗ ಎರಡು ನೋಟಿಸ್‌ಗಳು ಬಂದಿವೆ. ಈ ಎರಡರಲ್ಲಿ ಒಂದನ್ನು ಒಪ್ಪಿಕೊಳ್ಳುತ್ತೇವೆಯೇ ಅಥವಾ ಎರಡನ್ನೂ ಮರ್ಜ್ ಮಾಡಿ ಯಾವುದಾದರೂ ಒಂದು ವಿಷಯವನ್ನು ಮಾತ್ರ ತೆಗೆದುಕೊಳ್ಳುತ್ತೇವೆಯೋ ಎನ್ನುವುದರ ಬಗ್ಗೆ ಸ್ಪಷ್ಟವಾಗದೇ ನಿಯಮ 62ರ ಅಡಿಯಲ್ಲಿ ಚರ್ಚೆ ಮುಂದುವರೆಸುವುದಕ್ಕೆ

ಅಥವಾ ಸಬ್‌ಮಿಷನ್‌ಗೆ ಅವಕಾಶ ಕೊಡುವುದಕ್ಕೆ ಹೇಗೇ ಸಾಧ್ಯ ಎನ್ನುವುದರ ಬಗ್ಗೆ ತಾವು ರೂಲಿಂಗ್ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಈಗ ಎರಡು ನಿಲುವಳಿ ಸೂಚನೆಗಳು ಬಂದಿವೆ. ಐದು ನಿಮಿಷದ ಅವಧಿಯ ಒಳಗೆ, ಮೊದಲು ನಾಣಯ್ಯನವರು ನೋಟಿಸ್ ಕೊಟ್ಟ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ನೋಟಿಸ್ ಕೊಟ್ಟರು. ನಾನು ಅದನ್ನು ಗಮನಿಸಿದೆ. ಸ್ವಾಭಾವಿಕವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಂಥ ನಿಲುವಳಿ ಸೂಚನೆಗೆ ಮೊದಲ ಆದ್ಯತೆ ಕೊಡುತ್ತೇವೆ. ಇದು ನಮ್ಮ ಸದನದ ಪದ್ಧತಿ. ಆ ಪದ್ಧತಿ ಆಧಾರದ ಮೇಲೆ ನಾನು ಅವರಿಗೆ ಅವಕಾಶ ಕೊಟ್ಟೆ. ಅವರು ಬರೆದು ಕೊಟ್ಟಿರುವ ವಿಷಯಗಳನ್ನು ನಾನು ನೋಡಿದಾಗ, ಅದು ಮೊದಲನೆಯ ನಿಲುವಳಿ ಸೂಚನೆಯಲ್ಲಿ ಬರುವ ವಿಷಯಗಳೇ ಆಗಿದ್ದರಿಂದ ನಾನು ಮಾನ್ಯ ನಾಣಯ್ಯನವರಿಗೆ, ನನ್ನ ನಿಲುವಳಿ ಸೂಚನೆ ಏನಾಯಿತು ಎಂದು ಕೇಳಬೇಡಿ, ಅವರಿಗೆ ನಿಲುವಳಿ ಸೂಚನೆ ಅಡಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದರೆ ಅದರಲ್ಲಿ ತಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ. ಈ ಕುರಿತು ಈಗ ಚರ್ಚೆ ಬೇಡ. ಈಗ ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಗಳೆ, ಈ ತರಹದ ಚರ್ಚೆ ನಾನು ಪ್ರಥಮ ಬಾರಿ ಕಾಣುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಬಂದು, ಸರ್ಕಾರದ ಪರವಾಗಿ, ಈ ಒಂದು ಗಂಭೀರ ಸ್ವರೂಪದ ವಿಚಾರದ ಬಗ್ಗೆ ನನ್ನ ಸರ್ಕಾರ ತೆಗೆದುಕೊಂಡಿರುವ ತೀರ್ಮಾನವನ್ನು ಹೇಳುವುದಕ್ಕೆ ತಯಾರಾಗಿದ್ದೇನೆ ಎಂದು ಹೇಳಿದ ಮೇಲೂ ಪುನಃ ಅದಕ್ಕೆ ಈ ರೀತಿಯ ತಾಂತ್ರಿಕವಾಗಿರುವ ವಿಚಾರಗಳನ್ನು ಎತ್ತಿರುವ ಹಿನ್ನೆಲೆಯಲ್ಲಿ ನನ್ನ ನಿಲುವಳಿ ಸೂಚನೆಯನ್ನು ಇವತ್ತು ಎತ್ತುವುದಿಲ್ಲ, ನಾಳೆ ಎತ್ತುತ್ತೇನೆ. ನಾಳೆ ಪುನಃ ನಾನು ನಿಮಗೆ ಹೊಸದಾಗಿ ನೋಟಿಸ್ ಕೊಡುತ್ತೇನೆ. ಇವತ್ತು ಮಾನ್ಯ ಮೋಟಮ್ಮನವರಿಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಡಿ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಗೌರವ ಕೊಟ್ಟು ಈ

ಮಾತುಗಳನ್ನು ಆಡುತ್ತಿದ್ದೇನೆ. ಮುಖ್ಯಮಂತ್ರಿಗಳು ಸದನದಲ್ಲಿದ್ದಾಗ ಮಾನ್ಯ ಸದಸ್ಯರು ಈ ರೀತಿ ಮಾತನಾಡುತ್ತಿರುವುದು ಸದನದ ಇತಿಹಾಸದಲ್ಲಿ ಇದೇ ಮೊದಲು. ಇದಕ್ಕಿಂತ ಮುಂಚೆ ಯಾವುದೂ ನಡೆದಿಲ್ಲ. ಇದು ಅವರ ಪಕ್ಷದಲ್ಲಿರುವಂತಹ ಮತ್ತು ಅವರ ಸಚಿವ ಸಂಪುಟದಲ್ಲಿರುವಂತಹ ಭಿನ್ನಾಭಿಪ್ರಾಯವನ್ನು ಪ್ರದರ್ಶನ ಮಾಡುವುದಾಗಿದೆ. ಇದನ್ನು ಸಚಿವ ಸಂಪುಟಕ್ಕೆ ಹೋಗಿ ಅಲ್ಲಿ ಮಾಡಿ. ಈ ಸದನದಲ್ಲಿ ಮಾಡುವುದು ಬೇಡ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಶ್ರೀ ನಾಣಯ್ಯನವರು ಹಿರಿಯ ಸದಸ್ಯರಿದ್ದು, ನಾನು ಅವರಿಗೆ ಗೌರವನ್ನು ಕೊಡುತ್ತೇನೆ. ಪ್ರತಿಯೊಬ್ಬ ಸದಸ್ಯರಿಗೂ ಕೂಡ ತನ್ನದೇ ಅದಂತಹ ಸ್ಥಾನಮಾನ ಇದೆ. ಅವರು ಅವರ ಹಕ್ಕು ವ್ಯಾಪ್ತಿಯಲ್ಲಿ ಕೇಳಿದ್ದಾರೆ. ಆದರೆ, ನಾವು ಏನು ಮಾಡುತ್ತೇವೆ, ಹಿರಿಯರೆಂದು ಗೌರವವನ್ನು ಕೊಡುತ್ತೇವೆ. ಎಲ್ಲದಕ್ಕೂ ಕಾಮೆಂಟ್ ಮಾಡುವುದು ಸರಿಯಲ್ಲ. ಅದರಿಂದ ನಮ್ಮ ಮನಸ್ಸಿಗೆ ಖಂಡಿತವಾಗಿಯೂ ಬೇಜಾರಾಗುತ್ತದೆ. ಅವರು ಹಿರಿಯರಿದ್ದಾರೆ. ಅವರಿಗೆ ಗೌರವವನ್ನು ಕೊಡೋಣ. ಅವರು ಹೇಳಿದ್ದೆಲ್ಲಾ ಸರಿಯಾಗಿರುವುದಿಲ್ಲ.

**ಶ್ರೀ ಮನೋಹರ್ ಮಸ್ಕಿ:-** ಮಾನ್ಯ ಸದಸ್ಯರಾದ ಶ್ರೀಯುತ ನಾಣಯ್ಯನವರು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದರು. ಏನು ಪಾಯಿಂಟ್ ಆಫ್ ಆರ್ಡರ್ ಹೇಳಿ. ಸದನದ ಹಿರಿಯ ಸದಸ್ಯರೆಂದು ಏನೆಲ್ಲಾ ಮಾತನಾಡುವುದು ಸರಿಯಲ್ಲ ಸ್ವಾಮಿ.

(ಗೊಂದಲ)

**Mr CHAIRMAN:-** I want the Leader of the Opposition to speak.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಏತಕ್ಕೆ ಈ ನಿಲುವಳಿ ಸೂಚನೆ ಮಹತ್ವದ್ದಾಗಿದೆ ಎಂದು ಹೇಳಿದರೆ ಇಲ್ಲಿ ಭ್ರಷ್ಟಾಚಾರದ ವಿಚಾರ ಬರುತ್ತದೆ. ರಾಜ್ಯದ ಬೊಕ್ಕಸಕ್ಕೆ 16,885 ಕೋಟಿ ರೂಪಾಯಿಗಳ ನಷ್ಟವಾಗಿದೆ. ಆಕ್ರಮ ಆದಿರು ಸಾಗಾಣಿಕೆಯಾಗಿದೆ.

ಎರಡನೆಯದಾಗಿ, ಈ ಲೋಕಾಯುಕ್ತ ವರದಿಯಲ್ಲಿ ಏನು ಹೇಳಿದ್ದಾರೆಂದರೆ 600ಕ್ಕೂ ಹೆಚ್ಚು ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದಾರೆಂದು ಹೇಳಲಾಗಿದೆ. ಹಾಗಾದರೆ, ಇದರ ಬಗ್ಗೆ ಕ್ರಮ ಆಗಬಾರದೇ? ಈ ವರದಿಯನ್ನು ಅನುಸರಿಸಿ, ಅವರು ಏನು ಹೇಳುತ್ತಾರೆಂದರೆ "ಭ್ರಷ್ಟಾಚಾರ ನಿಯಂತ್ರಣ ಕಾಯಿದೆ, ಗಣಿ ಮತ್ತು ಖನಿಜ ಕಾಯಿದೆ, ಅರಣ್ಯ ಸಂರಕ್ಷಣೆ ಕಾಯಿದೆ, ಮತ್ತು ಭಾರತೀಯ ದಂಡ ಸಂಹಿತೆಯ ವಿವಿಧ ಕಾನೂನುಗಳ ಅಡಿಯಲ್ಲಿ ಪ್ರಕರಣಗಳ ವಿಚಾರಣೆ ನಡೆಯಬೇಕಾಗಿದೆ." ಈ ವಿಚಾರಣೆಯನ್ನು ನಡೆಸಿ, ತಪ್ಪಿತಸ್ತರ ಮೇಲೆ ಕ್ರಮ ಆಗಬೇಕಲ್ಲವೇ? ವಿಚಾರಣೆಯನ್ನು ನಡೆಸಿ ಕೊಟ್ಟಿರುವಂತಹ ವರದಿ ಇದಾಗಿದೆ. ಅದರ ಬಗ್ಗೆ ಕ್ರಮ ಆಗಬೇಕಲ್ಲವೇ? ಸರ್ಕಾರ ಭ್ರಷ್ಟಾಚಾರ ನಿಯಂತ್ರಣ ಮಾಡಬೇಕೆನ್ನುವ ಸದುದ್ದೇಶದಿಂದ ಒಂದು ಲೋಕಾಯುಕ್ತ ಸಂಸ್ಥೆಯನ್ನು ನೇಮಕ ಮಾಡಿದ ಮೇಲೆ ಅವರು ಇವರ ಆದೇಶದ ಮೇರೆಗೆ ಸಂಪೂರ್ಣವಾಗಿ ಪರಿಶೀಲನೆ ಮಾಡಿ ಅಕ್ರಮ ಗಣಿಗಾರಿಕೆ ಈ ರಾಜ್ಯದಲ್ಲಿ ಹೇಗೆ ನಡೆದಿದೆ, ನೈಸರ್ಗಿಕ ಸಂಪತ್ತು ಎಷ್ಟರಮಟ್ಟಿಗೆ ಲೂಟಿಯಾಗಿದೆ, ಯಾರ್ಯಾರು ಇದರಲ್ಲಿ ಭಾಗಿಯಾಗಿದ್ದಾರೆ, ಅವರಿಗೆ ಯಾವ ರೀತಿಯ ಶಿಕ್ಷೆಯಾಗಬೇಕು ಎಂಬ ಬಗ್ಗೆ ಒಂದು ವರದಿಯನ್ನು ಕೊಟ್ಟು ಇಲ್ಲಿಗೆ ಸುಮಾರು 6 ತಿಂಗಳು ಆಗುತ್ತಾ ಬಂದಿದೆ. ಅದನ್ನು ಏತಕ್ಕೆ ಗಣನೆಗೆ ತೆಗೆದುಕೊಂಡಿಲ್ಲ? ಲೋಕಾಯುಕ್ತರ ವರದಿಯನ್ನು ತಿರಸ್ಕರಿಸಿದ್ದೇವೆಂದೂ ಸಹ ಹೇಳಿಲ್ಲ ಅಥವಾ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದೂ ಸಹ ಹೇಳಿಲ್ಲ. ನಾವು ತಿಳಿದುಕೊಂಡಿದ್ದು ಏನೆಂದರೆ, ಹೊಸದಾಗಿ ಬಂದಂತಹ ಮುಖ್ಯಮಂತ್ರಿಗಳಿಗೆ ಈ ವಿಷಯದ ಬಗ್ಗೆ seriousness ಇದೆಯೋ ಅಥವಾ ಇಲ್ಲವೋ ಎನ್ನುವ ರೀತಿಯಲ್ಲಿ ಇವರಿಗೆ ಈ ಒಂದು ಅಕ್ರಮ ಗಣಿಗಾರಿಕೆಯ ಬಗ್ಗೆ seriousness ಇದ್ದು, ಇದರ ಬಗ್ಗೆ serious ಆಗಿ ಕ್ರಮ ತೆಗೆದುಕೊಳ್ಳುತ್ತಾರೆನ್ನುವ ಒಂದು ನಂಬಿಕೆಯನ್ನು ನಾವು ಇಟ್ಟುಕೊಂಡಿದ್ದೇವೆ. ಆದರೆ, ಇದುವರೆವಿಗೂ ಆ ಒಂದು ಕೆಲಸ ಆಗಲಿಲ್ಲವೇಕೆ?

ಎರಡನೆಯದಾಗಿ, ಈ ಸಂಸ್ಥೆ ಚೆನ್ನಾಗಿ ನಡೆಯಬೇಕಾದರೂ ಕೂಡ ಲೋಕಾಯುಕ್ತರ ನೇಮಕವೂ ಆಗಬೇಕಲ್ಲವೇ? ಆ ಕೆಲಸವೂ ಸಹ ಆಗಲಿಲ್ಲ. ಆದ್ದರಿಂದ, ಈ ವಿಷಯವನ್ನು ಸುಧೀರ್ಘವಾಗಿ ಚರ್ಚೆ ಮಾಡಲಿಕ್ಕೆ ಈ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕೆಂದು ನಾವು ಏನು ತಮ್ಮನ್ನು ಕೇಳಿದ್ದೇವೆ, ನಿಯಮ 59 ರಡಿಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಈ ನಿಲುವಳಿ ಸೂಚನೆಯನ್ನು ನಾನು ಸೇರಿದಂತೆ ನಮ್ಮ ಪಕ್ಷದ ಪರವಾಗಿ ಸಾಕಷ್ಟು ಹಿರಿಯ ಸದಸ್ಯರುಗಳಾದ ಶ್ರೀಯುತ ಸುದರ್ಶನ್‌ರವರು, ಶ್ರೀಯುತ ಮತ್ತಿಕಟ್ಟಿ ವೀರಣ್ಣನವರು ಎಲ್ಲರೂ ಸಹಿ ಮಾಡಿ ಕೊಟ್ಟಿದ್ದೇವೆ. ಜೊತೆಗೆ ಇನ್ನುಳಿದ ಸ್ನೇಹಿತ ಸದಸ್ಯರೂ ಸಹ ಇದರ ಬಗ್ಗೆ ಚರ್ಚೆ ಮಾಡುತ್ತಾರೆ. ದಯಮಾಡಿ ಅವಕಾಶವನ್ನು ಮಾಡಿಕೊಡಬೇಕು. ಈ ವರದಿಯ ಪ್ರಮುಖ ವಿಷಯ ಇದೆ, ಅದನ್ನು ಓದಲಿಕ್ಕಾದರೂ ಅವಕಾಶವನ್ನು ಕೊಡುತ್ತೀರಾ? ಇದನ್ನು ಓದುವುದು ತಪ್ಪು ಎಂದರೆ ಹೇಗೆ?

**ಸಭಾಪತಿಯವರು:-** ತಾವು ಓದಿ. ಆದರೆ, ಈ ವಿಚಾರ ನಿಯಮ 59 ರಡಿಯಲ್ಲಿ ಏತಕ್ಕೆ ಚರ್ಚೆಯಾಗಬೇಕೆಂದು ಹೇಳಿ. ಪ್ರಮುಖ ವಿಷಯವನ್ನು ಓದಲಿಕ್ಕೇನೂ ಅಡ್ಡಿಯಿಲ್ಲ.

**ಶ್ರೀಮತಿ ಮೋಟಮ್ಮ:-** ಆ ವರದಿಯಲ್ಲಿನ ವಿಚಾರದ ಬಗ್ಗೆ ಚರ್ಚೆಯಾಗಬೇಕೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. "ಲೋಕಾಯುಕ್ತ ವರದಿಯಲ್ಲಿ 30 ಕೋಟಿ ಗಣಿ ಕಪ್ಪದ ಆರೋಪ ತಂದಿದ್ದಾರೆ. ಹಾಗೆಯೇ ಸುಮಾರು 16,885 ಕೋಟಿ ರೂಪಾಯಿಗಳು ರಾಜ್ಯಕ್ಕೆ ನಷ್ಟವಾಗಿದೆ. ಹಾಗೆಯೇ 30 ಕೋಟಿ ರೂಪಾಯಿಗಳ ಲಂಚವನ್ನು ಪಡೆದಿದ್ದಾರೆ. ಅಕ್ರಮವೆಸಗಿರುವ 9 ಜನ ಗಣ್ಯ ವ್ಯಕ್ತಿಗಳಿದ್ದಾರೆ. ಅಕ್ರಮವೆಸಗಿದ 100 ಗಣಿ ಕಂಪನಿಗಳಿವೆ. ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾದ 787 ಜನ ಅಧಿಕಾರಿಗಳಿದ್ದಾರೆನ್ನುವಂತಹ ಒಂದು ವರದಿಯನ್ನು ಕೊಟ್ಟಿದ್ದಾರೆ." ಈ ರೀತಿಯ ಒಂದು ಶಿಫಾರಸ್ಸು ಏನಿದೆ, ವರದಿಯನ್ನು ಏನು ಕೊಟ್ಟಿದ್ದಾರೆ, ಇವೆಲ್ಲವೂ ಒಂದು ರೀತಿಯಲ್ಲಿ ಕ್ಷಮಿಸಲಾರದ ಅಪರಾಧಗಳಾಗಿವೆ. ರಾಜ್ಯದ ಸಂಪತ್ತನ್ನು ಲೂಟಿ ಹೊಡೆಯುವುದರಲ್ಲಿ ಮಾಡಿದಂತಹ ಕ್ಷಮಿಸಲಾರದಂತಹ

ಅಪರಾಧಿಗಳಾಗಿದ್ದಾರೆ. ಆದ್ದರಿಂದ, ಈ ವಿಚಾರವನ್ನು ಸರ್ಕಾರ ಗಣನೆಗೆ ತೆಗೆದುಕೊಂಡು ಯಾರ್ಯಾರು ಇದರಲ್ಲಿ ಲಂಚವನ್ನು ಪಡೆದಿದ್ದಾರೆ, ಲೂಟಿ ಮಾಡಿದ್ದಾರೆ, ಆಕ್ರಮವಾಗಿ ಅರಣ್ಯ ಸಂಪತ್ತನ್ನು ಕೊಳ್ಳೆ ಹೊಡೆದಿದ್ದಾರೆ, ಅವರ ಬಗ್ಗೆ ಕ್ರಮ ಕೈಗೊಳ್ಳಲು ಮುಂದಾಗಬೇಕು. ಇದುವರೆವಿಗೂ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಇನ್ನು ಮುಂದಾದರೂ ಮುಂದಾಗುತ್ತೀರೋ ಇಲ್ಲವೋ ಎನ್ನುವುದು ನಮ್ಮ ಪ್ರಶ್ನೆಯಾಗಿರುತ್ತದೆ. ಅದನ್ನು ಚರ್ಚೆ ಮಾಡಲಿಕ್ಕೆ ನಮಗೆ ಅವಕಾಶ ಕೊಡಬೇಕೆಂದು ತಮ್ಮನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಈ ಬಗ್ಗೆ ಸ್ವಲ್ಪ ಮಾತನಾಡಬಹುದೇ?

**ಸಭಾಪತಿಯವರು:-** ಇಲ್ಲ. ಅದು Preliminary Submission. ಚರ್ಚೆ ಪ್ರಾರಂಭವಾದ ಮೇಲೆ ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶವಿದೆ. ಕೇವಲ ಸಹಿ ಮಾಡಿದವರು ಮಾತ್ರವಲ್ಲದೆ, ಸದನದ ಯಾವುದೇ ಸದಸ್ಯರೂ ಸಹಿತ ಮಾತನಾಡಬಹುದು. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಮಾತನಾಡಬೇಕು. ಈ ವಿಷಯವಾಗಿ ಪ್ರತಿಪಕ್ಷದ ಸದಸ್ಯರುಗಳು ನಿಯಮ 59 ರಡಿಯಲ್ಲಿ ಚರ್ಚೆ ಮಾಡಲು ಅವಕಾಶವನ್ನು ಕೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಒಪ್ಪುವುದಾದರೆ ನಾನು ಅವರಿಗೆ ಅವಕಾಶವನ್ನು ಕೊಡುತ್ತೇನೆ. ಒಪ್ಪುವುದಿಲ್ಲವೆಂದರೆ, ಏತಕ್ಕೆ ಒಪ್ಪುವುದಿಲ್ಲವೆಂದು ಹೇಳಿದರೆ ನಾನು ತೀರ್ಮಾನವನ್ನು ಹೇಳುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಪ್ರಾಯಶಃ 2-3 ವಿಚಾರಗಳನ್ನು ಶ್ರೀಮತಿ ಮೋಟಮ್ಮನವರು ಪ್ರಸ್ತಾಪ ಮಾಡಿದ್ದಾರೆ. ಇದನ್ನು detail ಆಗಿ ಚರ್ಚೆ ಮಾಡಬೇಕೆಂದು ಹೇಳುವಂತದ್ದನ್ನು ಹೇಳಿದ್ದಾರೆ. ಒಂದನೆಯದಾಗಿ, ಲೋಕಾಯುಕ್ತವನ್ನು ನಿಶಕ್ತಗೊಳಿಸಬೇಕು, ಅಥವಾ ಲೋಕಾಯುಕ್ತದ ವರದಿಯನ್ನು ಅನುಷ್ಠಾನಗೊಳಿಸಬಾರದು ಎಂದು ಹೇಳುವಂತಹ ಯಾವುದೇ

ಒಂದು ಇರಾದೆ ನಮ್ಮ ಸರ್ಕಾರದ ಮುಂದೆ ಇಲ್ಲ. ಈಗಾಗಲೇ ಹಲವಾರು ಭಾಗಗಳಲ್ಲಿ ಅದು ಅನುಷ್ಠಾನವಾಗಿರುವಂತಹ ಸಂಗತಿ ಎಲ್ಲರಿಗೂ ಗೊತ್ತಿದೆ. ಮತ್ತೆ ಮತ್ತೆ ಆ ವಿಚಾರವನ್ನು ನಾನು ಹೇಳುವಂತಹ ಅವಶ್ಯಕತೆ ಇರುವುದಿಲ್ಲ. ಆದರೆ, ಇದರ ಬಗ್ಗೆ ಲೋಕಾಯುಕ್ತ ವರದಿ ಬಂದ ಮೇಲೆ ಒಂದಿಷ್ಟು ವರದಿಗಳ ಬಗ್ಗೆ ನಾವು ನಮ್ಮ ಕಾನೂನು ತಜ್ಞರೊಂದಿಗೆ ವಿಚಾರಗಳನ್ನು ವಿಮರ್ಶೆ ಮಾಡಿ ಅವುಗಳ ಬಗ್ಗೆ clarification ಕೇಳುವಂತಹ ಕೆಲಸ ಕಾರ್ಯಗಳನ್ನು ಮಾಡುವಂತಹ ಒಂದು ಪ್ರಯತ್ನಗಳನ್ನು ನಾವು ಈಗಾಗಲೇ ಮಾಡಿದ್ದೇವೆ.

**Sri V.R. SUDARSHAN:-** Sir, are you allowing the Hon'ble Chief Minister to discuss on the merits of the case now? ತಾವು ತಾಂತ್ರಿಕವಾಗಿ ಹೋಗುತ್ತಿರುವ ಕಾರಣಕ್ಕಾಗಿ merits of the case ಮೇಲೆ ಚರ್ಚೆಗೆ ಅವಕಾಶ ಕೊಡುತ್ತೀರಾ?

(ಗೊಂದಲ)

**Sri D.V. SADANANDA GOWDA:-** I am not going deep into the matter. ನಾನು ಅನುಷ್ಠಾನದ ಬಗ್ಗೆ ಹೇಳುತ್ತಿಲ್ಲ.

(ಗೊಂದಲ)

**ಸಭಾಪತಿಯವರು:–** ಅವರು ಹೇಳುವುದನ್ನೇ ಕೇಳಲಿಕ್ಕೆ ತಯಾರಿಲ್ಲವೆಂದರೆ ಹೇಗೆ? ನೀವು ಕೇಳಲಿಕ್ಕೆ ತಯಾರಿಲ್ಲವೆಂದರೆ ಈ ವಿಷಯವನ್ನು ನಾನು ಇಲ್ಲಿಗೆ ಮುಗಿಸಿಬಿಡುತ್ತೇನೆ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ತಾವು ನನಗೆ address ಮಾಡಿದ್ದಕ್ಕೆ ಮೊಟಮ್ಮನವರು ಹೇಳಿದ್ದಾರೆಂದು ಹೇಳಿದಿರಿ. ಮೋಟಮ್ಮನವರು ಎನ್ನುವುದರ ಜೊತೆಗೆ ವಿರೋಧ ಪಕ್ಷದ ನಾಯಕಿ ಎನ್ನುವುದು ಸಹ ಇದ್ದು ಅದನ್ನು ಸಹ ತಾವು ಹೇಳಬೇಕಲ್ಲವೇ?

**ಶ್ರೀ ಡಿ.ವಿ. ಸದಾನಂದಗೌಡ:–** ಖಂಡಿತವಾಗಿ ಹೇಳುತ್ತೇನೆ. ಅಂತಹ ವಿಚಾರದಲ್ಲಿ ತಪ್ಪಾಗಿದ್ದರೆ ದಯವಿಟ್ಟು ಕ್ಷಮಿಸಿ. ಆ ರೀತಿಯ ಭಾವನೆಗಳು ನಮ್ಮಲ್ಲಿ ಇಲ್ಲ. ಈಗಾಗಲೇ ಇದರ ಪೈಕಿ 2–3 ವಿಚಾರಗಳ ಬಗ್ಗೆ ಲೋಕಾಯುಕ್ತರಿಗೆ refer ಮಾಡಿದ್ದೇವೆ. ನಾವು ಅವರಿಗೆ refer ಮಾಡಿ ಅವರಿಂದ clarification ಕೇಳಿದ್ದೇವೆ. ಈ ವಿಚಾರ ಲೋಕಾಯುಕ್ತರ ಮುಂದೆ ಇರುವ ಕಾರಣ ಈ ಹಂತದಲ್ಲಿ ಇದನ್ನು ಚರ್ಚೆ ಮಾಡುವುದು ಅಷ್ಟು ಸೂಕ್ತವಲ್ಲ.

ದಿನಾಂಕ:19–10–2011ರಂದು Secretary to Government, Commerce & Industries Department, (Mines, SSI & Textiles) ರವರು ಬರದಂತಹ ಪತ್ರವನ್ನು ಓದುತ್ತೇನೆ. It reads thus:-

"Sub: Consideration of the Lokayukta report on mining matters in respect of the political persons namedin the report.

With reference to the above subject, it is to state that in the Cabinet meeting held on 13.10.2011, it was resolved to seek the advice of the Hon'ble Lokayukta on the following points:-

(i) Keeping in view the Constitutional provisions of Article 191 and Article 164, whether the power of the Lokayukta to recommend removal of a public servant includes the power to recommend the removal of a Member of the Council of Ministers?

(ii) If so, what is the length of the removal period and when can such a person be re-appointed as a Minister?

(iii) Whether the power under Section 13 of the Lokayukta Act allows the Lokayukta to exercise such power only in a complaint case or even in relation to reference under Section 7(2a)?

(iv) Whether it was not necessary to follow the principles of natural justice and whether the political persons named in the Report should have been given an apportunity to be heard before the Lokayukta made the recommendations against them?

Further, it was noted by the Cabinet that the latest Lokayukta's report has largely covered mining activities undertaken from the year 2008 onwards. Whereas, the Terms of Reference clearly specifies that the investigation should cover from the year 2000 onwards. In this regard, requested to investigate and report in respect of each of the Terms of Reference earlier made, expeditiously"

ಎಂದು ಹೇಳಿ, we referred the matter back to Lokayukta. The matter is pending before the Lokayukta. We have not received any reply from the Lokayukta Court. So, at this juncture, it is not fair on our part to have a discussion on this matter on the floor of the House.

**ಶ್ರೀಮತಿ ಮೋಟಮ್ಮ:-** ಈಗ ಲೋಕಾಯುಕ್ತರವರೇ ಇಲ್ಲ. ಹೀಗಿರುವಾಗ ಈ ಪ್ರಕರಣವನ್ನು ಲೋಕಾಯುಕ್ತರವರಿಗೆ ರೆಫರ್ ಮಾಡಿ ಕುಳಿತರೆ ಹೇಗೆ? ಲೋಕಾಯುಕ್ತರವರಿಗೆ ರೆಫರ್ ಮಾಡಿದ್ದೇವೆಂದು ಹೇಳಿದರೆ ಇದು ಹೇಗೆ ಇತ್ಯರ್ಥವಾಗುತ್ತದೆ? ಅದಕ್ಕೇ ಲೋಕಾಯುಕ್ತರವರನ್ನು ನೇಮಕ ಮಾಡುತ್ತಿಲ್ಲವೇನೋ ಎಂದು ಅನ್ನಿಸುತ್ತಿದೆ. ಅದಕ್ಕೇ ಲೋಕಾಯುಕ್ತರವರ ನೇಮಕಾತಿಗೆ ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಅನ್ನಿಸುತ್ತಿದೆ.

**ಶ್ರೀ ಡಿ.ವಿ. ಸದಾನಂದ ಗೌಡ:-** ಲೋಕಾಯುಕ್ತರ ನೇಮಕಾತಿಯ ಬಗ್ಗೆ ಮಾನ್ಯ ನಾಣಯ್ಯನವರು ಪ್ರಸ್ತಾಪ ಮಾಡಿದ್ದಾರೆ. ನಾಳೆ ಅದರ ಬಗ್ಗೆ ಮಾತನಾಡುತ್ತೇನೆ. ಇವತ್ತು ಆ ಸಂಸ್ಥೆ ಇದೆ. The matter has been referred back to the Institution and it is pending before Lokayukta. So, the question raised by the Leader of the Opposition cannot be entertained.

**ಶ್ರೀ ಸಿ.ಹೆಚ್. ವಿಜಯಶಂಕರ್:-** ಮಾನ್ಯ ಸಭಾಪತಿಯವರೆ, ಒಂದು ವಿಚಾರವನ್ನು ತಮ್ಮ ಮೂಲಕ ನಾನು ಮಾನ್ಯ ವಿರೋಧ ಪಕ್ಷದ ನಾಯಕಿಯವರ ಗಮನಕ್ಕೆ ತರಬಯಸುತ್ತೇನೆ. ಒಂದು ವಿಚಾರವನ್ನು ತಾವು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಲೋಕಾಯುಕ್ತಕ್ಕೆ ಹೆಚ್ಚಿನ ಶಕ್ತಿಯನ್ನು ಕೊಟ್ಟು ಅದನ್ನು ಬಲಪಡಿಸಿದೆ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು ಮತ್ತು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ನಾವು ಹೆಚ್ಚಿನ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ. ಕೇವಲ ರಾಜ್ಯದಲ್ಲಿ ಮಾತ್ರವಲ್ಲ. ರಾಷ್ಟ್ರ ಮಟ್ಟದಲ್ಲಿ ಈ ಭ್ರಷ್ಟಾಚಾರ ನಿಯಂತ್ರಣಕ್ಕೆ ಈ ಲೋಕಪಾಲ ಸಂಸ್ಥೆ ಕೆಲಸ ಮಾಡಬೇಕೆಂದು ಹೇಳುವುದರಲ್ಲಿ ನಾವು ಮುಂಚೂಣಿಯಲ್ಲಿದ್ದೇವೆ.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೆ, ಮಾನ್ಯ. . . .

**ಸಭಾಪತಿಯವರು:-** ಅವರು ಏನೋ ಹೇಳುತ್ತಿದ್ದಾರೆ ಕೇಳೋಣ.

(ಗೊಂದಲ)

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇಲೆ ಅದೇ ವಿಚಾರದ ಬಗ್ಗೆ ಅವರು ಏನು ಹೇಳುವುದು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಹಲವಾರು ಸದಸ್ಯರುಗಳು ಸಹಿ ಮಾಡಿರತಕ್ಕಂಥ ನಿಲುವಳಿ ಸೂಚನೆಯ ಪ್ರಸ್ತಾವನೆಯನ್ನು ಕೊಟ್ಟಿದ್ದರು. ನಾನು ಅವರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೆ. ಅವರು ತಮ್ಮ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅವರದ್ದೇ ಆದ ಕಾರಣಗಳನ್ನು ನೀಡಿ ಇದನ್ನು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಇದು ಒಂದು ತಾಂತ್ರಿಕ ವಿಷಯ. ಇದು ಚರ್ಚೆ ಮಾಡುವುದಕ್ಕೆ ಬರುತ್ತದೆಯೋ ಇಲ್ಲವೋ ಎಂದು ಹೇಳುವುದೇ ಒಂದು ತಾಂತ್ರಿಕ ವಿಷಯವಾಗುತ್ತದೆ. ಈ ತಾಂತ್ರಿಕ ವಿಷಯದ ಬಗ್ಗೆ ತಕ್ಷಣ ನಿರ್ಣಯವನ್ನು ಹೇಳುವುದು ಸ್ವಲ್ಪ ಕಷ್ಟದ ಕೆಲಸ.

**ಶ್ರೀ ವಿ.ಆರ್. ಸುದರ್ಶನ್:-** ತಾಂತ್ರಿಕ ವಿಷಯವನ್ನು ತೆಗೆದುಕೊಂಡು ಆ ಒಂದು shelter ಅನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳುತ್ತಿದ್ದಾರಲ್ಲ, ಆ ರೀತಿ shelter ಅನ್ನು ತೆಗೆದುಕೊಳ್ಳಬಾರದು. ಈ ರಾಜ್ಯದ ಜನರಿಗೆ ಈ ವಿಷಯದ ಬಗ್ಗೆ ಅನೇಕ ಮಾಹಿತಿಗಳನ್ನು ಒದಗಿಸಿಕೊಡಬೇಕಾದ ಜವಾಬ್ದಾರಿಯುತವಾದ ಸ್ಥಾನದಲ್ಲಿ ಅವರು ಇದ್ದಾರೆ. ಈ ರೀತಿಯಾದ ಷೆಲ್ಟರ್ ತೆಗೆದುಕೊಳ್ಳುವಂತಹ ಸರ್ಕಾರ ಇದೆಯಲ್ಲ ಇದು ಸರಿಯಲ್ಲ. ಇದರಿಂದ ನಿಜವಾಗಲೂ ಸಾರ್ವಜನಿಕ ಮಹತ್ವವನ್ನು ಸರ್ಕಾರ ಎಷ್ಟರಮಟ್ಟಿಗೆ ಪರಿಗಣಿಸುತ್ತದೆ ಎಂದು ಅರ್ಥವಾಗುತ್ತದೆ.

**ಸಭಾಪತಿಯವರು:-** ಈ ವಿಷಯ ಇಲ್ಲಿ ಚರ್ಚೆಗೆ ಬಂದಿರುವ ಹಿನ್ನೆಲೆಯಲ್ಲಿ ಮತ್ತೊಂದು ಗಂಭೀರವಾದ ಸಂಗತಿ ಇದೆ. ಇಂತಹ ಒಂದು ವಿಷಯವನ್ನು ನಿಯಮ 59 ರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೋರಿ ಪತ್ರವನ್ನು ಕೊಟ್ಟಿದ್ದೀರಿ. ಇದು ನನ್ನ ಮನಸ್ಸಿನಲ್ಲಿ ಚುಚ್ಚುತ್ತಿದೆ. ನಿಲುವಳಿ ಸೂಚನೆಯು ಇತ್ತೀಚೆಗಷ್ಟೇ ನಡೆದ ವಿಷಯಕ್ಕಷ್ಟೇ ಸೀಮಿತವಾಗಿರಬೇಕೆಂದು ಇದೆ. ಈ ಲೋಕಾಯುಕ್ತ ವರದಿ ಬಂದು ಬಹಳ ತಿಂಗಳುಗಳೇ ಆಗಿದೆ. ಆ

ವರದಿ ಬಂದ ನಂತರ ಸದನ ನಡೆದಿದೆ ಮತ್ತು ಇದರ ಬಗ್ಗೆ ಚರ್ಚೆ ಆಗಿದೆ. ಅದು ಇತ್ತೀಚೆಗೆ ಅಷ್ಟೇ ಆಗಿರುವುದಿಲ್ಲ. ಇದು ಸಾರ್ವಜನಿಕ ಮಹತ್ವದ ವಿಚಾರ ಅಲ್ಲವೇ ಎಂದು ಕೇಳಿದರೆ, ಹೌದು, ಅದನ್ನು ನಾನು ಇಲ್ಲವೆಂದು ಹೇಳುವುದಕ್ಕೆ ಬರುವುದೇ ಇಲ್ಲ. ಇದು ಸಾರ್ವಜನಿಕ ಮಹತ್ವದ ವಿಚಾರವಾಗಿದೆ. ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಬೇರೆ ರೀತಿಯಲ್ಲಿ ನೋಟೀಸ್ ಅನ್ನು ಕೊಟ್ಟರೆ ಖಂಡಿತವಾಗಿಯೂ ನಾನು ಇದನ್ನು consider ಮಾಡುತ್ತೇನೆ. ಒಂದು ತಾಂತ್ರಿಕವಾದ ಸಂಗತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇನ್ನೊಂದು ಈ ಸದನದ ನಿಯಮಾವಳಿಯ ಪುಸ್ತಕದಲ್ಲಿ ಸ್ಪಷ್ಟವಾಗಿರತಕ್ಕಂಥಾದ್ದನ್ನು ನಾನು ಆಗಿನಿಂದ ಗಮನಿಸುತ್ತಿದ್ದೇನೆ. ನಾನು ನಮ್ಮ ಅಧಿಕಾರಿಗಳಿಂದ ಅದನ್ನು ತೆಗೆಸಿ ನೋಡಿದ್ದೇನೆ. ಈ ಎರಡೂ ಅಂಶಗಳ ಹಿನ್ನೆಲೆಯಲ್ಲಿ ಈ ನಿಲುವಳಿ ಸೂಚನೆಯನ್ನು ನಾನು ಒಪ್ಪಿಲ್ಲ. ಬೇರೆ ಯಾವುದಾದರೂ ರೂಪದಲ್ಲಿ ತಾವುಗಳು ನೋಟೀಸ್ ಅನ್ನು ಕೊಟ್ಟರೆ ಆಗ ಅದರ ಬಗ್ಗೆ ಚರ್ಚೆ ಮಾಡೋಣ. ಮಾನ್ಯ ಶಿಕ್ಷಣ ಸಚಿವರು ಒಂದು ಹೇಳಿಕೆಯನ್ನು ಮಾಡುತ್ತೇನೆಂದು ನನಗೆ ಒಂದು ಮನವಿಯನ್ನು ಕಳುಹಿಸಿ ಕೊಟ್ಟಿದ್ದಾರೆ.

**ಶ್ರೀಮತಿ ಮೋಟಮ್ಮ:-** ಇದನ್ನು ಬಹಳ ಜಾಣತನದಿಂದ ನಿರ್ವಹಣೆ ಮಾಡಿದ ಹಾಗಾಯಿತು.

**ಶ್ರೀ ಎಸ್.ಆರ್. ಪಾಟೀಲ್:-** ನೋಟೀಸ್ ಕೊಡದೇ ಇಲ್ಲಿ ಚರ್ಚೆ . . . .

**ಸಭಾಪತಿಯವರು:-** ಇನ್ನೊಂದು ನೋಟೀಸ್ ಅನ್ನು ಕೊಡಿ. ಮಾಡೋಣ.

**ಶ್ರೀಮತಿ ಮೋಟಮ್ಮ:-** ಲೋಕಾಯುಕ್ತರು ಇಲ್ಲದೇ ಇರುವಂತಹ ಜಾಗದಲ್ಲಿ ಈ ವರದಿಯನ್ನು ಕಳುಹಿಸಿ ಪರಿಶೀಲನೆ ಮಾಡಿಸುತ್ತೇನೆಂದು ಹೇಳಿದರೆ ಏನು ಅರ್ಥ ಇದೆ?

**ಸಭಾಪತಿಯವರು:–** ನಿಲುವಳಿ ಸೂಚನೆ ಮೂಲಕ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಇದನ್ನು ಬೇರೆ ರೂಪದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ. ಯಾವ ನಿಯಮದಲ್ಲಿ ಪ್ರಸ್ತಾಪಿಸಬೇಕು ಹೇಗೆ ಎತ್ತಬೇಕು ಎನ್ನುವುದನ್ನು ನಾನು ಹೇಳಿ ಕೊಡುವುದಕ್ಕೆ ಬರುವುದಿಲ್ಲ. ಇನ್ನೊಂದು ನೋಟೀಸ್ ಅನ್ನು ಕಳುಹಿಸಿ ಕೊಡಿ. ನಿಲುವಳಿ ಸೂಚನೆಯ ಅಡಿಯಲ್ಲಿ ಅವಕಾಶ ಕೊಡುವುದಿಲ್ಲ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಈ ವರದಿ ಇನ್ನೂ ಜೀವಂತವಾಗಿ ಇದೆ. ಸಾರ್ವಜನಿಕವಾಗಿ ಇದು ಮಹತ್ತರ ಇಲ್ಲವೆಂದು ಹೇಳುತ್ತೀರಿ. ಇದಕ್ಕೆ ಏನು ಅರ್ಥ?

(ಗೊಂದಲ)

**(ಕಾಂಗ್ರೆಸ್ ಪಕ್ಷದ ಹಲವಾರು ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಾ ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಸಭಾಪತಿಯವರು:–** ಸದಸ್ಯರುಗಳು ಸದನದ ಬಾವಿಗೆ ಬಂದು ಈ ರೀತಿ ಕೂಗುವುದು ಸರಿಯಲ್ಲ. ಈ ರೀತಿ ಕೂಗಿದ್ದು ಯಾವುದೂ ದಾಖಲೆಗೆ ಹೋಗುವುದಿಲ್ಲ. ನಾನು ಮಾಧ್ಯಮದ ಮಿತ್ರರನ್ನೂ ಕೂಡ ಕೇಳಿಕೊಳ್ಳುತ್ತೇನೆ. ಬಾವಿಯಲ್ಲಿ ನಿಂತು, ಕುಳಿತು ಮಾತನಾಡಿದ್ದು ಯಾವುದೂ ದಾಖಲೆಗೆ ಹೋಗುವುದಿಲ್ಲ. ದಯಮಾಡಿ ಅದನ್ನು ವರದಿ ಮಾಡಬೇಡಿ. ಇದು ಬಹಳ ಗಂಭೀರವಾದ ವಿಚಾರವಾಗಿದೆ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ (ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಹಿಂತಿರುಗಿ ಮಾತನಾಡುತ್ತಿದ್ದರು):–** ಈ ಒಂದು ಗಂಭೀರವಾದ ವಿಚಾರದ ಬಗ್ಗೆ ತಾಂತ್ರಿಕ ಅಂಶದ ಆಧಾರದ ಮೇಲೆ ಈ ಕುರಿತು ಚರ್ಚೆ ಆಗದ ರೀತಿಯಲ್ಲಿ ಮಾಡುವುದು ಬಹಳ ತಪ್ಪು. ತಮ್ಮ ಮೂಲಕ ನಾನು ಮಾನ್ಯ

ಮುಖ್ಯಮಂತ್ರಿಗಳವರಲ್ಲಿ ಇನ್ನೊಮ್ಮೆ ವಿನಂತಿ ಮಾಡುತ್ತೇನೆ. ರಾಜ್ಯದ ಜನರ ಹಿತದೃಷ್ಟಿಯಿಂದ ಈ ರಾಜ್ಯದ ಸಂಪತ್ತನ್ನು ಕೊಳ್ಳೆ ಹೊಡೆದವರಿಗೆ ಶಿಕ್ಷೆ ಕೊಡುವ ದೃಷ್ಟಿಯಿಂದ ನ್ಯಾಯಮೂರ್ತಿ ಸಂತೋಷ್ ಹೆಗಡೆಯವರು ಎರಡು ವರ್ಷಗಳ ಕಾಲ ಅತ್ಯಂತ ಪರಿಶ್ರಮವನ್ನು ವಹಿಸಿ ಈ ವರದಿಯನ್ನು ಸಲ್ಲಿಸಿರುತ್ತಾರೆ. ಅಲ್ಲಿರತಕ್ಕಂಥ ಅಧಿಕಾರಿಗಳು integrity ಯಿಂದ ಕೆಲಸ ಮಾಡಿ ಕೊಟ್ಟಂತಹ ಈ ವರದಿಗೆ ಈ ಒಂದು ಗತಿ ಆಗುವುದು ಸರಿಯಲ್ಲ. ಇದರಿಂದಾಗಿ ರಾಜ್ಯದ ಜನತೆಗೆ ಯಾವ ಒಂದು ಸಂದೇಶ ಹೋಗುತ್ತದೆ ಎಂಬುದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಅದಕ್ಕಾಗಿ ತಾಂತ್ರಿಕ ವಿಷಯವನ್ನು ಬಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಮರುಚಿಂತನೆಯನ್ನು ಮಾಡಬೇಕು ಮತ್ತು ತಾವು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:-** ನಿಯಮ 59 ರ ಅಡಿಯಲ್ಲಿ ಇದರ ಬಗ್ಗೆ ಚರ್ಚೆಗೆ ಅವಕಾಶವಿಲ್ಲ ಎನ್ನುವ ತೀರ್ಮಾನವನ್ನು ನಾನು ಹೇಳಿದ್ದೇನೆ. ಬೇರೆ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೋರಿ ನೋಟೀಸ್ ಅನ್ನು ಕೊಟ್ಟರೆ ಖಂಡಿತವಾಗಿ ಅದನ್ನು ಪರಿಗಣಿಸುತ್ತೇನೆ. ಅದರ ಬಗ್ಗೆ ನೋಡೋಣ. ಆದರೆ ನಿಯಮ 59ರ ಅಡಿಯಲ್ಲಿ ಈ ನಿಲುವಳಿ ಸೂಚನೆಯನ್ನು ನಾನು ಒಪ್ಪಿಕೊಳ್ಳುವುದಕ್ಕೆ ಬರುವುದಿಲ್ಲ.

**ಶ್ರೀಮತಿ ಮೋಟಮ್ಮ:-** ತಾವೇ ಅದನ್ನು convert ಮಾಡಬಹುದು.

**ಸಭಾಪತಿಯವರು:-** ನಾನು convert ಮಾಡುವುದಕ್ಕೆ ಬರುವುದಿಲ್ಲ. ನೀವು ನೋಟೀಸ್ ಅನ್ನು ಕೊಡಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ತಾವು ಹೇಳಿದ ಮಾತಿಗೆ ನಾವು ಗೌರವವನ್ನು ಸೂಚಿಸುತ್ತೇವೆ. ಅದು ನಮ್ಮ ಕರ್ತವ್ಯವೂ ಹೌದು. ಅದನ್ನು ತಾವೇ convert ಮಾಡಬಹುದಲ್ಲವೇ?

(ಗೊಂದಲ)

**ಸಭಾಪತಿಯವರು:–** ಸರ್ಕಾರ ಏನು ಹೇಳುತ್ತದೆ ಕೇಳೋಣ ತಡೆಯಿರಿ. ಸಚಿವರೊಬ್ಬರು ಏನೋ ಮಾತನಾಡಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಅವರ ಸ್ಥಾನದಲ್ಲಿ ನಿಂತು ಮಾತನಾಡುತ್ತಿದ್ದಾರೆ. ಅವರು ಮಾತನಾಡಲಿ ಆದರೆ ಬಾವಿಯಲ್ಲಿ ಇರುವವರು ಮಾತನಾಡಿದರೆ ದಾಖಲೆಗೆ ಹೋಗುವುದಿಲ್ಲ. ನಮ್ಮಲ್ಲಿ ಒಂದು ಪದ್ಧತಿ ಇದೆ. ಎಲ್ಲಾ ರಂಗದಲ್ಲಿ ಕೆಲಸ ಮಾಡಿರುವವರು ಇಲ್ಲಿ ಇದ್ದಾರೆ. ಬಾವಿಯಲ್ಲಿ ಇರುವವರು ಮಾತನಾಡಲೇಬೇಕೆಂದು ಇದ್ದರೆ ಅವರು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಬೇಕು. ಆಗ ದಾಖಲೆಗೆ ಹೋಗುತ್ತದೆ. ಬಾವಿಯಲ್ಲಿ ನಿಲ್ಲುವುದು ಒಂದು ಪ್ರಜಾತಾಂತ್ರಿಕ ಹಕ್ಕು, ಪ್ರತಿಭಟನೆ, ಅದನ್ನು ನಾನು ಒಪ್ಪುತ್ತೇನೆ. ತಾವುಗಳು ಮಾತನಾಡಬೇಕಾದರೆ ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ. ಮಾನ್ಯ ಕಾಗೇರಿಯವರು ಏನೋ ಹೇಳಬೇಕೆಂದಿದ್ದಾರೆ ಕೇಳೋಣ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ತಾವು ಇಷ್ಟೊಂದು ಸಮಯಾವಕಾಶವನ್ನು ಕೊಟ್ಟಿದ್ದೀರಿ. ವಿರೋಧ ಪಕ್ಷದವರ ಮತ್ತು ಆಡಳಿತ ಪಕ್ಷದವರ ಹಾಗೂ ಮಾನ್ಯ ಮುಖ್ಯಮಂತ್ರಿಯವರ, ಎಲ್ಲರ ಮಾತನ್ನೂ ಆಲಿಸಿ ಅಂತಿಮವಾಗಿ ಕಾನೂನು ಪ್ರಕಾರವಾಗಿ ಈ ವಿಚಾರದ ಬಗ್ಗೆ ನಿಯಮ 59ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಸ್ಪಷ್ಟಗೊಳಿಸಿದ್ದೀರಿ. ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೋರಿ ನೋಟೀಸ್ ಅನ್ನು ಕೊಡಿ, ಅವಕಾಶವನ್ನು ಕೊಡುವ ಬಗ್ಗೆ ಯೋಚಿಸುತ್ತೇನೆ ಎಂದು ಬಹಳ ಸ್ಪಷ್ಟವಾಗಿ ನಿರ್ಣಯವನ್ನು ತೆಗೆದುಕೊಂಡಿದ್ದೀರಿ ಅದಕ್ಕಾಗಿ ನಾನು ತಮ್ಮನ್ನು ಅಭಿನಂಧಿಸುತ್ತೇನೆ. ವಿರೋಧ ಪಕ್ಷದವರು ಈ ವಿಷಯವನ್ನು ರಾಜಕೀಯ ಅಸ್ತ್ರವನ್ನಾಗಿ ಬಳಕೆ ಮಾಡಿಕೊಳ್ಳುವುದಕ್ಕೆ ಬಳಸಬಾರದು. ನೀವು ಸದನದ ಬಾವಿಯಲ್ಲಿ ಧರಣಿಗೆ ಬಂದಿರುವುದು ಅದೇ ಉದ್ದೇಶದಿಂದ. ಇನ್ನು ಯಾವ ಉದ್ದೇಶದಿಂದ ಬಂದಿದ್ದೀರಿ? ಬೇರೆ ರೀತಿಯಲ್ಲಿ ನೋಟೀಸ್ ಅನ್ನು ಕೊಡಿ ನಾವು ಚರ್ಚೆ ಮಾಡೋಣ. ನಾವು ಕೂಡ ತಯಾರಿದ್ದೇವೆ. ಚರ್ಚೆ ಮಾಡೋಣ.

(ಸದನದ ಬಾವಿಯಲ್ಲಿದ್ದ ಹಲವಾರು ಸದಸ್ಯರು ಮಾತನಾಡತೊಡಗಿದರು)

(ಗೊಂದಲ)

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ:–** ತಮ್ಮ ರೂಲಿಂಗ್ ವಿರುದ್ಧವಾಗಿ ಅವರು ಧರಣಿ ಮಾಡುತ್ತಿದ್ದಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇಲೂ ಸಹ ಈ ರೀತಿ ಧರಣಿ ಮಾಡುತ್ತಿರುವುದರ ಹಿಂದೆ ಏನು ಉದ್ದೇಶ ಇದೆ?

(ಗೊಂದಲ)

**ಸಭಾಪತಿಯವರು:–** ಸದನದ ಬಾವಿಯಲ್ಲಿ ನಿಂತು ದಯವಿಟ್ಟು ಮಾತನಾಡಬೇಡಿ. **ಅಕಸ್ಮಾತ್ ಅವರು ಮಾತನಾಡಿದರೆ ಅದು ಕಡತಕ್ಕೆ ಹೋಗಬಾರದು. ಮಾನ್ಯ ವರದಿಗಾರರು ಅದನ್ನು ವರದಿ ಮಾಡಬಾರದೆಂದು ವರದಿಗಾರರಲ್ಲಿ ವಿನಂತಿ ಮಾಡುತ್ತೇನೆ.** ಯಾರಾದರೂ ಮಾತನಾಡುವವರಿದ್ದರೆ ಅವರು ಅವರ ಸ್ಥಾನಕ್ಕೆ ಹೋಗಿ ಮಾತನಾಡಬೇಕೆಂದು ವಿನಂತಿಸುತ್ತೇನೆ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಮಾತನಾಡಲಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ವಿಷಯದ ಗಂಭೀರತೆಯನ್ನು, ಮುಖ್ಯತೆಯನ್ನು ಅನುಸರಿಸಿ ಮಾನ್ಯ ಸಭಾಪತಿಗಳೇ ಇದನ್ನು convert ಮಾಡಿ ಈ ಚರ್ಚೆಗೆ ಒಂದು ಸಮಯವನ್ನು ನಿಗದಿ ಮಾಡಿ ಚರ್ಚೆಗೆ ಅವಕಾಶವನ್ನು ಮಾಡಿಕೊಡಬಹುದು. ಅಷ್ಟನ್ನು ಮಾಡಿದರೆ ಒಳ್ಳೆಯದು. ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಂಡಿದ್ದೇನೆ.

(2.00 ಗಂಟೆ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ, ನಮಗೆ ಇದರಲ್ಲಿ ರಾಜಕೀಯ ಮಾಡುವಂತಹ ಅವಶ್ಯಕತೆ ಇಲ್ಲ. ನಮಗೆ ಈ ರಾಜ್ಯದ ಸಂಪತ್ತನ್ನು ರಕ್ಷಿಸಬೇಕಾದಂತಹ ಅವಶ್ಯಕತೆ ಇದೆ.

(ಗೊಂದಲ)

ಇದರಲ್ಲಿ ಯಾರೇ ಇರಲಿ, ನಾವು ಪಕ್ಷಾತೀತವಾಗಿ ಹೇಳುತ್ತೇವೆ. ಈ ರಾಜ್ಯದ ಸಂಪತ್ತನ್ನು ಲೂಟಿ ಮಾಡಿದರು ಯಾರೇ ಇರಲಿ ಅವರ ಮೇಲೆ ಕ್ರಮವನ್ನು ಕೈಗೊಳ್ಳಿ. ಅದರ ಚಿಂತನೆಯಾಗಲಿ, ಅದರ ಮೇಲೆ ಚರ್ಚೆಯಾಗಲಿ. ಮಾನ್ಯ ವಿಶ್ವೇಶ್ವರ ಹೆಗ್ಗಡೆ ಕಾಗೇರಿಯವರೆ, ನೀವು ತತ್ವ ನಿಷ್ಟ ರಾಜಕಾರಣಿ ಎಂದು ತಿಳಿದುಕೊಂಡಿದ್ದೇವು. ಈ ಸಣ್ಣ ವಿಷಯದ ಬಗ್ಗೆ ರಾಜ್ಯ ಭಕ್ತಿ ಮತ್ತು ರಾಷ್ಟ್ರ ಭಕ್ತಿಗೆ ಹೆಸರಾದ ವಿಶ್ವೇಶ್ವರ ಹೆಗ್ಗಡೆ ಕಾಗೇರಿಯವರು ಸಹಿತ ಈ ರಾಜ್ಯದ ಸಂಪತ್ತು ಲೂಟಿ ಬಗ್ಗೆ ರಾಜಕೀಯ ಎಂದು ಮಾತನಾಡಿದರೆ ಹೇಗೆ?

(ಗೊಂದಲ)

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೆ, ನಮ್ಮ ಕಡೆ ಕೋತಿ ಮೊಸರನ್ನವನ್ನು ತಿಂದು ಮೇಕೆ ಬಾಯಿಗೆ ಒರೆಸಿತು ಎನ್ನುವಂತಹ ಗಾದೆ ಮಾತಿದೆ. ಇದೂ ಕೂಡ ಅದೇ ರೀತಿಯಾಗಿದೆ. ಈ ಕೆಲಸವನ್ನು ಅವರು ಮಾಡುತ್ತಿದ್ದಾರೆ. ನಮಗೆ ಚರ್ಚೆ ಬೇಡ, ಬೇರೆ ನಿಯಮದಲ್ಲಿ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ತಾವು ಹೇಳುತ್ತಿದ್ದರೂ ವಿರೋಧ ಪಕ್ಷದವರು ಕೇಳುತ್ತಲೇ ಇಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ನಾವು ನಿಮಗೆ ನಿಯಮ 59ರ ಅಡಿಯಲ್ಲಿ ಚರ್ಚೆ ಬೇಡವೆಂದು ನಾವು ಹೇಳುತ್ತಿಲ್ಲ. ನೀವೇ ಬೇರೆ ನಿಯಮಕ್ಕೆ ಬದಲಾಯಿಸಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ ಎಂದು ವಿನಂತಿಯನ್ನು ಮಾಡುತ್ತಿದ್ದೇವೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಹಿಂದೆ ಹಲವಾರು ಸಂದರ್ಭಗಳಲ್ಲಿ ನಿಲುವಳಿ ಸೂಚನೆಯನ್ನು ಬೇರೆ ನಿಯಮಗಳಿಗೆ ಕನ್ವರ್ಟ್ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿರುವಂತಹ ಉದಾಹರಣೆಗಳು ಬೇಕಾದಷ್ಟು ಇವೆ. ದಯಮಾಡಿ ಇದನ್ನು ಬೇರೆ ನಿಯಮಕ್ಕೆ ನೀವೇ ಕನ್ವರ್ಟ್ ಮಾಡಿ. ಹಿಂದೆ ಸಭಾಪತಿಯವರಾಗಿ ಕಾರ್ಯನಿರ್ವಹಿಸುವಂಥವರು ಇದ್ದಾರೆ. ಅವರುಗಳು

ಕೂಡ ಹಲವಾರು ಸಂದರ್ಭಗಳಲ್ಲಿ ಕನ್ವರ್ಟ್ ಮಾಡಿರುವಂತಹ ಉದಾಹರಣೆಗಳಿವೆ. ಇದು ಸಾರ್ವಜನಿಕ ಮಹತ್ವದ ವಿಷಯವಾಗಿದೆ.

**ಸಭಾಪತಿಯವರು:–** ಒಂದು ವಿಷಯ ಸ್ಪಷ್ಟವಾಗಲಿ. ನಾನು ಚರ್ಚೆ ಬೇಡವೆಂದು ಎಲ್ಲಿಯೂ ಕೂಡ ಹೇಳಿಲ್ಲ. ಇದು ಸಾರ್ವಜನಿಕ ಮಹತ್ವದ ವಿಷಯವಲ್ಲವೆಂದು ಕೂಡ ಎಲ್ಲಿಯೂ ಹೇಳಿಲ್ಲ. ಸಾರ್ವಜನಿಕ ಮಹತ್ವವಾಗಿರತಕ್ಕಂತಹ ಸಂಗತಿಯನ್ನು ವಿರೋಧ ಪಕ್ಷದ ನಾಯಕರು ಮತ್ತು ಹಲವಾರು ಸದಸ್ಯರುಗಳು ನಿಯಮ 59ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ನನಗೆ ನೋಟೀಸ್ ಕೊಟ್ಟಿದ್ದಾರೆ. ನಿಯಮ 59ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ತಾಂತ್ರಿಕವಾಗಿ ಏಕೆ ಬರುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನನ್ನ ಮುಂದೆ ಇರುವಂತಹ ನಾವೇ ಮಾಡಿಕೊಂಡಿರುವಂತಹ ನಿಯಮಾವಳಿಗಳ ಪ್ರಕಾರ ನಿಯಮ 59ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದೇನೆ. ಜೊತೆಗೆ ಈ ವಿಷಯವು ಸಾರ್ವಜನಿಕ ಮಹತ್ವವಾಗಿರುವುದರಿಂದ ನೀವು ಬೇರೆ ನಿಯಮದ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ನೋಟೀಸ್ ಕೊಟ್ಟರೆ ನಾನು ಖಂಡಿತವಾಗಿ ಅದನ್ನು ಕನ್ಸಿಡರ್ ಮಾಡುತ್ತೇನೆಂದು ಹೇಳಿದ್ದೇನೆ. ಈಗ ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ವೀರಣ್ಣ ಮತ್ತಿಕಟ್ಟಿಯವರು ಏನು ಹೇಳುತ್ತಿದ್ದಾರೆಂದರೆ ಹಿಂದೆ ಕೆಲವು ಬಾರಿ ಈ ರೀತಿಯ ಸಂಗತಿಗಳು ಬಂದಾಗ ಸಭಾಪತಿಯವರೇ ಅದನ್ನು ಬೇರೆ ನಿಯಮಕ್ಕೆ ಬದಲಾವಣೆ ಮಾಡಿರುವಂತಹ ಉದಾಹರಣೆಗಳುಂಟು ಅದನ್ನು ನೋಡಿ ಎಂದು ಹೇಳುತ್ತಿದ್ದಾರೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ಉತ್ತರವನ್ನು ಕೊಡುವುದಕ್ಕೆ ನಾವು ತಯಾರಿದ್ದೇವೆಂದು ಹೇಳಿದಾಗ ನಾನು ಅವರನ್ನು allow ಮಾಡುವುದಿಲ್ಲ. ವಿರೋಧ ಪಕ್ಷದ ನಾಯಕರು ತಾವು ತಮ್ಮ ಕರ್ತವ್ಯವನ್ನು ನಿರ್ವಹಿಸಿ. ಬೇರೆ ನಿಯಮದಡಿಯಲ್ಲಿ ನೋಟೀಸ್ ಕೊಡಿ, ಖಂಡಿತವಾಗಿ ನಾನು ಮುಖ್ಯಮಂತ್ರಿಗಳ ಹತ್ತಿರ ಮಾತನಾಡುತ್ತೇನೆ.

**ಶ್ರೀ ವಿಶ್ವೇಶ್ವರಯ್ಯ ಹೆಗ್ಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ತಾವು ಅತ್ಯಂತ ಸೂಕ್ತವಾದಂತಹ ಮಾತುಗಳನ್ನು ಆ ಪೀಠದಿಂದ ನಿರ್ಣಯದ ರೂಪದಲ್ಲಿ ಹೇಳಿದ್ದೀರಿ. ಆದರೆ ವಿರೋಧ ಪಕ್ಷದವರು ಬೇರೆ ನಿಯಮಾವಳಿಗಳನ್ನು ಹುಡುಕಿಕೊಳ್ಳುವುದಕ್ಕೆ ಆಗದೇ ಇರುವಷ್ಟು ದುರ್ಬಲರಾಗಿದ್ದಾರೆಂದು ನನಗೇನು ಅನಿಸುವುದಿಲ್ಲ. ಹಾಗಾಗಿ ದಯವಿಟ್ಟು ವಿರೋಧ ಪಕ್ಷದವರು ಬೇರೆ ನಿಯಮಾವಳಿಗಳನ್ನು ಹುಡುಕಿಕೊಳ್ಳಿ. ಬೇರೆ ನಿಯಮಾವಳಿಯನ್ನು ಹುಡುಕಿಕೊಂಡು ಮಾನ್ಯ ಸಭಾಪತಿಯವರಿಗೆ ಚರ್ಚೆ ಮಾಡಲು ನೋಟೀಸ್ ಕೊಡಿ. ನಿಯಮಾವಳಿಯ ಪುಸ್ತಕ ವಿರೋಧ ಪಕ್ಷದವರ ಹತ್ತಿರ ಕೂಡ ಇದೆ. ವಿರೋಧ ಪಕ್ಷದಲ್ಲಿ ಸಭಾಪತಿಗಳಾಗಿ ಕೆಲಸವನ್ನು ನಿರ್ವಹಿಸಿರುವಂತಹ ಹಿರಿಯರುಗಳಿದ್ದಾರೆ. ಹಾಗಾಗಿ ನಿಮಗೆ ಬೇರೆ ನಿಯಮದಡಿಯಲ್ಲಿ ಒಂದು ನೋಟೀಸ್ ಕೊಡುವುದಕ್ಕೆ ಏನು ತೊಂದರೆ ಇದೆ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಏನು ತೊಂದರೆ ಇದೆ ಎನ್ನುವುದನ್ನು ಹೇಳುತ್ತೇನೆ.

**ಸಭಾಪತಿಯವರು:–** ದಯಮಾಡಿ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು. ಒಳ್ಳೆಯ ರೀತಿಯಲ್ಲಿ ಸದನವನ್ನು ನಡೆಸೋಣ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ನೀವು ಹೇಳಿದ್ದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಬಿಡುವುದೇ ಇಲ್ಲ.

**ಶ್ರೀ ಡಿ.ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ತಾವು ಈಗಾಗಲೇ ಬೇರೆ ನಿಯಮಾವಳಿ ಅಡಿಯಲ್ಲಿ ವಿಷಯವನ್ನು ಚರ್ಚೆ ಮಾಡಲು ನೋಟೀಸ್ ಕೊಡಿ ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ಆದೇಶದ ಮುಖಾಂತರ ಹೇಳಿದ್ದೀರಿ. ಸಭಾಪತಿಯವರ ಆದೇಶಗಳಿಗೆ ಗೌರವವನ್ನು ಕೊಡೋಣ.

ವಿರೋಧ ಪಕ್ಷದವರು ಬೇರೆ ನಿಯಮದ ಅಡಿಯಲ್ಲಿ ನೋಟೀಸ್ ಕೊಡಿ ಚರ್ಚೆಯಾಗಲಿ ಸರ್ಕಾರ ಉತ್ತರವನ್ನು ಕೊಡುವುದಕ್ಕೆ ತಯಾರಿದೆ.

(ಗೊಂದಲ)

**ಸಭಾಪತಿಯವರು:–** ಸಭಾಪತಿಯವರು ಏನು ಮಾಡಬೇಕು ಎನ್ನುವುದನ್ನು ಸಭಾಪತಿಯವರಿಗೆ ಬಿಡಿ. ತಮ್ಮ ಬೇಡಿಕೆಗಳನ್ನು, ತಮ್ಮ ಒತ್ತಾಯವನ್ನು ಅಥವಾ ತಮ್ಮ ಅಭಿಪ್ರಾಯವನ್ನು ನನ್ನ ಮುಂದಿಟ್ಟಿದ್ದೀರಿ. ಹಿಂದಿನ ಸಭಾಪತಿಗಳವರು ಅವರೆ ನಿಯಮಾವಳಿಯನ್ನು ಬದಲಾವಣೆ ಮಾಡಿ ಚರ್ಚೆಗೆ ಅವಕಾಶ ಕೊಟ್ಟಿದ್ದಾರೆ, ಕೆಲವು ಸಾರಿ ಬೇಡವೆಂದು ಹೇಳಿದ್ದಾರೆ, ತಿರಸ್ಕಾರವನ್ನು ಮಾಡಿದ್ದಾರೆ, ಅಲೋ ಮಾಡಿದ್ದಾರೆ ಎಲ್ಲಾ ರೀತಿಯಲ್ಲಿಯೂ ಕೂಡ ಮಾಡಿದ್ದಾರೆ. ಈ ಸಂಗತಿಯೊಳಗೆ ನಾನು ಈ ಪೀಠದಲ್ಲಿ ಕುಳಿತುಕೊಂಡು ಸ್ಪಷ್ಟವಾಗಿ ಹೇಳಿದ್ದೇನೆ. ಈ ವಿಷಯವನ್ನು ನಿಯಮ 59ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ, ಆದ್ದರಿಂದ ಬೇರೆ ನಿಯಮಾವಳಿಯಡಿಯಲ್ಲಿ ನೋಟೀಸ್ ಕೊಡುವುದಿದ್ದರೆ ಕೊಡಿ ಖಂಡಿತವಾಗಿ ವಿಷಯದ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಯೋಚನೆ ಮಾಡೋಣ. ದಯಮಾಡಿ ಧರಣಿಯಲ್ಲಿರುವ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕು. ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ. ಮುಂದಿನ ಕಾರ್ಯಕಲಾಪಕ್ಕೆ ಹೋಗೋಣ. ಮಾನ್ಯ ಸದಸ್ಯರಾದ ಶ್ರೀ ದೊಡ್ಡರಂಗೇಗೌಡರು ಮಾತನಾಡುವುದಕ್ಕೆ ಸುಮಾರು ಹೊತ್ತಿನಿಂದ ಕೇಳುತ್ತಿದ್ದಾರೆ ಅವರು ಒಂದು ಚುಟುಕವನ್ನು ಓದುತ್ತಾರೆ ಕೇಳೋಣ.

**ಡಾ॥ ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಯವರೆ,

"ಕೂಗಾಡುವುದರಿಂದ ರೇಗಾಡುವುದರಿಂದ ಸತ್ಯ ಮುಚ್ಚಿ ಹೋಗದು.

ಸತ್ಯ ಮುಚ್ಚಿಹೋಗದು.

ಕಿರುಚೋದರಿಂದ ಹರಚೋದರಿಂದ ಸತ್ಯ ನೆಲ ಕಚ್ಚಿ ಹೋಗದು.

ಕಿರುಚುವುದರಿಂದ ಹರುಚೋದರಿಂದ ಸತ್ಯ ನೆಲೆ ಕಚ್ಚ ಹೋಗದು.

ಯಾರೇ ಇರಲಿ॥ ಅವರು ಎಷ್ಟೇ ಎತ್ತರದವರಾಗಿರಲಿ ನಮ್ಮಗೆಷ್ಟೇ ಹತ್ತಿರದವರಾಗಿರಲಿ॥

ಏನೇಲ್ಲ ಘನ, ಧನರಿರಲಿ॥ ಸತ್ಯ ಮಿಥ್ಯವಾಗದು॥

**ಸಭಾಪತಿಯವರು:-** ದಯಮಾಡಿ ಯಾರು ಸದನದ ಬಾವಿಯಲ್ಲಿದ್ದೀರಿ ಅವರುಗಳು ತಮ್ಮ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ. ಸಭೆಯನ್ನು ಮುಂದುವರೆಸೋಣ. ಚರ್ಚೆ ಮಾಡೋಣ. ಇದು ಚರ್ಚೆಯ ಸಭೆಯಾಗಬೇಕೆಂದು ಎಲ್ಲರ ಅಭಿಪ್ರಾಯವಿದೆ. ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಎಲ್ಲರಿಗೂ ಅವಕಾಶಗಳು ಸಿಗುತ್ತದೆ. ಚರ್ಚೆ ಮಾಡೋಣ. ನನ್ನ ನಿರ್ಣಯವನ್ನು ನಾನು ಹೇಳಿದ್ದೇನೆ. ಮುಂದಿನದು ನಿಮಗೆ ಬಿಟ್ಟದ್ದು.

**ಶ್ರೀ ಹೆಚ್.ಸಿ. ನೀರಾವರಿ:-** ಮಾನ್ಯ ಸಭಾಪತಿಯವರೆ, ಹಾವೂ ಸಾಯಬಾರದು, ಕೋಲೂ ಮುರಿಯಬಾರದು. ಭ್ರಷ್ಟಾಚಾರ ಅಬಾಧಿತವಾಗಿ ನಡೆಯುತ್ತಿರಬೇಕು. ಬಹಳ ಚೆನ್ನಾಗಿ ನಡೆಯುತ್ತಿದೆ. ಧನ್ಯವಾದಗಳು.

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಹೆಚ್.ಸಿ. ನೀರಾವರಿಯವರು ಬಹಳ ಅನುಭವದಿಂದ ಮಾತುಗಳನ್ನು ಹೇಳುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಹೆಚ್.ಸಿ. ನೀರಾವರಿಯವರು ಬಹಳ ಹಿರಿಯರು. ಅವರು ಸರ್ಕಾರದ ಒಳಗಡೆ, ಹೊರಗಡೆ ಎಲ್ಲಾ ನೋಡಿರುವವರು.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೆ, ನಿಮ್ಮ ಆದೇಶವನ್ನು ನಾವು ಗೌರವಿಸಬೇಕಾಗುತ್ತದೆ. ಆದರೆ ನಾವು ನಿಲುವಳಿಯನ್ನು ಕಳುಹಿಸಿದಂತಹ ಉದ್ದೇಶ ಏನೆಂದರೆ, ಒಂದು ಸಾರ್ವಜನಿಕ ಮಹತ್ವದ ಹಿನ್ನಲೆಯಲ್ಲಿ ನಾವು ನಿಯಮಗಳ ಅಡಿಯಲ್ಲಿಯೇ ಈ ವಿಷಯವನ್ನು ಕಳುಹಿಸಿಕೊಟ್ಟಿರುವಂಥದ್ದು. ತಾವು ವಿರೋಧ ಪಕ್ಷದ ನಾಯಕರ

ಅಭಿಪ್ರಾಯಗಳನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯಗಳನ್ನು ಕೇಳಿ ಒಂದು ಅಭಿಪ್ರಾಯವನ್ನು ಹೇಳುತ್ತಿದ್ದೀರಿ. ತಾವುಗಳು ಬೇರೆ ನಿಯಮದ ಅಡಿಯಲ್ಲಿ ಬರೆದು ಕಳುಹಿಸಿ ಕೊಟ್ಟರೆ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆಂದು ಹೇಳುತ್ತಿದ್ದೀರಿ. ಆದರೆ ತೊಂದರೆ ಏನಿದೆ ಎಂದರೆ ಈ ವಿಷಯಕ್ಕೆ ಸಾರ್ವಜನಿಕ ಮಹತ್ವದ ಉದ್ದೇಶ ಇದೆ. ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ಈ ವಿಷಯವನ್ನು ಕೈಗೆತ್ತಿಕೊಳ್ಳಬೇಂಕೆಂದು ನಿಯಮ 59ರ ಅಡಿಯಲ್ಲಿ ನಾವು ಕೇಳಿದಂತಹ ಉದ್ದೇಶವೇನೆಂದರಲ್ಲಿ ಇದರಲ್ಲಿ ಸಾರ್ವಜನಿಕ ಮಹತ್ವವಿದೆ ಮತ್ತು ತುರ್ತು ಇದೆ. ಈ ವಿಷಯಕ್ಕೆ ಬಹಳ ಅದ್ಯತೆಯನ್ನು ಕೊಡಬೇಕೆಂದು ನಾವು ಬರೆದು ಕಳುಹಿಸುವುದರಿಂದ ಏನಾಗುತ್ತದೆ? ಬೇರೆ ಯಾವುದಾದರೂ ನಿಯಮದಲ್ಲಿ ಕಳುಹಿಸಬೇಕೆಂದರೆ ನಿಯಮ 330ರ ಅಡಿಯಲ್ಲಿ ಅಥವಾ ನಿಯಮ 68ರ ಅಡಿಯಲ್ಲಿ ಕಳುಹಿಸಬೇಕು ಅಥವಾ ಅರ್ಧ ಗಂಟೆ ಚರ್ಚೆಯಲ್ಲಿ ಚರ್ಚೆಗೆ ಅವಕಾಶ ಕೊಡಿ ಎಂದು ಕೇಳಬೇಕು. ಮತ್ತೆ ಅದು ಚರ್ಚೆಗೆ ಬರುವುದಕ್ಕೆ ನಾಲ್ಕು ದಿವಸಗಳಾಗುತ್ತದೆ. ಆ ನಾಲ್ಕು ದಿನಗಳ ಪ್ರಶ್ನೆಯಲ್ಲ. ನಮ್ಮ ಉದ್ದೇಶ ಏನು? ನಮ್ಮ ಉದ್ದೇಶ ಏನೆಂದರೆ ಅದಕ್ಕೆ ಆದ್ಯತೆಯನ್ನು ಕೊಡಬೇಕೆಂದು. ಅದಕ್ಕೋಸ್ಕರವಾಗಿ ಅನೇಕ ಸಂಪ್ರದಾಯಕಗಳು ಮತ್ತು ನಿರ್ದಶನಗಳಿವೆ. ಹಿಂದೆ ಈ ರೀತಿಯಾದಂತಹ ಸಂದರ್ಭಗಳಲ್ಲಿ ನಾವು ಏನು ನಿಯಮ 59ರ ಅಡಿಯಲ್ಲಿ ಬರೆದು ಕಳುಹಿಸುವಂತಹ ಸಂದರ್ಭದಲ್ಲಿ ತಾವೇ ಪರಿವರ್ತನೆ ಮಾಡಿ, ಕೂಡಲೇ ಚರ್ಚೆಯನ್ನು ಪ್ರಾರಂಭ ಮಾಡಬೇಕೆಂದು ನಮ್ಮ ಉದ್ದೇಶ. ಬೇರೆ ಯಾವುದೇ ಉದ್ದೇಶವಿಲ್ಲ. ಈ ಚರ್ಚೆ ಒಂದು ಲಾಜಿಕಲ್ ಎಂಡ್‌ಗೆ ಹೋಗಬೇಕು. ಏಕೆಂದರೆ ಸರ್ಕಾರ ಕೂಡ ಪಲಾಯನವಾದಿ ನೀತಿಯನ್ನು ಅನುಸರಿಸುತ್ತಿದೆ. ಇವತ್ತು ಉದ್ದೇಶಪೂರ್ವಕವಾಗಿ ಇದನ್ನು ಕೋಲ್ಡ್ ಸ್ಟೋರೆಜ್‌ಗೆ ಕಳುಹಿಸಬೇಕೆಂದು ಹೇಳತಕ್ಕಂತಹ ಪ್ರಯತ್ನ ನಡೆದಿದೆ. ಅದಕ್ಕೋಸ್ಕರವಾಗಿ ಲೋಕಾಯುಕ್ತ ಸಂಸ್ಥೆಗೆ ಲೋಕಾಯುಕ್ತರವನ್ನು ನೇಮಕ ಮಾಡದೇ ಇರತಕ್ಕಂತಹ ತಂತ್ರವನ್ನು ಉದ್ದೇಶ ಪೂರ್ವಕವಾಗಿ ಸರ್ಕಾರ ಅನುಸರಿಸುತ್ತಿದೆ.

(ಗೊಂದಲ)

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೆ, ಶ್ರೀ ವಿ.ಆರ್. ಸುದರ್ಶನ್‌ರವರು ಹಿಂದೆ ಸಭಾಪತಿಯವರಾಗಿ ಕೆಲಸವನ್ನು ಮಾಡಿದಂಥವರು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಮಾತನಾಡಿದ್ದಾರೆ. ತಾವು ಕೂಡ ಆ ಪೀಠದಿಂದ ನಿಯಮ 59ರ ಅಡಿಯಲ್ಲಿ ಈ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ತೀರ್ಮಾನವನ್ನು ಕೊಟ್ಟಿರುತ್ತೀರಿ. ಮತ್ತೆ ಹೋಗಿ ಅದನ್ನೇ ಮಾತನಾಡುತ್ತಿದ್ದರೆ ಹೇಗೆ?

**ಸಭಾಪತಿಯವರು:–** ನಾನು ಹೇಳಿದ್ದನ್ನೂ ಸಭೆ ಗಮನಿಸಲಿಲ್ಲವೆಂದು ಕಾಣುತ್ತದೆ. ದಯವಿಟ್ಟು ಕೇಳಿ. ಈ ಸದನದಲ್ಲಿರುವಂತಹ ಮಾನ್ಯ ಸದಸ್ಯರುಗಳು ಬೇರೆ ಬೇರೆ ಜವಾಬ್ದಾರಿಯ ಸ್ಥಾನದಲ್ಲಿ ಕೆಲಸವನ್ನು ಮಾಡಿರತಕ್ಕಂಥವರು. ನಾನೂ ಕೂಡ ವಿರೋಧ ಪಕ್ಷದ ಕಡೆಯಲ್ಲಿ ಕುಳಿತುಕೊಂಡು ನಿಯಮ 59ರ ಅಡಿಯಲ್ಲಿ ವಿಷಯಗಳನ್ನು ಎತ್ತಿರುವಂಥದ್ದು ಉಂಟು. ಹಾಗಾಗಿ ಎಲ್ಲಾ ರೂಲಿಂಗ್‌ಗಳು ಕೂಡ ಒಂದೇ ರೀತಿಯಲ್ಲಿಲ್ಲ. ಕೆಲವು ಬಾರಿ ಪುನರುಚ್ಚಾರ ಮಾಡಿರಬಹುದು. ಕೆಲವು ಸಾರಿ ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿಯೇ ಹೆಚ್ಚು ಹೊತ್ತು ಮಾತನಾಡುವುದಕ್ಕೆ ಬಿಟ್ಟಿದ್ದಾರೆ. ಕೆಲವು ಬಾರಿ ಒಂದೆರಡು ನಿಮಿಷದಲ್ಲಿಯೇ ನಿಮ್ಮ ಮಾತುಗಳನ್ನು ಮುಗಿಸಬೇಕೆಂದು ಹೇಳಿರತಕ್ಕಂತಹ ರೂಲಿಂಗ್‌ಗಳನ್ನು ಕೊಟ್ಟಿರುವುದನ್ನು ಕೂಡ ನಾನು ಕೇಳಿದ್ದೇನೆ. ಈ ಎಲ್ಲಾ ಹಿನ್ನಲೆಯಲ್ಲಿ ಯಾವುದೇ ಸಂಗತಿಯನ್ನು ಗಮನಿಸದೇ ನಾನು ನನ್ನ ನಿರ್ಣಯವನ್ನು ಹೇಳಿದ್ದೇನೆ. ಇದು ನಿಯಮ 59ರ ಅಡಿಯಲ್ಲಿ ಬರುತ್ತಿಲ್ಲ, ಅದುದರಿಂದ ಇದನ್ನು ತಿರಸ್ಕಾರ ಮಾಡುತ್ತಿದ್ದೇನೆ. ಸಾರ್ವಜನಿಕ ಮಹತ್ವದ ಸಂಗತಿ ಎಂದು ತಾವು ಪದೇ ಪದೇ ಹೇಳುತ್ತಿರುವುದರಿಂದ ಸಾರ್ವಜನಿಕ ಮಹತ್ವದ ಸಂಗತಿಗಳು ಹಲವಾರುಗಳಿವೆ. ಅದನ್ನು ದಯಮಾಡಿ ಚರ್ಚೆ ಮಾಡುವುದಕ್ಕೆ ಯಾವುದಾದರೂ ಅನ್ವಯವಾಗುವಂತಹ ನಿಯಮದ ಅಡಿಯಲ್ಲಿ ಒಂದು ನೋಟೀಸ್ ಕೊಡಿ. ಅದಕ್ಕೆ ಅವಕಾಶಗಳನ್ನು ಕಲ್ಪಿಸಿಕೊಡೋಣ ಎನ್ನುವಂತಹ ಮಾತನ್ನು ಮಾತ್ರ ಹೇಳುತ್ತಿದ್ದೇನೆ.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೆ, ಈ ಕೂಡಲೇ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ವಿನಂತಿಯನ್ನು ಮಾಡುತ್ತಿದ್ದೇನೆ. ಆದ್ಯತೆಯನ್ನು ಕೊಡಲೇಬೇಕಾಗುತ್ತದೆ. ದಯಮಾಡಿ ಆದ್ಯತೆಯನ್ನು ಕೊಡಿ ಎಂದು ಮನವಿಯನ್ನು ಮಾಡುತ್ತಿದ್ದೇವೆ. ಬೇರೆ ಕಾರ್ಯಕಲಾಪಗಳನ್ನು ಬದಿಗೊತ್ತಿ ಈ ವಿಷಯಕ್ಕೆ ಆದ್ಯತೆಯನ್ನು ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** ಆಗುವುದಿಲ್ಲವೆಂದು ಹೇಳಿದ್ದೇನೆ. ಪದೇ ಪದೇ ಅದನ್ನೆ ಹೇಳಿದರೆ ಆಗುವುದಿಲ್ಲ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದವರ ಸದಸ್ಯರುಗಳು ಸದನದ ಬಾವಿಯಲ್ಲಿದ್ದು ಲೋಕಾಯುಕ್ತ ವರದಿಯನ್ನು ತಿರಸ್ಕಾರಿಸುತ್ತಿರುವ ಸರ್ಕಾರಕ್ಕೆ ಧಿಕ್ಕಾರ ಎಂದು ಕೂಗುತ್ತಿದ್ದರು)**

**ಸಭಾಪತಿಯವರು:-** ಈಗ ಈ ವಿಷಯದ ಬಗ್ಗೆ ಚರ್ಚೆ ಮುಗಿಯಿತು. ತಮ್ಮ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಂಡು ಸಭೆಯನ್ನು ನಡೆಸುವುದಕ್ಕೆ ಅವಕಾಶ ಕೊಡಿ.

**ಶ್ರೀಮತಿ ಮೋಟಮ್ಮ:-** ಬೇರೆ ನಿಯಮದಡಿಯಲ್ಲಿ ನೀವೇ ಕನ್ವರ್ಟ್ ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಕ್ಕೆ ನಿಮಗೆ ಏನು ಇದೆ?

**ಸಭಾಪತಿಯವರು:-** ನಾನು ಸಭೆಯನ್ನು ನಡೆಸುವುದಕ್ಕೆ ಇದ್ದೇನೆ. ನನಗೇನು ತೊಂದರೆ ಇಲ್ಲ. ನಾನು ಈ ಪೀಠದಲ್ಲಿ ಕುಳಿತುಕೊಂಡು ನಿರ್ಣಯವನ್ನು ಹೇಳಿದ್ದೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಹಿಂದೆ ಹಲವಾರು ಬಾರಿ ಮಾನ್ಯ ಸಭಾಪತಿಯವರೆ ನಿಯಮ 59ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡದೇ ಇದ್ದಾಗ ಅವರೇ ಬೇರೆ ನಿಯಮಕ್ಕೆ ಕನ್ವರ್ಟ್ ಮಾಡಿದ್ದಾರೆ.

**ಸಭಾಪತಿಯವರು:-** ಕೆಲವು ಸಾರಿ ಮಾಡಿದ್ದಾರೆ, ಕೆಲವು ಸಾರಿ ಮಾಡಿಲ್ಲ. ಎರಡೂ ಇದೆ ಎನ್ನುವುದನ್ನು ಹೇಳಿದ್ದೇನೆ.

**ಶ್ರೀಮತಿ ಮೋಟಮ್ಮ:-** ಇದು ಬಹಳ ಮಹತ್ತರವಾದಂತಹ ವಿಷಯವಾಗಿರುವುದರಿಂದ ಇದನ್ನು ನೀವೇ ಕನ್ವರ್ಟ್ ಮಾಡಿ.

**ಸಭಾಪತಿಯವರು:-** ಇದು ಆಗುವುದಿಲ್ಲವೆಂದು ಹೇಳಿದ್ದೇನೆ. ಅದು ಹೇಗೆ ಆಗುತ್ತದೆ? You cannot force the Chair, you cannot do it. ಕೆಲವು ಸಾರಿ ಮಾಡಿದ್ದಾರೆ. ಕೆಲವು ಸಾರಿ ಮಾಡಿಲ್ಲ. ನೀವು ಮಾಡಿರುವಂತಹ ಉದಾಹರಣೆಯನ್ನು ಹೇಳುತ್ತಿದ್ದೀರಿ. ನಾನು ಮಾಡಿಲ್ಲದೇ ಇರುವಂತಹ ಉದಾಹರಣೆಯನ್ನು ಹೇಳುತ್ತಿದ್ದೇನೆ. ಅಷ್ಟೇ. ಅದಕ್ಕೆ ಏನು ಮಾಡುವುದಕ್ಕೆ ಬರುವುದಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ನಾವು ಮಾತನಾಡುವುದಕ್ಕೆ ಅವಕಾಶವನ್ನೇ ಕೊಡುತ್ತಿಲ್ಲ. ಆವಗಿನಿಂದ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೈ ಎತ್ತುತ್ತಲೇ ಇದ್ದೇನೆ.

**ಸಭಾಪತಿಯವರು:-** ಇದು ಹಿರಿಯರ ಮನೆ. ತುಂಬ ಜನ ವಯಸ್ಸಾದವರು ಇದ್ದೇವೆ ನನ್ನನ್ನೂ ಸೇರಿಸಿಕೊಂಡು. ಈಗ ಸಮಯ 2 ಗಂಟೆ 15 ನಿಮಿಷವಾಯಿತು. ಹಾಗಾಗಿ ಈಗ ಸದನವನ್ನು 3 ಗಂಟೆ 45 ನಿಮಿಷದ ವರೆಗೆ ಊಟಕ್ಕಾಗಿ ಮುಂದೂಡಲಾಗಿದೆ.

(2 ಗಂಟೆ 15 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ 4 ಗಂಟೆ 20 ನಿಮಿಷಗಳಿಗೆ ಸಮಾವೇಶಗೊಂಡಿತು ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಗೆ ಬಂದು ಧರಣಿ ಮುಂದುವರೆಸಿದರು)**

**ಸಭಾಪತಿಯವರು:–** ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ದಯಮಾಡಿ ತಮ್ಮ-ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳಬೇಕು. ನಮ್ಮ ಸದನ ಚೆನ್ನಾಗಿ ನಡೆಯುತ್ತಿದೆ, ಇನ್ನು ಚೆನ್ನಾಗಿ ನಡೆಸೋಣ, ದಯಮಾಡಿ ನಿಮ್ಮ ನಿಮ್ಮ ಸ್ಥಾನಗಳಿಗೆ ಬರಬೇಕು.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಈಗಾಗಲೇ ಲೋಕಾಯುಕ್ತ ವರದಿ ಜಾರಿ ಬಗ್ಗೆ ಸರ್ಕಾರದಿಂದ ಮೃದು ಧೋರಣೆ ತಾಳುವುದಾಗಲಿ ಅಥವಾ ತಾತ್ಸಾರ ಭಾವನೆ ತೋರುವುದಾಗಲಿ ಆಗಬಾರದು. ಇದು ಸಾರ್ವಜನಿಕ ವಿಷಯವಾಗಿದೆ. ಅದರ ಬಗ್ಗೆ ಕ್ರಮ ತೆಗೆದುಕೊಂಡು ಆಪಾದಿತರಿಗೆ ಶಿಕ್ಷೆಯಾಗಬೇಕು ಎನ್ನುವುದು ನಮ್ಮ ಒತ್ತಾಯ. ಇದು ಮಹತ್ತರ ಸಂಗತಿ ಎನ್ನುವುದನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಈ ವಿಚಾರವನ್ನು ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡಲು ಅವಕಾಶ ಕೊಡಿ ಎಂದು ನಾವು ತಮ್ಮಲ್ಲಿ ಮನವಿ ಮಾಡಿಕೊಂಡಿದ್ದೇವೆ. ಅದಕ್ಕೆ ತಾವು ಒಪ್ಪುತ್ತಿಲ್ಲ. ನಾವು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇವೆ, ಮಹತ್ತರವಾದ ವಿಷಯವಾಗಿದ್ದರಿಂದ ನಿಲುವಳಿ ಸೂಚನೆಯಲ್ಲಿ ಅವಕಾಶ ಕೊಡದಿದ್ದರು ನಿಯಮ 68ರಲ್ಲಿ ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕು ಎನ್ನುವುದು ನನ್ನ ಮನವಿ.

**ಸಭಾಪತಿಯವರು:–** ಬೆಳಗ್ಗೆ ನಾನು ಹೇಳಿರುವುದನ್ನು ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಒಪ್ಪಿಕೊಂಡಿದ್ದಾರೆ. ನಿಯಮ 68ರಲ್ಲಿ ತೆಗೆದುಕೊಳ್ಳಲು ವಿರೋಧ ಪಕ್ಷದವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇದನ್ನು ಆದಷ್ಟುಬೇಗ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಿ ತೆಗೆದುಕೊಳ್ಳಲಾಗುತ್ತದೆ. ದಯಮಾಡಿ ಮಾನ್ಯ ಸದಸ್ಯರೆಲ್ಲರು ತಮ್ಮ-ತಮ್ಮ ಸ್ಥಾನಗಳಿಗೆ ಬರಬೇಕು.

**ಶ್ರೀಮತಿ ಮೋಟಮ್ಮ:–** ಧನ್ಯವಾದಗಳು.

**(ಧರಣಿ ನಿರತ ಕಾಂಗ್ರೆಸ್ ಪಕ್ಷದ ಸದಸ್ಯರು ಧರಣಿಯನ್ನು ಮುಕ್ತಾಯಗೊಳಿಸಿ ತಮ್ಮ-ತಮ್ಮ ಸ್ಥಾನಗಳಿಗೆ ಹಿಂದುರುಗಿದರು)**

**ಸಭಾಪತಿಯವರು:–** ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಒಂದು ಹೇಳಿಕೆಯನ್ನು ಮಾಡುತ್ತಾರೆ.

## 5. ಸಚಿವರ ಹೇಳಿಕೆ

### (ಅ) ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ನಡೆಸಿದ ಮುಷ್ಕರದ ದಿನಗಳನ್ನು ವೇತನದ ದಿನಗಳೆಂದು ಪರಿಗಣಿಸುವ ಬಗ್ಗೆ

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ,

ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು ಹಾಗೂ ಉಪನ್ಯಾಸಕರು ದಿನಾಂಕ: ದಿನಾಂಕ: 8–12–2011 ರಿಂದ 15–12–2011 ರವರೆಗೆ (8 ದಿನಗಳು) ವೇತನ ಹಾಗೂ ಇನ್ನಿತರ ಸೇವಾ ಸೌಲಭ್ಯಗಳ ಕುರಿತು ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ, ತರಗತಿ ಬಹಿಷ್ಕರಿಸಿ ಮುಷ್ಕರ ನಡೆಸಿದ್ದರು.

ಮಕ್ಕಳ ಶೈಕ್ಷಣಿಕ ಹಿತ ಕಾಪಾಡುವ ಶಿಕ್ಷಕರು/ಸರ್ಕಾರಿ ನೌಕರರು ಈ ರೀತಿ ಮುಷ್ಕರದಲ್ಲಿ ಪಾಲ್ಗೊಳ್ಳುವುದು ಕಾನೂನುಬಾಹಿರ ಕ್ರಮವೆಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಮುಷ್ಕರ ನಡೆಸಿದ ಈ 8 ದಿನಗಳ ವೇತನ ತಡೆ ಹಿಡಿಯಲು ಆದೇಶ ಹೊರಡಿಸಿತ್ತು.

ಈ ಮಧ್ಯೆ ವಿವಿಧ ಸಂಘಟನೆಗಳು ಹಾಗೂ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿ, ಪದವಿ ಪೂರ್ವ ಶಿಕ್ಷಣ ಇಲಾಖೆಯು ವೇತನ ತಡೆಹಿಡಿಯುವಂತೆ ಹೊರಡಿಸಿದ ಆದೇಶವನ್ನು ಹಿಂಪಡೆದು ವೇತನ ಬಿಡುಗಡೆ ಮಾಡಲು ಸೂಚಿಸಬೇಕೆಂದು ಕೋರಿದ್ದರು ಹಾಗೂ ದಿನಾಂಕ: 31–01–2012 ರಂದು ವಿವಿಧ ಸಂಘಟನೆಗಳ ಪದಾಧಿಕಾರಿಗಳು ಮತ್ತು ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರದ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳು ಮಾನ್ಯ ಶಿಕ್ಷಣ ಸಚಿವರೊಂದಿಗೆ ಮನವಿ ಮಾಡಿ ಮುಷ್ಕರದ ಅವಧಿಯಲ್ಲಿ

ವಿದ್ಯಾರ್ಥಿಗಳ ಕಲಿಕೆಯಲ್ಲಿ ಉಂಟಾಗಿರುವ ನಷ್ಟದ ಅವಧಿಯನ್ನು ರಜಾದಿನಗಳಂದು ಹೆಚ್ಚುವರಿ ಕೆಲಸಗಳನ್ನು ನಿರ್ವಹಿಸುವುದರ ಮೂಲಕ ಸರಿದೂಗಿಸಿಕೊಡುವುದಾಗಿ ತಿಳಿಸಿ, 8 ದಿನಗಳ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಲು ಕೋರಿರುತ್ತಾರೆ.

ಮಾನ್ಯ ವಿಧಾನ ಪರಿಷತ್ ಸದಸ್ಯರುಗಳ ಹಾಗೂ ವಿವಿಧ ಸಂಘಟನೆಗಳ ಮನವಿಯ ಮೇರೆಗೆ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರು ಹಾಗೂ ಉಪನ್ಯಾಸಕರುಗಳ ಮುಷ್ಕರದ ಅವಧಿಯನ್ನು, ರಜಾದಿನಗಳಂದು ಹೆಚ್ಚುವರಿ ಕೆಲಸಗಳನ್ನು ನಿರ್ವಹಿಸುವುದರ ಮೂಲಕ ಸರಿದೂಗಿಸಿ ಕೊಡುವ ಷರತ್ತಿನ ಮೇರೆಗೆ, ಮುಷ್ಕರದ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಿ ತಡೆಹಿಡಿಯಲಾದ ವೇತನ ಬಿಡುಗಡೆ ಮಾಡಲು ಆದೇಶಿಸಲಾಗುವುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ನಮ್ಮೆಲ್ಲರ ಬೇಡಿಕೆ ಇದೆ ಆಗಿತ್ತು. ಶಿಕ್ಷಕರು ಅನಿವಾರ್ಯ ಕಾರಣಗಳಿಂದ ಹೋರಾಟಕ್ಕೆ ಇಳಿಯಬೇಕಾಯಿತು. ಇವತ್ತು ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಶಿಕ್ಷಣ ಸಚಿವರು ದೊಡ್ಡ ಮನಸ್ಸು ಮಾಡಿ ಈ ಬೇಡಿಕೆಯನ್ನು ಇಡೇರಿಸಿದಕ್ಕಾಗಿ ಎಲ್ಲ ಪದವಿ ಪೂರ್ವ ಉಪನ್ಯಾಸಕರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಶಿಕ್ಷಣ ಸಚಿವರರಿಗೆ ಅಭಿನಂದನೆಗಳನ್ನು ಸಲ್ಲಿಸಲು ಇಚ್ಛೆಪಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, ಪದವಿ ಪೂರ್ವ ಉಪನ್ಯಾಸಕರು ಧರಣಿ ಮಾಡಿದ್ದ 8 ದಿನಗಳ ವೇತನವನ್ನು ತಡೆಹಿಡಿಯಲಾಗಿತ್ತು, ಅದರ ಬಗ್ಗೆ ಒಂದು ಹೇಳಿಕೆಯನ್ನು ಮಾನ್ಯ ಸಚಿವರು ಮಾಡಿದ್ದಾರೆ ಬಹಳ ಸಂತೋಷ. ಇದರ ಬಗ್ಗೆ ಆಡಳಿತ ಪಕ್ಷದ, ವಿರೋಧ ಪಕ್ಷದ ಶಿಕ್ಷಣ ಕ್ಷೇತ್ರದ ಸದಸ್ಯರು ಮತ್ತು ಪದವಿ ಪೂರ್ವ ಶಿಕ್ಷಣ ಕ್ಷೇತ್ರದ ಸದಸ್ಯರೆಲ್ಲರು ಸೇರಿ ಮಾನ್ಯ ಮುಖ್ಯಮಂತ್ರಿಗಳನ್ನು, ಶಿಕ್ಷಣ ಸಚಿವರನ್ನು ಮತ್ತು ಇಲಾಖಾ ಕಾರ್ಯದರ್ಶಿಯವರನ್ನು ಭೇಟಿ ಮಾಡಿ ಮತ್ತು ಪತ್ರ ಬರೆಯುವುದರ ಮೂಲಕ ತಡೆ ಹಿಡಿಯಲಾದ ವೇತನವನ್ನು ಬಿಡುಗಡೆ

ಮಾಡಬೇಕೆಂದು ಸಾಕಷ್ಟು ಬಾರಿ ಒತ್ತಾಯ ಮಾಡಿದ್ದೇವೆ. ಅದರ ಬಗ್ಗೆ ತಡವಾಗಿಯಾದರೂ ಕೊನೆಗೆ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆದರೆ ನಿನ್ನೆ ಒಂದು ಪಕ್ಷಕ್ಕೆ ಸೀಮಿತವಾದ ಶಾಸಕರನ್ನು ಸೇರಿಸಿಕೊಂಡು ಪತ್ರಿಕಾಗೋಷ್ಠಿಯನ್ನು ಮಾಡಿದ್ದಾರೆ. ಕೇವಲ ಬಿಜೆಪಿ ಶಾಸಕರನ್ನು ಸೇರಿಸಿಕೊಂಡು ನಿನ್ನೆ ಪತ್ರಿಕಾಗೋಷ್ಠಿ ಮಾಡಿ, ಈಗ ಇಲ್ಲಿ ಬಂದು ಹೇಳಿಕೆ ಮಾಡುವುದು ರಾಜಕೀಯ ಪ್ರೇರಿತವಾದದ್ದು. ನಿನ್ನೆ ಒಂದು ಪಕ್ಷಕ್ಕೆ ಸಿಮೀತವಾದ ಸದಸ್ಯರನ್ನು ಸೇರಿಸಿಕೊಂಡು ಪತ್ರಿಕಾ ಹೇಳಿಕೆಯನ್ನು ಕೊಡದೆ, ಇಲ್ಲಿಯೇ ಬಂದು ಹೇಳಿಕೆಯನ್ನು ಕೊಟ್ಟಿದ್ದರೆ ನಾನು ಬಹಳ ಸಂತೋಷಪಡುತ್ತಿತ್ತು. ಈ ಹೇಳಿಕೆ ಕೊಡುವುದರಲ್ಲಿಯೂ ರಾಜಕೀಯ ಮಾಡುತ್ತಾರೆ. ನಾವು ಎಲ್ಲರೂ ಸೇರಿಯೇ ಈ ವಿಚಾರದಲ್ಲಿ ಸರ್ಕಾರವನ್ನು ಒತ್ತಾಯ ಮಾಡಿದ್ದೇವೆ. ನಮ್ಮೆಲ್ಲರನ್ನೂ ಸಹ ಅವರು ಕರೆಯಬೇಕಾಗಿತ್ತು. ಇದು ಸರಿಯಲ್ಲ. ಅವರು ಒಂದು ಇಲಾಖೆಯ ಸಚಿವರಾಗಿ ಎಲ್ಲರ ಪರವಾಗಿ ತೀರ್ಮಾನ ತೆಗೆದುಕೊಳ್ಳಬೇಕು. ಕೇವಲ ಬಿಜೆಪಿ ಶಾಸಕರ ಪರವಾಗಿ ತೀರ್ಮಾನ ತೆಗೆದುಕೊಳ್ಳಬಾರದು. ಅವರು ಈ ರೀತಿ ಮಾಡಬಾರದಿತ್ತು.

**ಸಭಾಪತಿಯವರು:-** ಆಯಿತು ಬಿಡಿ. ನೀವು ನಿಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಈಗ ಸದನ ನಡೆದಿದೆ, ಈ ಸಮಯದಲ್ಲಿ ಸದನದಲ್ಲಿ ಹೇಳುವಂತಹ ವಿಚಾರವನ್ನು ಹೊರಗಡೆ ಹೇಗೆ ಹೇಳಿದರು ಇವರು? ಇದು ಸದನದ ಹಕ್ಕುಚುತಿಯಾಗುತ್ತದೆ. ಸದನದ ವಿಚಾರವನ್ನು ಸದನದಲ್ಲಿಯೇ ಹೇಳಬೇಕು. ಇಲ್ಲಿ ಮೊದಲು ಹೇಳಿಕೆ ಮಾಡಿ ನಾಳೆ ಪತ್ರಿಕಾ ಗೋಷ್ಠಿಯನ್ನು ಮಾಡಬೇಕಾಗಿತ್ತು. ಮುಂದೆ ಚುನಾವಣೆ ಇವೆ ಅದಕ್ಕಾಗಿ ನಾಲ್ಕು ಜನ ಬಿಜೆಪಿ ಶಾಸಕರನ್ನು ಸೇರಿಸಿಕೊಂಡು ಹೇಳಿಕೆ ಮಾಡಿದ್ದಾರೆ, ಇದೊಂದು ಚುನಾವಣಾ ಗಿಮಿಕ್ ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ಮಾಡಲಿ ಬಿಡಿ, ಆದರೆ ನಾವು ಉಳಿದವರು ವಿಧಾನ ಪರಿಷತ್ತಿನ ಸದಸ್ಯರಲ್ಲವೆ? ನಾವು ಶಾಸಕರಲ್ಲವೆ? ನಮ್ಮನ್ನು ಏಕೆ ಕರೆಯಲಿಲ್ಲ? ಮರಿತಿಬ್ಬೇಗೌಡರನ್ನು ಕರೆದಿಲ್ಲ, ಪುಟ್ಟಣ್ಣನನ್ನು ಕರೆದಿಲ್ಲ ಯಾರನ್ನೂ ಕರೆದಿಲ್ಲ.

ಆ ಬಿಜೆಪಿ ಶಾಸಕರು ಮಾತ್ರ ಈ ಸದನಕ್ಕೆ ಸಂಬಂಧವಿರುವವರೆ? ನಾವು ವಿಧಾನ ಪರಿಷತ್ತಿನ ಸದಸ್ಯರಲ್ಲವೆ? ನಾವು ಶಿಕ್ಷಕರ ಪ್ರತಿನಿಧಿಗಳಲ್ಲವೆ? ಮಾನ್ಯ ಸಭಾಪತಿಗಳು ಪದವೀಧರರ ಕ್ಷೇತ್ರದಿಂದ ಬಂದವರು. ಹೊರಗೆ ಹೇಳಿಕೆ ಕೊಟ್ಟ ಮೇಲೆ ಸದನಕ್ಕೆ ಬಂದು ಹೇಳಿಕೆ ಕೊಡುವುದು ಏನು ದೊಡ್ಡಸ್ತಿಕೆ ಇದು? ಈ ಸಚಿವರು ಯಾವಾಗಲು ಹೀಗೆ ನಮ್ಮನ್ನು ಕರೆಯುವುದೇ ಇಲ್ಲ, ತಮ್ಮ ಕಛೇರಿಯಲ್ಲಿಯೇ ಕೂಡುತ್ತಾರೆ, ತಮಗೆ ಬೇಕಾದ ನಾಲ್ಕು ಜನ ಬಿಜೆಪಿ ಶಾಸಕರನ್ನು ಕರೆದು ಮಾತನಾಡುತ್ತಾರೆ ಅಷ್ಟೆ. ಸರ್ಕಾರ ಎಂದರೆ ಬಿಜೆಪಿಗೆ ಮಾತ್ರ ಸಿಮೀತವಾಗಿದೆಯೇ? ತಾವು ನಮಗೆ ನ್ಯಾಯ ಹೇಳಬೇಕು. ನಾವು ಚುನಾಯಿತ ಪ್ರತಿನಿಧಿಗಳು ನಮ್ಮನ್ನು ಕರೆಯದೆ ತಮಗೆ ಬೇಕಾದವರನ್ನು ಕೂಡಿಸಿಕೊಂಡು ತೀರ್ಮಾನ ತೆಗೆದುಕೊಳ್ಳುವುದು ಸರಿಯೇ ಹೇಳಿ. ಯಾರನ್ನು ಕರೆದಿದ್ದಾರೆ ಕೇಳಿ ಅವರನ್ನು?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ನಾವೇ ಮಂತ್ರಿಗಳ ಹತ್ತಿರ ಹೋಗಿದ್ದೇವು.

**ಶ್ರೀ ಬಸವರಾಜ ಹೊರಟ್ಟಿ:-** ಇದೇನು ಜಾತ್ರೆಯಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ನೀವೂ ಮಂತ್ರಿಗಳ ಹತ್ತಿರ ಹೋಗಬೇಕಾಗಿತ್ತು.

**ಶ್ರೀ ಬಸವರಾಜ ಹೊರಟ್ಟಿ:-** ನಾವೇನು ಬೀಗರೆ ನಿಮ್ಮ ಮನೆಗೆ ಬರಲು, ನೀವೇನು ನಮ್ಮ ಮನೆಗೆ ಬೀಗತನ ಮಾಡಲು ಬಂದಿದ್ರಾ?

(4.30 ಗಂಟೆ)

ಸನ್ಮಾನ್ಯ ಸಭಾಪತಿಯವರೇ, ಅವರು ಹಗುರವಾಗಿ ಮಾತನಾಡಬಾರದು. ನಾನು ಬಹಳ ಗಂಭೀರವಾಗಿ ಮಾತನಾಡುತ್ತಿದ್ದೇನೆ. ಮಾನ್ಯ ಸಚಿವರು ಕೊಟ್ಟಿರುವಂತಹ ಹೇಳಿಕೆಯಲ್ಲಿ ವಿಧಾನ ಪರಿಷತ್ತಿನ ಶಿಕ್ಷಕರು ಮತ್ತು ಪದವೀಧರ ಕ್ಷೇತ್ರದ ಸದಸ್ಯರನ್ನು ಕರೆದು ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಅವರು ಆ ರೀತಿ ಹೇಳಿಕೆಯನ್ನು ಕೊಡದಿದ್ದರೆ, ನಾನು

ಈ ಮಾತನ್ನು ಹೇಳುತ್ತಿರಲಿಲ್ಲ. ಅವರು ಯಾವ ಸದಸ್ಯರನ್ನು ಕರೆದಿದ್ದಾರೆ ಎಂದು ಹೇಳಬೇಕು. ನಮ್ಮನ್ನು ಕರೆದಿದ್ದರೆ, 'ಕರೆದಿದ್ದೆ' ಎಂದು ಅವರು ಹೇಳಲಿ.

**ಸಭಾಪತಿಯವರು:–** ಮಾನ್ಯ ಸಚಿವರು ಏನು ಹೇಳುತ್ತಾರೆ ಅದನ್ನು ಕೇಳೋಣ.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಇದನ್ನು ಸರ್ಕಾರ ಎಂದು ಕರೆಯಬೇಕೋ ಅಥವಾ ಏನ್ನೆಂದು ಕರೆಯಬೇಕೆಂದು ಗೊತ್ತಾಗುತ್ತಿಲ್ಲ. ಮಾನ್ಯ ಸಚಿವರು ಕೊಟ್ಟಿರುವಂತಹ ಹೇಳಿಕೆಯನ್ನು ತಾವು ನೋಡಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಗೊಂದಲ ಆಗುವುದು ಬೇಡ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಇಲ್ಲಿ ಎರಡು ರೀತಿಯ ಹಕ್ಕು ಚ್ಯುತಿ ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಭಾ ನಾಯಕರು ಒಂದು ಅಂಶವನ್ನು ಇಲ್ಲಿ ಗಮನಿಸಬೇಕಾಗಿದೆ. ಸದನ ನಡೆಯುವಂತಹ ಸಂದರ್ಭದಲ್ಲಿ ಮಾನ್ಯ ಸಚಿವರು ಹೊರಗಡೆ ಹೇಳಿಕೆಯನ್ನು ಕೊಡುವುದಕ್ಕೆ ಬದಲಾಗಿ ಸದನದಲ್ಲಿಯೇ ಹೇಳಿಕೆಯನ್ನು ಕೊಡಬೇಕಾಗುತ್ತದೆ. ಇದು ಈ ಸದನದ ಗೌರವದ ಪ್ರಶ್ನೆಯಾಗಿದೆ. ಎರಡನೆಯದಾಗಿ ಶಿಕ್ಷಕರ ಹಾಗೂ ಪದವೀಧರ ಕ್ಷೇತ್ರದ ವಿಧಾನ ಪರಿಷತ್ತಿನ ಸದಸ್ಯರು ಯಾರು ಈ ವಿಚಾರವಾಗಿ ಹೋರಾಟ ಮಾಡಿದ್ದಾರೆ ಅವರನ್ನೆಲ್ಲ ಕರೆದು ಮಾತನಾಡಿ ಆ ನಂತರ ಮಾನ್ಯ ಸಚಿವರು ಹೇಳಿಕೆಯನ್ನು ನೀಡಬೇಕಾಗಿತ್ತು. ಯಾವುದೇ ವಿಚಾರವಾಗಿ ಹೇಳಿಕೆಯನ್ನು ನೀಡಬೇಕಾದರೂ ಸದನ ನಡೆಯುವಂತಹ ಸಂದರ್ಭದಲ್ಲಿ ಸದನದಲ್ಲಿಯೇ ಹೇಳಿಕೆಯನ್ನು ನೀಡಬೇಕಾಗುತ್ತದೆ.

**ಶ್ರೀ ಡಿ.ವಿ. ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಒಟ್ಟು ಕಾಯಿಲೆ ವಾಸಿ ಆಗಿದೆ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಅವರು ಮುಖ್ಯಮಂತ್ರಿಗಳಾದ ಮೇಲೆ ಕಾಯಿಲೆ ವಾಸಿ ಆಯಿತು.

**ಶ್ರೀ ಡಿ.ವಿ. ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಒಟ್ಟು ಕಾಯಿಲೆ ವಾಸಿ ಆಗಿದೆ. ಸಾಧಾರಣವಾಗಿ ಈ ರೀತಿ ಆಗಿರುವುದು ಹೊಸದೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ರಾಜಕೀಯ ಲಾಭ ಪಡೆದುಕೊಳ್ಳುವುದಕ್ಕೆ ಎಲ್ಲ ಪಕ್ಷದವರು ಪ್ರಯತ್ನ ಪಡುತ್ತಾರೆ. ಇದು ಹೊಸದಲ್ಲ. ಮಾನ್ಯ ಸಚಿವರು ನೀಡಿರುವಂತಹ ಹೇಳಿಕೆ ಪಾಲಿಸಿ ಮ್ಯಾಟರ್‌ಗೆ ಸಂಬಂಧಪಟ್ಟಿರುವುದು ಅಲ್ಲ. ಅದೊಂದು ಆಡಳಿತಾತ್ಮಕವಾಗಿರುವಂತಹ ತೀರ್ಮಾನವಾಗಿದೆ. ಅದು ಒಬ್ಬ ಮಂತ್ರಿಯ ವಿವೇಚನೆಗೆ ಬಿಟ್ಟಂಥ ವಿಚಾರವಾಗಿದೆ. ಮಂತ್ರಿಯ ವಿವೇಚನೆಗೆ ಬಿಟ್ಟಂಥ ವಿಚಾರವನ್ನು ಅವರ ಜೊತೆಯ ಸಹಪಾಠಿಗಳೊಂದಿಗೆ ವಿಚಾರ ವಿನಿಮಯವನ್ನು ಮಾಡಿ, ಒಂದು ಕಡೆ ಹೇಳಿಕೆ ನೀಡುತ್ತಾರೆ. ಆ ಹೇಳಿಕೆಯನ್ನು ಸದನದಲ್ಲಿ ಹೇಳಬೇಕೆನ್ನುವ ಶಾಸಕ ಮಿತ್ರರ ಒತ್ತಾಯಕ್ಕೆ ಅವರು ಈ ಸದನದಲ್ಲಿ ಹೇಳಿದ್ದಾರೆ. ಇಲ್ಲದಿದ್ದರೆ ಇಲ್ಲಿ ಹೇಳುವಂತಹ ಅಗತ್ಯ ಇರುವುದಿಲ್ಲ. ಮಾನ್ಯ ವಿರೋಧ ಪಕ್ಷದ ಸದಸ್ಯರು ಸದನದ ಸಂಪ್ರದಾಯಗಳನ್ನು ಅನುಸರಿಸಬೇಕೆಂದು ಹೇಳುತ್ತಿದ್ದಾರೆ. ಅದು ನಿಜ. ಆದರೆ, ಈ ಘಟನೆಯನ್ನು ಉದ್ದಕ್ಕೆ ಎಳೆದುಕೊಂಡು ಹೋಗುವಂತಹ ಅವಶ್ಯಕತೆ ಇಲ್ಲ. ಮಾನ್ಯ ಬಸವರಾಜ ಹೊರಟ್ಟಿಯವರು ಹಿಂದೆ ಮಂತ್ರಿಗಳಾಗಿ ಇದೇ ಇಲಾಖೆಯನ್ನು ನಿರ್ವಹಿಸಿದ್ದವರು.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಾನು ಹಾಗೆ ಮಾಡಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರು ಹಿರಿಯ ಸದಸ್ಯರು ಹಾಗೂ ಹಿಂದೆ ಮಂತ್ರಿಗಳಾಗಿ ಕಾರ್ಯವನ್ನು ನಿರ್ವಹಿಸಿ ಅನುಭವವಿರುವವರು ಸಣ್ಣ–ಪುಟ್ಟ ತಪ್ಪು ಆಗಿದ್ದರೆ, ತಿಳಿ ಹೇಳಿ ಸರಿಪಡಿಸಬೇಕು. ಈಗ ಸರಿಯಾಗಿದೆ. ಇನ್ನು ಮುಂದೆ ಅದರ ಬಗ್ಗೆ ಮಾತನಾಡುವುದು ಬೇಡ.

**ಶ್ರೀ ಎಂ.ಸಿ. ನಾಣಯ್ಯ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸಣ್ಣ ಪುಟ್ಟ ದೋಷವಾಗಿದೆ, ಮಾನ್ಯ ಸಚಿವರಿಗೆ ಬೇಕಾಗಿರುವವರನ್ನು ಕರೆದುಕೊಂಡು ಒಂದು ತೀರ್ಮಾನವನ್ನು ಮಾಡಿದ್ದಾರೆ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಸದನದಲ್ಲಿ ಹೇಳಿಕೆ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳಿದ್ದಾರೆ. That was the statement made by the minister officially on the floor of the House. ಆ ಹೇಳಿಕೆಯಲ್ಲಿ ಅವರು, 'ಶಿಕ್ಷಕರ ಪದವೀಧರರ ಕ್ಷೇತ್ರದ ಎಲ್ಲಾ ಜನಪ್ರತಿನಿಧಿಗಳ ಜೊತೆಯಲ್ಲಿ ಚರ್ಚೆ ಮಾಡಿ. . . .' ಎಂದು ಹೇಳಿದ್ದಾರೆ. ಸದನದಲ್ಲಿ ಹೇಳಿಕೆ ಮಾಡುವಂತಹ ವಿಚಾರವನ್ನು ಹೊರಗೆ ಹೇಳಿದ್ದಾರೆ. ಅದರ ಜೊತೆಗೆ ನಿನ್ನೆ ಮಾನ್ಯ ಮಂತ್ರಿಗಳು ಕೇವಲ ಅವರ ಪಕ್ಷದ ಶಾಸಕರನ್ನು ಕರೆದುಕೊಂಡು. . .

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಸನ್ಮಾನ್ಯ ಸಭಾಪತಿಯವರೇ, ನಾನು ಕರೆದಿಲ್ಲ. ತಪ್ಪು ಕಲ್ಪನೆಗೆ ಅವಕಾಶವಾಗುತ್ತದೆ. ನನ್ನ ಹೇಳಿಕೆಯ ಕಾಪಿ ಕೊಡುವುದಕ್ಕೆ ಹೇಳಿದ್ದೇನೆ. ನಾನು ಯಾರನ್ನೂ ಕರೆದಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:-** ಸನ್ಮಾನ್ಯ ಸಭಾಪತಿಯವರೇ, I am not standing on a prestige issue. There are certain things and norms to be followed. ಸದನದಲ್ಲಿ ಅಧಿಕೃತವಾದ ಹೇಳಿಕೆಯನ್ನು ಕೊಡುವುದಿದ್ದರೆ, ಅದಕ್ಕೂ ಮುಂಚೆ ನಿನ್ನೆ ಪತ್ರಿಕೆಗಳಲ್ಲಿ ಹೇಳಿಕೆಯನ್ನು ಕೊಡುವ ಅವಶ್ಯಕತೆ ಇರಲಿಲ್ಲ. Hon'ble Minister doesn't have the right to do so when the House is in session. When the House is in session, how can he make the statement outside?

**ಸಭಾಪತಿಯವರು:-** ಈಗ ಮಾನ್ಯ ಸಚಿವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

**Sri M.C. NANAIAH:-** Sir, let me tell you, this is nothing but a breach of privilege of the House. ಕೊನೆಗೆ ನಮ್ಮ ಸ್ನೇಹಿತರು ಏನು ಮಾಡಿಕೊಳ್ಳುತ್ತಾರೋ ಮಾಡಿಕೊಳ್ಳಲಿ. ಮಾನ್ಯ ಸಚಿವರು ನೀಡಿರುವಂತಹ ಹೇಳಿಕೆಯಲ್ಲಿ ಅವರನ್ನೆಲ್ಲ ಕರೆದು ವಿಚಾರ ಮಾಡಿದ್ದೇನೆ ಎಂದು ಹೇಳಿದ್ದಾರೆ. ಹಾಗಾದರೆ, ವಿಧಾನ ಪರಿಷತ್ತಿನ ಶಿಕ್ಷಕರ ಕ್ಷೇತ್ರದ ಪದವೀಧರರ ಕ್ಷೇತ್ರದ ಎಲ್ಲ ಸದಸ್ಯರನ್ನು ಕರೆದಿದ್ದಾರೆಯೇ ಎನ್ನುವುದನ್ನು ತಿಳಿಸಬೇಕಾಗಿದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಸನ್ಮಾನ್ಯ ಸಭಾಪತಿಯವರೇ, ನಾನು ಯಾರನ್ನೂ ಕರೆದಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:-** ಸನ್ಮಾನ್ಯ ಸಭಾಪತಿಯವರೇ, ಹಾಗಾದರೆ, ಜನ ಪ್ರತಿನಿಧಿಗಳನ್ನು ಕರೆದಿದ್ದೇನೆ ಎಂದು ಅವರು ಏತಕ್ಕೋಸ್ಕರ ಹೇಳಬೇಕಾಗಿತ್ತು ಎನ್ನುವುದು ನಮ್ಮ ಪ್ರಶ್ನೆಯಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಪ್ರೆಸ್‌ನವರಿಗೆ ಏತಕ್ಕೋಸ್ಕರ ಕೊಡಬೇಕಾಗಿತ್ತು? ಪ್ರೆಸ್‌ನವರಿಗೆ ಕೊಟ್ಟ ಮೇಲೆ ಸದನದಲ್ಲಿ ಏತಕ್ಕೋಸ್ಕರ ಪ್ರಸ್ತಾಪ ಮಾಡುತ್ತಿದ್ದಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಸನ್ಮಾನ್ಯ ಸಭಾಪತಿಯವರೇ, ನನ್ನ ಹೇಳಿಕೆಯ ಪ್ರತಿ ತಮ್ಮ ಕೈಗೆ ಇನ್ನು ಬಂದಿಲ್ಲ. ಕೊಡುವುದಕ್ಕೆ ಹೇಳಿದ್ದೇನೆ. ಈಗ ನಾನು ಅದನ್ನು ಓದುತ್ತೇನೆ, "ವಿಧಾನ ಪರಿಷತ್ತಿನ ಸದಸ್ಯರುಗಳ ಹಾಗೂ ವಿವಿಧ ಸಂಘಟನೆಗಳ ಮನವಿಯ ಮೇರೆಗೆ ಪದವಿಪೂರ್ವ ಕಾಲೇಜುಗಳ ಪ್ರಾಚಾರ್ಯರು ಹಾಗೂ ಉಪನ್ಯಾಸಕರುಗಳ ಮುಷ್ಕರದ ಅವಧಿಯನ್ನು ರಜಾ ದಿನಗಳೆಂದು ಹೆಚ್ಚುವರಿ ಕೆಲಸಗಳನ್ನು ನಿರ್ವಹಿಸುವುದರ ಮೂಲಕ . . . ."

**ಶ್ರೀ ಎಂ.ಸಿ. ನಾಣಯ್ಯ:-** ಸನ್ಮಾನ್ಯ ಸಭಾಪತಿಯವರೇ ಮಾನ್ಯ ಸಚಿವರು ಓದುತ್ತಿರುವ ಹೇಳಿಕೆಯ ಪ್ರತಿ ನಮಗೆ ತಲುಪಿಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಪ್ರತಿಗಳನ್ನು ಕೊಡುತ್ತಿದ್ದಾರೆ.

**ಶ್ರೀ ಎಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತೇನೆ ದಯವಿಟ್ಟು ಅಲೋ ಮಾಡಿ.

**ಸಭಾಪತಿಯವರು:–** ಮಂತ್ರಿಗಳು ಮಾತನಾಡಲು ಬಿಡಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರವನ್ನು ತಿಳಿಸಿದ್ದಾರೆ. ಡಿಸೆಂಬರ್ 15ರ ತನಕ ಮುಷ್ಕರ ನಡೆಯುತ್ತಿತ್ತು. ಡಿಸೆಂಬರ್ ತಿಂಗಳ ಕೊನೆಯಲ್ಲಿ ಸರ್ಕಾರದ ಆದೇಶವಾಯಿತು. ಆದೇಶ ಆದ ನಂತರ ವಿಧಾನ ಪರಿಷತ್ತಿನ ಅನೇಕ ಸದಸ್ಯರುಗಳು ವಿವಿಧ ಸಂಘ ಸಂಘಟನೆಗಳ ಪ್ರಮುಖರು ಬಂದು ನನ್ನನ್ನು ಭೇಟಿ ಮಾಡಿದ್ದರು, ಮಾನ್ಯ ಮುಖ್ಯಮಂತ್ರಿಗಳನ್ನು ಹೋಗಿ ಭೇಟಿ ಮಾಡಿದ್ದರು. ಮಾನ್ಯ ಮುಖ್ಯಮಂತ್ರಿಗಳು, 'ಶಿಕ್ಷಕರಿಗೆ ಯಾವುದೇ ರೀತಿಯ ತೊಂದರೆ ತೊಡಕುಗಳನ್ನು ಕೊಡಬೇಕೆನ್ನುವ ಉದ್ದೇಶವಿಲ್ಲ. ನಮ್ಮ ಸರ್ಕಾರದಲ್ಲಿ ಶಿಕ್ಷಕರ ಎಲ್ಲ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಆದ್ಯತೆಯನ್ನು ಕೊಟ್ಟಿದ್ದೇವೆ. ಆದ್ದರಿಂದ ಕಾನೂನು ಸಹಜವಾಗಿಯೇ ತನ್ನದೇ ಆಗಿರುವಂತಹ ಕ್ರಮವನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ಅದನ್ನು ಸರಿಪಡಿಸೋಣ' ಎಂದು ಹೇಳಿದ್ದರು. ಅದನ್ನು ಸರಿಪಡಿಸುವ ಹಿನ್ನೆಲೆಯಲ್ಲಿ ಒಂದು ಫೈಲ್ ಬಂದಿತ್ತು. ನಿನ್ನೆ ಕೇವಲ ವಿಧಾನ ಪರಿಷತ್ತಿನ ಸದಸ್ಯರಷ್ಟೇ ಅಲ್ಲ ಶಿಕ್ಷಕ ಸಂಘಟನೆಗಳು ಬಂದು ನನ್ನ ಹತ್ತಿರ ಈ ವಿಷಯವನ್ನು 'best kind of leave' ಅಥವಾ 'made in good' ಮಾಡಿ ಎಂದು ಚರ್ಚೆ ಮಾಡಿದ್ದರು. ಆ ಚರ್ಚೆಯ ಹಿನ್ನೆಲೆಯಲ್ಲಿ ಇವತ್ತು ನಾನು ಅಧಿಕೃತವಾಗಿ ಹೇಳಿಕೆಯನ್ನು ನೀಡುತ್ತಿದ್ದೇನೆ. ನಾನು ಸ್ಪಷ್ಟವಾಗಿರುವಂತಹ ಹೇಳಿಕೆಯನ್ನು ಕೊಡುತ್ತಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ನಿನ್ನೆ ಪ್ರೆಸ್‌ನವರಿಗೆ ಹೇಳಿಕೆಯನ್ನು ನೀಡಿದ ಮೇಲೆ ಈ ದಿನ ಸದನದಲ್ಲಿ ಅಧಿಕೃತ ಹೇಳಿಕೆ ಎಂದು ಏತಕ್ಕೋಸ್ಕರ ಪ್ರಸ್ತಾಪ ಮಾಡುತ್ತಿದ್ದಾರೆ ಎನ್ನುವುದು ನಮ್ಮ ಪ್ರಶ್ನೆಯಾಗಿದೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಎಂದು ಕೇಳೋಣ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಸನ್ಮಾನ್ಯ ಸಭಾಪತಿಯವರೇ, ಅದು ಆಡಳಿತಾತ್ಮಕವಾದ ವಿಷಯವಾಗಿದೆ. ಯಾವುದೇ ಪಾಲಿಸಿಗೆ ಸಂಬಂಧಪಟ್ಟ ವಿಷಯವಲ್ಲ. ಆಡಳಿತಕ್ಕೆ ಸಂಬಂಧಪಟ್ಟಂತೆ ಸರ್ಕಾರ ಏನು ಮಾಡಿದರೂ ಅದನ್ನು ಇಲ್ಲಿ ಹೇಳಬೇಕೆನ್ನುವುದಾದರೆ ಆಗುವುದಿಲ್ಲ. ದಿನ ಬೆಳಗಾದರೆ, 25 ಫೈಲ್‌ಗಳಿಗೆ ನಾವು ಸಹಿ ಹಾಕುತ್ತಿರುತ್ತೇವೆ. ಆ ಫೈಲ್‌ನಲ್ಲಿ ಇರುವುದನ್ನೆಲ್ಲ ಇಲ್ಲಿ ಹೇಳುವುದಕ್ಕೆ ಆಗುತ್ತದೆಯೇ? ಆಡಳಿತಾತ್ಮಕವಾಗಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ನನಗೆ ಅವಕಾಶವಿದೆ. ನಾನು ನಿರ್ಣಯವನ್ನು ತೆಗೆದುಕೊಂಡಿದ್ದೇನೆ. ಒಟ್ಟಾಗಿ ಅವರೆಲ್ಲರೂ ಬಂದು ನನ್ನ ಜೊತೆಗೆ ಮಾತುಕತೆ ಮಾಡಿದ್ದರು. ಆಗ ಪ್ರೆಸ್‌ನವರೂ ಇದ್ದರು. ರಾಜಕೀಯ ಲಾಭ ತೆಗೆದುಕೊಳ್ಳುವುದಕ್ಕೆ ಮಾಡಿಲ್ಲ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ಸನ್ಮಾನ್ಯ ಸಭಾಪತಿಯವರೇ, ಆಡಳಿತಾತ್ಮಕವಾಗಿರುವಂತಹ ವಿಷಯವನ್ನು ಇಲ್ಲಿ ಹೇಳಬೇಕಾಗಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆಡಳಿತಾತ್ಮಕ ವಿಷಯಗಳನ್ನು ಇಲ್ಲಿ ಹೇಳುವುದಕ್ಕೆ ಆಗಲಿಲ್ಲವೆಂದರೆ, ಏತಕ್ಕೋಸ್ಕರ ಅಧಿವೇಶನವನ್ನು ನಡೆಸಬೇಕೆನ್ನುವುದು ನಮ್ಮ ಪ್ರಶ್ನೆಯಾಗಿದೆ.

**ಸಭಾಪತಿಯವರು:–** ಹಾಗೆ ಆಗುವುದಿಲ್ಲ. ಅವರಿಗೆ ಅಧಿಕಾರವಿದೆ. ಹೇಳುವಂತಹ ಮತ್ತು ಹೇಳದೇ ಇರುವಂತಹ ಎರಡೂ ಅಧಿಕಾರಿಗಳು ಅವರಿಗೆ ಇದೆ. ಹೇಳಲೇಬೇಕೆಂದು ಇಲ್ಲ. ಹೇಳಿದ್ದಾರೆ ಅಷ್ಟೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಸನ್ಮಾನ್ಯ ಸಭಾಪತಿಯವರೇ, ರಜೆಯನ್ನು ಮಂಜೂರು ಮಾಡುವುದು ಆಡಳಿತಾತ್ಮಕವಾಗಿರುವಂತಹ ವಿಚಾರವಾಗಿದೆ. ಅದನ್ನು ಸದನದಲ್ಲಿ ಘೋಷಣೆ ಮಾಡಬೇಕಾಗಿರುವಂತಹ ಅವಶ್ಯಕತೆ ಇಲ್ಲ. ಕರ್ನಾಟಕ ಸರ್ಕಾರಿ ನೌಕರರ ಸೇವಾ ನಿಯಮಾವಳಿಗಳ ಪ್ರಕಾರ ರಜೆಯನ್ನು ಮಂಜೂರು ಮಾಡುತ್ತಿದ್ದೇವೆ. ಅದನ್ನು ಬಹಳ ದೊಡ್ಡ ವಿಷಯವನ್ನಾಗಿ ಸದನದಲ್ಲಿ ಹೇಳುವಂತಹ ಅವಶ್ಯಕತೆ ಇಲ್ಲ ಎನ್ನುವುದು ನನ್ನ ಭಾವನೆಯಾಗಿದೆ.

(ಗೊಂದಲ)

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ನನ್ನ ಆಕ್ಷೇಪಣೆ ಏನೆಂದರೆ, ಕೇವಲ ಆಡಳಿತ ಪಕ್ಷವೊಂದೇ ಆಡಳಿತವನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ವಿರೋಧ ಪಕ್ಷಗಳ ಸಹಕಾರವೂ ಅಗತ್ಯವಾಗಿದೆ. ಆ ಸಹಕಾರವನ್ನು ನಾವು ಅವರಿಗೆ ನೀಡಿದ್ದೇವೆ. ಅವರು ಕನಿಷ್ಠ ಸೌಜನ್ಯಕ್ಕಾದರೂ ನಮ್ಮನ್ನು ಕರೆಯಬೇಕಾಗಿತ್ತು ಎನ್ನುವುದು ನಮ್ಮ ಮನದಾಳದ ಇಂಗಿತವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವಂತಹ ಹೇಳಿಕೆಯ ಕೊನೆಯ ವಾಕ್ಯದಲ್ಲಿ, "ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳ ಹಾಗೂ ವಿವಿಧ ಸಂಘಟನೆಗಳ ಮನವಿಯ ಮೇರೆಗೆ ಪದವಿಪೂರ್ವ ಕಾಲೇಜುಗಳ ಪ್ರಾಚಾರ್ಯರು ಹಾಗೂ ಉಪನ್ಯಾಸಕರುಗಳ ಮುಷ್ಕರದ ಅವಧಿಯನ್ನು ರಜಾ ದಿನಗಳೆಂದು, ಹೆಚ್ಚುವರಿ ಕೆಲಸವನ್ನು ನಿರ್ವಹಿಸುವುದರ ಮೂಲಕ ಸದರಿ ಮುಷ್ಕರದ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಿ ತಡೆಹಿಡಿದ ವೇತನವನ್ನು ಬಿಡುಗಡೆ ಮಾಡಲು ಆದೇಶಿಸಲಾಗುವುದು" ಎಂದು ಇದೆ. ಅಂದರೆ, ಆದೇಶಿಸಲಾಗುವುದು ಎಂದು ಹೇಳಲಾಗಿದೆ. "ಆದೇಶಿಸಲಾಗಿದೆ" ಎಂದು ಇಲ್ಲ. ಮಾನ್ಯ ಸಚಿವರು ಸದನದಲ್ಲಿ

ಆಶ್ವಾಸನೆಯನ್ನು ನೀಡುತ್ತಿದ್ದಾರೆಯೇ ಅಥವಾ ಆದೇಶವನ್ನು ಮಾಡಿದ್ದಾರೆಯೇ ಎನ್ನುವುದನ್ನು ಸ್ಪಷ್ಟಪಡಿಸಬೇಕಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, 'ಆದೇಶಿಸಲಾಗುತ್ತದೆಯೋ' ಅಥವಾ 'ಆದೇಶಿಸಲಾಗಿದೆಯೋ' ಎನ್ನುವುದನ್ನು ತಿಳಿಸಿ.

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ಅದು ಏನು ಎನ್ನುವುದನ್ನು ಸ್ಪಷ್ಟಪಡಿಸಬೇಕಾಗಿದೆ. ಇಲ್ಲದಿದ್ದರೆ ಸದನದಲ್ಲಿ ಇವರು ಆಶ್ವಾಸನೆ ಕೊಟ್ಟು ನಾನು ಮತ್ತು ಸಂಘಟನೆಗಳು ಮತ್ತೇ ಅವರ ಕಛೇರಿಗೆ ತಿರುಗಾಡುತ್ತಿರಬೇಕಾಗುತ್ತದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯ ಸರಿಯಾಗಿದೆ. ಬಿಡುಗಡೆ ಮಾಡಲು ಆದೇಶಿಸಲಾಗುವುದು ಎಂದು ಇದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮುಂದು):–**

'ಆದೇಶಿಸಲಾಗುವುದು' ಎಂದರೆ 'ಆದೇಶಿಸಲಾಗಿದೆ' ಎಂದೇ ಅರ್ಥ 'ಆದೇಶಿಸಲಾಗುವುದು' ಎನ್ನುವುದನ್ನು ಆದೇಶಿಸಲಾಗಿದೆ ಎಂದು ಈ ಸದನದ ಮೂಲಕ ಸರಿ ಮಾಡಲಾಗುವುದು.

**(ಆ) ರಾಜ್ಯದ ಅರಣ್ಯ ಗ್ರಾಮಗಳಲ್ಲಿ "ಜೆ.ಬಿ. ಸಿಂಡ್ರೋಮ್ ಹರಡುತ್ತಿರುವ ಬಗ್ಗೆ**

**ಸಭಾಪತಿಯವರು:–** ಬೆಳಿಗ್ಗೆ ಶೂನ್ಯ ವೇಳೆಯಲ್ಲಿ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಅದರ ಬಗ್ಗೆ ಮಧ್ಯಾಹ್ನ ಹೇಳಿಕೆಯನ್ನು ಮಾಡಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಈಗ ಅವರು ಹೇಳಿಕೆಯನ್ನು ಮಾಡಲಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಹೇಳಿಕೆಯ ಪ್ರತಿಯನ್ನು ಮಾನ್ಯ ವೀರಣ್ಣ ಮತ್ತಿಕಟ್ಟಿಯವರಿಗೆ ಕಳುಹಿಸಿಕೊಟ್ಟಿದ್ದೇನೆ.

ಜಿ.ಬಿ. ಸಿಂಡ್ರೋಮ್ (Guillian Barre Syndrome) ಎಂಬುವುದು ಬಹುತೇಕ ವೈರಾಣುಗಳಿಂದ ಬರುವ ಕಾಯಿಲೆಯಾಗಿದೆ. ರೋಗ ನಿರೋಧಕ ವೈಪರಿತ್ಯದಿಂದ ನರಗಳಿಗೆ ಸಂಬಂಧಿಸಿದಂತೆ ಹಾಗೂ ಕೈ ಕಾಲುಗಳಲ್ಲಿ ನಿಶಕ್ತಿ ಉಂಟಾಗುತ್ತದೆ. ಈ ಕಾಯಿಲೆಯು ಪ್ರತಿ ವರ್ಷ ಒಂದು ಲಕ್ಷ ಜನಸಂಖ್ಯೆಯಲ್ಲಿ 0.4 ರಿಂದ 1.7 ಜನರಲ್ಲಿ ಕಾಣಿಸಿಕೊಳ್ಳುವ ಸಂಭವವಿರುತ್ತದೆ. ಮುಂದುವರಿದು ಈ ಕಾಯಿಲೆಯಿಂದ ಬಾಧಿತರಾಗಿರುವ ರೋಗಿಗಳಲ್ಲಿ ಶೇ. 3 ರಿಂದ 5 ರಷ್ಟು ರೋಗಿಗಳಲ್ಲಿ ಮಾತ್ರ ರೋಗವು ಉಲ್ಬಣಗೊಂಡು ಉಸಿರಾಟದ ತೊಂದರೆಗೆ ಒಳಗಾಗುತ್ತಾರೆ. ಅಂತಹವರಿಗೆ ಉನ್ನತ ಮಟ್ಟದ ಆಸ್ಪತ್ರೆಗಳಲ್ಲಿ ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇದೆ.

ಪ್ರಾರಂಭದಲ್ಲಿ ಜ್ವರ, ಶೀತ, ಕೆಮ್ಮು, ನೆಗಡಿ, ವಾಂತಿ, ಭೇದಿ ಈ ಲಕ್ಷಣಗಳಿಂದ ಕೂಡಿದ್ದು, ಇಂತಹ ಸಂದರ್ಭಗಳಲ್ಲಿ ಸ್ಥಳೀಯ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯವಿರುತ್ತದೆ. ಕ್ರಮೇಣ ಕೈಕಾಲುಗಳಲ್ಲಿ ನಿಶಕ್ತಿ ಉಂಟಾಗಿ ರೋಗಿಯು ಉಲ್ಬಣಾವಸ್ಥೆಗೆ ಹೋಗುವ ಸಂಭವ ಇರುತ್ತದೆ. ರೋಗಿಯು ಉಲ್ಬಣಾವಸ್ಥೆ ತಲುಪಿ, ಉಸಿರಾಟದ ತೊಂದರೆಯಿಂದ ನರಳುತ್ತಿರುವ ಸಂದರ್ಭ ಹಾಗೂ ಬಹುಬೇಗ ಹಾಸಿಗೆ ಹಿಡಿಯುವ ಸಂದರ್ಭಗಳಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಮಟ್ಟದ ಆಸ್ಪತ್ರೆ ಹಾಗೂ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರಿಂದ ಚಿಕಿತ್ಸೆ ಪಡೆಯಬೇಕಾಗುತ್ತದೆ. ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ ಸರ್ಕಾರಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ I.V. Immunoglobulin ಚಿಕಿತ್ಸೆ ಅವಶ್ಯವಿರುವೆಡೆ ರೋಗಿಗಳಿಗೆ ಉಚಿತವಾಗಿ ನೀಡಲು ಕ್ರಮ ಕೈಗೊಳ್ಳಲಾಗುವುದು. Plasmapherosis ಚಿಕಿತ್ಸೆ ಅವಶ್ಯಕತೆ ಇರುವ ರೋಗಿಗಳಿಗೆ ಸದರಿ ಚಿಕಿತ್ಸೆಯು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಲಭ್ಯವಿದ್ದು, ಸದರಿ ಆಸ್ಪತ್ರೆಯಲ್ಲಿ ರೋಗಿಯು ಚಿಕಿತ್ಸೆ ಪಡೆದಲ್ಲಿ ಉಚಿತವಾಗಿ ನೀಡಲು ಕ್ರಮ ಕೈಗೊಳ್ಳಲಾಗುವುದು.

ಮುಂದುವರಿದು, ಜೋಯಿಡಾ ತಾಲ್ಲೂಕಿನಲ್ಲಿ ಇಂತಹ ಮೂರು ಪ್ರಕರಣಗಳು ವರದಿಯಾಗಿದ್ದು, ರೋಗಿಗಳು ಚಿಕಿತ್ಸೆಯನ್ನು ಪಡೆದು ಚೇತರಿಸಿಕೊಂಡಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹೇಳಿಕೆಯನ್ನು ನೀಡಿದ ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳು. ರೋಗಿಗಳು ಗಂಭೀರ ಸ್ಥಿತಿಯಲ್ಲಿರುತ್ತಾರೆ. ಅವರಿಗೆ ಉಚಿತ ಚಿಕಿತ್ಸೆಯನ್ನು ನೀಡುವುದರ ಜೊತೆಗೆ ಆಂಬ್ಯುಲೆನ್ಸ್ ಮೂಲಕ ರೋಗಿಗಳನ್ನು ಆಸ್ಪತ್ರೆಗೆ ಸಾಗಿಸುವ ವ್ಯವಸ್ಥೆಯನ್ನು ಮಾಡಬೇಕು.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಅಂತಹ ರೋಗಿಗಳಿಗೆ ಆಂಬ್ಯುಲೆನ್ಸ್ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ನೀಡುವಾಗ ಜೋಯಿಡಾ ತಾಲ್ಲೂಕಿನಲ್ಲಿ ಇಂತಹ ಮೂರು ಪ್ರಕರಣಗಳು ವರದಿಯಾಗಿದೆ ಎಂದು ಹೇಳಿದರು. ಜೋಯಿಡಾ ತಾಲ್ಲೂಕಿನಲ್ಲಿ 11 ವೈದ್ಯರು ಇರಬೇಕಾಗಿತ್ತು. ಆದರೆ ಅಲ್ಲಿ ಒಬ್ಬರು ವೈದ್ಯರು ಸಹ ಇಲ್ಲ. ಅಲ್ಲಿಗೆ ರೋಗಿಗಳು ಬರಲು ವಾಹನ ವ್ಯವಸ್ಥೆ ಏನೂ ಇಲ್ಲ. ಮಳೆಗಾಲದಲ್ಲಿ ಅಲ್ಲಿ ಬ್ರಿಡ್ಜ್ ಇಲ್ಲದೇ ಇರುವುದರಿಂದ ರೋಗಿಗಳು ಆಸ್ಪತ್ರೆಗೆ ಬಂದು ಮುಟ್ಟುವುದರೊಳಗೆ ತೀರಿಕೊಂಡಂತಹ ಪ್ರಸಂಗಗಳಿವೆ. ಅದು ಅಷ್ಟು ಹಿಂದುಳಿದ ತಾಲ್ಲೂಕಾಗಿದೆ. ಅಲ್ಲಿನ ಆಸ್ಪತ್ರೆಯಲ್ಲಿ ವೈದ್ಯರ ವ್ಯವಸ್ಥೆ ಇಲ್ಲದೇ ಈಗಾಗಲೇ ಜನರು ಎರಡು ದಿವಸಗಳಿಂದ ಸತ್ಯಾಗ್ರಹ ಕುಳಿತಿದ್ದಾರೆ. ಈ ವಿಚಾರ ಮಾನ್ಯ ಮಂತ್ರಿಗಳ ಗಮನಕ್ಕೂ ಸಹ ಬಂದಿರಬಹುದು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಅಲ್ಲಿ ಒಬ್ಬರು ವೈದ್ಯರು ಇದ್ದರು ಎಂಬುದು ಸನ್ಮಾನ್ಯ ಘೋಟ್ನಕರ ಶ್ರೀಕಾಂತ ಲಕ್ಷ್ಮಣರವರಿಗೂ ಗೊತ್ತಿದೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಅದೆಲ್ಲಾ ನನಗೆ ಹೇಳಬೇಡಿ. ಅಲ್ಲಿ ಈಗ ಒಬ್ಬರೂ ವೈದ್ಯರು ಇಲ್ಲ. ಅಲ್ಲಿ ಏಕೆ ವೈದ್ಯರಿಲ್ಲ ಎಂಬುದನ್ನು ಹೇಳಿ. ಮಾಡೋಣ, ಬಿಡೋಣ ಎನ್ನುವ ಉತ್ತರ ನನಗೆ ಬೇಡ. ನೀವು ಮಾಡುತ್ತೇನೆ ಎಂದು ಉತ್ತರವನ್ನು ಕೊಡಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಜೋಯಿಡಾ ಸರ್ಕಾರಿ ಆಸ್ಪತ್ರೆಯಲ್ಲಿ ಒಬ್ಬರು ವೈದ್ಯರು ನಿರಂತರವಾಗಿ ಕೆಲಸ ನಿರ್ವಹಿಸುತ್ತಿದ್ದರು. ಒಬ್ಬ ಜಿಲ್ಲಾ ಪಂಚಾಯತ್ ಸದಸ್ಯರು ಹೋಗಿ ಆ ವೈದ್ಯರಿಗೆ ಹೊಡೆದರು. ಆಗ ಆ ವೈದ್ಯರು ರಾಜೀನಾಮೆಯನ್ನು ಕೊಟ್ಟು ಹೋದರು. ಅದರ ಪರಿಣಾಮವಾಗಿ ಈಗ ಅಲ್ಲಿ ವೈದ್ಯರಿಲ್ಲ. ಈಗ ನಾವು ಬೇರೆ ಕಡೆಯಿಂದ ಡೆಪ್ಯುಟೇಶನ್ ಮಾಡಿ ಅಲ್ಲಿ ವೈದ್ಯರು ಇರುವಂತೆ ನೋಡಿಕೊಂಡಿದ್ದೇವೆ. ಅಲ್ಲಿ ಖಾಯಂ ಆಗಿ ವೈದ್ಯರು ಇರುವಂಥ ವ್ಯವಸ್ಥೆಯನ್ನು ಸರ್ಕಾರದ ಮಟ್ಟದಲ್ಲಿ ಮಾಡಲಾಗುತ್ತಿದೆ. ಆದರೆ ಈಗ ರೋಗಿಗಳಿಗೆ ತೊಂದರೆಯಾಗದೇ ಇರುವಂತೆ ನಾವು ನೋಡಿಕೊಂಡಿದ್ದೇವೆ. ಅಲ್ಲಿರುವ ವೈದ್ಯರ ಕೊರತೆ ಬಗ್ಗೆ ನನಗೆ ತಿಳಿದಿದೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಅಲ್ಲಿ 11 ಜನ ವೈದ್ಯರು ಇರಬೇಕಾಗಿತ್ತು. ಒಬ್ಬರು ವೈದ್ಯರಾದರು ಇರಬೇಕಲ್ಲಾ. ಜೋಯಿಡಾ ಆಸ್ಪತ್ರೆಗೆ ಒಬ್ಬರು ವೈದ್ಯರು ಸಾಕಾಗುತ್ತದೆಯೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಅಲ್ಲಿ ಒಬ್ಬರು ವೈದ್ಯರಿದ್ದರು, ಅವರು ರಾಜೀನಾಮೆಯನ್ನು ಕೊಟ್ಟು ಹೋದರು.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ನಮಗೆ ಈ ರೀತಿ ಕಣ್ಣೊರೆಸುವ ಉತ್ತರ ಬೇಡ. ವಸ್ತುಸ್ಥಿತಿ ಏನಿದೆ ಎಂಬುದನ್ನು ಸರಿಯಾಗಿ ಹೇಳಿ. ವೈದ್ಯರಿಲ್ಲದ ಕಾರಣ ಅಲ್ಲಿ ಜನರು ಸತ್ಯಾಗ್ರಹ ಕುಳಿತಿದ್ದಾರೆ. ಅದರ ಬಗ್ಗೆ ಏನಾದರೂ ಹೇಳಿ.

**ಸಭಾಪತಿಯವರು:–** ಮಾನ್ಯ ಘೋಟ್ನೇಕರ್‌ರವರೆ, ಅಲ್ಲಿಗೆ ಒಬ್ಬರು ವೈದ್ಯರನ್ನು ಒದಗಿಸಲಾಗಿದೆ ಎಂದು ಸಚಿವರು ಹೇಳಿದ್ದಾರೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ಸದರಿ ಆಸ್ಪತ್ರೆಗೆ ವೈದ್ಯರನ್ನು ಒದಗಿಸದೇ ಇರುವುದರಿಂದ ಅಲ್ಲಿನ ಜನರು ಸುಮಾರು 5-6 ದಿನಗಳಿಂದ ಸತ್ಯಾಗ್ರಹ ಕುಳಿತಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಆ ಆಸ್ಪತ್ರೆಯಲ್ಲಿ 11 ವೇಕೆನ್ಸಿ ಅಲ್ಲ, as on record, 4 ವೇಕೆನ್ಸಿ ಇದೆ. ಈಗ ಅಲ್ಲಿ ಒಬ್ಬರೇ ವೈದ್ಯರಿದ್ದಾರೆ ಎಂದು ಅವರು ಹೇಳುವಂಥಾದ್ದು ಸರಿ ಇದೆ. ಆ ವೈದ್ಯರನ್ನು ಹೊಡೆದು ಕಳುಹಿಸಿದ ಮೇಲೆ ಈಗ ಅಲ್ಲಿಗೆ ಬೇರೆ ವೈದ್ಯರನ್ನು ನಿಯೋಜಿಸಲಾಗಿದೆ. ಈಗ ಅಲ್ಲಿ ಒಬ್ಬರು ವೈದ್ಯರಿದ್ದಾರೆ. ಇನ್ನೊಂದಷ್ಟು ವೈದ್ಯರನ್ನು ಅಲ್ಲಿಗೆ ಕಳುಹಿಸುವಂಥ ಪ್ರಯತ್ನಗಳನ್ನು ನಾವು ಮಾಡುತ್ತೇವೆ. ಒಂದು ಅಂಶವನ್ನು ಇಲ್ಲಿರುವಂಥ ಎಲ್ಲರೂ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಗ್ರಾಮೀಣ ಪ್ರದೇಶಗಳಿಗೆ ಇವತ್ತು ನಾವು ವೈದ್ಯರನ್ನು ನೇಮಿಸಿದರೂ ಕೂಡ ಆ ವೈದ್ಯರುಗಳು 3 ಅಥವಾ 6 ತಿಂಗಳುಗಳಲ್ಲಿ ಅಲ್ಲಿಂದ ವಾಪಸ್ ಬರುವಂಥ ಪ್ರಕ್ರಿಯೆಗಳು ಎಲ್ಲಾ ಕಡೆಯೂ ನಡೆಯುತ್ತಿದೆ. ಕಳೆದ ಬಾರಿ ನಾವು ಸುಮಾರು 300 ಜನ ವೈದ್ಯರುಗಳನ್ನು ನೇಮಕಾತಿ ಮಾಡಿ ಎಲ್ಲಾ ಕಡೆಗೆ ಹಾಕಿದ್ದೇವೆ. ಗ್ರಾಮೀಣ ಪ್ರದೇಶಗಳಲ್ಲಿ ಮೂರು ತಿಂಗಳುಗಳು ಕಳೆದರೆ ಅಲ್ಲಿ ವೈದ್ಯರು ಇಲ್ಲದೇ ಇರುವಂಥ ಒಂದು ಪರಿಸ್ಥಿತಿ ಇದೆ. ಇದು ವಾಸ್ತವಿಕ ಸಂಗತಿ. ಆದರೆ ಸರ್ಕಾರ ಇದಕ್ಕಾಗಿ ವಿಶೇಷ ಪ್ರಯತ್ನಗಳನ್ನು ಮಾಡುತ್ತಿದೆ. ಈ ವರ್ಷ ನಾವು ನಿಶ್ಚಯ ಮಾಡುತ್ತಿದ್ದೇವೆ. ಯಾವುದಾದರೂ ಒಂದು ಹೊಸ ಕಾನೂನಿನ ಮುಖಾಂತರವಾದರೂ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರು ಇರಬೇಕೆನ್ನುವಂಥ ದೃಷ್ಟಿಯಿಂದ ಅದಕ್ಕೆ ಒಂದು ಹೊಸ ಕಾನೂನನ್ನು ತರಬೇಕೆನ್ನುವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಆರೋಗ್ಯ ಇಲಾಖೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರ ಕೊರತೆ ಮತ್ತು ಬೇರೆ ಬೇರೆ ಸಿಬ್ಬಂದಿಗಳ ಕೊರತೆ ಇರುವಂಥಾದ್ದು ಸತ್ಯವಿದೆ. ಆದರೆ ಇತ್ತೀಚಿನ ದಿನಗಳಲ್ಲಿ ನಾವು ಜಿಲ್ಲಾಧಿಕಾರಿಗಳಿಗೆ ವಿಶೇಷವಾದ ಅಧಿಕಾರಗಳನ್ನು ಕೊಟ್ಟಿದ್ದೇವೆ. ಗುತ್ತಿಗೆ ಆಧಾರದ ಮೇಲೆ ಅಲ್ಲಿರುವಂಥ ವೈದ್ಯರನ್ನು ತೆಗೆದುಕೊಳ್ಳಬೇಕು ಮತ್ತು

ಅವರನ್ನು ಅಲ್ಲಿಗೆ ನೇಮಕಾತಿ ಮಾಡಬೇಕೆಂದು ಹೇಳಿದ್ದೇವೆ. ಈಗಾಗಲೇ ಸುಮಾರು 100 ಜನ ವೈದ್ಯರನ್ನು ಬೇರೆ ಬೇರೆ ಜಿಲ್ಲೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವಂಥ ಪ್ರಕ್ರಿಯೆಗಳಾಗಿದೆ. ಇದನ್ನು ಮುಂದುವರೆಸುತ್ತಿದ್ದೇವೆ. ತಮ್ಮ ತಮ್ಮ ಭಾಗಗಳಲ್ಲಿ ಯಾರಾದರೂ ವೈದ್ಯರು ಈ ರೀತಿ ಗುತ್ತಿಗೆ ಆಧಾರದ ಮೇಲೆ ಬರುವವರಿದ್ದರೆ ದಯವಿಟ್ಟು ಅದನ್ನು ತಾವುಗಳು ಮಾಡಬೇಕು. ನಾನು ಇನ್ನೊಂದು ವಿನಂತಿಯನ್ನು ಮಾಡುತ್ತೇನೆ. ಎಲ್ಲಿಯೂ ಕೂಡ ವೈದ್ಯರಿಗೆ ಹೊಡೆಯಲಿಕ್ಕೆ ಹೋಗದ ಹಾಗೆ ಮತ್ತು ಹೊಡೆಯಲಿಕ್ಕೆ ಹೋಗುವವರ ವಿರುದ್ಧ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಿಕ್ಕೆ ನಾವೆಲ್ಲರೂ ಸಹಕಾರವನ್ನು ಕೊಡಬೇಕು.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವೇನು ಎಂ.ಎಸ್.ಗೆ, ಪೋಸ್ಟ್-ಗ್ರ್ಯಾಜುಯೇಶನ್‌ಗೆ ಮೆರಿಟ್ ಮೇಲೆ ಸರ್ಕಾರಿ ಸೀಟ್‌ಗಳನ್ನು ಕೊಡುತ್ತೇವೆ. ಸರ್ಕಾರಿ ಅವರುಗಳಿಗೆ ಇಷ್ಟು ಹಣವನ್ನು ಖರ್ಚು ಮಾಡುತ್ತಿದೆ. ಅವರು ತಮ್ಮ ಶಿಕ್ಷಣವನ್ನು ಮುಗಿಸಿದ ನಂತರ ಅಲ್ಲಿ ಇಲ್ಲಿ ಬೇರೆ ಕಡೆ ಹೋಗುವ ಬದಲು ಕಡ್ಡಾಯವಾಗಿ 2-3 ವರ್ಷಗಳ ಕಾಲ ಗ್ರಾಮೀಣ ಪ್ರದೇಶಗಳಿಗೆ ನಿಯೋಜಿಸುವ ಕೆಲಸವನ್ನು ಸರ್ಕಾರ ಮಾಡಬೇಕು.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದ ಧಾಟಿಯಲ್ಲಿಯೇ ನಾವು ಪ್ರಕ್ರಿಯೆಗಳನ್ನು ಪ್ರಾರಂಭ ಮಾಡಿದ್ದೇವೆ. ಅವರು ಹೇಳಿದ ಹಾಗೆ ಮಾಡುತ್ತೇವೆ.

**ಕ್ಯಾಪ್ಟನ್ ಗಾಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಹಾರಾಷ್ಟ್ರದಲ್ಲಿ ಈ ರೀತಿಯ ಸಮಸ್ಯೆ ಬಂದಾಗ ಅವರು ಅದಕ್ಕೊಂದು ಸಣ್ಣ ಪರಿಹಾರವನ್ನು ಕಂಡುಕೊಂಡಿದ್ದಾರೆ. ಅಲ್ಲಿರುವ ಆಯುರ್ವೇದಿಕ್ ವೈದ್ಯರುಗಳು ಒಂದು integration course ಮಾಡಿ, ಅವರಿಗೆ 6 ತಿಂಗಳು ಅಥವಾ 9 ತಿಂಗಳ ಒಂದು ತರಬೇತಿಯನ್ನು ಕೊಟ್ಟು ಅವರನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನೇಮಕಾತಿ ಮಾಡಿಕೊಂಡಿದ್ದಾರೆ. ಮಹಾರಾಷ್ಟ್ರ

ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ನಮ್ಮ ಎಲ್ಲಾ Primary Health Centre ಗಳಲ್ಲಿ ವೈದ್ಯರ ವ್ಯತ್ಯಾಸವಾಗುತ್ತಿಲ್ಲ. ಕೇವಲ ಎಂ.ಬಿ.ಬಿ.ಎಸ್. ಮಾಡಿರುವ ವೈದ್ಯರ ಮೇಲೆ ಅವಲಂಬಿತರಾದರೆ ಇದೇ ಸಮಸ್ಯೆ ಮುಂದುವರೆಯುತ್ತದೆ. ಹಾಗಾಗಿ ಕರ್ನಾಟಕದಲ್ಲಿಯೂ ಕೂಡ ಆ ವೈದ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸೇವೆಯನ್ನು ಮಾಡುತ್ತಿರುವುದರಿಂದ, ಹಿಂದೆ conversion course/integration course ಎನ್ನುವ ಒಂದು ಕೋರ್ಸ್ ನಮ್ಮ ರಾಜ್ಯದಲ್ಲಿತ್ತು. ಆ ಕೋರ್ಸಿಗೆ ಮತ್ತೆ ಚಾಲನೆ ಕೊಟ್ಟು ಅವರಿಗೆ ಪುನಃ 6 ರಿಂದ 9 ತಿಂಗಳ ಒಂದು ತರಬೇತಿಯನ್ನು ಕೊಟ್ಟು ಅವರನ್ನು ಗ್ರಾಮಾಂತರ ಪ್ರದೇಶಗಳಿಗೆ ನಿಯೋಜಿಸಿದರೆ ಗ್ರಾಮಾಂತರ ಪ್ರದೇಶದ ಬಡ ಜನರಿಗೆ ಸ್ವಲ್ಪವಾದರೂ ವೈದ್ಯಕೀಯ ಸೌಲಭ್ಯಗಳ ಅನುಕೂಲತೆ ಸಿಗುತ್ತದೆ.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೇ, ಹಿಂದೆ ನಾನು ಸದನದಲ್ಲಿ ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಆಯುರ್ವೇದಿಕ್ ಓದಿದಂತಹ ನಮ್ಮ ಅನೇಕ ಜನ ವೈದ್ಯರಿದ್ದಾರೆ. ಅವರಿಗೆ ಒಂದು bridge course ನ್ನು ಮಾಡಿ. ಈ ಹಿಂದೆ ಇದು ಇತ್ತು. BSAM ಇದ್ದುದನ್ನು BAMS ಎಂದು ಮಾಡುವಂಥಾದ್ದು, ಮಧ್ಯದಲ್ಲಿ ಒಂದು bridge course ಇತ್ತು. ಅದನ್ನು ಮಾಡಿದರೆ ಅವರು ಹಳ್ಳಿಗಳಿಗೆ ಹೋಗಿ ಉಳಿದುಕೊಂಡು ಸೇವೆ ಸಲ್ಲಿಸುತ್ತಾರೆ. ಆಗ ವೈದ್ಯರ ಕೊರತೆ ಸಮಸ್ಯೆ ಬಗೆಹರಿಯುತ್ತದೆ. ಆದರೆ ಒಂದು ಹೊಸ syndrome ಇದೆ, ಅದು ‘allopathy syndrome’ ಎಂದು. ಈ ‘allopathy syndrome’ ನವರು ಆಯುರ್ವೇದಿಕ್‌ನವರನ್ನು ಮಲತಾಯಿ ಮಕ್ಕಳ ತರಹ ನೋಡಿಕೊಳ್ಳುತ್ತಾರೆ. ಅವರನ್ನು ಹತ್ತಿರ ಬರುವುದಕ್ಕೂ ಬಿಡುವುದಿಲ್ಲ. ಅವರೂ ಕೆಲಸವನ್ನು ಮಾಡುವುದಿಲ್ಲ, ಇವರನ್ನು ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ. ಆಯುರ್ವೇದಿಕ್‌ನವರನ್ನು ಸೇರಿಸಿಕೊಂಡರೆ ನಮ್ಮ ಎಲ್ಲಾ ಸಮಸ್ಯೆ ಬಗೆಹರಿಯುತ್ತದೆ.

## (ಇ) ಅತಿಥಿ ಉಪನ್ಯಾಸಕರ ವೇತನ ಪಾವತಿ ಹಾಗೂ ಖಾಯಮಾತಿ ಕುರಿತು

**ಸಭಾಪತಿಯವರು:–** ಇವತ್ತು ಬೆಳಿಗ್ಗೆ ಮಾನ್ಯ ಬಸವರಾಜ ಹೊರಟ್ಟಿಯವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರವನ್ನು ನೀಡುತ್ತಾರೆ.

**ಡಾ|| ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ,

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರುಗಳನ್ನು ಆಯ್ಕೆ ಮಾಡಿಕೊಳ್ಳಲು ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ ಅನುಮತಿಯನ್ನು ನೀಡಲಾಗಿದೆ. ಸ್ನಾತಕೋತ್ತರ ಪದವಿ ಪಡೆದು ಎನ್.ಇ.ಟಿ. / ಎಸ್.ಎಲ್.ಇ.ಟಿ. ಅಥವಾ ಪಿಹೆಚ್.ಡಿ. ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ಮಾಸಿಕ ರೂ. 10,000/– ಗಳನ್ನು ನೀಡಲು ಹಾಗೂ ಸ್ನಾತಕೋತ್ತರ ಪದವಿ ಪಡೆದ (ಕನಿಷ್ಟ ಶೇಕಡ 55ರಷ್ಟು ಅಂಕಗಳನ್ನು ಸಂಬಂಧಿಸಿದ ವಿಷಯದಲ್ಲಿ ಪಡೆದಿರುವ) ಅತಿಥಿ ಉಪನ್ಯಾಸಕರುಗಳಿಗೆ ರೂ. 8,000/–ಗಳನ್ನು ನೀಡಲಾಗುತ್ತಿದೆ. ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯ ಪ್ರಥಮ ದರ್ಜೆ ಕಾಲೇಜುಗಳು ಸಾಮಾನ್ಯವಾಗಿ ಜುಲೈ ಆಗಸ್ಟ ತಿಂಗಳಲ್ಲಿ ಪ್ರಾರಂಭವಾಗುತ್ತಿದ್ದು, ಯಾವ ವಿಷಯಗಳಲ್ಲಿ ಅಧ್ಯಾಪಕರ ಕೊರತೆ ಉಂಟಾಗುತ್ತಿದೆಯೋ ಅಂತಹ ವಿಷಯಗಳಿಗೆ ಅಕ್ಟೋಬರ್ ತಿಂಗಳಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುತ್ತದೆ. 2010–11ನೇ ಸಾಲಿನಲ್ಲಿ 20.00 ಕೋಟಿ 2011–12ನೇ ಸಾಲಿನಲ್ಲಿ ಇದುವರೆಗೆ ರೂ. 7,00,68,000.00 ಹಾಗೂ ರೂ. 12,99,30,000/– ಒಟ್ಟು 20.00 ಕೋಟಿಗಳನ್ನು ಅತಿಥಿ ಉಪನ್ಯಾಸಕರುಗಳಿಗೆ ಗೌರವಧನ ನೀಡುವ ಸಲುವಾಗಿ ಬಿಡುಗಡೆ ಮಾಡಲಾಗಿದೆ. ಉಳಿಕೆ ಹಣವನ್ನು ಬಿಡುಗಡೆ ಮಾಡಲು ಕ್ರಮ ಜರುಗಿಸಲಾಗುವುದು.

ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ, ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸುವ ಬಗ್ಗೆ ಯಾವುದೇ ಪ್ರಸ್ತಾವನೆಯು ಸರ್ಕಾರದಲ್ಲಿರುವುದಿಲ್ಲ ಹಾಗೂ ಇವರ ಸಕ್ರಮಾತಿ ಪ್ರಶ್ನೆಯೇ ಉದ್ಭವಿಸುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೆ, ಪ್ರಥಮ ದರ್ಜೆ ಕಾಲೇಜುಗಳು ಜೂನ್, ಜುಲೈ ತಿಂಗಳುಗಳಲ್ಲಿ ಪ್ರಾರಂಭವಾಗುತ್ತದೆ. ಅತಿಥಿ ಉಪನ್ಯಾಸಕರುಗಳನ್ನು ಅಕ್ಟೋಬರ್ ತಿಂಗಳಿನಲ್ಲಿ ನೇಮಕ ಮಾಡುವ ವ್ಯವಸ್ಥೆ ಮಾಡಿದ್ದೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ ಅಕ್ಟೋಬರ್ ತಿಂಗಳಿನಲ್ಲಿ ಒಂದು ಸೆಮಿಸ್ಟರ್ ಅಂತಿಮ ಘಟಕ್ಕೆ ಬಂದಿರುತ್ತದೆ. ಆದ್ದರಿಂದ, ಜುಲೈ ಕೊನೆಯ ಭಾಗದಲ್ಲೇ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಡಾ|| ವಿ.ಎಸ್. ಆಚಾರ್ಯ:–** ಜುಲೈ, ಆಗಸ್ಟ್‌ನಲ್ಲೇ ಮಾಡುತ್ತೇವೆ. ಆದರೆ, ಅಂತಿಮವಾಗಿ ನಮಗೆ ವಿದ್ಯಾರ್ಥಿಗಳ ಸಂಖ್ಯೆ, ಹಾಜರಾತಿ ಇತ್ಯಾದಿಗಳು ಗೊತ್ತಾಗುವುದು ಅಕ್ಟೋಬರ್ ಮೊದಲ ವಾರದಲ್ಲಿ. ಹಾಗಾಗಿ . . .

**ಶ್ರೀ ಮರಿತಿಬ್ಬೇಗೌಡ:–** ಅಕ್ಟೋಬರ್‌ನಲ್ಲಿ ಒಂದನೆ ಸೆಮಿಸ್ಟರ್ ಮುಗಿಯುವ ಹಂತದಲ್ಲಿರುತ್ತದೆ. ಆದ್ದರಿಂದ . . .

**ಸಭಾಪತಿಯವರು:–** ಮಾನ್ಯ ಸಚಿವರು ಹೇಳಿದ್ದು ನಿಮಗೆ ಅರ್ಥವಾಗಲಿಲ್ಲ. ಅವರು, ಅತಿಥಿ ಉಪನ್ಯಾಸಕರನ್ನು ಜುಲೈ, ಆಗಸ್ಟ್ ತಿಂಗಳಿನಲ್ಲೇ ನೇಮಕ ಮಾಡುತ್ತೇವೆ, ಇನ್ನೂ ಬೇಕಾದರೆ ಅಕ್ಟೋಬರ್ ತನಕವೂ ಮಾಡುತ್ತೇವೆ ಎಂದು ಹೇಳಿದರು.

ನಮ್ಮ ಕಾರ್ಯಕಲಾಪ ಪಟ್ಟಿಯಲ್ಲಿ ಸಣ್ಣ ಬದಲಾವಣೆ ಆಗಿದೆ. ಮುಖ್ಯಮಂತ್ರಿಗಳು ಸದನದಲ್ಲಿರುವುದರಿಂದ ನಿಯಮ 330ರ ಅಡಿಯಲ್ಲಿರುವ ಕೊನೆಯ ವಿಷಯವನ್ನು ಮೊದಲು ತೆಗೆದುಕೊಳ್ಳೋಣ. ಏಕೆಂದರೆ ಅದು ಮುಖ್ಯಮಂತ್ರಿಗಳಿಗೆ ಸಂಬಂಧಪಡುತ್ತದೆ. ನಂತರ ಮಿಕ್ಕ ವಿಷಯಗಳನ್ನು

ತೆಗೆದುಕೊಳ್ಳುತ್ತೇನೆ. ನಿನ್ನೆ ಶೂನ್ಯವೇಳೆಯ ಕೆಲವು ವಿಚಾರಗಳಿಗೆ ಸಂಬಂಧಪಟ್ಟಂತೆ ಉತ್ತರ ಸಿಕ್ಕಿಲ್ಲ. ಅದನ್ನು ನಾಳೆ ನಾಡಿದ್ದರ ಒಳಗೆ ಕೊಡಿಸುತ್ತೇನೆ. ಈಗ ಮಾನ್ಯ ಎಂ.ಸಿ. ನಾಣಯ್ಯನವರು ನಿಯಮ 330ರ ಅಡಿಯಲ್ಲಿರುವ ವಿಷಯದ ಬಗ್ಗೆ ಪ್ರಸ್ತಾಪ ಮಾಡಬೇಕು.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಗಳೆ, ನನ್ನದೊಂದು ಗಮನ ಸೆಳೆಯುವ ಸೂಚನೆ ಇದೆ. ನಾನೀಗ ಗಮನ ಸೆಳೆಯುತ್ತೇನೆ. ದಯಮಾಡಿ ನನಗೆ ಅವಕಾಶ ಕೊಡಿ,

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಐದು ಗಂಟೆಗೆ ಹೋಗಬೇಕಾದ್ದರಿಂದ ಅವರಿಗೆ ಸಂಬಂಧಪಟ್ಟ ವಿಷಯ ಮೊದಲು ತೆಗೆದುಕೊಳ್ಳೋಣವೆಂದು ಮಾನ್ಯ ನಾಣಯ್ಯನವರನ್ನು ಕರೆದೆ. ಗಮನ ಸೆಳೆಯುವ ಸೂಚನೆ ಅಡಿ ಮೊದಲ ವಿಷಯ ಮಾನ್ಯ ಕೊಂಡಯ್ಯನವರದ್ದು. ಆದರೆ ಅವರು ಸದನದಲ್ಲಿ ಇಲ್ಲ. ಆಯಿತು ನೀವು ಮಾತನಾಡಿ. ಆದರೆ ಇದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳಬಾರದು. ನೀವು ಕೇವಲ ಗಮನ ಮಾತ್ರ ಸೆಳೆಯಬೇಕು. ಸರ್ಕಾರದ ಹತ್ತಿರ ಈಗ ಉತ್ತರ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರು ಇದ್ದಾರೆ, ಮಾನ್ಯ ಮುಖ್ಯಮಂತ್ರಿಗಳೂ ಇದ್ದಾರೆ. ಹಾಗಾಗಿ ಉತ್ತರ ಕೊಡಬಹುದು.

## 6. ಗಮನಸೆಳೆಯುವ ಸೂಚನೆ

**ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ನೀರಿನ ಅಭಾವವನ್ನು ನೀಗಿಸಲು ಶಾಶ್ವತವಾದ ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ಬಗ್ಗೆ.**

**ಶ್ರೀ ಎ.ಆರ್. ಸುದರ್ಶನ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳು ಬಯಲು ಸೀಮೆ ಪ್ರದೇಶವಾಗಿರುವುದರಿಂದ, ಕುಡಿಯುವ ನೀರು, ವ್ಯವಸಾಯ, ತೋಟಗಾರಿಕೆಗೆ ನೀರಿನ ಅಭಾವವಿರುತ್ತದೆ. ಜನತೆ-ಜಾನುವಾರುಗಳು ಸಂಕಷ್ಟಕ್ಕೆ ಸಿಲುಕಿರುತ್ತವೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳು ಜಂಟಿಯಾಗಿ ಯಾವುದೇ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಯೋಜನೆಗಳನ್ನು ಮುಂದಿನಗಳಲ್ಲಿ ಹಾಗೂ ತ್ವರಿತವಾಗಿ ಕೈಗೊಳ್ಳದಿದ್ದಲ್ಲಿ ಈ ಜಿಲ್ಲೆಗಳು ಮರಳುಗಾಡು ಪ್ರದೇಶವಾಗಿ ಪರಿವರ್ತನೆಯಾಗುವ ಎಲ್ಲಾ ಸಾಧ್ಯತೆಗಳು ಇವೆ. ಈ ಹಿನ್ನೆಲೆಯಲ್ಲಿ ಶಾಶ್ವತ ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ಅಗತ್ಯತೆ ಸರ್ಕಾರದ ಮುಂದಿದೆ. ಮೇಲ್ಕಂಡ ಜಿಲ್ಲಾ ವ್ಯಾಪ್ತಿಯ ಪ್ರದೇಶಗಳಿಗೆ ಯಾವ ಯಾವ ಮೂಲಗಳಿಂದ ಅಂದರೆ, ಕಾವೇರಿ, ಕೃಷ್ಣಾ, ಭದ್ರಾ ಮೇಲ್ದಂಡೆ, ಎತ್ತಿನಹೊಳೆ, ನೇತ್ರಾವತಿ ಇತ್ಯಾದಿ ನದಿ ಮೂಲಗಳಿಂದ ನೀರನ್ನು ಪೂರೈಸುವ ಬಗ್ಗೆ ಸರ್ವೇ ಮಾಡಲಾಗಿದೆ. ಸರ್ಕಾರ ರೂಪಿಸಿರುವ ಯೋಜನೆಗಳ ಬಗ್ಗೆ, ಅವುಗಳ ಅನುಷ್ಠಾನ ಅಂದಾಜಿನ ಬಗ್ಗೆ, ವೆಚ್ಚ ಹಾಗೂ ಅದನ್ನು ಯಾವ ಮೂಲದಿಂದ ಭರಿಸಲು ಪ್ರಯತ್ನ ಮಾಡಲಾಗಿದೆ ಎಂಬುದನ್ನು ತಿಳಿಸಬೇಕು. ಈ ಸಂಬಂಧ ಸರ್ಕಾರ ಹೊರಡಿಸಿರುವ ಆದೇಶಗಳೇನು? ಟೆಂಡರ್ ಇತ್ಯಾದಿ ವಿವರಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಗಳೆ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಕೃಷ್ಣೆಯ ನೀರನ್ನು ತಂದರೆ ಉತ್ತರ ಕರ್ನಾಟಕದ ಜನರ ಪರಿಸ್ಥಿತಿ ಏನಾಗಬೇಕು? ಕೃಷ್ಣೆ ನದಿಯ ಬಗ್ಗೆ ಪ್ರಸ್ತಾಪಿಸಿದ್ದರಿಂದ ನಾನು ಮಾತನಾಡಲು ಎದ್ದು ನಿಂತಿದ್ದೇನೆ. ನಾನು ಆ ಭಾಗದಿಂದ ಬಂದಿದ್ದೇನೆ, ಅವರ ದುಃಖ-ದಮ್ಮಾನುಗಳು ನನಗೆ ಗೊತ್ತಿದೆ. ಬೆಂಗಳೂರಿಗೆ ಕೃಷ್ಣೆ ನೀರನ್ನು ತಂದರೆ ಆ ಭಾಗ ಬರಗಾಲದಿಂದ ಬಳಲುತ್ತದೆ. ಕೃಷ್ಣೆ ಉತ್ತರ ಕರ್ನಾಟಕದ ಜೀವನಾಡಿ ಎನ್ನುವುದನ್ನು ಅರ್ಥ ಮಾಡಿಕೊಂಡು ನಾನು ಹೇಳುತ್ತಿದ್ದೇನೆ. ಮಾನ್ಯ ಸುದರ್ಶನ್‌ರವರು ಹೇಳುವ ವಿಚಾರಕ್ಕೆ ನಾನು ಅಡ್ಡಿ ಪಡಿಸುತ್ತಿಲ್ಲ. ಆದರೆ ಕೃಷ್ಣೆಯ ಬಗ್ಗೆ ಪ್ರಸ್ತಾಪ ಇದ್ದುದರಿಂದ ನಾನು ಮಾತನಾಡುವುದಕ್ಕೆ ಎದ್ದು ನಿಂತೆ. ಕೃಷ್ಣೆ ನೀರನ್ನು ಬೆಂಗಳೂರಿಗೆ ತಂದರೆ ನಮ್ಮ ಪರಿಸ್ಥಿತಿ ಏನಾಗಬೇಕು? ನಾನು ನನ್ನ ವಿಚಾರಗಳನ್ನು ಹೇಳುತ್ತಿದ್ದೇನೆ. ಮಾನ್ಯ ಸಚಿವರು ಉತ್ತರ ಕೊಡುವಾಗ ಇದರ ಬಗ್ಗೆ ಸ್ಪಷ್ಟಪಡಿಸಲಿ. ಇಂತಹ ವಿಚಾರ ಬಂದಾಗ ನಾನಿಲ್ಲಿ ಸುಮ್ಮನೆ ಕುಳಿತುಕೊಂಡರೆ ನಮ್ಮ ಜನ ನನ್ನನ್ನು ಕ್ಷಮಿಸುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸುದರ್ಶನ್‌ರವರು ಗಮನ ಸೆಳೆದಿದ್ದಾರೆ. ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಡುತ್ತಾರೆ. ಮಾನ್ಯ ವೆಂಕಟೇಶ್‌ರವರ ಹೆಸರಿನಲ್ಲಿ ಇದೇ ವಿಷಯವಾಗಿ ಪ್ರಶ್ನೆ ಇದ್ದುದರಿಂದ ನಾನು, ಸದರಿ ಚರ್ಚೆಯಲ್ಲಿ ಅವರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೆ. ಅವರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಆದರೆ ನಾವೊಂದು ಕಾನೂನು ಮಿತಿಯಲ್ಲಿ ಚರ್ಚೆ ಮಾಡಬೇಕು. ಮಾನ್ಯ ಸದಸ್ಯರು ಗಮನವನ್ನು ಸೆಳೆದಿದ್ದಾರೆ. ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ. ನಂತರ ನಾನು ಮತ್ತೆ ಒಬ್ಬರಿಗೋ ಅಥವಾ ಇಬ್ಬರಿಗೋ, ಅದರಲ್ಲೂ ವಿಶೇಷವಾಗಿ ಮಾನ್ಯ ವೆಂಕಟೇಶ್‌ರವರಿಗೆ ಕ್ಲ್ಯಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ಈಗ ಮಾನ್ಯ ಸಚಿವರಿಂದ ಉತ್ತರ.

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಗಳೆ, . .

ಶ್ರೀ ಜಿ.ಎಸ್. ಪರಮಶಿವಯ್ಯರವರು ಪಶ್ಚಿಮಾಭಿಮುಖವಾಗಿ ಹಾಗೂ ಪೂರ್ವಾಭಿಮುಖವಾಗಿ ಹರಿಯುವ ನದಿಗಳ ಹೆಚ್ಚುವರಿ ನೀರನ್ನು ಕರ್ನಾಟಕ ರಾಜ್ಯದ ಬರಪೀಡಿತ ಜಿಲ್ಲೆಗಳಿಗೆ ಹರಿಸಲು ರೂಪಿಸಿರುವ ಯೋಜನೆಗಳ ಮುಖ್ಯಾಂಶಗಳು

ಕರ್ನಾಟಕ ರಾಜ್ಯದ ಬರಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸಲು ಮತ್ತು ಅಂತರ್ಜಲ ಹೆಚ್ಚಿಸುವ ಉದ್ದೇಶದಿಂದ ಶ್ರೀ ಜಿ.ಎಸ್. ಪರಮಶಿವಯ್ಯರವರು ಯೋಜನೆಗಳನ್ನು ರೂಪಿಸಿ, ಸರ್ಕಾರಕ್ಕೆ 2001ರಲ್ಲಿ ನಂತರ 2004ರಲ್ಲಿ ಪರಿಷ್ಕೃತ ಪ್ರಸ್ತಾವನೆಯನ್ನು (ಮಾಸ್ಟರ್ ಪ್ಲಾನ್) ಸಲ್ಲಿಸಿರುತ್ತಾರೆ. ಶ್ರೀ ಜಿ.ಎಸ್. ಪರಮಶಿವಯ್ಯರವರು ಸಲ್ಲಿಸಿರುವ ಮಾಸ್ಟರ್ ಪ್ಲಾನ್‌ನಲ್ಲಿ 3 ಯೋಜನೆಗಳನ್ನು ಪ್ರಸ್ತಾಪಿಸಿರುತ್ತಾರೆ.

ಸದರಿ ಯೋಜನೆಯ ತನಿಖೆ ಹಾಗೂ ಸಮೀಕ್ಷಾ ಕಾರ್ಯಗಳನ್ನು ಕೈಗೊಳ್ಳಲು ದಿನಾಂಕ: 12–09–2003 ರಲ್ಲಿ ಮೆ:ಎನ್.ಆರ್.ಎಸ್.ಸಿ., ಹೈದರಾಬಾದ್ ಇವರೊಂದಿಗೆ ಒಡಂಬಡಿಕೆ ಒಪ್ಪಂದವನ್ನು ಮಾಡಿಕೊಳ್ಳಲಾಯಿತು.

ಮೆ:ಎನ್.ಆರ್.ಎಸ್.ಸಿ., ಸಂಸ್ಥೆಯು ದಿನಾಂಕ: 14–12–2009 ರಲ್ಲಿ ಕೈಗೊಂಡಿರುವ ಕ್ರಮಗಳ ಅನುಗುಣವಾಗಿ 3.86 ಕೋಟಿಗಳನ್ನು ಪಾವತಿಸಲಾಗಿ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸಿರುತ್ತಾರೆ.

1. ಥಿಮ್ಯಾಟಿಕ್ ಮ್ಯಾಪ್ಸ್
2. ರನ್ ಅಥವಾ ಎಸ್ಟಿಮೇಟ್ಸ್
3. Setting up of Geomatic map in WRDO
4. Acquisition of ALTM-DC data of garland canal
5. DEMs, ORTHOS, Contours & 2D maps
6. Digitised cadastral village maps of service canal area

ಬಾಕಿ ಕೆಲಸಗಳಾದ ಸೇವಾ ಕಾಲುವೆಯ ಸರ್ವೆ, ಸಮೀಕ್ಷೆ ಮತ್ತು ವಿವರವಾದ ಯೋಜನಾ ವರದಿ ತಯಾರಿಕೆಯ ಕಾರ್ಯವನ್ನು ಮಾಡಿರುವುದಿಲ್ಲ. ಇದನ್ನು ಪರಿಣಿತಿ ಹೊಂದಿರುವ ಬೇರೆ ಸಂಸ್ಥೆಗಳಿಂದ ನಿರ್ವಹಿಸಲು 2010 ರಲ್ಲಿ ತಿಳಿಸಿರುತ್ತಾರೆ. ಆದುದರಿಂದ, ಸರ್ಕಾರದ ಪತ್ರದಲ್ಲಿ ಸೇವಾ ಕಾಲುವೆ ಸಮೀಕ್ಷೆ ಕಾರ್ಯವನ್ನು ಟೆಂಡರ್ ಮುಖಾಂತರ ಕ್ರಮ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

(5.00 ಗಂಟೆ)

**ಶ್ರೀ ಆರ್.ವಿ. ವೆಂಕಟೇಶ್ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಬೆಳಿಗ್ಗೆ ಕೇಳಿದ ಒಂದು ಪ್ರಶ್ನೆಗೆ ಸರ್ಕಾರದಿಂದ ಉತ್ತರ ಬಂದಿದೆ. ಆದರೆ ಈ ಉತ್ತರಕ್ಕೆ ಸರ್ಕಾರ ಎಷ್ಟರಮಟ್ಟಿಗೆ ಬದ್ಧವಾಗಿದೆ, ಉತ್ತರ ಕೊಟ್ಟಿರುವುದರಿಂದ ಸರ್ಕಾರದ ಪಾತ್ರ ಎಷ್ಟಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಈ ಉತ್ತರವನ್ನು ಶ್ರೀ ಜಿ.ಎಸ್. ಪರಮಶಿವಯ್ಯನವರ ಒಂದು ಪ್ರಸ್ತಾಪದ ಆಧಾರ ಹಾಗೂ ಒಂದು ಖಾಸಗಿ ಕಂಪನಿ ಪ್ರಸ್ತಾಪಿಸಿರುವ ಆಧಾರದಲ್ಲಿ ಈ ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರದ ಮಟ್ಟದಲ್ಲಿ ತಜ್ಞರುಗಳೇ ಇಲ್ಲವೇ, ಇಂಜಿನಿಯರ್‌ಗಳೇ ಇಲ್ಲವೇ? ಶ್ರೀ ಪರಮಶಿವಯ್ಯನವರು ಯಾವ ಕೆಪಾಸಿಟಿಯಲ್ಲಿ ಇದನ್ನು ಕೊಟ್ಟಿದ್ದಾರೆ ಮತ್ತು ಅವರು ಸರ್ಕಾರದಲ್ಲಿ ಏನಾಗಿದ್ದಾರೆ ಎಂಬುದನ್ನು ನಾವು ತಿಳಿಯಬೇಕಾಗಿದೆ. ಮಾನ್ಯ ಮಂತ್ರಿಗಳು ಏಕೆ ಈ ರೀತಿಯ ಉತ್ತರವನ್ನು ಕೊಟ್ಟಿದ್ದಾರೆ ಎಂಬ ಒಂದು ಅಂಶ ಗೊತ್ತಾಗಬೇಕಾಗಿದೆ. ಮುಖ್ಯವಾಗಿ ನಮ್ಮ ರಾಜ್ಯದ 8 ಬರಪೀಡಿತ ಜಿಲ್ಲೆಗಳೇನಿವೆ, ಬಯಲು ಸೀಮೆಯ ಜಿಲ್ಲೆಗಳು ಬೆಂಗಳೂರು ನಗರವನ್ನು ಸೇರಿಸಿಕೊಂಡು ಈ 8 ಜಿಲ್ಲೆಗಳಲ್ಲಿ ವಿಶೇಷವಾಗಿ ಕುಡಿಯುವ ನೀರಿನ ಸಲುವಾಗಿ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಈ ಉತ್ತರದಲ್ಲಿ ಇನ್ನೊಂದು ಅಂಶ ಏನು ಎದ್ದು ಕಾಣುತ್ತಿದೆ ಮತ್ತು ಸರ್ಕಾರದ ನಡವಳಿಕೆ ಬಗ್ಗೆ ಏನು ಅನುಮಾನಾಸ್ಪದವಾಗಿದೆ ಎಂದರೆ, ನಾನು ಕೇಳಿರತಕ್ಕಂಥಾದ್ದು ಎತ್ತಿನಹೊಳೆ, ಎತ್ತಿನಹೊಳೆಗಿಂತ ಹೆಚ್ಚಾಗಿ ನೇತ್ರಾವತಿ ನದಿ ಪ್ರದೇಶದಲ್ಲಿ ಹೆಚ್ಚು ಮಳೆಯಾಗಿ ಏನು ಹೆಚ್ಚಿನ ನೀರು ಹರಿದು ಹೋಗುತ್ತದೆ ಮತ್ತು ಪ್ರವಾಹ ಬಂದಾಗ ನೀರು

ಹರಿದು ಹೋಗುತ್ತದೆ. ಆ ನೀರನ್ನು ಬೆಂಗಳೂರು ನಗರಕ್ಕೆ ಮತ್ತು ಇತರೇ ಬಯಲು ಸೀಮೆ ಜಿಲ್ಲೆಗಳಿಗೆ ತರತಕ್ಕಂಥ ಕಾರ್ಯರೂಪದ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಈ ಅಂಶ ಸರ್ಕಾರದ ಇಡೀ ಉತ್ತರದಲ್ಲಿ ಎಲ್ಲಿಯೂ ಸಹ ಪ್ರಸ್ತಾಪವಾಗಿಲ್ಲ. ಉತ್ತರದಲ್ಲಿ 'ನೇತ್ರಾವತಿ' ಎನ್ನುವ ಪದವೇ ಇಲ್ಲ. ಮುಖ್ಯಮಂತ್ರಿಗಳು ಇಡೀ ಕರ್ನಾಟಕ ರಾಜ್ಯಕ್ಕೆ ಮುಖ್ಯಮಂತ್ರಿಗಳು.

**ಡಾ|| ವಿ.ಎಸ್. ಆಚಾರ್ಯ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, 1,200 ಟಿಎಂಸಿ ನೀರಿರುವ ಕೃಷ್ಣ ನದಿಯ ಬಗ್ಗೆ ಮಾನ್ಯ ಸುದರ್ಶನ್‌ರವರು ಹೇಳಿದ ಕೂಡಲೇ, ಅವರು ತಪ್ಪಿ ಕೃಷ್ಣ ನದಿ ಬಗ್ಗೆ ಹೇಳಿದರೋ ಏನೋ ಗೊತ್ತಿಲ್ಲ. ಕೃಷ್ಣ ನದಿಯ ಬಗ್ಗೆ ಹೇಳಿದ ತಕ್ಷಣ ಮಾನ್ಯ ಎಸ್.ಆರ್. ಪಾಟೀಲರು ಎಷ್ಟು ಕಾಳಜಿಯನ್ನು ವಹಿಸಿದರು ಎಂಬುದನ್ನು ಈಗ ಹತ್ತು ನಿಮಿಷಗಳ ಹಿಂದೆ ನಾವೆಲ್ಲರೂ ನೋಡಿದ್ದೇವೆ. ಈಗ ಒಟ್ಟು 23 ನದಿಗಳಲ್ಲಿ ಒಟ್ಟು 2,000 ಟಿಎಂಸಿ ನೀರಿದೆ. ನೇತ್ರಾವತಿ ನದಿಯಲ್ಲಿಯೂ ಸಹ ಸಾಕಷ್ಟು ನೀರಿದೆ. ಆದರೆ ನೇತ್ರಾವತಿ ನದಿ ಪಶ್ಚಿಮ ಘಟ್ಟದ ಕೆಳಗಡೆ ಮಾತ್ರ ನೇತ್ರಾವತಿ ನದಿ ವಿನಃ ಮೇಲೆ ಇರುವಂಥಾದ್ದು ನೇತ್ರಾವತಿ ಜಲ ಮೂಲ ಮಾತ್ರ. ಆದ್ದರಿಂದ ಪಶ್ಚಿಮ ಘಟ್ಟದಲ್ಲಿ ಬೀಳುವ ನೀರಿನ ಬಗ್ಗೆ ಹೇಳುವುದಾದರೆ, ತಾಂತ್ರಿಕ ಸಾಧ್ಯತೆ ಮತ್ತು environmental possibility ಇದ್ದರೆ ನೀವು ಅಲ್ಲಿಂದ ಪೂರ್ವ ಬದಿಗೆ ತೆಗೆದುಕೊಂಡು ಬರುವುದಕ್ಕೆ ನಮ್ಮದೇನು ತೊಂದರೆ ಇಲ್ಲ. ಏಕೆಂದರೆ ಅದು ಮಳೆಗಾಲದ ನಾಲ್ಕು ತಿಂಗಳು, ನಮಗೆ ಅಲ್ಲಿ ಸ್ವಲ್ಪ ಅನವಶ್ಯಕ ಎಂದು ಇರುವಂಥ ಸಮಯದಲ್ಲಿ ಆದರೆ ಅಡ್ಡಿ ಇಲ್ಲ. ಇಲ್ಲದಿದ್ದರೆ ಪಶ್ಚಿಮಾಭಿಮುಖವಾಗಿ ಹರಿಯುವ ಎಲ್ಲಾ ನದಿಯಲ್ಲಿ ಮಳೆ ನೀರು ಮಾತ್ರ ಬರುವಂಥಾದ್ದು, ಆಮೇಲೆ ಜಲ ಮೂಲದಲ್ಲಿ ಸ್ವಲ್ಪ ಸ್ಟಾಕ್ ಇದ್ದರೆ ಜನವರಿ 10 ರಿಂದ 15ನೇ ತಾರೀಖಿನವರೆವಿಗೂ ನೀರು ಬರುತ್ತದೆ. ಹಾಗಾಗಿ ಅಕ್ಟೋಬರ್ ತಿಂಗಳ ನಂತರ ಅಂದರೆ ಮಳೆಗಾಲ ಮುಗಿದ ನಂತರ ನಾವು ಆ ನೀರಿಗೂ ಕೈ ಹಾಕಬಾರದು. ಆ feasibility ಯನ್ನು ಸಹ ನಾವು ನೋಡಬೇಕು. ಈ ರೀತಿ ಜಾಗ್ರತೆಯನ್ನು ಮಾಡದೇ ಇದ್ದರೆ ನೇತ್ರಾವತಿ ನದಿ ತಿರುವು ಅಥವಾ ಸ್ವರ್ಣ ನದಿ ತಿರುವು ಎಂದು ಹೇಳಿದ ಕೂಡಲೇ ದಕ್ಷಿಣ

ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯವರು ಎಷ್ಟು ಮಾತ್ರಕ್ಕೂ ಇದಕ್ಕೆ ಮಾಸಿಕವಾಗಿ ಒಪ್ಪಲಿಕ್ಕೆ ಸಿದ್ಧರಿಲ್ಲ. Make it very clear. ಇದರಲ್ಲಿರುವ ಪ್ರಶ್ನೆ ಏನೆಂದರೆ, ಪ್ರಥಮ ನಾಲ್ಕು ತಿಂಗಳುಗಳ ಕಾಲ ಮಳೆಗಾಲದಲ್ಲಿ ಭಾರಿ ಮಳೆ ಬೀಳುತ್ತದೆ, ಆಮೇಲೆ ನಾಲ್ಕು ತಿಂಗಳುಗಳ ಕಾಲ ಅಲ್ಪಸ್ವಲ್ಪ ನೀರು, ನಂತರ ಕೊನೆಯ ನಾಲ್ಕು ತಿಂಗಳುಗಳ ಕಾಲ ಅಲ್ಲಿ ನೀರೇ ಬರುವುದಿಲ್ಲ. ನಾವು ನಮ್ಮ ಮಂಗಳೂರು, ಉಡುಪಿ, ಕಾರ್ಕಳ, ಕುಂದಾಪುರ ಪ್ರದೇಶಗಳಿಗೆ ಅಣೆಕಟ್ಟೆಯನ್ನು ನಿರ್ಮಾಣ ಮಾಡಿ, ಆ ಮಳೆ ನೀರನ್ನು ಅಲ್ಲಿ ಒಟ್ಟು ಮಾಡಿ, ನದಿ bank ನಲ್ಲಿಯೇ impound ಮಾಡಿ, ಆ ನೀರನ್ನು ಉಪಯೋಗಿಸಬೇಕು. ಅಂತಹ ಒಂದು ಪರಿಸ್ಥಿತಿ ಇದೆ. ಹಾಗಾಗಿ ತಾವು ಇದನ್ನೆಲ್ಲಾ ಅರ್ಥ ಮಾಡಿಕೊಳ್ಳಬೇಕು. ಹಾಗಾಗಿ ನೇತ್ರಾವತಿ ತಿರುವು ಎಂದು ಅವರು ಉಪಯೋಗ ಮಾಡಿದರೆ ಅವರು ಎಲ್ಲಿಂದ ತಂದು ಅದು ಬರುವುದಿಲ್ಲ.

**ಸಭಾಪತಿಯವರು:–** ಅವರು ನೇತ್ರಾವತಿ ಎಂದು ಹೇಳಿದ ತಕ್ಷಣ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು "ಸಭಾನಾಯಕರು ಏಕೋ ಸುಮ್ಮನೆ ಕುಳಿತಿದ್ದಾರೆ" ಎಂದು ಹೇಳಿದರು. ಸಭಾನಾಯಕರಿಗೆ ಅದು ಕೇಳಿಸಿತೋ, ಇಲ್ಲವೋ ಅವರು ಎದ್ದು ನಿಂತು ಮಾತನಾಡಿದರು. ಅದಕ್ಕೆ ನಾನೇನು ಮಾಡಲಿ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಆ ಭಾಗದವರಾದ್ದರಿಂದ ಅವರು ಅದರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿದರು. ನಮ್ಮ ಪುಣ್ಯ, ಮಾನ್ಯ ಮುಖ್ಯಮಂತ್ರಿಗಳು ಆ ಭಾಗದವರೇ ಆಗಿರುವುದರಿಂದ ಸಮಸ್ತ ಕರ್ನಾಟಕ ಒಂದು ಎಂದು ಭಾವಿಸತಕ್ಕಂಥ ಒಂದು ವಿಷಯ ಇದು. ಇವತ್ತು ನಾವು ಯಾರ ನೀರನ್ನೂ ಕಿತ್ತುಕೊಂಡು ಈ ಜಿಲ್ಲೆಗಳಿಗೆ ಒದಗಿಸಿ ಎಂದು ಕೇಳುತ್ತಿಲ್ಲ. ಏನು ಹೆಚ್ಚಿನ ನೀರು ಹರಿದು ಹೋಗುತ್ತದೆ, ಅದನ್ನು ತಡೆಗಟ್ಟಿ ಮತ್ತು ಪ್ರವಾಹ ಬಂದಂತಹ ಸಂದರ್ಭದಲ್ಲಿ... ಇದೇ ಪರಮಶಿವಯ್ಯನವರು ಮತ್ತೊಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಸಮಸ್ಯೆಗಳು ಈ ಬಯಲು ಸೀಮೆ ಜಿಲ್ಲೆಗಳಲ್ಲಿ

ಪರಿಹಾರವಾಗಬೇಕೆಂದರೆ, ಅದಕ್ಕೆ ನೇತ್ರಾವತಿ ಒಂದೇ ಪರಿಹಾರ ಎಂದು ಹೇಳಿದ್ದಾರೆ. ಸರ್ಕಾರವೇ ಅವರ ಕಡೆಯಿಂದ ಉತ್ತರವನ್ನು ಕೊಡಿಸಿದೆ ಮತ್ತು ಅದು ಅವರ ಒಂದು ವರದಿಯಲ್ಲಿಯೇ ಇದೆ.

ಇನ್ನೊಂದು ಗಂಭೀರವಾದ ವಿಷಯವೇನೆಂದರೆ, ಕುಡಿಯುವ ನೀರಿನ ಸಮಸ್ಯೆ ಇದೆ. ಇವತ್ತು ಬೆಂಗಳೂರು ನಗರದಲ್ಲಿ ಕೇವಲ ಬೆಂಗಳೂರಿನ ಜನರು ಮಾತ್ರ ವಾಸಿಸುತ್ತಿಲ್ಲ. ಇಡೀ ರಾಜ್ಯದ ಜನರಿದ್ದಾರೆ, ಇಡೀ ದೇಶದ ಜನ ಹಾಗೂ ವಿಶ್ವದ ಜನರು ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ. ಪ್ರತಿ ವರ್ಷ ಒಂದು ಟಿಎಂಸಿ ನೀರು ಹೆಚ್ಚು ಹೆಚ್ಚು ಬೇಕಾಗುತ್ತದೆ. ಕಾವೇರಿ ಟ್ರಿಬ್ಯೂನಲ್‌ನಲ್ಲಿ ಸಿಕ್ಕಿರುವ 270 ಟಿಎಂಸಿ ಏನಿದೆ, ಅದರಲ್ಲಿ 40 ಟಿಎಂಸಿ ನೀರು ಮಾತ್ರ ಕುಡಿಯುವ ನೀರಾಗಿದೆ. ಒಂದು ಟಿಎಂಸಿ ನೀರು ಹೆಚ್ಚಾಗಬೇಕೆಂದರೂ ಅದು ಟ್ರಿಬ್ಯೂನಲ್‌ನಲ್ಲಿಯೇ ಆಗಬೇಕು. ನೇತ್ರಾವತಿ ನದಿ ವಿಷಯ ಬಂದಾಗ ಅದನ್ನು ರಾಜ್ಯ ಸರ್ಕಾರವೇ ಇತ್ಯರ್ಥ ಮಾಡಬಹುದು. ಎಲ್ಲಿ controversy ಆಗುತ್ತದೆಯೋ ಎನ್ನುವುದನ್ನು ಬಿಟ್ಟು ಮಾನ್ಯ ಮುಖ್ಯಮಂತ್ರಿಗಳು ನಿಜವಾದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹೊರಟಿದ್ದೇನೆ ಎನ್ನುವ ಒಂದು ಸಂದೇಶವನ್ನು ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಕೋಲಾರದಲ್ಲಿ ಒಂದು ಹೇಳಿಕೆಯನ್ನು ಕೊಟ್ಟರು, ಅದೇ ರೀತಿ ತುಮಕೂರಿನಲ್ಲಿಯೂ ಒಂದು ಹೇಳಿಕೆಯನ್ನು ಕೊಟ್ಟರು ಮತ್ತು ಅವರ ಭಾಗಕ್ಕೆ ಹೋದಾಗ ಆ ಹೇಳಿಕೆ ತದ್ವಿರುದ್ಧವಾಗಿತ್ತು. ಅದು ಆಗಬಾರದು. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಪಡಬೇಕು. ಇದೇ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು "ನೇತ್ರಾವತಿ ತಿರುವಿಗೆ ಸಿಎಂ ವಿರೋಧ" ಎನ್ನುವುದು ಪತ್ರಿಕೆಯಲ್ಲಿ ದಿನಾಂಕ: 21.1.2012ರಂದು ಬಂದಿದೆ. ದಿನಾಂಕ: 28.1.2012ರಂದು 'Nethravathi diversion project will be implemented' ಎಂದು ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ರೀತಿಯ confusions ಬೇಡ. ಇದೊಂದು ಸಾಧಾರಣವಾದ ವಿಷಯವಲ್ಲ, ಇದು ಬಹಳ ಗಂಭೀರವಾದ ವಿಷಯ. ಪ್ರಾಜೆಕ್ಟ್‌ನ್ನು ಇವತ್ತು ಪ್ರಾರಂಭ ಮಾಡಿದರೂ ಸುಮಾರು 5 ರಿಂದ 10 ವರ್ಷಗಳ ಕಾಲ ಹಿಡಿಯುತ್ತದೆ. ಅಷ್ಟೊತ್ತಿಗೆ ಈ ಸಮಸ್ಯೆಗಳಿಗೆ ಸ್ವಲ್ಪಮಟ್ಟಿಗೆ

ಪರಿಹಾರ ಸಿಗುತ್ತದೆ. ಆದ್ದರಿಂದ ಎಲ್ಲವನ್ನು ಮರೆತು ಈ ಕೆಲಸವನ್ನು ಮಾಡಬೇಕು. ಚೆನ್ನೈ ನಗರದಲ್ಲಿ ಇದೇ ರೀತಿ ನೀರಿನ ಸಮಸ್ಯೆ ಎದುರಾದಾಗ ಮಾನವೀಯತೆಯ ದೃಷ್ಟಿಯಿಂದ ಆಂಧ್ರಪ್ರದೇಶ ರಾಜ್ಯದವರು ಸುಮಾರು 550 ಕಿ.ಮೀ. ದೂರದಲ್ಲಿರುವ ಶ್ರೀಶೈಲಂನಿಂದ ಸುಮಾರು 20 ಟಿಎಂಸಿ ನೀರನ್ನು ಒದಗಿಸತಕ್ಕಂಥ ಕೆಲಸವನ್ನು ಮಾಡಿದರು. ಇವತ್ತು ಅಲ್ಲಿ ನೀರಿನ ಸಮಸ್ಯೆ ಪರಿಹಾರವಾಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಕರ್ನಾಟಕದವರು ಸಹ 5 ಟಿಎಂಸಿ ನೀರನ್ನು ಕೊಟ್ಟಿದ್ದೇವೆ.

**ಶ್ರೀ ಆರ್.ವಿ. ವೆಂಕಟೇಶ್:–** ನಮ್ಮ ರಾಜ್ಯದವರಿಗೆ ನೀವು ನೀರನ್ನು ಒದಗಿಸುತ್ತಿಲ್ಲವಲ್ಲ. ಅವರಿಗೆ ನೀರನ್ನು ಒದಗಿಸಬೇಡಿ. ನಮ್ಮ ರಾಜ್ಯದವರಿಗೆ ನೀರು ಕೊಡಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಬಳಿ ಮಾಹಿತಿ ಇದ್ದರೆ ಮಾತನಾಡಬೇಕು. ಸುಮ್ಮನೆ ತಪ್ಪು ಮಾಹಿತಿ ಮಾಧ್ಯಮದವರಿಗೆ ಹೋಗಬಾರದು.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನವೀಯತೆಯ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಕಾಳಜಿಯನ್ನು ವಹಿಸಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ. ಇಲ್ಲದೇ ಹೋದರೆ ಇದು ಇದೇ ರೀತಿಯಲ್ಲಿ ಮುಂದುವರೆಯುತ್ತದೆ. ಯಾರ ನೀರನ್ನು ಕಿತ್ತುಕೊಂಡು ಯಾರಿಗೂ ಕೊಡಿ ಎಂದು ನಾವು ಹೇಳುತ್ತಿಲ್ಲ. ಈ ಸಮಸ್ಯೆಗೆ ಶಾಶ್ವತವಾದ ಒಂದು ಪರಿಹಾರವನ್ನು ಹುಡುಕಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ವಿ.ಆರ್. ಸುದರ್ಶನ್ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಬಚ್ಚೇಗೌಡರು ಸದನದಲ್ಲಿದ್ದಾರೆ. ಮಾನ್ಯ ವರ್ತೂರು ಪ್ರಕಾಶ್‌ರವರು ನಾಪತ್ತೆಯಾಗಿದ್ದಾರೆ. ರಾಮನಗರ ಜಿಲ್ಲೆಗೆ ಸಂಬಂಧಪಟ್ಟವರು ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು

ಇತ್ತೀಚೆಗೆ ಕೋಲಾರ ಜಿಲ್ಲೆಗೆ ಬಂದಿದ್ದೀರಿ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂದರೆ ಕಳೆದ 30 ವರ್ಷಗಳ ಹಿಂದೆ 30 ಅಡಿಗಳನ್ನು ತೋಡಿದರೆ ಬಾವಿಗಳಲ್ಲಿ ನೀರು ಸಿಗುತ್ತಿತ್ತು. ಇವತ್ತು ಪರಿಸ್ಥಿತಿ ಎಲ್ಲಿಗೆ ಹೋಗಿದೆ ಎಂದರೆ 1,500 ಆಳದಿಂದ ನೀರನ್ನು ಪಡೆಯಬೇಕಾಗಿದೆ. ಮುಖ್ಯ ಸಚೇತಕರಾದ ಮಾನ್ಯ ಶಿವಯೋಗಿಸ್ವಾಮಿಯವರು ಸಹ ಆ ಜಿಲ್ಲೆಗಳನ್ನು ಪ್ರತಿನಿಧಿಸುತ್ತಿದ್ದಾರೆ. ಕೃಷ್ಣಾ–ಕಾವೇರಿ ಯೋಜನೆಗಳು ಬಂದಂತಹ ಸಂದರ್ಭದಲ್ಲಿ ಬಯಲು ಸೀಮೆ ಜಿಲ್ಲೆಗಳು ಎಲ್ಲಾ ಸಂದರ್ಭಗಳಲ್ಲಿ ಆ ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ ಬೆಂಬಲವಾಗಿ ನಿಂತಿದ್ದೇವೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಈ ರಾಜ್ಯದಲ್ಲಿದ್ದ ಮೇಲೆ ಬೆಂಬಲವಾಗಿ ನಿಲ್ಲಲ್ಲೇಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಕೃಷ್ಣೆ ಮತ್ತು ಕಾವೇರಿ ನದಿಗಳು ಈ ರಾಜ್ಯದ ಎರಡು ಕಣ್ಣುಗಳಿದ್ದ ಹಾಗೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಕಾವೇರಿ ಹಾಗೂ ಕೃಷ್ಣೆ ನಮ್ಮ ಜೀವ ನದಿಗಳು.

**ಶ್ರೀ ಎಸ್.ಆರ್. ಪಾಟೀಲ್:–** ಕೃಷ್ಣೆ ಉತ್ತರ ಕರ್ನಾಟಕದ ಜೀವನಾಡಿ, ಕಾವೇರಿ ದಕ್ಷಿಣ ಕರ್ನಾಟಕದ ಜೀವನಾಡಿ.

**ಶ್ರೀ ಆರ್.ವಿ. ವೆಂಕಟೇಶ್:–** ಇವು ನಮ್ಮ ರಾಜ್ಯದ್ದೇ ಜಲ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಏನನ್ನು ಹೇಳುತ್ತೇನೆಂದರೆ, ಬಯಲು ಸೀಮೆ ಜಿಲ್ಲೆಗಳಿಗೆ ಸಾಮಾಜಿಕ ನ್ಯಾಯವನ್ನೊದಗಿಸಬೇಕಾಗುತ್ತದೆ. ಮಾನ್ಯ ಸಭಾ ನಾಯಕರೆ, ಈ ಜಿಲ್ಲೆಗಳಲ್ಲಿ ರೇಷ್ಮೆ ಕೃಷಿಯಲ್ಲಿ ಮುಂದೆ ಇದ್ದೇವೆ. ಹಾಲು ಉತ್ಪಾದನೆಯಲ್ಲಿ ಮುಂದೆ ಇದ್ದೇವೆ. ತೋಟಗಾರಿಕೆಯಲ್ಲಿ ಮುಂದೆ ಇದ್ದೇವೆ. ವ್ಯವಸಾಯ ಕ್ಷೇತ್ರದಲ್ಲಿ ಮುಂದೆ ಇದ್ದೇವೆ. ಇಂತಹ ಕ್ಷೇತ್ರದಲ್ಲಿ ಪ್ರಗತಿ ಇಲ್ಲವೆಂದು ಇಲ್ಲ. ಬಹಳ

ದೊಡ್ಡ ಪ್ರಮಾಣದಲ್ಲಿ ದೊಡ್ಡ ಪ್ರಗತಿಯನ್ನು, ಸಾಧನೆಯನ್ನು ಮಾಡುತ್ತಿದ್ದೇವೆ. ಯಾವುದೇ ನದಿಯ ಆಶ್ರಯ ಇಲ್ಲದೆಯೇ, ನೀರಾವರಿಯ ಆಶ್ರಯ ಇಲ್ಲದೆಯೇ ಈ ಒಂದು ಸಾಧನೆಯನ್ನು ಮಾಡುತ್ತಿದ್ದೇವೆ. ಆ ಭಾಗದ ಜನರು ಗ್ರೌಂಡ್ ವಾಟರ್ ಅನ್ನು ನಂಬಿಕೊಂಡು ಬೋರ್‌ವೆಲ್‌ಗಳನ್ನು ಹಾಕಿಕೊಳ್ಳಬೇಕಾಗಿದೆ. ಅದರಿಂದ ನೀರನ್ನು ತೆಗೆದುಕೊಂಡು ನಮ್ಮ ಬದುಕನ್ನು ಸಾಗಿಸುತ್ತಿದ್ದೇವೆ. ಅಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ.

ಮಾನ್ಯ ಬಸವರಾಜ ಬೊಮ್ಮಾಯಿಯವರೇ ತಾವು ಅನೇಕ ಸಂದರ್ಭಗಳಲ್ಲಿ ನಮಗೆ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಆದರೆ ಆ ಆಶ್ವಾಸನೆಗಳು ಕಾರ್ಯಗತವಾಗಬೇಕಾಗಿದೆ. ಬಹಳ ಎಚ್ಚರಿಕೆಯಿಂದ ನಾನು ಈ ಕಾಲಿಂಗ್ ಅಟೆನ್‌ಷನ್ ಅನ್ನು ಡ್ರಾಫ್ಟ್ ಮಾಡಿದ್ದೇನೆ. ರಾಜ್ಯ ಸರ್ಕಾರವೇ ಇದಕ್ಕೆ ಜವಾಬ್ದಾರಿ ಎಂದು ನಾನು ಹೇಳಿಲ್ಲ. ದಯಮಾಡಿ ತಾವು ಅದನ್ನು ಓದಿಕೊಳ್ಳಬೇಕಾಗುತ್ತದೆ. ಇದರಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಜಂಟಿಯಾಗಿ ಜವಾಬ್ದಾರರು ಎಂದು ಹೇಳಿದ್ದೇನೆ. It's a joint responsibility on the part of the State Government as well as the Union Government ಎಂದು ಹೇಳಿದ್ದೇನೆ.

ಅದರ ಜೊತೆಯಲ್ಲಿ ಒಂದು Short Term, Medium Term and Long Term ಯೋಜನೆಗಳ ಕಡೆಗೆ ಗಮನಹರಿಸಬೇಕಾಗುತ್ತದೆ. ರಾತ್ರೋರಾತ್ರಿ ಇವೆಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ರಾತ್ರೋರಾತ್ರಿ ಮಾನ್ಯ ಸದಾನಂದಗೌಡರವರು ಮುಖ್ಯಮಂತ್ರಿಯಾಗಿದ್ದಾರೆ. ಅದೇ ರೀತಿಯಲ್ಲಿ ರಾತ್ರೋರಾತ್ರಿ ಈ ಸಮಸ್ಯೆಯನ್ನು ಬಗೆಹರಿಸಿ ಎಂದು ಹೇಳುತ್ತಿಲ್ಲ. ಇದು ಯಾರಿಂದಲೂ ಸಾಧ್ಯವಾಗುವುದಿಲ್ಲ. ಇಲ್ಲವೇ ಜಾದೂ ಕೂಡ ಮಾಡುವುದಕ್ಕಾಗುವುದಿಲ್ಲ. ಅದು ಯಾರಿಗೂ ಕೂಡ ಸಾಧ್ಯವಾಗುವುದಿಲ್ಲ. ಆ ಭಾಗದ ರೈತರ ಕಣ್ಣಲ್ಲಿ ರಕ್ತ ಬರುತ್ತಿದೆ. ಈ ಸರ್ಕಾರಗಳು ನಮ್ಮ ಜನರ ಹೋರಾಟಗಳನ್ನು, ನಮ್ಮ ಈ ಸಮಸ್ಯೆಯನ್ನು ಹೀಗೇ ನಿರ್ಲಕ್ಷ್ಯ ಮಾಡುತ್ತಾ ಹೋದರೆ, ಇದರ ಬಗ್ಗೆ ಪ್ರಶ್ನೆ ಮಾಡುವಂತಹ ಪದ್ಧತಿಯನ್ನು ಕೈ ಬಿಟ್ಟರೆ

ಇನ್ನು 10–15 ವರ್ಷಗಳಲ್ಲಿ ಈ ಜಿಲ್ಲೆಗಳು ಮರಳುಗಾಡಾಗುತ್ತವೆ. ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಮಾನ್ಯ ಬಚ್ಚೇಗೌಡರವರೇ, ಇದರಿಂದಾಗಿ ಈ ರಾಜ್ಯದ ಪ್ರಗತಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಿ. ಕ್ಷೀರ ಕ್ರಾಂತಿಯಲ್ಲಿ ಆ ಜಿಲ್ಲೆ ಒಂದು ಸಾಧನೆಯನ್ನು ಮಾಡಿದೆ. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಇರುವ ಈ ಜಿಲ್ಲೆ ತೋಟಗಾರಿಕೆ ಬೆಳೆಯಲ್ಲಿ ಕ್ರಾಂತಿಯನ್ನು ಮಾಡಿದೆ. ಮಾನ್ಯ ವೆಂಕಟೇಶ್ ಅವರು ಹೇಳಿದ ಹಾಗೆ ಬೆಂಗಳೂರು ನಗರ ಇಡೀ ರಾಜ್ಯದ ಜನರಿಗೆ ಸೇರಿದಂತಹ ಒಂದು ರಾಜಧಾನಿಯಾಗಿದೆ. ಇಲ್ಲಿಯೂ ಕೂಡ ನೀರಿನ ಸಮಸ್ಯೆ ಇದೆ. ಬೆಂಗಳೂರು ನಗರ ಸೇರಿದಂತೆ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿನ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಅಲ್ಲದೆ ಚಿತ್ರದುರ್ಗ ಜಿಲ್ಲೆಯಲ್ಲಿ ಕೂಡ ನೀರಿನ ಸಮಸ್ಯೆ ಬಹಳವಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಭಾಗಗಳಿಗೆ ಸೇರಿದಂತೆ ನೀರಿನ ಸಮಸ್ಯೆಯ ಬಗ್ಗೆ ಒಂದು ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಇದರ ಬಗ್ಗೆ ಅಲ್ಲಿನ ಎಲ್ಲಾ ಶಾಸಕರು, ಸಂಸತ್ ಸದಸ್ಯರು ಮತ್ತು ತಜ್ಞರನ್ನು ಆಹ್ವಾನ ಮಾಡಿ ಅವರುಗಳ ಜೊತೆ ಒಂದು ಸಭೆಯನ್ನು ಮಾಡಿ ಅವರುಗಳಿಂದ ಈ ಸಮಸ್ಯೆಯ ಪರಿಹಾರಕ್ಕೆ ಸಲಹೆ ಸೂಚನೆ, ಅಭಿಪ್ರಾಯಗಳನ್ನು ಪಡೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಒತ್ತಾಯವನ್ನು ಮಾಡುತ್ತೇನೆ. ಈ ಕುರಿತು ಒಂದು ಸಮಗ್ರ ಚರ್ಚೆ ಆಗಲಿ. ಆಯವ್ಯಯದಲ್ಲಿ 200 ಕೋಟಿ ರೂಪಾಯಿಯನ್ನು ಕೊಟ್ಟಿದ್ದೀರಿ ಆದರೆ ಅದನ್ನು ಕಾರ್ಯಗತ ಮಾಡದಿದ್ದರೆ ಆ ಹಣ ಲ್ಯಾಪ್ಸ್ ಆಗುತ್ತದೆ.

ಮಾನ್ಯ ಬಸವರಾಜ ಬೊಮ್ಮಾಯಿಯವರೇ ಇದನ್ನು ನೋಡುತ್ತಾ ನಾವೆಲ್ಲರೂ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಈ laps ಆಗುವುದನ್ನು ತಡೆಗಟ್ಟಬೇಕಾದರೆ ನಿಮ್ಮ ನಿಗಮಕ್ಕೆ ಆ ಹಣವನ್ನು ವರ್ಗಾವಣೆ ಮಾಡತಕ್ಕಂತಾದ್ದೇ ಇಲ್ಲವೇ ಆ ಹಣವನ್ನು ಹಾಗೆಯೇ ಮೀಸಲಾಗಿ ಇಡುವುದೋ ಏನೋ ಒಂದು ಕ್ರಮ ಸರ್ಕಾರದ ಕಡೆಯಿಂದ ಆಗಬೇಕಲ್ಲವೇ?

ಶಾಶ್ವತವಾದ ನೀರಾವರಿ ಯೋಜನೆಗಳನ್ನು ರೂಪಿಸಿ ಎಂದು ನಾನು ಹೇಳುತ್ತಿದ್ದೇನೆ. ಶಾಶ್ವತ ನೀರಾವರಿ ಯೋಜನೆಗಳನ್ನು ಸರ್ಕಾರ ರೂಪಿಸಬೇಕಾಗಿದೆ. ಯಾವ್ಯಾವ ಮೂಲಗಳಿಂದ ಮಾಡುತ್ತೀರಿ ಎಂಬುದನ್ನು ನೀವು ಹೇಳಿ. ಅನಾವಶ್ಯಕವಾಗಿ ಇದನ್ನು controversy ಮಾಡುವುದು ನನ್ನ ಉದ್ದೇಶ ಅಲ್ಲ. ಆದರೆ ಇದನ್ನು ಜಾರಿಗೆ ತರತಕ್ಕಂಥಹ ಶಾಶ್ವತ ನದಿ ಮೂಲಗಳು ಯಾವ್ಯಾವು ಇವೆ ಎಲ್ಲಿಂದ ಇದನ್ನು ತರುವುದಕ್ಕೆ ಸಾಧ್ಯವಿದೆ ಎಂಬುದರ ಕಡೆಗೆ ವಿಚಾರ ಮಾಡಬೇಕಾಗುತ್ತದೆ. ನಾನು ನಿಂತ ಕಾಲಿನಲ್ಲಿ ಇದರ ಬಗ್ಗೆ ಘೋಷಣೆ ಮಾಡಿ ಎಂದು ಎಲ್ಲಿಯಾದರೂ ಹೇಳಿದ್ದೇನಾ? ತಾವು ಸರ್ವೆಯನ್ನು ಏನಾದರೂ ಮಾಡಿಸಿದ್ದೀರಾ ಎಂದು ಕೇಳಿದ್ದೇನೆ. ಒಂದು ವೇಳೆ ತಾವು ಸರ್ವೆ ಮಾಡಿಸಿದ್ದರೆ ಆ ಸರ್ವೆ ವರದಿಯನ್ನು ಸಭೆಯ ಮುಂದೆ ಇಡಿ. ಆ ವರದಿಯಲ್ಲಿ ಏನು ಇದೆ ಎಂದು ಈ ರಾಜ್ಯದ ಜನರಿಗೆ ಗೊತ್ತಾಗಬೇಕಲ್ಲವೇ? ನೀವು ಸರ್ವೆ ಏನು ಮಾಡಿಸಿದ್ದೀರಿ, ಇದರ ಪ್ರಕಾರ ಎಷ್ಟು ಹಣ ಬೇಕಾಗುತ್ತದೆ ಅದರ ಅಂದಾಜು ಎಷ್ಟು ಎಂದು ಹೇಳಬೇಕಲ್ಲವೇ? ಯಾವ್ಯಾವ ಮೂಲಗಳಿಂದ ಎಷ್ಟೆಷ್ಟು ನೀರನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಿದೆ, ಇವೆಲ್ಲವೂ ಆಗುವುದಕ್ಕೆ ಎಷ್ಟು ಕಾಲ ಬೇಕಾಗುತ್ತದೆ ಮತ್ತು ಇದಕ್ಕೆ ಬೇಕಾದ ಹಣವನ್ನು ಎಲ್ಲಿಂದ ತರುವುದಕ್ಕೆ ಸಾಧ್ಯವಾಗುತ್ತದೆ ಎಂಬುದರ ಕಡೆಗೆ ಚಿಂತನೆಯನ್ನು ನಡೆಸಬೇಕಾಗುತ್ತದೆ.

ಕೇಂದ್ರ ಸರ್ಕಾರ ನೀರಾವರಿ ಯೋಜನೆಗಳಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಸಹಾಯವನ್ನು ಮಾಡುತ್ತದೆ. ಅದನ್ನು ಕೂಡ ನಮ್ಮ ಸರ್ಕಾರ ಬಳಸಿಕೊಳ್ಳಬಹುದು. ನಮ್ಮ ಸರ್ಕಾರ ಇದನ್ನು ಬಳಸಿಕೊಳ್ಳುವುದಕ್ಕೆ ಯಾವ ಒಂದು ಪ್ರಯತ್ನವನ್ನು ಮಾಡಿದೆ ಎಂಬ ಬಗೆಗಿನ ವಿವರಗಳು ಈ ಸದನಕ್ಕೆ ಬೇಕಾಗುತ್ತದೆ. ಈ ಸದನಕ್ಕೆ ಆ ಎಲ್ಲಾ ವಿವರಗಳನ್ನು ಕೊಡಬೇಕು. ಈ ಬಗ್ಗೆ ಕೂಲಂಕಷವಾಗಿ ಚರ್ಚೆ ನಡೆಸುವ ಸಲುವಾಗಿ ಜನ ಪ್ರತಿನಿಧಿಗಳ ಒಂದು ಸಭೆಯನ್ನು ಕರೆಯಬೇಕು. ಆ ಸಭೆಗೆ ತಜ್ಞರನ್ನು ಕೂಡ ಆಹ್ವಾನ ಮಾಡಿ ಈ ಸಮಸ್ಯೆಯನ್ನು ಕೂಡಲೇ ಬಗೆಹರಿಸುವ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕಾರ್ಯೋನ್ಮುಖವಾಗಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ಮತ್ತೊಮ್ಮೆ

ಒತ್ತಾಯವನ್ನು ಮಾಡುತ್ತೇನೆ. ಈ ಬಗ್ಗೆ ಒಂದು Short Term, Medium Term and Long Term ಯೋಜನೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ವಿನಂತಿಸುತ್ತೇನೆ. ಈ ಕಾರ್ಯಕ್ರಮಗಳನ್ನು ತಾವು ಹಾಕಿಕೊಳ್ಳದೇ ಹೋದರೆ ಜನರು ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ ಎಂಬ ಎಚ್ಚರಿಕೆಯನ್ನು ಕೂಡ ಸರ್ಕಾರಕ್ಕೆ ಕೊಡುತ್ತಿದ್ದೇನೆ. ಈ ವಿಳಂಬ ನೀತಿಯನ್ನು ಅನುಸರಿಸಬಾರದು. ಇದು ನಗಾಡತಕ್ಕಂಥಹ ವಿಚಾರ ಅಲ್ಲ. ಅತ್ಯಂತ ಆತಂಕದ ಪರಿಸ್ಥಿತಿಯಲ್ಲಿ ಅತ್ಯಂತ ಗಂಭೀರವಾದಂತಹ ಸ್ಥಿತಿಯಲ್ಲಿ ಆ ಜಿಲ್ಲೆಯಲ್ಲಿನ ಜನರು ಬದುಕನ್ನು ಸಾಗಿಸುತ್ತಿದ್ದಾರೆ. ದಯವಿಟ್ಟು ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಈ ಬಗ್ಗೆ ತಮ್ಮಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೇ, ಬರಪೀಡಿತ ಪ್ರದೇಶಗಳಿಗೆ ಕುಡಿಯುವ ನೀರನ್ನು ಕೊಡುವ ದಿಸೆಯಲ್ಲಿ ಇಡೀ ರಾಜ್ಯವನ್ನು ಒಂದಾಗಿ ತೆಗೆದುಕೊಳ್ಳಬೇಕೆಂದು ಹೇಳುವ ವಾದ ಸರಿ ಇದೆ. ಆದರೆ ನೇತ್ರಾವತಿ ಸ್ಥಿತಿಯ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕಾಗಿದೆ. ಕರಾವಳಿ ಜಿಲ್ಲೆಯಲ್ಲಿ 4000 ಮಿಲಿ ಮೀಟರ್ ಮಳೆ ಬರುತ್ತದೆಂದು ನಮ್ಮೆಲ್ಲರ ಲೆಕ್ಕಾಚಾರ ಇದೆ. ಆದರೆ ಈ ಎಲ್ಲಾ ನದಿಗಳು ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವುದರಿಂದ ನೇತ್ರವಾತಿ ಒಳ ಹರಿವು ಬಹಳಷ್ಟು ಕ್ಷೀಣವಾಗಿ ಇರುವುದರಿಂದ, ಜನವರಿ, ಫೆಬ್ರವರಿ ತಿಂಗಳಲ್ಲಿ ನೇತ್ರಾವತಿ ನದಿ ದಂಡೆಯಲ್ಲಿನ ಜನರಿಗೆ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡುತ್ತೇವೆ. ಅಲ್ಲಿನ ಜನ ಪ್ರತಿನಿಧಿಗಳು, 203 ಗ್ರಾಮ ಪಂಚಾಯತಿಗಳ ಪರವಾಗಿ ಮಂಗಳೂರು, ಉಡುಪಿ ಜಿಲ್ಲಾ ಪಂಚಾಯತಿಗಳು ಸರ್ವಾನುಮತದ ನಿರ್ಣಯವನ್ನು ತೆಗೆದುಕೊಂಡಿವೆ. ಯಾವುದೇ ಕಾರಣದಿಂದಾಗಿ ಅವೈಜ್ಞಾನಿಕ ತೀರ್ಮಾನವನ್ನು ತೆಗೆದುಕೊಳ್ಳಬಾರದು. ನೇತ್ರಾವತಿ ನದಿಯನ್ನು ಯಾವುದೇ ಕಾರಣಕ್ಕೂ ತಿರುವು ಮಾಡಬಾರದು ಎಂಬುದು ಇದರ ಉದ್ದೇಶವಾಗಿದೆ. ಹಾಗೆ ತಿರುವು ಮಾಡುವಾಗ ಯಾವ ರೀತಿ ಮಾಡಬೇಕೆಂಬ ಬಗ್ಗೆ ಕಳೆದ 5–6 ವರ್ಷಗಳ ಹಿಂದೆ ನಾವು ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕೊಟ್ಟೆವು. ಎರಡೂ

ಜಿಲ್ಲೆಗಳಲ್ಲಿ ಇರುವಂತಹ ನದಿಗಳನ್ನು ಜೋಡಣೆ ಮಾಡಬೇಕು. "ಸೌಭಾಗ್ಯ ಸಂಜೀವಿನಿ" ಯೋಜನೆಯನ್ನು ಜಾರಿಗೆ ತರಬೇಕು ಸಮುದ್ರಕ್ಕೆ ಹರಿಯುವಂತಹ ನೀರನ್ನು ಒಳತಿರುವುಗಳ ಮೂಲಕ ತರುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿದ್ದೆವು. ಸರ್ಕಾರ ಇವೆಲ್ಲದರ ಬಗ್ಗೆ ಒಂದು ಸಮೀಕ್ಷೆಯನ್ನು ಮಾಡುವುದಕ್ಕೆ 5 ಕೋಟಿ ರೂಪಾಯಿ ಬಿಡುಗಡೆ ಮಾಡಿತ್ತು. ಆದರೆ ಇವತ್ತಿನವರೆಗೂ ಇದರ ಸಮೀಕ್ಷೆ ಆಗಿಲ್ಲ. ಈ ಸಮೀಕ್ಷೆ ಆಗಬೇಕಾಗಿದೆ. ಮಾನ್ಯ ಸುದರ್ಶನ್ ಅವರಷ್ಟೇ ತೀಕ್ಷ್ಣವಾಗಿ ಮಾತನಾಡಬಲ್ಲಂಥಹ ಅವರದ್ದೇ ಪಕ್ಷದ ಹಿರಿಯ ಸದಸ್ಯರೊಬ್ಬರು ಬೆಂಗಳೂರಿನಲ್ಲಿ ನಮ್ಮೆಲ್ಲ ಜನ ಪ್ರತಿನಿಧಿಗಳನ್ನು ಒಳಗೊಂಡಂತೆ ಒಂದು ಸಭೆಯನ್ನು ಕರೆದಿದ್ದರು. ಅವರು ಅತ್ಯಂತ ಕರಾರುವಾಕ್ಕಾದ ಲೆಕ್ಕಾಚಾರಗಳನ್ನು ಕೊಟ್ಟು ಹೇಳುತ್ತಾರೆ, ನೇತ್ರಾವತಿ ತಿರುವಿನ ಯೋಜನೆ ಎಲ್ಲಿಯಾದರೂ ಯಶಸ್ವಿಯಾದರೆ ಅದರ ದುಷ್ಪರಿಣಾಮಗಳೂ ಕೂಡ ಎರಡೂ ಜಿಲ್ಲೆಯವರ ಮೇಲೆ ಆಗುತ್ತದೆ ಎಂದು ಹೇಳುತ್ತಾರೆ. ಈ ಬರ ಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಕೊಡುವಂತಹ ಈ ಯೋಜನೆಗೆ ನಾವು ನಮ್ಮ ಆಕ್ಷೇಪವನ್ನು ಮಾಡುವುದಕ್ಕೆ ಮೊದಲು ಈ ಸೌಭಾಗ್ಯ ಸಂಜೀವಿನಿಯ ಬಗ್ಗೆ ತೀರ್ಮಾನ ಮಾಡಬೇಕು. ಅಲ್ಲಿ ಕುಡಿಯುವ ನೀರಿಗೆ ಸಾಕಷ್ಟು ವ್ಯವಸ್ಥೆಯನ್ನು ಮಾಡಿದ ನಂತರ ವೈಜ್ಞಾನಿಕವಾಗಿ ವಿಚಾರ ಮಾಡಿ ಅದರ ಆಧಾರದ ಮೇಲೆ ನಂತರ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ನನ್ನ ಒಂದು ಆಗ್ರಹ.

**ಡಾ॥ ಎ.ಎಚ್. ಶಿವಯೋಗಿ ಸ್ವಾಮಿ (ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಚಿಕ್ಕಬಳ್ಳಾಪುರ, ಪಾವಗಡ, ಕೋಲಾರ, ಚಿತ್ರದುರ್ಗ, ತುಮಕೂರು ಈ ಭಾಗಗಳು ನನ್ನ ಕ್ಷೇತ್ರ . .

**ಶ್ರೀ ಎಂ.ಸಿ. ನಾಣಯ್ಯ:–** ನಿಮ್ಮ ಪರವಾಗಿ ಮಾತನಾಡುವುದಕ್ಕೆ ಸರ್ಕಾರ ಇದೆ.

**ಸಭಾಪತಿಯವರು:–** ಅವರು ಆ ಜಿಲ್ಲೆಗಳನ್ನು ಪ್ರತಿನಿಧಿಸುತ್ತೇನೆ ಆದ್ದರಿಂದ ಮಾತನಾಡುತ್ತೇನೆಂದು ಹೇಳುತ್ತಿದ್ದಾರೆ.

**ಡಾ|| ಎ.ಎಚ್. ಶಿವಯೋಗಿ ಸ್ವಾಮಿ:–** ಮಾನ್ಯ ಸಭಾಪತಿಯವರೆ, ಚಿಕ್ಕಬಳ್ಳಾಪುರ, ಪಾವಗಡ, ಕೋಲಾರ, ಚಿತ್ರದುರ್ಗ, ತುಮಕೂರು ಈ ಭಾಗಗಳು ನನ್ನ ಕ್ಷೇತ್ರ ಆಗಿರುವುದರಿಂದ ಒಂದು ನಿಮಿಷ ಇದರ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಸುದರ್ಶನ್ ಅವರು ಬಹಳ ಗಂಭೀರವಾಗಿ ಈ ವಿಷಯವನ್ನು ಪ್ರಸ್ತಾಪ ಮಾಡಿದರು. ಈ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳವಾಗಿದೆ. ಈ ಒಂದು ಸಂದರ್ಭಗಳಲ್ಲಿ ಬೇರೆ ಬೇರೆ ಭಾಗಗಳ ನದಿ ಮೂಲಗಳಿಂದ ಈ ಭಾಗಕ್ಕೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಚಿಂತನೆ ನಡೆಯುತ್ತಿದೆ. ನೀರಾವರಿ ಬಗ್ಗೆ ನಂತರ ವಿಚಾರ ಮಾಡೋಣ. ಪಶ್ಚಿಮಾಭಿಮುಖವಾಗಿ ಹೆಚ್ಚುವರಿ ನೀರು ಹರಿದು ಹೋಗುವುದನ್ನು ತಡೆದು ಈ ಭಾಗಗಳಿಗೆ ಕುಡಿಯುವ ನೀರನ್ನು ಒದಗಿಸಬೇಕೆಂಬ ಒಂದು ಚಿಂತನೆ ನಡೆಯುತ್ತಿದೆ. ಇಲ್ಲಿ ಸೇರಿರುವ ನಾವೆಲ್ಲರೂ ಕೂಡ ಇಡೀ ರಾಜ್ಯದ ದೃಷ್ಟಿಯಿಂದ ಯೋಚನೆ ಮಾಡಬೇಕಾಗಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆ ಭಾಗದಿಂದಲೇ ಬಂದಿರುವುದು ನಮ್ಮ ಒಂದು ಸೌಭಾಗ್ಯವಾಗಿದೆ. ಅವರು ಆ ಭಾಗದಿಂದ ಬಂದಿದ್ದರೂ ಕೂಡ ಎಲ್ಲಾ ದೃಷ್ಟಿಯಿಂದ ಇಡೀ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯ ಜವಾಬ್ದಾರಿಯನ್ನು ತೆಗೆದುಕೊಂಡು ಅದನ್ನು ಸಮರ್ಥವಾಗಿ ನಿರ್ವಹಿಸುತ್ತಾ ಬಂದಿದ್ದಾರೆ. ವಿಶೇಷವಾಗಿ ನೇತ್ರಾವತಿ ನದಿ ತಿರುವು ಪ್ರಶ್ನೆ ನಮ್ಮ ಮುಂದೆ ಇಲ್ಲ ಮಾನ್ಯ ಸಚಿವರು ಈ ಬಗ್ಗೆ ವಿಸ್ತೃತವಾದ ಉತ್ತರವನ್ನು ಕೊಟ್ಟಿದ್ದಾರೆ. ಶ್ರೀ ಪರಮಶಿವಯ್ಯನವರ ವರದಿ ಏನು ಇದೆ ಅದರ ಹೇಳುವುದಾದರೆ, ಅದು ವೈಜ್ಞಾನಿಕವಾಗಿ ಯೋಚನೆ ಮಾಡಿ ಕೊಟ್ಟಿರುವಂತಹ ವರದಿಯಾಗಿದೆ. ಅವರು ಅದರಲ್ಲಿ ಬರೀ ನೇತ್ರಾವತಿ ನದಿ ಎಂದು ಹೇಳಿಲ್ಲ. ನೇತ್ರಾವತಿ, ಮತ್ತಿತರೆ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಹೆಚ್ಚುವರಿ ನೀರನ್ನು ಕರ್ನಾಟಕ ರಾಜ್ಯದ ಬರಪೀಡಿತ ಜಿಲ್ಲೆಗಳಿಗೆ ಹರಿಸುವ ಬಗ್ಗೆ ಮತ್ತು ಆ ಭಾಗಗಳಿಗೆ ಕುಡಿಯುವುದಕ್ಕೆ ನೀರನ್ನು ಕೊಡುವ ಒಂದು ಕಾರ್ಯಕ್ರಮ ಹಾಕಿಕೊಳ್ಳಬಹುದಾಗಿದೆ ಎಂದು ಹೇಳಿದ್ದಾರೆ. ವೇಸ್ಟ್ ಆಗಿ ಹರಿದು ಹೋಗುವ ನೀರನ್ನು ಕುಡಿಯುವುದಕ್ಕೆ ನೀಡಿದರೆ ಅದರ ಬಗ್ಗೆ

ಯಾರೂ ಕೂಡ ಆಕ್ಷೇಪವನ್ನು ವ್ಯಕ್ತಪಡಿಸುವುದಿಲ್ಲ. ಹಲವು ದಶಕಗಳಿಂದ ಈ ಸಮಸ್ಯೆ ಇದೆ. ಇದು ಇಂದಿನ ಸಮಸ್ಯೆಯಂತೂ ಅಲ್ಲ. ಹಿಂದಿನ ಯಾವುದೇ ಸರ್ಕಾರಗಳು ಮಾಡದೇ ಇರುವಂಥಾದ್ದನ್ನು ಮಾಡುವುದಕ್ಕೆ ತಮಗೆ ಒಂದು ಅವಕಾಶ ಸಿಕ್ಕಿದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಉಪಯೋಗ ಮಾಡಿಕೊಂಡು ಆ ಭಾಗದ ಜನರ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳವರಲ್ಲಿ ತಮ್ಮ ಮೂಲಕ ವಿನಂತಿಸುತ್ತೇನೆ. ಈ ಭಾಗದ ಜನರಿಗೆ ಅವರು ಭಗೀರಥ ಆಗಬೇಕೆಂದು ಪ್ರಾರ್ಥನೆಯನ್ನು ಮಾಡುತ್ತಿದ್ದೇನೆ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೆ, ಈ ರಾಜ್ಯದಲ್ಲಿ ಸ್ವಾತಂತ್ರ್ಯ ಬಂದು 63 ವರ್ಷಗಳಾಯಿತು. ಗಣರಾಜ್ಯ ಆಗಿ 62 ವರ್ಷಗಳಾಯಿತು. ಈ ರಾಜ್ಯದ ಯಾವುದಾದರೂ ಒಂದು ಜಿಲ್ಲೆಯಲ್ಲಿ ಬೋರ್‌ವೆಲ್ 1500 ಅಡಿ ಆಳಕ್ಕೆ ಹೋದರೂ ಕೂಡ ಕುಡಿಯುವ ನೀರಿಗೆಂದು ಒಂದು ಚೊಂಬು ನೀರು ಸಿಗದೇ ಇರುವ ಜಿಲ್ಲೆ ಎಂದರೆ ಅದು ನಮ್ಮ ಕೋಲಾರ ಜಿಲ್ಲೆ ಎಂದರೆ ತಪ್ಪಾಗುವುದಿಲ್ಲ. ಈ ಸಮಸ್ಯೆಯ ಬಗ್ಗೆ ಬರೀ ಕೋಲಾರ ಜಿಲ್ಲೆಯ ಶಾಸಕರು ಅಷ್ಟೇ ಅಲ್ಲ ಇಡೀ ರಾಜ್ಯದ ಶಾಸಕರೂ ಕೂಡ ಒಟ್ಟಾಗಿ ಧ್ವನಿ ಎತ್ತಬೇಕಾಗಿದೆ. ಇದರ ಬಗ್ಗೆ ಅಂದರೆ ಕೋಲಾರದಲ್ಲಿನ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಇಡೀ ಸದನ ಸಮಗ್ರವಾಗಿ ಚರ್ಚೆ ಮಾಡಬೇಕು, ಈ ಕುರಿತು ಚಿಂತನೆ ಮಾಡಬೇಕಾಗಿದೆ. ಆ ಮೂಲಕ ಒಂದು ಒಮ್ಮತದ ತೀರ್ಮಾನಕ್ಕೆ ಬರಬೇಕಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕೋಲಾರ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಗಮನಹರಿಸಬೇಕಾಗಿದೆ. ಈ ರಾಜ್ಯಕ್ಕೆ ಮೊದಲನೆಯ ಮುಖ್ಯಮಂತ್ರಿಯವರನ್ನು ಕೊಟ್ಟಂತಹ ಜಿಲ್ಲೆ ಮತ್ತು ಈ ರಾಜ್ಯದ ಜನರಿಗೆ ಹಾಲು ಮತ್ತು ರೇಷ್ಮೆಯನ್ನು ಕೊಟ್ಟಂಥಹ ಜಿಲ್ಲೆ ಎಂದರೆ ಅದು ಅತಿಶಯೋಕ್ತಿಯಾಗುವುದಿಲ್ಲ. ಅಲ್ಲಿ ನೀರು ಇಲ್ಲದೇ ಇದ್ದಂತಹ ಈ ಸಂದರ್ಭದಲ್ಲಿಯೂ ಕೂಡ ಚಿನ್ನ, ಹಣ್ಣು ಮತ್ತು ತರಕಾರಿಯನ್ನು ಕೊಟ್ಟಿದೆ. ಇಂತಹ ಒಂದು ಸಂದರ್ಭದಲ್ಲಿ ಅಲ್ಲಿಗೆ ನೀರಿನ ಸೌಲಭ್ಯವನ್ನು ಒದಗಿಸದೆ ಆ ಭಾಗಕ್ಕೆ ಅನ್ಯಾಯ ಮಾಡುತ್ತಿದ್ದೇವೆ ಎಂಬ

ಭಾವನೆ ಎಲ್ಲ ಶಾಸಕರಿಗೂ ಬರಬೇಕು. ಈ ವಿಚಾರ ಅಷ್ಟು ಗಂಭೀರವಾಗಿದೆ. ಈಗಾಗಲೇ ಫೆಬ್ರವರಿ ಬಂದಿದೆ. ಇನ್ನು ಎರಡು ತಿಂಗಳು ಹೋದರೆ ಕುಡಿಯುವ ನೀರಿಗಾಗಿ ಆ ರಾಜ್ಯದ ಜನ ಇಡೀ ರಾಜ್ಯಕ್ಕೆ ಮುತ್ತಿಗೆಯನ್ನು ಹಾಕಬೇಕಾಗಿದೆ. ಇಲ್ಲವೇ ಬೇರೆ ಕಡೆಗೆ ವಲಸೆ ಹೋಗಬೇಕಾಗಿದೆ. ಈ ಸಮಸ್ಯೆಯನ್ನು ಯಾರೂ ಕೂಡ ಲಘುವಾಗಿ ಪರಿಗಣಿಸಬಾರದು. ಅಪೂರ್ಣವಾಗಿ ನಿಂತಿದೆ. ಎರಗೋಳು ಅಣೆಕಟ್ಟು ಅಪೂರ್ಣವಾಗಿ ನಿಂತಿದೆ. ಅದರ ಬಗ್ಗೆ ಕೂಡ ಚಿಂತನೆಯನ್ನು ಮಾಡಬೇಕು. ಮಾನ್ಯ ಜಗದೀಶ್ ಶೆಟ್ಟರ್ ಅವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಒಂದು ಸರ್ವೆಯನ್ನು ಮಾಡಿಸಿದ್ದು 1450 ಕೋಟಿ ರೂಪಾಯಿ ಖರ್ಚು ಮಾಡಿದರೆ ಕುಡಿಯುವ ನೀರು ತರಬಹುದಾಗಿದೆ. ಆರ್‌ಡಿಪಿಆರ್ ಸಚಿವರಾಗಿ ಶ್ರೀ ಜಗದೀಶ್‌ಶೆಟ್ಟರವರು ಇದ್ದಂತಹ ಸಂದರ್ಭದಲ್ಲಿ ಒಂದು ಸರ್ವೇಯನ್ನು ಮಾಡಿಸಲಾಗಿದೆ. 1,450 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಕುಡಿಯುವ ನೀರನ್ನು ತರಬಹುದೆಂದು ಕೂಡ ಆಗಿದೆ. ಇದರ ಬಗ್ಗೆ ಬರೀ ಚರ್ಚೆ ಮತ್ತು ಯೋಜನೆ ಮಾತ್ರ ಆಗುತ್ತಿದೆ.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಡಿ.ಎಸ್. ವೀರಯ್ಯನವರು ಹಾಗೂ ನಾನು ರಸ್ತೆಯಲ್ಲಿ ಹೋರಾಟವನ್ನು ಮಾಡಿಕೊಂಡು ಬಂದಿದ್ದೇವೆ. ಯರಗೋಡು ಯೋಜನೆ ಬಗ್ಗೆ ನಾವೆಲ್ಲರೂ ಪ್ರಯತ್ನಪಟ್ಟು ಸರ್ಕಾರಗಳಿಂದ ಯೋಜನೆ ಮಂಜೂರಾಗಿ ಕೇಂದ್ರ ಸರ್ಕಾರದಿಂದ 80 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೆ, ಡ್ಯಾಂ ಅನ್ನೇ ಕಟ್ಟಲಿಲ್ಲ. ಆದರೆ 80 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಆಗಲೇ ಪೈಪ್‌ಗಳನ್ನು ಹಾಕಿಬಿಟ್ಟಿದ್ದಾರೆ. ಇದನ್ನು ಯಾರ ಅನುಕೂಲಕ್ಕಾಗಿ ಮಾಡಿದ್ದಾರೆ?

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೆ, ಯಾರು ಪೈಪ್‌ಗಳನ್ನು ಹಾಕಿದ್ದಾರೆ?

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟಂತಹ Urban Water Supply Board ನವರನ್ನು ಕೇಳಬೇಕಾಗುತ್ತದೆ. ಡ್ಯಾಂ ಅನ್ನೇ ಕಟ್ಟಿಲಿಲ್ಲ commission ಹೊಡೆಯುವುದಕ್ಕೆ ಹಣವನ್ನು ಪೈಪ್ ಹಾಕಿಕೊಂಡು ಹಣವನ್ನು ಪೋಲ್ ಮಾಡಿದ್ದಾರೆ.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೆ, ಆ ಜಿಲ್ಲೆಯ ವಕೀಲರುಗಳು ಕೂಡ ಪ್ರತಿಭಟನೆಯನ್ನು ಮಾಡಿದ್ದಾರೆ. ಜನಸಾಮಾನ್ಯರು ಪ್ರತಿಭಟನೆ ಮಾಡಿದ್ದಾರೆ. ಹೀಗೆ ಎಲ್ಲಾ ವರ್ಗದ ಜನರು ಧಂಗೆ ಏಳುವಂತಹ ಸ್ಥಿತಿಯಲ್ಲಿದ್ದಾರೆ. ದಯಮಾಡಿ ಈ ಒಂದು ಮಾರ್ಚ್ ಅಥವಾ ಇನ್ನು ಆರು ತಿಂಗಳ ಒಳಗಡೆ ತಾತ್ಕಾಲಿಕವಾದಂತಹ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡದೇ ಇದ್ದರೆ ಇಡೀ ಜಿಲ್ಲೆ ದಂಗೆ ಎದ್ದರೆ ಆ bridgeಗೆ ತೊಂದರೆಯಾಗುವಂತಹ ಅವಕಾಶ ಹೆಚ್ಚಿದೆ. ನನ್ನ ಮನವಿ ಏನೆಂದರೆ ದಯಮಾಡಿ ಎಲ್ಲಾ ಸದಸ್ಯರು ಒಗ್ಗಟ್ಟಾಗಿ ಈ ವಿಷಯದ ಬಗ್ಗೆ ಗಂಭೀರವಾಗಿ ಚರ್ಚೆ ನಡೆಸಿ ಬರೀ ಯೋಜನೆ ತಯಾರಿಸುವುದಷ್ಟೇ ಅಲ್ಲ ಅದನ್ನು ಅನುಷ್ಠಾನಕ್ಕೆ ತೆಗೆದುಕೊಂಡು ಬಂದು ಕುಡಿಯುವ ನೀರನ್ನು ಕೊಡುವಂತಹ ಕಾರ್ಯಕ್ರಮವಾಗಬೇಕೆಂದು ತಮ್ಮ ಮುಖಾಂತರ ಈ ಸಮಯದಲ್ಲಿ ಸರ್ಕಾರಕ್ಕೆ ವಿನಂತಿಸುತ್ತಿದ್ದೇನೆ.

**ಕ್ಯಾಪ್ಟನ್ ಗಣೇಶ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕುಡಿಯುವ ನೀರಿನ ಬಗ್ಗೆ ಬಹಳ ಗಂಭೀರವಾಗಿ ಚರ್ಚೆ ಮಾಡುತ್ತಿದ್ದೇವೆ. ಕಾಕತಾಳೀಯವಾಗಿ ಇವತ್ತು ಬೆಂಗಳೂರಿನಲ್ಲಿ ಒಂದು ಅಂತರರಾಷ್ಟ್ರೀಯ ಮಟ್ಟದಲ್ಲಿ water summit ಆಗುತ್ತಿದೆ. ಇದನ್ನು ಮುಂಜಾನೆ ಮಾನ್ಯ ಮುಖ್ಯಮಂತ್ರಿಗಳನ್ನು ಆ ಸಭೆಯನ್ನು ಉದ್ಘಾಟನೆ ಮಾಡಬೇಕಾಗಿತ್ತು, ಆದರೆ ಅವರಿಗೆ ಬೇರೆ ಕಾರ್ಯಕ್ರಮವಿದುದ್ದರಿಂದ ಡಾ|| ವಿ.ಎಸ್. ಆಚಾರ್ಯರವರು ಅಲ್ಲಿಗೆ ಹೋಗಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಬಂದಿದ್ದಾರೆ. ಇಲ್ಲಿ ಕುಡಿಯುವ ನೀರಿನ ಬಗ್ಗೆ ಬಹಳ ಗಂಭೀರವಾಗಿ ಚರ್ಚೆಯಾಗುತ್ತಿದೆ. ಕುಡಿಯುವ ನೀರಿನ ಗಂಭೀರ ಸಮಸ್ಯೆಯನ್ನು ಪರಿಗಣಿಸಿಕೊಂಡು ಎಲ್ಲಿಯೋ ಒಂದು ಕಡೆ ಚರ್ಚೆಯಾಗುವಾಗ

ನೇತ್ರಾವತಿಯಲ್ಲಿ ಸಿಕ್ಕಾಪಟ್ಟೆ ನೀರಿದೆ ಅದನ್ನು ಹೇಗಾದರೂ ಮಾಡಿ ತೆಗೆದುಕೊಂಡು ಹೋಗಬೇಕೆಂಬ ಕಲ್ಪನೆ ಬಂದಿದೆ. ನಮಗೆ ಅಲ್ಲಿ ಮಳೆ ಬರುವಂಥದ್ದು ಕೇವಲ ಎರಡು ತಿಂಗಳುಗಳು ಮಾತ್ರ. ಇವತ್ತಿನ ತಂತ್ರಜ್ಞಾನವನ್ನು ಉಪಯೋಗ ಮಾಡಿಕೊಂಡು ಆ ತಿಂಗಳಿನಲ್ಲಿ ಬಂದಂತಹ 4,000 ಮಿಲಿ ಮೀಟರ್‌ನಷ್ಟು ಮಳೆಯ ನೀರನ್ನು ಸಂಗ್ರಹ ಮಾಡುವುದಕ್ಕೆ ಆಕಸ್ಮಾತ್ ಕಾರ್ಯಕ್ರಮವನ್ನು ಹಮ್ಮಿಕೊಂಡರೆ, ನಮ್ಮ ಎರಡು ಜಿಲ್ಲೆಗಳ ಜನಜೀವನ ನಡೆಯುವಂಥದ್ದು ನದಿಯ ಮುಖದ ಮೇಲೆಂದು ಏನು ಹೇಳುತ್ತೇವೆ ಅಥವಾ ಬಯಲು ಗದ್ದೆಗಳೆಂದು ಏನು ಹೇಳುತ್ತೇವೆ ಅದರ ಅಕ್ಕಪಕ್ಕದಲ್ಲಿ ನಮ್ಮ ಜಮೀನು ಇರುವಂಥದ್ದು. ಆ ಎಲ್ಲಾ ಕೃಷಿ ಬೆಳೆಯ ಜಮೀನುಗಳಲ್ಲಿ ಏನಾದರು ನೀರನ್ನು ಸಂಗ್ರಹ ಮಾಡುವಂಥದ್ದು ಆದರೆ ಆ ಜಮೀನು ಎಲ್ಲಾ ಮುಳುಗಡೆಯಾಗುತ್ತದೆ. ಇದರ practical utilityಯ ಬಗ್ಗೆ ಏನು ಚರ್ಚೆ ಮಾಡದೇ ಎರಡು ತಿಂಗಳಿನಲ್ಲಿ 4000 ಮಿಲಿ ಮೀಟರ್ ಮಳೆಯಾಗುತ್ತಿದೆ. ನಿಮ್ಮಲ್ಲಿ 2000 ಟಿಎಂಸಿ ನೀರಿದೆ. ಅದನ್ನು ಎತ್ತುತ್ತೇವೆಂದರೆ ಎಲ್ಲಿಯೋ ಮತ್ತೊಮ್ಮೆ ಭಗೀರಥ ಪ್ರಯತ್ನ ಮಾಡಿದ ಹಾಗೆ ಎಂದೆನಿಸುತ್ತದೆ. ಎರಡನೆಯದಾಗಿ ಇದು ಸುಮಾರು 3000 ಅಡಿ ಎತ್ತರಕ್ಕೆ ಸಮುದ್ರದ ಮೇಲೆ ತೆಗೆದುಕೊಂಡು ಹೋಗಬೇಕು. ಮಧ್ಯೆದಲ್ಲಿ ಅತ್ಯಂತ ಸೂಕ್ಷ್ಮವಾದಂತಹ Western ghats ಇದೆ. ಆ Western ghats ನಲ್ಲಿ ಯಾವುದೇ ಚಟುವಟಿಕೆ ಮಾಡಬಾರದೆಂದು ಭಾರತ ಸರ್ಕಾರ ಮತ್ತು ಯುಎನ್‌ಓ ಆದೇಶವನ್ನು ಕೊಟ್ಟಿದೆ. ಅತ್ಯಂತ biodiversity ಇರುವಂಥದ್ದು ಎಂದು ಹೇಳಿದೆ. ಇದನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಮತ್ತೆ ಮಾನ್ಯ ಶ್ರೀನಿವಾಸ ಪೂಜಾರಿಯವರು ಹೇಳಿದ ಹಾಗೆ ಎಲ್ಲಿಯಾದರು ನೀವು ಒಂದು ಎಲಿಕ್ಯಾಪ್ಟರ್ ಅನ್ನು ತೆಗೆದುಕೊಂಡು ಆ ಎಲ್ಲಾ ನದಿಗಳನ್ನು ಸರ್ವೆ ಮಾಡಿದರೆ ಆ ಯಾವ ನದಿಗಳಲ್ಲಿಯೂ ಕೂಡ ಇವತ್ತು ನೀರಿಲ್ಲ. ನಮ್ಮ ಮಂಗಳೂರು ನಗರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡುವುದು ತುಂಗೆಯಲ್ಲಿ 8 ಅಡಿಯ ಒಂದು ಡ್ಯಾಂ ಕಟ್ಟಿದರೆ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡುವುದಕ್ಕೆ ತೊಂದರೆಯಾಗುತ್ತದೆ. ಇಲ್ಲಿ ವಾಸ್ತವ ಏನೆಂದರೆ, ದಕ್ಷಿಣ

ಕನ್ನಡ ಉಡುಪಿ ಜಿಲ್ಲೆಯ ಈ ಕರಾವಳಿಯ ಭಾಗದಲ್ಲಿ ಕೊನೆಯ ಮೂರ್‍ನಾಲ್ಕು ತಿಂಗಳು ಕುಡಿಯುವ ನೀರಿಗೆ ಬಹಳ ದೊಡ್ಡ ಸಮಸ್ಯೆ ಇದೆ. ಅಲ್ಲಿಯೂ ಕೂಡ ಬೇಸಿಗೆಯಲ್ಲಿ ಬೋರ್‌ವೆಲ್‌ಗಳನ್ನು ಹಾಕಲಾಗುತ್ತಿದೆ. ಹಾಗಾಗಿ ಯಾವುದು ಸಾಧ್ಯ, ಯಾವುದು ಅಸಾಧ್ಯ ಎನ್ನುವುದನ್ನು ಪರಿಗಣಿಸದೇ ಮಳೆಗಾಲದಲ್ಲಿ ಸಿಕ್ಕಾಪಟ್ಟೆ ನೀರು ಬರುತ್ತದೆ, ಆ ನೀರನ್ನು ಹೇಗಾದರು ಮಾಡಿ divert ಮಾಡಬಹುದೆಂದು ಹೇಳಿದರೆ, ಆ ಎರಡು ತಿಂಗಳಿನಲ್ಲಿ ನೀವು ಎಷ್ಟು ನೀರನ್ನು ಸಂಗ್ರಹಿಸುತ್ತೀರಿ, ಆ ನೀರನ್ನು ಸಂಗ್ರಹಿಸುವುದಕ್ಕೆ ಎಷ್ಟು ದೊಡ್ಡ ಪ್ರದೇಶದ ಭೂಮಿ ಬೇಕು, ಎಷ್ಟು ಭೂಮಿಯು ಮುಳುಗಡೆಯಾಗುತ್ತದೆ, ಎಷ್ಟು ಪರಿಸರ ನಾಶವಾಗುತ್ತದೆ? ಇದ್ಯಾವುದನ್ನು ಅಧ್ಯಯನ ಮಾಡದೇ ಸುಮ್ಮನೇ ನೇತ್ರಾವತಿಯನ್ನು ನಾವು divert ಮಾಡುತ್ತೇವೆ, ನೇತ್ರಾವತಿಯಿಂದ ಕುಡಿಯುವ ನೀರನ್ನು ಕೊಡುತ್ತೇವೆ ಎಂದರೆ ಇದು ಕಷ್ಟ ಸಾಧ್ಯವೆಂದು ನಾನು ಅಂದುಕೊಂಡಿದ್ದೇನೆ. ಎಲ್ಲಿಯೋ ಒಂದು ಕಡೆ ಅಲ್ಲಿಯ ಜನರ ಭಾವನೆಗಳು ಕೂಡ ಇದೆ. ಏಕೆಂದರೆ ಈ ರೀತಿಯ ಸಂಗತಿಗಳು ಉಲ್ಲೇಖವಾದಾಗ ಅಲ್ಲಿಯ ಕೃಷಿಕರು, ಅಲ್ಲಿಯ ಹಳ್ಳಿಯ ಜನರು ಅವರುಗಳು ಈಗಾಗಲೇ ಆಕ್ರೋಶಕ್ಕೆ ಒಳಗಾಗಿದ್ದಾರೆ. ಅವರ sensitivity ಅನ್ನು ಅರ್ಥ ಮಾಡಿಕೊಂಡು ಯಾವುದೇ ತಪ್ಪು ನಿರ್ಣಯವನ್ನು ತೆಗೆದುಕೊಳ್ಳದೇ ಇದೆಲ್ಲವನ್ನೂ ವೈಜ್ಞಾನಿಕವಾಗಿ ಅಧ್ಯಯನ ಮಾಡದೇ ಇನ್ನು ನಾವು ನೇತ್ರಾವತಿಯನ್ನು ತಿರುಗಡೆ ಮಾಡುತ್ತೇವೆ ಎನ್ನುವುದು ಸಮಾಜ ಅಲ್ಲೋಲಕ್ಕೆ ನಿರ್ಮಾಣವಾಗುತ್ತದೆ. ಅದುದರಿಂದ ದಯಮಾಡಿ ಇದನ್ನು ಪುನರ್ ವಿಮರ್ಶೆ ಮಾಡಬೇಕೆಂದು ತಮ್ಮ ಮುಖಾಂತರ ವಿನಂತಿಯನ್ನು ಮಾಡುತ್ತಿದ್ದೇನೆ.

**ಶ್ರೀ ಎಂ.ಸಿ. ನಾಣಯ್ಯ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಶ್ರೀ ಬಸವರಾಜ ಬೊಮ್ಮಾಯಿಯವರು ಯಾವುದಕ್ಕೋಸ್ಕರವಾಗಿ ಈ ವಿವಾದತ್ಮಾಕವಾದಂತಹ ಈ ಒಂದು ಹೇಳಿಕೆಯನ್ನು ಕೊಟ್ಟರೋ ನನಗೆ ಗೊತ್ತಿಲ್ಲ. ಶ್ರೀ ಪರಮಶಿವಯ್ಯನವರು ಕೊಟ್ಟಿರುವಂತಹ ವರದಿಯ ಆಧಾರ ಮೇಲೆ ಅವರು ಅದನ್ನು ಹೇಳಿದರು. ಮುಖ್ಯಮಂತ್ರಿಗಳು ಪಾಪ ಈಗ ಇಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಂಡು ಬಿಟ್ಟರು. ಏನು

ಅದರಲ್ಲಿ ಆಡಳಿತ ಪಕ್ಷದವರೆ ಇಲ್ಲ ಆ ಭಾಗದಲ್ಲಿರತಕ್ಕಂತಹ ಜನತೆಗೆ ಏನಾದರೂ ಮಾಡಿ ಕುಡಿಯುವುದಕ್ಕೆ ನೀರನ್ನು ಕೊಡುವುದಕ್ಕೆ ಇರತಕ್ಕಂತಹ ಪ್ರಯತ್ನವನ್ನು ಮಾಡಿ, ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವಂತಹ ನೀರನ್ನು ಏನಾದರೂ ಮಾಡಿ ಮಳೆಗಾಲದಲ್ಲಿ ಬರುತ್ತಿರುವಂತಹ ನೀರನ್ನು ನಮ್ಮ ಕಡೆಗೆ ಹರಿಸಿ ಕುಡಿಯುವ ನೀರನ್ನು ಕೊಡಿ ಎಂದು ಈ ಸದನದಲ್ಲಿ ಶ್ರೀ ವಿ.ಎಸ್. ಉಗ್ರಪ್ಪನವರು ಇದ್ದಾಗ ಬಹಳ ದೊಡ್ಡದಾಗಿರತಕ್ಕಂತಹ ಚರ್ಚೆಯನ್ನು ನಾವು ಒಂದು ಸಂದರ್ಭದಲ್ಲಿ ಮಾಡಿರತಕ್ಕಂಥದ್ದು ನನಗೆ ನೆನಪಿದೆ. ಕೃಷ್ಣೆ ಹೆಸರನ್ನು ಹೇಳಿಬಿಟ್ಟರು ಎಂದು ನಮ್ಮ ಶ್ರೀ ಎಸ್.ಆರ್. ಪಾಟೀಲ್‌ರವರು ಒಂದೇ ಸಮನೆ ಎದ್ದು ಬಿಟ್ಟರು. ನೇತ್ರಾವತಿ ಎಂದು ಹೇಳಿದ ಕೂಡಲೇ, ಈ ವರದಿಯನ್ನು ನೇತ್ರಾವತಿ ಹೆಸರನ್ನೇ ಹಾಕಿಲ್ಲ. ಆದರೂ ಪಾಪ ಮಾನ್ಯ ಮುಖ್ಯಮಂತ್ರಿಗಳು ದಿವ್ಯಮೌನವನ್ನು ಆಚರಿಸಿಕೊಂಡು ಸುಮ್ಮನೆ ಕುಳಿತುಕೊಂಡರು. ಅದಕ್ಕೆ ನಮ್ಮ ಸಭಾ ನಾಯಕರು ಎದ್ದು ಅದು ಸಾಧ್ಯವೇ ಇಲ್ಲ, ಅದು ಆಗುವುದಿಲ್ಲ ಎನ್ನುವಂತಹ ಮಾತನ್ನು ಹೇಳಿದರು. ಇನ್ನು ನಾನು ಹೇಳಬೇಕೆಂದರೆ, . .

**ಸಭಾಪತಿಯವರು:–** ನೀವು ಕೃಷ್ಣ ನೇತ್ರಾವತಿಯನ್ನು ಹೇಳುವ ಹಾಗಿಲ್ಲ. ಬೇರೆ ಇನ್ನೇನಾದರು ಹೇಳಬೇಕು.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ನಾನು ಕಾವೇರಿ ದಡದಿಂದ ಬರುತ್ತಿದ್ದೇನೆ. ನಾನು ಹೇಳುತ್ತೇನೆ. ಕೊಡಗಿನ ಜನರಿಗೆ ಕಾವೇರಿ ನದಿ ಶಾಪ. ಮಳೆಗಾಲದಲ್ಲಿ ಮಾತ್ರ ನದಿ ಉಕ್ಕಿ ಹರಿಯುತ್ತದೆ. ಗದ್ದೆ ಪ್ರದೇಶವುಗಳೆಲ್ಲವೂ ಕೂಡ ಮುಳುಗಡೆಯಾಗುತ್ತದೆ. ಆ ನೀರನ್ನು ಕೊಡಗು ಜಿಲ್ಲೆಯಲ್ಲಿ ಉಪಯೋಗಿಸುವಂತಹ ಅವಕಾಶವೇ ಇಲ್ಲ. ಕಾರಣ ಆ ನೀರು ಹರಿದು ಹೋಗತಕ್ಕಂತಹ ಜಾಗ ಯಾವುದಿದೆ ಆ ಜಾಗದಲ್ಲಿ ಎಲ್ಲಿಯೂ ಕೂಡ ನಮ್ಮ ಕಾಫಿ ತೋಟಗಳು ಯಾವುದು ಕೂಡ ಇಲ್ಲ. ಆದರೆ ಆ ನಮ್ಮ ಕುಲದೇವತೆ ಕಾವೇರಿ ತಾಯಿ ಇದ್ದರಲಾ, ನಮ್ಮ ಆ ತಾಯಿ ಇಲ್ಲದೆ ಹೋದರೆ ಮೈಸೂರು ಜನ, ಮಂಡ್ಯದಲ್ಲಿ ಚಡ್ಡಿ ಹಾಕಿಕೊಂಡು ಬೀದಿಗೆ ಬರುತ್ತಿರತಕ್ಕಂತಹ ಜನ, ಬೆಂಗಳೂರಿನಲ್ಲಿರತಕ್ಕಂತಹ 80 ಲಕ್ಷ ಜನರಿಗೆ ಕುಡಿಯುವುದಕ್ಕೆ

ಇರತಕ್ಕಂತಹ ನೀರು ಇಲ್ಲದೇ ಹೋದಲ್ಲಿ ನಿಮ್ಮ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಬಹಳ ಧಾರಳ ಮನಸ್ಸಿನಿಂದ ಎಲ್ಲಾ ನೀರನ್ನು ನಾವು ಕೊಡುತ್ತಿದ್ದೇವೆ. ಕಡೆಗೆ ಈಗ ಏನಾಯಿತು?

**ಸಭಾಪತಿಯವರು:–** ಈಗ ಕಾವೇರಿ ನೀರನ್ನು ಕೊಡುವುದಿಲ್ಲ ಎಂದರೆ ಬಹಳ ಕಷ್ಟವಾಗುತ್ತದೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವಂತಹ ಎರಡು ನದಿಗಳು ಅದು ವಿರಾಜಪೇಟೆ ತಾಲ್ಲೂಕಿನಲ್ಲಿರತಕ್ಕಂಥದ್ದು. ಕೊಡಗು ಜಿಲ್ಲೆಯ ವಿಸ್ತೀರ್ಣ ಎಷ್ಟು ಎಂದರೆ 60 ಮತ್ತು 40 ಮಾತ್ರ. ಆ ಕೊಡಗು ಜಿಲ್ಲೆಯಲ್ಲಿ ಆ ವೀರಾಜಪೇಟೆ ತಾಲ್ಲೂಕಿನಲ್ಲಿರತಕ್ಕಂತಹ ಬರಪಹೊಳೆ, ಕಕ್ಕಟ ಹೊಳೆ, ಕೊಂಗನ ಹೊಳೆ ಎಂದು ಹೇಳುತ್ತಿರತಕ್ಕಂಥದ್ದು ಇದು ಪಶ್ಚಿಮಾಭಿಮುಖವಾಗಿ ಹರಿದು ಅದು ಸಮುದ್ರವನ್ನು ಸೇರುತ್ತಿರುವಂಥದ್ದು. ಆ ನೇತ್ರಾವತಿ ಹೇಗೆ western flow ಆಗಿದೆಯೇ, ಹಾಗೆಯೇ ಈ ಮೂರು ನದಿಗಳು western flow ಆಗಿದೆ. ಇದರಲ್ಲಿ ಏನು ಹೇಳಿದ್ದಾರೆಂದರೆ, ಕೊಂಗನ ಹೋಳೆ ಮತ್ತು ಕಕ್ಕಟ ಹೊಳೆ ವಿರಾಜಪೇಟೆ ತಾಲ್ಲೂಕು ಇವುಗಳಲ್ಲಿ ದೊರೆಯಬಹುದಾದಂತಹ 3.4 ಟಿಎಂಸಿ, 7.8 ಒಟ್ಟಾರೆ 11.24 ಟಿಎಂಸಿ ನೀರನ್ನು ಲಕ್ಷ್ಮಣ ತೀರ್ಥಕ್ಕೆ ಹರಿಸುವುದು. ಲಕ್ಷ್ಮಣ ತೀರ್ಥ ಹರಿಯುತ್ತಿರುವುದು ಎಲ್ಲಿ? ಈ ವಿರಾಜಪೇಟೆಯಲ್ಲಿರತಕ್ಕಂತಹ ಎರಡು ಉಪ ನದಿಗಳು ಅದನ್ನು ಈಗ ಏನು ಮಾಡಬೇಕೆಂದರೆ ತಿರುವು ಮಾಡಬೇಕು. ಅದನ್ನು ತಿರುವುಗೊಳಿಸಿ ಲಕ್ಷ್ಮಣ ತೀರ್ಥಕ್ಕೆ ಕೊಡಬೇಕಾಗುತ್ತದೆ. ಆ ಲಕ್ಷ್ಮಣ ತೀರ್ಥ ಬಂದು ಕಾವೇರಿಗೆ ಸೇರಬೇಕಾಗುತ್ತದೆ. ಇಡೀ ವಿರಾಜಪೇಟೆ ತಾಲ್ಲೂಕು, ನಮ್ಮ ಮಾನ್ಯ ಮುಖ್ಯಮಂತ್ರಿಗಳಾಗಿರತಕ್ಕಂತಹ ಕೊಡಗು ಜಿಲ್ಲೆ ಒಂದು ಸಾರಿ ಅವರ ಕ್ಷೇತ್ರವಾಗಿತ್ತು. ಈಗ ನಿಮ್ಮ ಕ್ಷೇತ್ರ ಕೂಡ ಅದೇ ಆಗುತ್ತದೆ. ಆ ಕೊಡಗು ಜಿಲ್ಲೆ ಒಂದು ಕಾಲ ಚೆನ್ನಬಸಪ್ಪನವರು ನೀರಾವರಿ ಮಂತ್ರಿಗಳಾಗಿದ್ದಾಗ ಆ ಬರಪಹೊಳೆ ಎಂದು ಹೇಳುವಂತಹ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವುದಕ್ಕೆ ಒಂದು ಕಟ್ಟೆಯನ್ನು ಕಟ್ಟಿ ಪಿರಿಯಾ ಪಟ್ಟಣಕ್ಕೆ ನೀರನ್ನು

ಹರಿಸಬೇಕೆಂದು ಹೇಳಿ, ಒಂದು ನೀರಾವರಿ ಯೋಜನೆಯನ್ನು ತಯಾರು ಮಾಡಿದರು. ಆಗ ಕೊಡಗಿನಲ್ಲಿ ಬಹಳ ದೊಡ್ಡದಾದಂತಹ ಹೋರಾಟ ನಡೆಯಿತು. ಆದರೆ ಆಗಲಿಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಂಗಳೂರಿನ 80 ಲಕ್ಷ ಜನರಿಗೂ ಕೂಡ ಕುಡಿಯುವುದಕ್ಕೆ ನೀರನ್ನು ಕೊಡುತ್ತೇವೆ. ಮಂಡ್ಯ, ಮೈಸೂರು, ಮದ್ದೂರಿನಲ್ಲಿರತಕ್ಕಂತಹ 24 ಲಕ್ಷ ಎಕರೆ ಜಮೀನಿಗೂ ನಾವು ನೀರನ್ನು ಕೊಡುತ್ತಿದ್ದೇವೆ. ಈಗ ಏನು ಮಾಡುತ್ತಾರೆಂದು ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವಂತಹ ನದಿಗಳನ್ನು ತಿರುಗಿಸಬೇಕು. ಅದನ್ನು ತಿರುಗಿಸಿದರೆ ಯಾವ ಕಡೆಗೆ ಹೋಗಬೇಕು? ಹೋಗುವುದು ಎಲ್ಲಿಗೆ ಎಂದರೆ, ವಿರಾಜಪೇಟೆಯಲ್ಲಿರತಕ್ಕಂತಹ ಎಲ್ಲಾ ಹಳ್ಳಿಗಳು ಇದೆಯಲಾ ಶ್ರೀಮಂಗಲ, ಕುಟ್ಟ, ಬಿ. ಶೆಟ್ಟಿಗೇರಿ ಎಂದು ಹೇಳುತ್ತಿರುವಂತಹ ಹಳ್ಳಿಗಳಿಗೆ ಹೋಗಿ ಅದು ಕಡೆಗೆ ತಲುಪುವಂಥದ್ದು ಲಕ್ಷ್ಮಣ ತೀರ್ಥ ಎಂದು ಹೇಳುತ್ತಿರುವಂಥದ್ದಕ್ಕೆ. ಆಗ ವಿರಾಜಪೇಟೆ ತಾಲ್ಲೂಕು ಎಂದು ಹೇಳುತ್ತಿರುವಂಥದ್ದು ಸಂಪೂರ್ಣವಾಗಿ ಮುಳುಗಡೆಯಾಗುವಂತಹ ಪರಿಸ್ಥಿತಿಯಾಗುತ್ತದೆ. ಈಗ ಆ ಕೆಲಸವನ್ನು ಮಾಡುವುದಕ್ಕೆ ಸರ್ಕಾರ ಹೊರಟಿದೆಯೇ? ದಯಮಾಡಿ ಇಷ್ಟನ್ನು ಹೇಳಿ. ಈ ಹಿಂದೆ ಕೂಡ ಇದರ ಬಗ್ಗೆ ಚರ್ಚೆಯಾಗಿದೆ. ಚರ್ಚೆಯಾದಂತಹ ಸಂದರ್ಭದಲ್ಲಿ ಸರ್ಕಾರ ಇದನ್ನು ತಾತ್ವಿಕವಾಗಿ ಇದನ್ನು ಮಾಡುವುದಕ್ಕಾಗುವುದಿಲ್ಲ, ಒಂದು ಕಡೆ ಪರಿಸರ, ಮತ್ತೊಂದು ಕಡೆ ಪಶ್ಚಿಮ ಘಟ್ಟ ಯೋಜನೆ, ಇನ್ನೊಂದು ಕಡೆ ಕೊಡಗು ಜಿಲ್ಲೆಯಲ್ಲಿ ಸಾಧಾರಣ 280 ರಿಂದ 300 ಇಂಚು ಮಳೆ ಕೆಲವು ಕಡೆಯಲ್ಲಿ ಬೀಳುತ್ತದೆ. ಇನ್ನು ಕೆಲವು ಕಡೆಯಲ್ಲಿ 150 ರಿಂದ 160 ಇಂಚು ಮಳೆ ಬೀಳುತ್ತದೆ. ಜನವರಿ ತಿಂಗಳು ಕಳೆದಾದ ಮೇಲೆ ಮೇ ತಿಂಗಳ ವರೆಗೆ ನಮ್ಮ ಕಾವೇರಿ ನದಿ ಬಿಟ್ಟರೆ ಇನ್ಯಾವ ನದಿಗಳಲ್ಲಿ ನೀರೇ ಇರುವುದಿಲ್ಲ. ಕಾರಣ ತೀರ ಹಳ್ಳಗುಡ್ಡಗಳು ನೀರು ಹರಿದು ಹೋಗುತ್ತಿರುವಂತಹ ಪ್ರದೇಶಗಳು. ಈ ಹಿನ್ನಲೆಯಲ್ಲಿ ಈ ಕಾರ್ಯಕ್ರಮವನ್ನು ಕೈಬಿಡಿ. ಕೊಡಗು ಜಿಲ್ಲೆಯಲ್ಲಿ ಇದನ್ನು ಕಟ್ಟುವುದಕ್ಕೆ ಇರತಕ್ಕಂಥದ್ದನ್ನು ನಿಮ್ಮ ಕೈಯಲ್ಲಿ ಆಗುವುದಿಲ್ಲ. ಒಂದು ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳೆ 1860ನೇ ಇಸವಿ ಕಳೆದಾದ ಮೇಲೆ ಒಂದು

ಪ್ರಯತ್ನವನ್ನು ಮಾಡಿದರಂತೆ. ಈ ಕಾವೇರಿ ನದಿಯು ಮೈಸೂರು ಕಡೆ ಬರುವುದನ್ನು ತಿರುಗಿಸಿ ಉಪಯೋಗ ಮಾಡುವುದಕ್ಕೆ ಇರತಕ್ಕಂತಹ ಒಂದು ಪ್ರಯತ್ನ ನಮ್ಮ ಪೂರ್ವಿಕರು ಮಾಡಿದರಂತೆ. ಎಲ್ಲಿಯಾದರು ಅದನ್ನು ಮಾಡಿ ಯಶಸ್ವಿಯಾಗಿ ಬಿಟ್ಟಿದ್ದರೆ ಮೈಸೂರು, ಮಂಡ್ಯ ಮತ್ತು ಬೆಂಗಳೂರಿನ ಪರಿಸ್ಥಿತಿಯನ್ನು ಒಂದು ಸಾರಿ ಯೋಚನೆ ಮಾಡಿಕೊಳ್ಳಿ. ಇಷ್ಟು ಧಾರಳವಾಗಿ ಕೊಟ್ಟಿರತಕ್ಕಂತಹ ಸಂದರ್ಭದಲ್ಲಿ ಈ ಯೋಜನೆಯನ್ನು ಕೈಬಿಡಿ. ಕೊಡಗು ಜಿಲ್ಲೆ ಇದು ಆಗುವಂತಹ ಪರಿಸ್ಥಿತಿಯೇ ಇಲ್ಲ. ಅದಕ್ಕೆ ಕೈ ಹಾಕುವುದಕ್ಕೆ ನನಂತೂ ಒಪ್ಪುವುದೇ ಇಲ್ಲ. ಇದು ಆಗುವುದಿಲ್ಲ ಬಿಡಿ. ಇದು ಆಗುವಂತಹ ಪ್ರಶ್ನೆಯೇ ಇಲ್ಲ. ಏನೋ ಶ್ರೀ ಪರಮಶಿವಯ್ಯನವರ ವರದಿಯಲ್ಲಿ ಬಂದಿರತಕ್ಕಂಥದ್ದು. ಆದರೆ ನಾನು ಹೇಳುತ್ತೇನೆ. ನೇತ್ರಾವತಿ, that is a shortest river. ನೇತ್ರಾವತಿ ಮೇಲ್ಗಡೆಯಿಂದ ಹರಿದು ಬಂದರೂ ಕೂಡ suppose to be a shortest river. ಅದು ಏಕೆಂದರೆ ಮಳೆಗಾಲದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಮಳೆ ಬರುತ್ತದೆ. ದೊಡ್ಡ ಪ್ರಮಾಣದಲ್ಲಿ ನೀರು ಕೂಡ ಹರಿದು ಅದು ನೇರವಾಗಿ ಸಮುದ್ರಕ್ಕೆ ಸೇರುತ್ತಿದೆ. ಇದರ ತಿರುವಿನ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆ ಹೇಳಿಕೆಯನ್ನು ಕೊಟ್ಟರೋ ಇಲ್ಲವೋ ನನಗೆ ಗೊತ್ತಿಲ್ಲ.

(5.30 ಗಂಟೆ)

ಒಂದು ಕಡೆ ಡೈವರ್ಷನ್ ಬಗ್ಗೆ ಹೇಳಿಕೆಯನ್ನು ಕೊಟ್ಟರೋ ಇಲ್ಲವೋ ಗೊತ್ತಿಲ್ಲ. ಆದರೆ ಪತ್ರಿಕೆಯವರು ಅದನ್ನು ಬೇರೆ ಏನಾದರೂ ಅರ್ಥ ಮಾಡಿಕೊಂಡು ಬರೆದರೋ ಗೊತ್ತಿಲ್ಲ. ಆದರೆ ಅವರು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ತಲುಪುವುದರೊಳಗೆ ನನಗೆ ಗೊತ್ತಿದೆ ಅವರಿಗೆ ಯಾವ ರೀತಿಯ ಪರಿಸ್ಥಿತಿ ಇದೆ ಗೊತ್ತಾಯಿತು ಎಂದು. ಆ ಹೇಳಿಕೆ ಒಂದೇ ಬಹಳ ದೊಡ್ಡದಾಗಿರತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿ, ಈಗ ಮಾನ್ಯ ಸರ್ಕಾರದ ಮುಖ್ಯ ಸಚೇತಕರು ಕೂಡ ಆ ಭಾಗದವರಾಗಿರುವುದರಿಂದ ಇದರ ಬಗ್ಗೆ ಗಮನ ಹರಿಸಿ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದರು. ಶ್ರೀ ಡಿ.ವಿ. ಸದಾನಂದಗೌಡರು ಏನಾದರೂ ಮುಖ್ಯಮಂತ್ರಿಯಾಗಿಯೇ ಮುಂದುವರೆಯಬೇಕೆಂದು ಅವರ ಮನಸ್ಸಿನಲ್ಲಿದ್ದರೆ ನೇತ್ರಾವತಿ ಎಂದು

ಹೇಳುತ್ತಿರುವಂಥದ್ದಕ್ಕೆ ಅವರು ಎಲ್ಲಿಯಾದರು ನೋಡೋಣ ಎಂದು ಮುಖ್ಯಮಂತ್ರಿಗಳಿಂದ ಹೇಳಿಸಿ ಬಿಟ್ಟರೆ ಶ್ರೀ ಡಿ.ವಿ. ಸದಾನಂದಗೌಡರು ಮುಖ್ಯಮಂತ್ರಿಯಾಗಿ ಅಲ್ಲಿ ಉಳಿಯುವುದಿಲ್ಲ. ಡಾ॥ ವಿ.ಎಸ್. ಆಚಾರ್ಯರವರಂತೂ ಮೊದಲೇ ಅಲ್ಲಿ ಉಳಿಯುವುದಿಲ್ಲ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ಸಿ. ನಾಣಯ್ಯನವರು ಮಾನ್ಯ ಮುಖ್ಯಮಂತ್ರಿಗಳಿಗೆ ಗಾಬರಿಯನ್ನು ಹುಟ್ಟಿಸುತ್ತಿದ್ದಾರೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಆರ್.ವಿ. ವೆಂಕಟೇಶ್‌ರವರೆ, ಆದರೆ ಒಂದನ್ನು ಮಾತ್ರ ತಿಳಿದುಕೊಳ್ಳಬೇಕು. ಇವತ್ತು ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಇಲ್ಲಿರುವವರಿಗೆ ಕುಡಿಯುವ ನೀರನ್ನು ಕೊಡಲೇಬೇಕಾಗುತ್ತದೆ. ಅದರ ಜವಾಬ್ಧಾರಿ ನಮ್ಮದು. ಇದರ ಬಗ್ಗೆ ಕ್ರಮ ಕೈಗೊಳ್ಳಬೇಕಾದುದ್ದು ಯಾವುದೇ ಸರ್ಕಾರಗಳು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಒಟ್ಟಾರೆ ಸೇರಿ ಮಾಡಬೇಕಾದಂತಹ ಕಾರ್ಯಕ್ರಮ. ಆದರೆ ಒಂದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸರ್.ಎಂ. ವಿಶ್ವೇಶ್ವರಯ್ಯನವರ ಕ್ರಮದಿಂದಾಗಿ ಶಿಂಷಾದಲ್ಲಿರತಕ್ಕಂತಹ 12 ಟಿಎಂಸಿ. ನಮಗೆ ಅಲ್ಲಿ ಸಿಗುತ್ತಿರುವಂಥದ್ದು 12 ಟಿಎಂಸಿ ನೀರಿನಿಂದ ಪವರ್ ಮಾತ್ರ ಅವರು ಏಕೆ ಶಿಂಷಾದಲ್ಲಿ ಅಣೆಕಟ್ಟನ್ನು ಕಟ್ಟಿ ಶಿಂಷಾದಲ್ಲಿ ವಿದ್ಯುತ್ ಉತ್ಪಾದನೆಯನ್ನು ಮಾಡಿದರು? ಯಾರಿಗೂ ನೀರನ್ನು ಕೊಡುವುದಕ್ಕೋಸ್ಕರವಾಗಿ ಮಾಡಲಿಲ್ಲ. ಹಟ್ಟಿ ಗೋಲ್ಡ್ ಮೈನ್ಸ್‌ಗೆ ಪವರ್ ಅನ್ನು ಕೊಡುವುದಕ್ಕೆ ಶಿಂಷಾ ಯೋಜನೆಯನ್ನು ಜಾರಿಗೆ ತೆಗೆದುಕೊಂಡು ಬಂದರು. 1900ರ ದಶಕದಲ್ಲಿ ಶಿಂಷಾ ಯೋಜನೆಯನ್ನು ಸರ್. ಎಂ. ವಿಶ್ವೇಶ್ವರಯ್ಯನವರು ತೆಗೆದುಕೊಂಡು ಬಂದಾಗ ಕೋಲಾರದಿಂದ ಶಿಂಷಾದ ವರೆಗೆ ವಿದ್ಯುಚ್ಛಕ್ತಿ ಲೈನ್‌ಗಳನ್ನು ಯಾವುದರ ಮೇಲೆ ತೆಗೆದುಕೊಂಡು ಹೋದರು? ದಟ್ಟ ಅರಣ್ಯದ ಮರಗಳ ಕೊಂಬೆ ಮೇಲೆ ಕೋಲಾರದ ಕೆ.ಜಿ.ಎಫ್. ತುದಿಯವರೆಗೆ ಅದನ್ನು ತೆಗೆದುಕೊಂಡು ಹೋದರು. ಕಾರಣ ಏಕೆಂದರೆ ಅಷ್ಟು ದೊಡ್ಡ ಪ್ರಮಾಣದ ಅರಣ್ಯ ಇತ್ತು. ದೊಡ್ಡ ಪ್ರಮಾಣದಲ್ಲಿ

ಮರಗಳಿತ್ತು. ಕಡೆಗೆ ಏನಾಯಿತು? 1910 ರಿಂದ 1975ರ ವರೆಗೆ 60 ವರ್ಷಗಳಲ್ಲಿ ಇಡೀ ಭಾಗದಲ್ಲಿರತಕ್ಕಂತಹ ಅರಣ್ಯ ಪ್ರದೇಶವನ್ನು ಒಂದು ಭಾಗದಿಂದ ಇನ್ನೊಂದು ಭಾಗ ಸಂಪೂರ್ಣ ನಾಶ ಮಾಡಿಟ್ಟರು. ಈ ನಾಶ ಮಾಡಿರತಕ್ಕಂತಹ ಪ್ರದೇಶ ಇದೆಯಲ್ಲಾ ಇವತ್ತು ಈ ಪರಿಸ್ಥಿತಿ ಬಂದಿರುವುದಕ್ಕೆ ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ ಎಲ್ಲವೂ ಕಾರಣ.

ಕೇವಲ 1982–83ನೇ ಇಸವಿಯಿಂದ ಬೆಂಗಳೂರು ನಗರದಲ್ಲಿರತಕ್ಕಂತಹ “ಹಸಿರು ವಲಯ” ಎಂದು ಇದೆಯಲ್ಲಾ ಅದನ್ನು ರಕ್ಷಣೆ ಮಾಡಿ, ರಕ್ಷಣೆ ಮಾಡಿ ಎಂದು ಹೇಳಿಕೊಂಡು ಬಂದೆವು. ಅದು ಆಯಿತಾ? ಇವತ್ತು ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಕೊಡುವುದಕ್ಕೆ 800 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಾವೇರಿ 5ನೇ ಹಂತದ ಯೋಜನೆಯನ್ನು ಪ್ರಾರಂಭ ಮಾಡುತ್ತಿದ್ದೀರಿ. ಅದಕ್ಕೂ ಕೂಡ ಕಾವೇರಿಯಿಂದಲೇ ನೀರು ಬರಬೇಕು. ಎಲ್ಲಿಯವರೆಗೆ ನೀವು ಕಾವೇರಿ ನೀರನ್ನೆ ನಂಬಿಕೊಂಡು ಇರುವುದಕ್ಕೆ ಸಾಧ್ಯ ಎಂದು ದಯವಿಟ್ಟು ಹೇಳಿ. ಆದ್ದರಿಂದ ಇದರ ಬಗ್ಗೆ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ಆ ಎಲ್ಲಾ ಪ್ರದೇಶಗಳಿಗೂ ಕೂಡ ಇವತ್ತು ಬೇಕಾಗಿರುವಂಥದ್ದು ಏನು? Afforestation is a must. ಕೋಟ್ಯಾಂತರ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. Social Forestry ಗೆ ಖರ್ಚು ಮಾಡಿದ್ದೇವೆ. ಎಲ್ಲಿಯಾದರು ಅದರ ಪರಿಣಾಮವಾಯಿತೇ ಎಂದು ಕೇಳುತ್ತಿದ್ದೇನೆ. ಈ ಹಿನ್ನಲೆಯಲ್ಲಿ ಬಯಲುಸೀಮೆ ಭಾಗದ ಜನರಿಗೆ ನೀರನ್ನು ಕೊಡಬೇಕು. ನೀರನ್ನು ಕೊಡಲೇಬೇಕಾಗಿರುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಲೇಬೇಕು. ಆದರೆ ಯಾವ ರೀತಿಯಾಗಿ ಎನ್ನುವುದರ ಬಗ್ಗೆ ತಜ್ಞರನ್ನು ಸಂಬಂಧಪಟ್ಟವರನ್ನೆಲ್ಲಾ ಕರೆಯಿರಿ. ಈ ಹಿನ್ನಲೆಯಲ್ಲಿ ಕೃಷ್ಣೆಯನ್ನು ಮುಟ್ಟುವುದಕ್ಕೆ ಆ ಭಾಗದ ಜನರು ಬಿಡುವುದಿಲ್ಲ. ನೇತ್ರಾವತಿ ಬಗ್ಗೆ ಡಾ॥ ವಿ.ಎಸ್. ಆಚಾರ್ಯರವರು ಮತ್ತು ದಕ್ಷಿಣ ಕನ್ನಡದವರು ಬಿಡುವುದಿಲ್ಲ. ಕಾರಣ ಏನೆಂದರೆ ಅದು West flowing river. ಅದನ್ನು ತೆಗೆದುಕೊಂಡು ಬರುವುದು ಅಷ್ಟು ಸುಲಭವಲ್ಲ. ಕೊಡಗು ಜಿಲ್ಲೆಯಲ್ಲಿ ಕಾವೇರಿ ನದಿಯ ನೀರನ್ನು ಧಾರಳವಾಗಿ ಕೊಟ್ಟಾಯಿತು. ನಮ್ಮ

ಧಾರಳತನವನ್ನು ದುರುಪಯೋಗ ಮಾಡಿಕೊಳ್ಳುವಂತಹ ಪರಿಸ್ಥಿತಿಯನ್ನು ಪುನಃ ನಿರ್ಮಾಣ ಮಾಡಬೇಡಿ. ನನಗೆ ಇವತ್ತು ಸ್ಪಷ್ಟವಾಗಿ ಹೇಳಬೇಕು. ಕೊಡಗು ಜಿಲ್ಲೆಯಲ್ಲಿ ಬರುತ್ತಿರುವಂತಹ ಕೊಂಗನ ಹೊಳೆ ಮತ್ತು ಕಕ್ಕಟ ಹೊಳೆ ಇದನ್ನು ನಿಮ್ಮಿಂದ ಮಾಡುವುದಕ್ಕೂ ಕೂಡ ಆಗುವುದಿಲ್ಲ. ಮತ್ತೆ ಇದನ್ನು ತಿರುವುಗೊಳಿಸಿ ಲಕ್ಷ್ಮಣ ತೀರ್ಥಕ್ಕೆ ಬಿಟ್ಟರೆ ನಾನು ಹೇಳುತ್ತೇನೆ ಅದು ಕೊಡಗಿನಲ್ಲಿರತಕ್ಕಂತಹ ಜನರ ಸಮಾಧಿ ಮೇಲೆಯೇ ಆಗಬೇಕೇ ಹೊರತು ಇದ್ಯಾವುದನ್ನು ಸರ್ಕಾರದಿಂದ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿರತಕ್ಕಂತಹ ನಿರ್ವಿವಾದವಾಗಿರತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿಬಿಡುತ್ತೇನೆ. ಈ ಹಿನ್ನಲೆಯಲ್ಲಿ ಅವರ ಚಿಂತನೆ ಇದೆಯಲ್ಲಾ ಅದನ್ನು ನಾನು ಒಪ್ಪಲೇಬೇಕಾಗುತ್ತದೆ. ಆದರೆ ಅದನ್ನು ಯಾವ ರೀತಿಯಾಗಿ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳೇ ಎಲ್ಲೋ ನೇತ್ರಾವತಿ ನದಿ ತಿರುವಿನ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರು. ಮಾನ್ಯ ಆರ್.ವಿ. ವೆಂಕಟೇಶ್‌ರವರು ಹೇಳುತ್ತಿರುವಂಥದ್ದು ನಿಜ. ಅದೇ ಹೇಳಿಕೆಯನ್ನು ಇದೇ ಸದನದಲ್ಲಿ ಡಾ॥ ವಿ.ಎಸ್. ಆಚಾರ್ಯರವರು ಎರಡು ವರ್ಷದ ಹಿಂದ ಒಂದು ಮಾತನ್ನು ಹೇಳಿಬಿಟ್ಟರು. ಅದು ಅವರಿಗೆ ನೆನಪು ಇದೆಯೋ ಇಲ್ಲವೋ ಗೊತ್ತಿಲ್ಲ. ಬಹುಶಃ ಇದೇ ಚಿಂತನೆ ಬಂದಾಗ ಕಡೆಗೆ ನಾನು ಹೇಳಿದೆ ಇವರು ಕೂಡ ನೇತ್ರಾವತಿ ತಿರುವು ಯೋಜನೆ ಬಗ್ಗೆ ಅದರ ಸಾಧಕ–ಬಾಧಕಗಳನ್ನು ಯೋಚನೆ ಮಾಡಿ ತರುವುದಕ್ಕೆ ಇರತಕ್ಕಂತಹ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿದರು. ಕಡೆಗೆ ಅವರಿಗೆ ಗೊತ್ತಾಯಿತು. ಬಹುಶಃ ಸಾಧಕ–ಬಾಧಕ ಎಂದು ಹೇಳಿದ್ದೇನೆಯೇ ಹೊರತು ಬಹುಶಃ ಇದು ಸಾಧ್ಯವಿಲ್ಲವೆಂದು ಎರಡು ದಿನಗಳು ಕಳೆದ ನಂತರ ಮತ್ತೆ ಉತ್ತರವನ್ನು ಇದೇ ಸದನದಲ್ಲಿ ಕೊಟ್ಟರು. ಈ ಹಿನ್ನಲೆಯಲ್ಲಿ ಆ ಜನರಿಗೆ ನೀರನ್ನು ಕೊಡಲೇಬೇಕು ಎನ್ನುವುದರಲ್ಲಿ ಎರಡು ಅಭಿಪ್ರಾಯ ಇಲ್ಲವೇ ಇಲ್ಲ. ಕುಡಿಯುವುದಕ್ಕೆ ನೀರನ್ನು ಕೊಡಲೇ ಬೇಕಾಗುತ್ತದೆ. ಹೇಗೆ? ಏಕೆಂದರೆ ಆ ಭಾಗದ ಜನರಿಗೆ ಜನರಿಗೆ ಕುಡಿಯುವುದಕ್ಕೆ ನೀರಿಲ್ಲ. ಬೆಂಗಳೂರು ನಗರದಲ್ಲಿರತಕ್ಕಂತಹ ಜನರಿಗೆ ಕುಡಿಯುವುದಕ್ಕೆ ನೀರನ್ನು ಕೊಡುವುದಕ್ಕೆ ಈಗ ಕಾವೇರಿ 5ನೇ ಹಂತಕ್ಕೆ

800 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಎಷ್ಟಾದರು ಕೂಡ ಖರ್ಚು ಮಾಡುತ್ತೇವೆ. ಬೆಂಗಳೂರಿನಲ್ಲಿರತಕ್ಕಂಥವರೆಲ್ಲರೂ ಬೆಂಗಳೂರಿನವರಲ್ಲ. ಆಯಿತು. it is a cosmopolitan city. ದೇಶದ ನಾನಾ ಭಾಗಗಳಿಂದ ಇಲ್ಲಿಗೆ ಜನರು ಬಂದು ಸೇರಿಕೊಳ್ಳುತ್ತಿದ್ದಾರೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಬೆಂಗಳೂರು ನಗರದ ಬಹುತೇಕ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರ ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಲ್ಲ. ಕೇವಲ 20 ಜನ ಶಾಸಕರುಗಳಿಗೆ ಸೀಮಿತವಾಗಿ ಮಾತ್ರ ಕರ್ನಾಟಕ ರಾಜ್ಯವಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಒಟ್ಟು 224 ಶಾಸಕರುಗಳಿದ್ದಾರೆ. ಕೇವಲ 20 ಜನ ಶಾಸಕರ ಪರವಾಗಿ ಮಾತ್ರ ಹಣ ಕೊಡುವಂಥದ್ದಲ್ಲ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, . . .

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಏನೋ ಹೇಳುತ್ತಾರಂತೆ ಕೇಳೋಣ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರ ಜಿಲ್ಲೆಯಲ್ಲಿ ಯಾವ ನದಿಗಳು ಕೂಡ ಬರುವುದಿಲ್ಲ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನಮ್ಮ ಜಿಲ್ಲೆಯಲ್ಲಿ ಭದ್ರಾ, ತುಂಗಾ, ಹೇಮಾವತಿ ಎಲ್ಲಾ ಬರುತ್ತದೆ.

**ಶ್ರೀ ಎಂ.ಸಿ. ನಾಣಯ್ಯ:–** ಅದು ನಿಮಗೆ ಬರುವುದಿಲ್ಲ. ಮಾನ್ಯ ವಿ.ಆರ್. ಸುದರ್ಶನ್‌ರವರು ಒಂದು ಮಾತನ್ನು ಹೇಳಿದರು. ಆ ಹಿನ್ನಲೆಯಲ್ಲಿ ನಮ್ಮ ಮುಖ್ಯಮಂತ್ರಿಗಳಿಗೆ ಒಂದನ್ನು ಕೇಳುವುದೇನೆಂದರೆ, ದಯವಿಟ್ಟು ಇದರ ಬಗ್ಗೆ ಒಂದು ಉತ್ತಮವಾಗಿರುವಂತಹ ಹೈಪವರ್ ಕಮಿಟಿಯನ್ನು ಕರೆಯಿರಿ. ತಜ್ಞರಗಳನ್ನು ಸಂಬಂಧಪಟ್ಟಂತಹ ಶಾಸಕರುಗಳನ್ನು ಮತ್ತು ಎಲ್ಲರನ್ನು

ಕರೆಯಿರಿ. ಸಾಧಕ ಬಾಧಕಗಳನ್ನು ನೋಡೋಣ. ಆ ನಗರಗಳಿಗೆ ನೀರನ್ನು ತರುವಂಥದ್ದಕ್ಕೆ ನಮ್ಮ ಪ್ರಯತ್ನವಾಗಬೇಕು. ಕೊಡಗು ಜಿಲ್ಲೆಯಿಂದ ಮಾತ್ರ ಮಾನ್ಯ ಬಸವರಾಜ ಬೊಮ್ಮಾಯಿಯವರೆ ಸ್ಪಷ್ಟವಾಗಿ ಈ ಕಾರ್ಯಕ್ರಮವನ್ನು ನಡೆಸುವುದಿಲ್ಲ. ನಡೆಸುವುದಕ್ಕೆ ಆಗುವುದಿಲ್ಲವೆಂದು ನಿಮ್ಮ ಬಾಯಿಯಿಂದ ಬರಲೇಬೇಕಾಗುತ್ತದೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಕುಡಿಯುವ ನೀರು ಎಲ್ಲರಿಗೂ ಕೂಡ ಬಹಳ ಮುಖ್ಯ. ಇದರ ಬಗ್ಗೆ ಉದಾರತೆ ಇರಬೇಕು. ಏಕೆಂದರೆ ನಾವೆಲ್ಲರೂ ಕೂಡ ಒಂದೇ ರಾಜ್ಯಕ್ಕೆ ಸೇರಿದಂಥವರಾಗಿದ್ದೇವೆ. ಅಂದರೆ ನೀವೆಲ್ಲರೂ ಚಿಕ್ಕಮಗಳೂರು ಜಿಲ್ಲೆಯ ಜನರನ್ನು ಅಭಿನಂದಿಸಬೇಕು. ಮಾನ್ಯ ಎಂ.ಸಿ. ನಾಣಯ್ಯನವರು ನಮ್ಮ ಜಿಲ್ಲೆ ಸಂಬಂಧವಿಲ್ಲವೆಂದು ಹೇಳಿದರು. ಗಂಗಾ ಮೂಲ ಇರುವುದೇ ಚಿಕ್ಕಮಗಳೂರು ಜಿಲ್ಲೆಯ ಮೂಡಗೆರೆಯ ಕುದುರೆ ಮುಖದ ಹತ್ತಿರ. ಐದು ನದಿಗಳಾದ ತುಂಗಾ, ಭದ್ರಾ, ನೇತ್ರಾವತಿ ಎಲ್ಲಾ ನದಿಗಳ ಉಗಮ ಸ್ಥಾನ ಚಿಕ್ಕಮಗಳೂರು ಜಿಲ್ಲೆಯಲ್ಲಿದೆ. ಆದರೂ ಇದುವರೆಗೂ ಕೂಡ ಅಬ್ಜೆಕ್ಷನ್ ಮಾಡಿಲ್ಲ. ಏಕೆಂದರೆ ಒಂದನ್ನು ಹೇಳುವುದೇನೆಂದರೆ. . .

**ಡಾ|| ವಿ.ಎಸ್. ಆಚಾರ್ಯ:-** ಮಾನ್ಯ ಸಭಾಪತಿಯವರೆ, ಅವರು ಏನು ಅಬ್ಜೆಕ್ಷನ್ ಮಾಡುತ್ತಿದ್ದಾರೆ?

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ನೀರನ್ನು ಬೇರೆ ಕಡೆಗೆ ತೆಗೆದುಕೊಳ್ಳುತ್ತಾರೆ ಎನ್ನುವುದರ ಬಗ್ಗೆ ನಮ್ಮದು ಅಬ್ಜೆಕ್ಷನ್ನೇ ಇಲ್ಲ. ಉದ್ಧಾರತೆ ನಮ್ಮಲ್ಲಿದೆ. ಅಪರ್ ತುಂಗಾವನ್ನು ಮಾಡುವುದಕ್ಕೆ ನಾವು ಬಿಡಲೇಬಾರದಿತ್ತು ಅಲ್ಲವೇ?

**ಡಾ|| ವಿ.ಎಸ್. ಆಚಾರ್ಯ:-** ಮಾನ್ಯ ಸಭಾಪತಿಯವರೆ, ನಮ್ಮಲ್ಲಿ ಒಂದು ಗಾದೆ ಇದೆ. ಅಕ್ಕಿಯಿಂದ ಅರಳು ಮಾಡುತ್ತಾರೆ ನಿಮಗೆ ಗೊತ್ತಿದೆಯಲ್ಲವೇ? ಸಂತೆಯಲ್ಲಿ ಅರಳು ಮಾರಾಟ ಮಾಡುವಾಗ ಬಹಳ ಗಾಳಿ ಬಂತಂತೆ. ಗಾಳಿ ಬಂದು ಅರಳು ಎಲ್ಲಾ ಹಾರಿಹೋಯಿತು.

ಕೃಷ್ಣಾರ್ಪಣ, ಕೃಷ್ಣಾರ್ಪಣ ಎಂದು ಹೇಳಿದನಂತೆ. ಮತ್ತೇನು ಹೇಳುವುದಕ್ಕೆ ಸಾಧ್ಯವಿತ್ತು. ಗಾಳಿ ಬಂದಾಗ ತೂರಿಕೊಂಡು ಅರಳು ಹೋಗುತ್ತದೆ. ಹಾಗೆ ಮಳೆ ಬಂದಾಗ ನೀರು ಗಂಗಾ ಮೂಲದಲ್ಲಿ ಬರುತ್ತದೆ. ಅದು ಅದರ ದಾರಿಯನ್ನು ಹಿಡಿದುಕೊಂಡು ಹೋಗುತ್ತದೆ. ಅದನ್ನು ತಿರುವು ಎಂದು ಮಾಡಿದಾಗ ನಮ್ಮ ತಾಪತ್ರೇಯ. ನೀವು ತಿರುವು ಎನ್ನುವಂತಹ ಶಬ್ಧವನ್ನು ಮಾತ್ರ ಮಾನ್ಯ ಆರ್.ವಿ. ವೆಂಕಟೇಶ್‌ರವರೇ ಉಪಯೋಗ ಮಾಡಬೇಡಿ. ಇದನ್ನು ಯಾರು ಕೂಡ ಮಾಡಬೇಡಿ. ಏಕೆಂದರೆ ನಮ್ಮ ರೈತರು ತಿರುವು ಯೋಜನೆ ಎಂದು ಹೇಳಿದ ಕೂಡಲೇ ಅವರ ತಲೆಯಲ್ಲಿ. . .

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾ ನಾಯಕರು ಕೃಷ್ಣಾರ್ಪನೆ ಮಾಡುವುದಕ್ಕೆ ಹೋಗುತ್ತಿದ್ದಾರೆ.

**ಡಾ|| ವಿ.ಎಸ್. ಆಚಾರ್ಯ:–** ಮಾನ್ಯ ಸಭಾಪತಿಯವರೆ, ತಿರುವು ಕೃಷ್ಣಾರ್ಪಣೆಯಲ್ಲ. ಮಾನವ ಕೃತಾ. ತಿರುವು ಎಂದು ಹೇಳಿದ ಕೂಡಲೇ ನಮ್ಮ 23 ನದಿ ತೀರದಲ್ಲಿರುವಂತಹ ಜನ ಕೃಷಿಕರು ಮತ್ತು ಪೇಟೆಯಲ್ಲಿರುವವರೆಲ್ಲರ ಮನಸ್ಸಿನಲ್ಲಿ ಬರುವುದು ಈ ನದಿ ಒಣಗಿ ಹೋಗಿ ಬಿಡುತ್ತದೆ ಎನ್ನುವಂತಹ ಹೆದರಿಕೆ ಇದೆ. ಒಬ್ಬರಿಗೆ ಹೋಗಿ ಯಾರೋ ಹೇಳಿದರು. ಅದರ ಬದಲಿಗೆ ಆ ನದಿಯ ಮೂಲ ಯಾವುದು ಇವರು ಹೇಳಿದರಲಾ? ಗಂಗಾ ಮೂಲ ಇದ್ದ ಹಾಗೆ ಪಶ್ಚಿಮ ಘಟ್ಟದ ಆ ಎತ್ತಿನಹೊಳೆ ಪ್ರದೇಶದಲ್ಲಿ ದೊಡ್ಡ ಹುಲ್ಲುಗಾವಲು ಇರುವಲ್ಲಿ ಇಷ್ಟಿಷ್ಟು ನೀರು ಬಂದು ಆ ಜಾಗದಲ್ಲಿ ನಿಂತಿರುತ್ತದೆ. ಹೆಲಿಕ್ಯಾಪ್ಟರ್‌ನಲ್ಲಿ ಹೋಗುವಾಗ ಕಾಣಿಸುತ್ತದೆ. ಆ ನೀರನ್ನು ತೆಗೆದುಕೊಂಡು ಬರುವುದಾದರೆ ನಮ್ಮದು ಏನು ತಾಪತ್ರಯ ಇಲ್ಲ. ಬೆಟ್ಟದ ಮೇಲೆ ಮಾತ್ರ ನೀವು ಮುಟ್ಟಬಾರದು.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಭದ್ರಾ ಮೇಲ್ದಂಡೆ ಯೋಜನೆ ಪಾರ್ಟ್–ಬಿ ಮಾಡಬೇಕಾದರೆ ನಮ್ಮಲ್ಲಿ ಮೂಡಿಗೆರೆ, ಕಳಸ, ಬಾಳೆಹೊನ್ನೂರು, ಶೃಂಗೇರಿ ಈ ಭಾಗಗಳೆಲ್ಲಾ ಮುಳುಗಡೆಯಾಗಿಬಿಡುತ್ತವೆ, ಈ ಯೋಜನೆಗೆ ನೀವು ಏಕೆ ಒಪ್ಪಿಗೆ ಕೊಟ್ಟಿರಿ ಎಂದು ಆ ಭಾಗದ ಜನರು ಮಾನ್ಯ ಡಿ.ಬಿ. ಚಂದ್ರೇಗೌಡರಿಗೆ, ಮಾನ್ಯ ಸಗೀರ್ ಅಹಮದ್‌ರವರಿಗೆ ಮತ್ತು ನನಗೆ ಪ್ರಶ್ನಿಸಿ ಕಳೆದ 2004ರ ಚುನಾವಣೆಯಲ್ಲಿ ಬಹಳ ತೊಂದರೆ ಕೊಟ್ಟರು. ಆದರೂ ಸಹ ನಾವೇನು ಹೇಳಿದ್ದೇವೆ ಎಂದರೆ ಆ ಯೋಜನೆಯಲ್ಲಿ ನಮ್ಮಲ್ಲಿರುವ ಇಡೀ ನೀರನ್ನು ತೆಗೆದುಕೊಂಡು ಹೋಗುತ್ತಿಲ್ಲ, ಅವರು ಬಾಯಾರಿಕೆಯಿಂದ ಸಾಯುವಂತಹ ಪರಿಸ್ಥಿತಿಯಲ್ಲಿದ್ದಾರೆ, ಬಯಲುಸೀಮೆಯ ಆ ಜನ ಸಹ ನಮ್ಮವರೇ ಆಗಿರುವುದರಿಂದ ಕುಡಿಯುವ ನೀರಿನ ಉದ್ದೇಶಕ್ಕಷ್ಟೇ ನಾವು ಈ ಯೋಜನೆಯಲ್ಲಿ ಅವಕಾಶ ಮಾಡಿಕೊಟ್ಟಿರುವುದು ಎಂದು ನಾವು ಅದನ್ನು ಸಮರ್ಥನೆ ಮಾಡಿಕೊಂಡೆವು. ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿರುವುದೇನೆಂದರೆ ಕುಡಿಯುವ ನೀರಿಗೆ ಸಂಕಷ್ಟದ ಪರಿಸ್ಥಿತಿ ಇರುವಾಗ ನಾವು ನೀರನ್ನು ಅವರ ಜೊತೆಯಲ್ಲಿ ಹಂಚಿಕೊಳ್ಳೋಣ. ಆದರೆ ಕುಡಿಯುವ ಉದ್ದೇಶಕ್ಕೆ ಎಂದು ಪಡೆದುಕೊಂಡು ಆ ನೀರನ್ನು ನೀರಾವರಿಗಾಗಿ ಕಬಳಿಸಬಾರದಷ್ಟೆ. ನೀರಾವರಿ ಉದ್ದೇಶಕ್ಕಾಗಿ ಆ ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಂಡು ಮತ್ತೆ ಆ ನದಿ ಮೂಲಗಳು ಒಣಗಿ ಹೋಗುವಂತೆ ಮಾಡಬಾರದೆಂಬುದು ನನ್ನ ವಿನಂತಿ. ಹೇಮಾವತಿ ನದಿ ನೀರು ಮೂಡಿಗೆರೆಯಿಂದ ಎಲ್ಲಿಯವರೆಗೆ ಹರಿದುಕೊಂಡು ಬರುತ್ತದೆ ಆ ನದಿ ಪಾತ್ರಗಳೆಲ್ಲಾ ನಮಗೆ ಸೇರಿದ್ದಲ್ಲವೇ? ತುಂಗಾ ನದಿ ಶೃಂಗೇರಿಯಿಂದ ಎಲ್ಲಿಯವರೆಗೆ ಹರಿದುಕೊಂಡು ಬರುತ್ತದೆ ಎಂಬುದು ತಮಗೂ ಗೊತ್ತಿದೆ. ನಮಗೂ ಅದರ ಅವಶ್ಯಕತೆ ಇದೆ. ಆದರೂ ಕೂಡ ಕಾಫಿ, ಅಡಿಕೆ ಮುಂತಾದ ಬೆಳೆಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿರುವುದರಿಂದ ಆ ನೀರನ್ನು ಅಲ್ಲಿ ಹೆಚ್ಚಾಗಿ ಉಪಯೋಗ ಮಾಡಿಕೊಳ್ಳುತ್ತಿಲ್ಲ. ದಯವಿಟ್ಟು ಈ ನೀರನ್ನು ಕೋಲಾರ,

ಬೆಂಗಳೂರಿನ ಸುತ್ತಮುತ್ತಲ ಪ್ರದೇಶಗಳಿಗೆ ಅಗತ್ಯವಿರುವ ಕುಡಿಯುವ ನೀರಿನ ಉದ್ದೇಶಕ್ಕೆ ಎಷ್ಟು ಅವಶ್ಯಕತೆ ಇದೆ ಅದನ್ನು ಕೊಡಲಿಕ್ಕೆ ನಾವು ಉದಾರತೆಯನ್ನು ತೋರೋಣ. ನಾವು ನಾವೇ ಈ ನದಿ ನೀರಿಗೋಸ್ಕರ ಒಂದು ರೀತಿ ಪೈಪೋಟಿ ಮಾಡುವುದು ಅಥವಾ ಹೋರಾಟ ಮಾಡುವುದು ಬೇಡ ಎಂಬುದು ನನ್ನ ಮನವಿ.

**ಸಭಾಪತಿಯವರು:–** ಈ ವಿಷಯ ಚರ್ಚೆಯಾಗುವಾಗ ಮಾನ್ಯ ಸಭಾನಾಯಕರು ಒಂದು ಮಾತನ್ನು ಹೇಳಿದರು. ಅದು ಬಹಳ ಸೂಕ್ತವಾಗಿರುವಂತಹ ವಿಚಾರವಾದ್ದರಿಂದ ಮಾಧ್ಯಮದವರು ಮತ್ತು ನಮ್ಮ ಎಲ್ಲ ಸದಸ್ಯರು ಸಹ ಗಮನಿಸಬೇಕಾಗುತ್ತದೆ. ಕುಡಿಯುವ ನೀರಿನ ಉದ್ದೇಶಕ್ಕಾಗಿ ಮಳೆಗಾಲದಲ್ಲಿ ಮೇಲ್ಭಾಗದಲ್ಲಿ ಬೀಳುವಂತಹ ಹೆಚ್ಚಿನ ನೀರನ್ನು ತೆಗೆದುಕೊಂಡು ಹೋಗುವುದರಲ್ಲಿ ತಪ್ಪಿಲ್ಲ. ನದಿ ತಿರುವು ಎನ್ನುವಂತಹ ಪ್ರಶ್ನೆಯೇ ಬರುವುದಿಲ್ಲ. ನದಿ ಎಂದರೆ ಸುಮಾರು 3000 ಅಡಿ ಕೆಳಭಾಗದಲ್ಲಿರುವ ನದಿ ನೀರನ್ನು ಮೇಲಕ್ಕೆತ್ತಿಕೊಂಡು ಬರುವುದನ್ನು ಯಾರೂ ಮಾಡುವುದಕ್ಕೆ ಬರುವುದಿಲ್ಲ. ಆ ಕೆಲಸವನ್ನು ನಾವು ಮಾಡುತ್ತಲೂ ಇಲ್ಲ. ನದಿ ತಿರುವು, ನೇತ್ರಾವತಿ ತಿರುವು ಯೋಜನೆ ಎನ್ನುವಂತಹ ಪದ ಪ್ರಯೋಗವೇ ಸರಿಯಲ್ಲ. ಅದನ್ನು ದಯಮಾಡಿ ಯಾರೂ ಮಾಡಬೇಡಿ. ಈ ತಿರುವು ಯೋಜನೆ ಎನ್ನುವ ಪದ ಪ್ರಯೋಗದಿಂದ ತಪ್ಪು ಅಭಿಪ್ರಾಯಗಳು ಬಂದಿವೆ ಎಂಬುದಾಗಿ ಎಲ್ಲರ ಅಭಿಪ್ರಾಯ ಇದೆ. ಆದ್ದರಿಂದ ಮಾಧ್ಯಮದವರು ಸಹ ಅದನ್ನು ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ ಎನ್ನುವಂತಹ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತಿದ್ದೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶ್ರೀ ಪರಮಶಿವಯ್ಯನವರ ಶಿಫಾರಸ್ಸುಗಳನ್ನು ನಾನು ಸಂಪೂರ್ಣವಾಗಿ ಓದಿದ್ದೇನೆ. ಅವರು ಹೇಳಿರುವುದು ನೇತ್ರಾವತಿ ನದಿಯನ್ನು ಪಂಪ್ ಮಾಡಿ ತಿರುವು ಮಾಡುವುದನ್ನಲ್ಲ, ಯಾವ ಭಾಗಕ್ಕೆ ನೀರು ಬರುತ್ತದೆಯೋ ಅದಕ್ಕಿಂತ ಎತ್ತರ ಇರತಕ್ಕಂತಹ horizon ನಲ್ಲಿ, ಇದು ಆಟೋಮ್ಯಾಟಿಕ್ ಆಗಿ gravitational flow ಆಗಿ ಮಾಡುವಂತಹ ವ್ಯವಸ್ಥೆ

ಮಾಡಿದ್ದಾರೆ. ಅದು ಹೇಗೆಂದರೆ ನಮ್ಮ ಕೋಲಾರ, ತುಮಕೂರು ಜಿಲ್ಲೆಗಳ ಮಟ್ಟ ಯಾವುದಿದೆ Mean Sea Level ಅದಕ್ಕಿಂತ ಎತ್ತರವಾಗಿರುವ ಜಾಗದಲ್ಲಿ ನೀರು ಬರುತ್ತದೆ. ನಾನು ಮತ್ತು ಸನ್ಮಾನ್ಯ ಯಡಿಯೂರಪ್ಪನವರು ಅಮೆರಿಕಾ ದೇಶಕ್ಕೆ ಹೋಗಿದ್ದಾಗ ಅಲ್ಲಿನ ನೀರಾವರಿ ತಜ್ಞರು ಈ ಪ್ರಾಜೆಕ್ಟನ್ನು ನಾವು ಪರಿಸರವನ್ನು ಒಂದಿಷ್ಟೂ ಹಾಳು ಮಾಡದೆ, ಒಂದಿಂಚು ಭೂಮಿಯನ್ನು ಕೂಡ ಮುಳುಗಡೆ ಮಾಡದೆ, ಸುರಿಯತಕ್ಕಂತಹ ನೀರನ್ನು ನಾವು ಕೊಳವೆಗಳ ರೀತಿಯಲ್ಲಿ ಭೂಮಿಯನ್ನು ಕೊರೆದು ಆ ನೀರನ್ನು ಒಂದು ಕಂಟೂರ್‌ನಲ್ಲಿ ಸಂಗ್ರಹ ಮಾಡಿ, ಕೊಳವೆ ಮುಖಾಂತರ ನಾವು ಈ horizon ಗೆ ನೀರನ್ನು ತೆಗೆದುಕೊಂಡು ಬರುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರದಲ್ಲಿ ಸಂಬಂಧಪಟ್ಟಂತಹ ಅಧಿಕಾರಿಗಳು ಅದರ ಬಗ್ಗೆ ಗಮನ ಹರಿಸಲಿಲ್ಲ. ಆ ಬಗ್ಗೆ ಗಮನ ಹರಿಸಿದರೆ ಇವೊತ್ತಿಗೂ ಕೂಡ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಯಾವುದೇ ಸಮಸ್ಯೆಯಾಗದಿರುವಂತಹ ರೀತಿಯಲ್ಲಿ ಅಲ್ಲಿ ಸಿಗತಕ್ಕಂತಹ ಹೆಚ್ಚುವರಿ ನೀರನ್ನು ತರುವುದಕ್ಕೆ ಸಾಧ್ಯವಿದೆ. ಅದರಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಕುಡಿಯುವ ನೀರಿಗೆ ಸಾಕಾಗುವಷ್ಟು ನೀರನ್ನು ಬಹಳ ಸುಲಭವಾಗಿ ತರಬಹುದು, ಆದರೆ ಹಣ ಹೆಚ್ಚು ಖರ್ಚಾಗುತ್ತದೆ. Technical implementation is there. ಅದೇರೀತಿಯಾಗಿ ಇವೊತ್ತು ಆ ಇಂಜಿನಿಯರ್‌ಗಳು ಹೊರ ದೇಶಗಳಲ್ಲಿ ಈ ರೀತಿಯ ಯೋಜನೆಗಳನ್ನು ಮಾಡುತ್ತಿದ್ದಾರೆ. ಕಾಶ್ಮೀರ ಭಾಗದಲ್ಲಿ ಮಾಡುತ್ತಿದ್ದಾರೆ. ಅವರು ಡೆಮಾನ್‌ಸ್ಟ್ರೇಷನ್ ಮಾಡಿದರು. ಇವೊತ್ತಿಗೂ ಕೂಡ ನಾವು ಡೆಮಾನ್‌ಸ್ಟ್ರೇಷನ್ ಮಾಡುವವರನ್ನು ಕರೆದು ಸಂಬಂಧಪಟ್ಟ ಶಾಸಕರಿಗೆ ತೋರಿಸಿದರೆ ಅದನ್ನು ಮಾಡುವುದಕ್ಕೆ ಇವೊತ್ತಿಗೂ ಕೂಡ ಸಾಧ್ಯತೆ ಇದೆ. ಅದಕ್ಕೆ ಹೆಚ್ಚು ಹಣ ಖರ್ಚಾಗುತ್ತದೆ, ಆದರೆ ಏನೂ ಮಾಡುವುದಕ್ಕಾಗುವುದಿಲ್ಲ. 'ಹುಚ್ಚು ಬಿಡುವವರೆಗೂ ಮದುವೆಯಾಗುವುದಿಲ್ಲ, ಮದುವೆಯಾಗುವವರೆಗೂ ಹುಚ್ಚು ಬಿಡುವುದಿಲ್ಲ' ಎನ್ನುವಂತಹ ಸಮಸ್ಯೆ ಈ ವಿಚಾರದಲ್ಲಿ ಕೂಡ ಇದೆ. ಈ ಸಮಸ್ಯೆಯನ್ನು ಯಾವ ರೀತಿಯಲ್ಲಿ ಪರಿಹರಿಸಬೇಕು ಎಂಬ ಬಗ್ಗೆ ವಿಚಾರ ಮಾಡುವಾಗ ಇದು ನಮ್ಮ ಭಾಗ, ಈ ಯೋಜನೆಯಲ್ಲಿ ನಮ್ಮ ಭಾಗ

ಮುಳುಗಡೆಯಾಗಿ ಹೋಗುತ್ತದೆ, ನನ್ನೂರು ಮುಳುಗಡೆಯಾಗಿ ಹೋಗುತ್ತದೆ ಎನ್ನುವುದನ್ನು ಬಿಡಬೇಕು. ಕರ್ನಾಟಕ ರಾಜ್ಯ ಒಂದು ಎನ್ನುವಂತಹ ಚಿಂತನೆ ಮಾಡಬೇಕು. ಅದರ ರೀತಿಯಲ್ಲಿ ಯೋಚನೆ ಮಾಡಿದರೆ ಮಾತ್ರ ಇದು ಸಾಧ್ಯವಿದೆ. ಇಲ್ಲದಿದ್ದರೆ ಕೊಡಗಿನವರು ನಾವು ಬಿಡುವುದಿಲ್ಲ. ಮಂಗಳೂರಿನವರು ನಾವು ಬಿಡುವುದಿಲ್ಲ, ಉಡುಪಿಯವರು ನಾವು ಬಿಡುವುದಿಲ್ಲ. ಎಂದರೆ ಸಭೆ ಏಕಿರಬೇಕು, ಚಿಂತನೆ ಏಕೆ ಮಾಡಬೇಕು? ಚುನಾಯಿತ ಪ್ರತಿನಿಧಿಗಳೇಕಿರಬೇಕು? ಇವೊತ್ತು ಚುನಾಯಿತ ಪ್ರತಿನಿಧಿಗಳು ಕೇವಲ ಅವರ ಕ್ಷೇತ್ರಕ್ಕಷ್ಟೇ ಸೀಮಿತವಲ್ಲ, ಇಡೀ ರಾಜ್ಯಕ್ಕೆ ಸಂಬಂಧಪಟ್ಟವರಾಗಿರುತ್ತಾರೆ. ಅವರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದಾರೆ, ಅವರು ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ಚಿಂತನೆ ಮಾಡಬೇಕಾಗಿದೆ. ಈ ಅಂಶವನ್ನು ಬಿಟ್ಟರೆ ಬೇರೆ ಯಾವುದೇ ದಾರಿ ಇಲ್ಲ. ಇದನ್ನು ತಮ್ಮ ಮುಖಾಂತರ ಈ ಸಭೆಯ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಮೊಟ್ಟಮೊದಲನೆಯ ಬಾರಿಗೆ ಬಹಳ ಅರ್ಥಪೂರ್ಣವಾಗಿ ಚರ್ಚೆಯಾಗಿದೆ. ಅದಕ್ಕೆ ಮೂಲ ಕಾರಣ ಮಾನ್ಯ ಸುದರ್ಶನ್‌ರವರು, ಹಿರಿಯ ಸದಸ್ಯರಾಗಿರುವ ಅವರು ಆ ಭಾಗದ ಸಮಸ್ಯೆಯನ್ನು ಕೂಡ ತಿಳಿದುಕೊಂಡಿದ್ದಾರೆ. ಪ್ರಥಮ ಬಾರಿಗೆ ಒಬ್ಬರು ಹಿರಿಯ ಸದಸ್ಯರು ಈ ಸಮಸ್ಯೆಗೆ ಒಂದು ರೀತಿಯಲ್ಲಿ ಪರಿಹಾರ ಕಂಡುಕೊಳ್ಳಬೇಕು, ಆ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವಂತಹ ದೃಷ್ಟಿಯಿಂದ ಪ್ರಾದೇಶಿಕ ಅಥವಾ ರಾಜಕೀಯ ಈ ಯಾವುದೇ ಪರಿಗಣನೆಗಿಂತ ಮೇಲೆ ಬಂದು ಅವರು ಕೆಲವು ಸಲಹೆಗಳ ರೂಪದಲ್ಲಿ ಗಮನವನ್ನು ಸೆಳೆದಿದ್ದಾರೆ. ಅದು ಕೂಡಲೇ ಪರಿಹಾರ ಆಗುತ್ತದೆಯೋ ಇಲ್ಲವೋ ಎನ್ನುವ ಅರಿವನ್ನಿಟ್ಟುಕೊಂಡು long term, short term and medium term measures ಗಳನ್ನು ಕೂಡ ಅವರು ಉಲ್ಲೇಖಿಸಿದ್ದಾರೆ. ಅಲ್ಲದೆ ಅವರ ನೋಟೀಸ್‌ನಲ್ಲಿನ ಅಂಶವನ್ನು ಇಡೀ ಸದನ ಗಮನಿಸಬೇಕಾಗುತ್ತದೆ. ಇಂಥದ್ದೇ ಯೋಜನೆಯಿಂದ, ಇಷ್ಟೇ

ನೀರನ್ನು ಇಂಥದ್ದಕ್ಕೆ ತೆಗೆದುಕೊಂಡು ಬನ್ನಿ ಎನ್ನುವಂತಹ ಪ್ರಸ್ತಾಪವೇನೂ ಇಲ್ಲ. ಒಟ್ಟಾರೆ ನಮ್ಮ ಜಲ ಸಂಪನ್ಮೂಲ ಏನಿದೆ ಅದನ್ನು ಪೂರ್ಣವಾಗಿ ಬಳಕೆ ಮಾಡಿ ಈ ನಾಲ್ಕೈದು ಜಿಲ್ಲೆಗಳು ವಿಶೇಷವಾಗಿ ಕಳೆದ ಆರೇಳು ವರ್ಷಗಳಿಂದ ಏನು ಅತ್ಯಂತ ಬರಪೀಡಿತವಾಗಿ ಈಗ ಮರಳುಗಾಡಿನತ್ತ ಹೋಗುವಂತಹ ಸಂದರ್ಭ ಏನಿದೆ ಅದನ್ನು ಅರ್ಥ ಮಾಡಿಕೊಂಡು ಕೂಡಲೇ ಕ್ರಮವನ್ನು ಜರುಗಿಸಬೇಕೆನ್ನುವ ವಿಚಾರದಲ್ಲಿ ಗಮನ ಸೆಳೆದಿದ್ದಾರೆ. ಅವರಿಗೆ ನಿಜವಾಗಿಯೂ ಸಹ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಚ್ಛಿಸುತ್ತೇನೆ. ಅದೇರೀತಿ ಸಹಜವಾಗಿ ಆಯಾಯ ಭಾಗಗಳಿಂದ ಬಂದಂತಹ ಸದಸ್ಯರು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

ಇಲ್ಲಿ ಎರಡು ಪ್ರಮುಖ ಅಂಶಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಆ ಭಾಗದ ಜನತೆಗೆ ನೀರನ್ನು ಒದಗಿಸಲೇಬೇಕು. ಇದು ಪ್ರಾಥಮಿಕ ಕರ್ತವ್ಯವಾಗಿದ್ದು ಆ ಕಮಿಟ್‌ಮೆಂಟ್ ಒಂದು ಕಡೆಯಾದರೆ ಇನ್ನೊಂದು ಕಡೆ ಇವೊತ್ತು ecology and environment ಇವುಗಳಿಗೆ ತೊಂದರೆಯಾಗದಂತೆ ಮಾಡಬೇಕು. ಏಕೆಂದರೆ ನೀರಿನ ವಿಚಾರದಲ್ಲಿ ಹಲವಾರು ತಪ್ಪು ಕಲ್ಪನೆಗಳಿವೆ. ಮಳೆಯ ನೀರೆಲ್ಲಾ ಹರಿದು ಸಮುದ್ರಕ್ಕೆ ಹೋಗುತ್ತಿರುವುದರಿಂದ ಅದು ನಿರರ್ಥಕವಾಗುತ್ತಿದೆ ಎನ್ನುವಂತಹ ರೀತಿಯಲ್ಲಿ ಒಂದು ವ್ಯಾಖ್ಯಾನ ನಡೆಯುತ್ತಿದೆ. ಇವೊತ್ತು ನಾವು ಅರ್ಥ ಮಾಡಿಕೊಳ್ಳಬೇಕು, ಸಾಕಷ್ಟಲ್ಲದಿದ್ದರೂ ಕನಿಷ್ಟ ಪ್ರಮಾಣದ ನೀರು ಸಮುದ್ರಕ್ಕೆ ಹೋದರೆ ವಾಟರ್ ಸೈಕಲ್ ಕಂಪ್ಲೀಟ್ ಆಗಿ ನಮ್ಮ ಇಡೀ ಎಲ್ಲ ಭಾಗಕ್ಕೂ ಮಳೆಯಾಗುತ್ತದೆ. ಆ ನೀರು ಸರಿಯಾದ ಪ್ರಮಾಣದಲ್ಲಿ ಸಮುದ್ರಕ್ಕೆ ಹೋಗದೆ ಇದ್ದರೆ ಕೇವಲ ನದಿ ಪಕ್ಕದವರಿಗಷ್ಟೇ ಅಲ್ಲ, ಬಯಲುಸೀಮೆ ಮತ್ತು ನದಿಗಳ ಉಗಮ ಸ್ಥಾನಗಳೇನಿವೆ ಅಲ್ಲಿಯೂ ಕೂಡ ಮಳೆಯ ಕೊರತೆಯಾಗುತ್ತದೆ. ಆದ್ದರಿಂದ ನೈಸರ್ಗಿಕವಾದಂತಹ ವಾಟರ್ ಸೈಕಲ್ ಕಂಪ್ಲೀಟ್ ಆಗಲೇಬೇಕು. ಇಂತಹ ಒಂದು ಅರಿವನ್ನಿಟ್ಟುಕೊಂಡು ನಾವು ಇವೊತ್ತು ಎಲ್ಲ ನೀರಾವರಿ ಯೋಜನೆಗಳನ್ನು ರೂಪಿಸಬೇಕಾಗಿದೆ.

ಇನ್ನು ಎರಡನೆಯದಾಗಿ ಇವೊತ್ತು ಪಶ್ಚಿಮಾಭಿಮುಖಿಯಾಗಿ ಹರಿದು ಬರುವಂತಹ ನದಿಗಳ ವೇಗ ಬಹಳ ಕಡಿಮೆ ಇರುತ್ತದೆ. ಆದ್ದರಿಂದ ಅಲ್ಲಿ ಎಷ್ಟೇ ಮಳೆಯಾದರೂ ಸಹ ಆ ನೀರೆಲ್ಲಾ ಸಮುದ್ರಕ್ಕೆ ಹೋಗುವುದರಿಂದ ಆ ಭಾಗದ ಜನರಿಗೆ ಕೆಲವು ತಿಂಗಳು ನೀರಿನ ಕೊರತೆಯಾಗುತ್ತದೆ. ಪಶ್ಚಿಮಾಭಿಮುಖಿಯಲ್ಲಿ ದೊಡ್ಡ ಪಶ್ಚಿಮ ಘಟ್ಟಗಳಿದ್ದು ಅಲ್ಲಿ ಹೆಚ್ಚು ಮಳೆಯಾಗುವುದರಿಂದ ಯಾವುದೇ ಸಂದರ್ಭದಲ್ಲಿಯೂ ನೀರಿನ ತೊಂದರೆ ಬರುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಈ ಎರಡು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇವೊತ್ತು ನಾವು ನೀರನ್ನು ತೆಗೆದುಕೊಳ್ಳಬೇಕಾಗಿದೆ. ಹಲವಾರು ವಿಚಾರಗಳು ಸದನದಲ್ಲಿ ಪ್ರಸ್ತಾಪವಾಗಿವೆ. ಒಂದು ರೀತಿಯಲ್ಲಿ ನಮಗೆ ಟೆಕ್ನಿಕಲಿ, ಎಕನಾಮಿಕಲಿ ಮತ್ತು ಪೊಲಿಟಿಕಲಿ ಇದೊಂದು ಚಾಲೆಂಜ್ ಆಗಿದೆ. ಈ ಬಗ್ಗೆ ನಾವೆಲ್ಲರೂ ಒಟ್ಟಾಗಿ ಕುಳಿತು ಚಿಂತನೆ ಮಾಡಿದಾಗ ಮಾತ್ರ ಈ ಸಮಸ್ಯೆ ಪರಿಹಾರವಾಗುತ್ತದೆ. ಇವೊತ್ತು ಕೃಷ್ಣ ನದಿ ನೀರಿನ ವಿಚಾರ ಅಥವಾ ಕಾವೇರಿ ನದಿ ನೀರಿನ ವಿಚಾರ ಬಂದಾಗ ನಾವೆಲ್ಲಾ ಒಂದಾಗುತ್ತೇವೆ, ಆದರೆ ಬಯಲು ಸೀಮೆಗೆ ನೀರು ಕೊಡುವ ವಿಚಾರದಲ್ಲಿ ನಾವೇಕೆ ಬೇರೆ ರೀತಿಯಲ್ಲಿ ಯೋಚನೆ ಮಾಡಬೇಕು? ಆ ವಿಚಾರದಲ್ಲಿ ಕೂಡ ನಾವೆಲ್ಲಾ ಒಂದೇ ಧ್ವನಿಯಾಗಬೇಕು. ಏನಾದರೂ ಭಿನಾಭಿಪ್ರಾಯಗಳಿದ್ದರೆ ಆ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡಿ ಬಗೆಹರಿಸಿಕೊಳ್ಳಬೇಕು. ಈಗ ಆ ಕಾಲ ಬಂದಿದೆ. ಇಷ್ಟು ವರ್ಷ ಬೇರೆ ರೀತಿಯಲ್ಲಿ ಭಿನ್ನಭಿನ್ನವಾಗಿ ಚರ್ಚೆ ಮಾಡಿದ ಕಾರಣದಿಂದಾಗಿ ಆ ಭಾಗಕ್ಕೆ ನೀರನ್ನು ಕೊಡದಿರುವಂತಹ ಒಂದು ಪರಿಸ್ಥಿತಿ ಬಂದಿದೆ. ಅಲ್ಲದೇ ಆ ಭಾಗದ ಜನತೆಯಲ್ಲಿ ಬಹಳಷ್ಟು ತಪ್ಪು ಕಲ್ಪನೆಗಳಿವೆ. ಆ ನದಿಯಿಂದಲೇ ನೀರನ್ನು ತೆಗೆದುಕೊಂಡು ಬನ್ನಿ, ಬೇರೆ ನದಿಯಿಂದ ತರಬೇಡಿ ಎನ್ನುವಂತಹ ಅಭಿಪ್ರಾಯಗಳು ಕೂಡ ಇವೆ. ವಿಚಾರಗಳನ್ನು ನಾವು ಎಷ್ಟೊಂದು divert ಮಾಡಿಕೊಂಡಿದ್ದೇವೆ ಎಂದರೆ ಅಲ್ಲಿಯ ಜನರಿಗೆ ಇಂಥದ್ದೇ ಮಾಡಿ ಎಂದು ಹೇಳಿ ರಸ್ತೆಯ ಮೇಲೆ ನಿಂತುಕೊಂಡು ಆ ಯೋಜನೆಯನ್ನು ಮಾಡುವುದಕ್ಕಾಗುವುದಿಲ್ಲ. ತಾಂತ್ರಿಕ ತಜ್ಞರು ಏನು ಹೇಳುತ್ತಾರೆ, hydrology

experts ಏನು ಹೇಳುತ್ತಾರೆ ಅವರು ಹೇಳುವ ಆಧಾರದ ಮೇಲೆ ನಾವು ಯೋಜನೆಗಳನ್ನು ಮಾಡಿಕೊಂಡು ಬಂದಿದ್ದೇವೆ. ಹತ್ತು ಹಲವಾರು ಯೋಜನೆಗಳನ್ನು ರೂಪಿಸಿದ್ದೇವೆ. Natural Environmental Research Council (NERC) ಯಿಂದ ವರದಿ ಬಂದಿಲ್ಲ. ಪರಮಶಿವಯ್ಯ ಎಂಬುವರು ಯಾರು ಎಂಬ ಮಾತನ್ನು ಹೇಳಿದರು. ಅವರು ಒಬ್ಬ ನೀರಾವರಿ ತಜ್ಞರು, ನಿವೃತ್ತ ಅಭಿಯಂತರರು. ಅವರಿಗೆ ಈಗ 90 ವರ್ಷ. ಅವರನ್ನು ಈಗ ನಾನು ಬರುವಾಗಲೂ ಸಹ ಅವರನ್ನು ಭೇಟಿ ಮಾಡಿ ಬಂದಿದ್ದೇನೆ. He is a hundred percent committed man.

**Mr CHAIRMAN:-** He has retired as Chief Engineer of our State.

**Sri M.C. NANAIAH:-** He is one of the greatest water experts. Let's accept it first.

**ಶ್ರೀ ಬಸವರಾಜ ಬೊಮ್ಮಾಯಿ:-** ಪರಮಶಿವಯ್ಯನವರ ವರದಿ ನಮ್ಮ ಸರ್ಕಾರ ಬಂದಾಗ ಕೊಟ್ಟಿಲ್ಲ. 2003ನೇ ಸಾಲಿನಲ್ಲಿ ಅವರು ವರದಿಯನ್ನು ಕೊಟ್ಟಿದ್ದಾರೆ. ಆಗಲೂ ಸಹ ಅವರು ನಿವೃತ್ತಿ ಹೊಂದಿದ್ದರು. ಅಂದಿನ ಮುಖ್ಯಮಂತ್ರಿಗಳು ಅವರ expertise ಅನ್ನು ಒಪ್ಪಿಕೊಂಡು ಅವರಿಗೆ ಮನ್ನಣೆಯನ್ನು ಕೊಟ್ಟು, ಅವರ ವರದಿಗೆ ಒಂದು ಸಮಿತಿಯನ್ನು ಮಾಡಿ, ಆ ವರದಿಯ ಆಧಾರದ ಮೇಲೆ ಹೈದ್ರಾಬಾದ್ NERCಗೆ ರೆಫರ್ ಮಾಡಿದರು. NERC ವರದಿ ಬಂದ ಮೇಲೆ DPR ಮಾಡುವುದಕ್ಕೆ ಒಂದು ಕಡೆ ಕೊಟ್ಟರು. ಆದರೆ ಮಾನ್ಯ ಸುದರ್ಶನ್‌ರವರು ಹೇಳಿದಂತೆ ಇದಕ್ಕೆ ತಕ್ಷಣವೇ ರಿಲೀಫ್ ಕೊಡಬೇಕು ಎನ್ನುವ ದೃಷ್ಟಿಯಿಂದ ಸಂಪೂರ್ಣವಾಗಿ ಪುನಃ ಸರ್ವೇಗಳನ್ನು ಮಾಡಿ, ಪರಿಸರಕ್ಕೆ ಯಾವುದೇ ರೀತಿಯಾದಂತಹ ಹಾನಿಯಾಗದಂತೆ ಕೆಲವು ಒಳ್ಳೆಯ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಈಗ ಅದು ಬಹಳ ದೊಡ್ಡ ಪ್ರಮಾಣದಲ್ಲಿ ಚರ್ಚೆ ಆಗುತ್ತಿದೆ. ಈ ಹಂತದಲ್ಲಿ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಬಹಳಷ್ಟು ಆಸಕ್ತಿಯನ್ನು ವಹಿಸಿ ಇದಕ್ಕೆ

ಏನಾದರೂ ಅಂತಿಮ ರೂಪು ಕೊಡಬೇಕು ಎನ್ನುವ ದೃಷ್ಟಿಯಿಂದ ಎಲ್ಲಾ ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ. ಅವರು ಈ ವಿಷಯದಲ್ಲಿ ತಮ್ಮ ಚಿಂತನೆ ಏನು ಎಂಬುದನ್ನು ಈ ಸದನಕ್ಕೆ ತಿಳಿಸುತ್ತಾರೆ. ನನ್ನ ಉದ್ದೇಶವೇನೆಂದರೆ, ಯಾವ ಮೂಲ, ಯಾವತ್ತು, ಏನು ಎಂಬುದನ್ನು ಸ್ಪಷ್ಟವಾಗಿ ಸರ್ಕಾರ ತನ್ನ ನೀತಿಯನ್ನು ಹೊರಗೆ ಬಿಡುತ್ತದೆ. ಇದಕ್ಕಾಗಿ ಮೀಸಲಿಟ್ಟಿರುವಂತಹ 200 ಕೋಟಿ ರೂ. ಹಣ ಏನಿದೆ, ಅದನ್ನು ಸದ್ಬಳಕೆ ಮಾಡುತ್ತೇವೆ. ಆ ಭಾಗಕ್ಕೆ ನೀರು ಕೊಡಲು 2012ರಲ್ಲಿ ಯೋಜನೆಗಳನ್ನು ರೂಪಿಸುತ್ತೇವೆ. It is a commitment of this Government.

ಎರಡನೆಯದಾಗಿ, ಮಾನ್ಯ ನಾಣಯ್ಯನವರು ಈ ಹಿಂದೆ ಸಹ ಲಕ್ಷ್ಮಣತೀರ್ಥಕ್ಕೆ ಡೈವರ್ಶನ್ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದರು. ಆ ಸಂದರ್ಭದಲ್ಲಿ ಹೇಳಿದಂತಹ ಹೇಳಿಕೆಗೆ ನಾನು ಈಗಲೂ ಸಹ ಬದ್ಧನಾಗಿದ್ದೇನೆ. ಅದು National Water Development Agency (NWDA) ಅವರು ಸರ್ವೆ ಮಾಡಿದ್ದರು, ಪರಮಶಿವಯ್ಯನವರ ವರದಿಯ ಆಧಾರದ ಮೇಲೆ ನಾವು ಇಲ್ಲಿ ಉಲ್ಲೇಖ ಮಾಡಿದ್ದೇವೆ. ನಮ್ಮ ಮುಂದೆ ಆ ರೀತಿಯಾದಂತಹ ಯಾವುದೇ ಪ್ರಸ್ತಾವನೆ ಸಧ್ಯಕ್ಕೆ ಸರ್ಕಾರಕ್ಕೆ ಇಲ್ಲ. ಪರಮಶಿವಯ್ಯನವರ ವರದಿಯನ್ನು ನಿಮಗೆ ಕೊಡುತ್ತೇವೆ, ಅವರು ಮೂರು projects ಮಾಡಿದ್ದಾರೆ. ಪಶ್ಚಿಮಮುಖಿ ಮತ್ತು ಪೂರ್ವಮುಖಿಗೆ ಹೋಗುವಂಥದ್ದು ಪ್ರಾಜೆಕ್ಟ್ ನಂ.1. ಕೇವಲ ಪೂರ್ವಮುಖಿ ಇರುವಂಥದ್ದು ಪ್ರಾಜೆಕ್ಟ್ ನಂ.2. ಮತ್ತು ಪಶ್ಚಿಮಮುಖಿ ಡೈವರ್ಶನ್ ಎನ್ನುವುದು ಪ್ರಾಜೆಕ್ಟ್ ನಂ.3. ಈ ಮೂರು ಪ್ರಾಜೆಕ್ಟ್ ಅನ್ನು ಅವರು ಮಾಡಿದ್ದಾರೆ. ಆ ಎಲ್ಲಾ ವಿವರಗಳನ್ನು ತಮಗೆ ನಾನು ಒದಗಿಸುತ್ತೇನೆ. ಅಲ್ಲದೆ ನಾವೇನು ಎತ್ತಿನಹೊಳೆ ಪ್ರಾಜೆಕ್ಟ್ ಮಾಡಿದ್ದೇವೆ, ಅದರ Feasibility Report ಅನ್ನು ಸಹ ತಮಗೆ ಒದಗಿಸುತ್ತೇವೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಶೇಷವಾಗಿ ತಮಗೆ ಹಾಗೂ ಡಾ॥ ಆಚಾರ್ಯರವರಿಗೆ ಮೊದಲನೆಯದಾಗಿ ಅಭಿನಂದನೆಯನ್ನು ಸಲ್ಲಿಸಲು ಬಯಸುತ್ತೇನೆ. ಏಕೆಂದರೆ, ಇದೂವರೆವಿಗೂ ನಮ್ಮ ಹೇಳಿಕೆಯ ಬಗ್ಗೆ ಇದ್ದಂತಹ ಗೊಂದಲವನ್ನು ಮತ್ತೊಂದನ್ನು ತಾವುಗಳು ಬಗೆಹರಿಸಿದ್ದೀರಿ. ಇಲ್ಲವೆಂದರೆ ಅದಕ್ಕೆ ಪುನಃ ಐದು ನಿಮಿಷಗಳ ಕಾಲ ಬೇಕಾಗುತ್ತಿತ್ತು. ಪ್ರಾಯಶಃ ನಾನು ಯಾವುದೇ ದ್ವಂದ ಹೇಳಿಕೆಗಳನ್ನು ನೀಡಿಲ್ಲ. ನಾನು ತುಮಕೂರಿಗೆ ಹೋದಾಗಲೂ ಸಹ ನನ್ನನ್ನು ಪ್ರಶ್ನೆ ಕೇಳಿದ್ದರು. ನಾನು ಆ ಸಮಯದಲ್ಲಿ ಸ್ಪಷ್ಟವಾಗಿ ಒಂದು ಶಬ್ದವನ್ನು ಉಲ್ಲೇಖ ಮಾಡಿದ್ದೆ. ತುಮಕೂರು, ಬೆಂಗಳೂರು ಗ್ರಾಮಾಂತರ ಕೋಲಾರ ಮತ್ತು ಚಿಕ್ಕಬಳ್ಳಾಪುರ ಈ ನಾಲ್ಕು ಜಿಲ್ಲೆಗಳಿಗೆ ನೀರು ಕೊಡುವುದಕ್ಕೆ ನನ್ನ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದ್ದೆ. ನಾನು ಮಾಧ್ಯಮದವರ ಜೊತೆ ಸ್ವಲ್ಪ ಕಡಿಮೆ ಮಾತನಾಡುತ್ತೇನೆಂದು ಅವರಿಗೆ ನನ್ನ ಮೇಲೆ ಕೋಪವಿದೆ. ಎರಡನೆಯ ವಿಷಯವನ್ನು ಅವರಿಗೆ ಹೇಳಿದ್ದೆ, ಏನೆಂದರೆ, ಎರಡು ಮೂರು ಯೋಜನೆಗಳು ಇದರ ಮುಂದೆ ಇದೆ. ಪರಮಶಿವಯ್ಯನವರು ಕೊಟ್ಟಂತಹ ವರದಿ, ನೇತ್ರಾವತಿ ನದಿಯಿಂದ ನೀರು ತರುವಂಥದ್ದು, ಎರಡನೆಯದಾಗಿ ಎತ್ತಿನಹೊಳೆಯದು, ಮೂರನೆಯದಾಗಿ ಈಗಾಗಲೇ ಭದ್ರಾ ನದಿಯಿಂದ ತುಮಕೂರು ಮುಖಾಂತರ ಚಿತ್ರದುರ್ಗಕ್ಕೆ ನೀರನ್ನು ತರುವಂಥದ್ದು ಈ ರೀತಿ ಎರಡು ಮೂರು ಯೋಜನೆಗಳು ಇವೆ. ಇದರಲ್ಲಿ ಯಾವುದಾದರು ಒಂದು ಯೋಜನೆಯನ್ನು ಕೈಗೆತ್ತಿಕೊಂಡು ನಾನು ಈ ನಾಲ್ಕು ಜಿಲ್ಲೆಗಳಿಗೆ ನೀರು ಕೊಡುವುದಕ್ಕೆ ನನ್ನ ಸರ್ಕಾರ ಬದ್ಧ ಎಂಬ ವಿಷಯವನ್ನು ಹೇಳಿದ್ದೆ. ಆದರೆ ಮರುದಿವಸ ಪತ್ರಿಕೆಯಲ್ಲಿ ನೇತ್ರಾವತಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಬರೆದಿದ್ದರು. I made it very clear. There was no confusion with me. ಕೋಲಾರದಲ್ಲಿ ಬಂದಾಗಲೂ ಸಹ I made a very clear statement. ಏಕೆಂದರೆ, ಎಲ್ಲಿಯೂ ಸಹ "ನೇತ್ರಾವತಿ ತಿರುವು" ಎನ್ನುವಂಥ ಶಬ್ದ ಬಳಸಿಲ್ಲ. ಆ ಪದ ಪ್ರಯೋಗಕ್ಕೆ ನನ್ನ ವಿರೋಧವಿದೆ. ಸಾಧ್ಯವಿಲ್ಲದಂತಹ ಮಾತು ಅದು. ಅದು ಆಗುವಂಥದ್ದಲ್ಲ. ನಾನು ಈಗ ಈ ಮಾತನ್ನು ಹೇಳುತ್ತಿಲ್ಲ. ನಾನು

ಶಾಸಕನಾಗಿದ್ದಾಗಲೇ ಪರಮಶಿವಯ್ಯನವರು 2003–04ನೇ ಸಾಲಿನಲ್ಲಿ ವರದಿಯನ್ನು ಕೊಟ್ಟಿದ್ದರು. ಅಂದಿನ ನಮ್ಮ ಸಭಾಧ್ಯಕ್ಷರು ಈ ವಿಷಯದ ಬಗ್ಗೆ ಒಂದು ಸಭೆ ಕರೆದಿದ್ದರು. ನಾವು ಆ ಸಮಯದಲ್ಲಿ ಇದನ್ನು ಪ್ರಬಲವಾಗಿ ವಿರೋಧ ಮಾಡಿ ಆವತ್ತಿನ ದಿನದಿಂದ ನೇತ್ರಾವತಿಯ ಯಾವುದೇ ಒಂದು ಯೋಜನೆಗಳಿಗೆ ವಿಶೇಷವಾಗಿ ನೇತ್ರಾವತಿ ಯೋಜನೆ ಎಂದು ಹೇಳುವುದಕ್ಕಿಂತಲೂ ಪಶ್ಚಿಮಘಟ್ಟಕ್ಕೆ ಹಾನಿ ಉಂಟುಮಾಡುವಂಥ ಯಾವುದೇ ಯೋಜನೆಗಳಿಗೆ ಈ ನೀರನ್ನು ಅಲ್ಲಿಂದ ತರಬೇಕಾದರೆ ಪಶ್ಚಿಮಘಟ್ಟದಲ್ಲಿ ಅರಣ್ಯ ನಾಶ ಆಗುತ್ತದೆ ಎಂದು ಹೇಳುವಂತಹ ತಜ್ಞರ ವರದಿ ಇದೆ. ಅದರಿಂದ ಈ ವಿಷಯಕ್ಕೆ ನಾನು ಈ ಹಿಂದೆಯೂ ವಿರೋಧ ವ್ಯಕ್ತಪಡಿಸಿದ್ದೆ, ಆ ವಿರೋಧವನ್ನು ನಾನು ನಿರಂತರವಾಗಿ ಮುಂದುವರೆಸಿದ್ದೇನೆ. ಇವತ್ತು ಮುಖ್ಯಮಂತ್ರಿ ಸ್ಥಾನದಲ್ಲಿ ಇದ್ದರೂ ಸಹ ಪಶ್ಚಿಮಘಟ್ಟಕ್ಕೆ ಹಾನಿ ಆಗುವಂಥ, ಪರಿಸರಕ್ಕೆ ಹಾನಿ ಆಗುವಂಥ ಯಾವುದೇ ಯೋಜನೆಗಳ ಬಗ್ಗೆ ನನ್ನ ಸ್ಪಷ್ಟವಾದಂತಹ ವಿರೋಧವಿದೆ. ನಾನು ಅಂದಿನಿಂದ ಅದೇ ನಿಲುವಿನಲ್ಲಿದ್ದೇನೆ. ಸ್ಥಾನಗಳಲ್ಲಿ ಬದಲಾವಣೆ ಆಗಿದೆಯೇ ಹೊರತು ನನ್ನ ನಿಲುವುಗಳಲ್ಲಿ ಬದಲಾವಣೆ ಆಗಿಲ್ಲ. ಈ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಆದಕಾರಣ ನಾನು ಯಾವುದೇ ದ್ವಂಧ್ವ ಹೇಳಿಕೆಯನ್ನು ನೀಡಿಲ್ಲ. ನಾನು ಭಾರಿ ಸ್ಪಷ್ಟವಾಗಿ ಹೇಳಿದ್ದೇನೆ ಎತ್ತಿನಹೊಳೆ ಯೋಜನೆಗೆ ನಮ್ಮ ಸರ್ಕಾರ ಈಗಾಗಲೇ ಮೊನ್ನೆ ಬಜೆಟ್‌ನಲ್ಲಿ 200 ಕೋಟಿ ರೂಗಳನ್ನು ಮೀಸಲಿಟ್ಟಿದೆ. ಆದರೆ ಅದು ಅನುಷ್ಠಾನವಾಗಿಲ್ಲ. ಆದರೆ ಇದರ ಬಗ್ಗೆ ಮಾನ್ಯ ನೀರಾವರಿ ಸಚಿವರು ಈಗಾಗಲೇ ಒಂದಷ್ಟು ಕಾರ್ಯ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ ಅದರ ಬಗ್ಗೆ ಏನೆಲ್ಲಾ ಮಾಡಬೇಕು ಎಂಬ ಸ್ಪಷ್ಟ ಚಿತ್ರಣವನ್ನು ತೆಗೆದುಕೊಂಡು ಏನೆಲ್ಲಾ ಆಗುತ್ತದೆ ಎನ್ನುವ ಬಗ್ಗೆ ನಾನೂ ಹಾಗೂ ಮಾನ್ಯ ನೀರಾವರಿ ಸಚಿವರು ಒಂದು ವರದಿಯನ್ನು ತಯಾರು ಮಾಡುತ್ತಿದ್ದೇವೆ. 200 ಕೋಟಿ ರೂಪಾಯಿಗಳನ್ನು ಈ ವರ್ಷವೇ ಖರ್ಚು ಮಾಡಬೇಕು ಎಂದು ಹೇಳುವಂತಹ ಪ್ರಯತ್ನಗಳು ನಮ್ಮ ಕಡೆಯಿಂದ ಆಗುತ್ತಿಲ್ಲ. ನಾನು ಹೇಳುವುದೇನೆಂದರೆ, ಇವತ್ತಿನ ದಿವಸ ನೀರಿನ ವಿಷಯವಾಗಿರಬಹುದು,

ಅಥವಾ ಬೇರೆ ಯಾವುದಾದರು ರಾಜ್ಯ ಮಟ್ಟಕ್ಕೆ ಸೀಮಿತವಾದಂತಹ ವಿಚಾರದಲ್ಲಿ ಯಾವುದೇ ಸಣ್ಣ ಮನಸ್ಸಿನ ಯೋಚನೆಗಳನ್ನು ನಾನು ಮಾಡುವುದಿಲ್ಲ. ನೀರು ಕೊಡುವುದಕ್ಕೆ ನಾವು ಬದ್ಧರಿದ್ದೇವೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಒಂದು political consensus ತೆಗೆದುಕೊಳ್ಳುವಂಥದ್ದು ಎಲ್ಲರಲಿಯೂ ಅವಶ್ಯಕತೆ ಇದೆ. ಆದಕಾರಣ ಎಲ್ಲರೂ ಒಟ್ಟಿಗೆ ಸೇರಿ ಇದರ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಏಕೆಂದರೆ, ಕೃಷ್ಣ ಇರಬಹುದು, ಭದ್ರ ಇರಬಹುದು, ಮತ್ತೊಂದು ಇರಬಹುದು ಈ ವಿಷಯಗಳ ಬಗ್ಗೆ ನಾವೆಲ್ಲರೂ ಯಾವ ರೀತಿ ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ ಎಂಬ ವಿಷಯ ಎಲ್ಲರಿಗೂ ತಿಳಿದಿದೆ. ಕಾವೇರಿಯ ಸಮಸ್ಯೆಗಳು ಬಂದಾಗ ಇಡೀ ರಾಜ್ಯದ ತುಂಬೆಲ್ಲಾ ಅಂದರೆ ವಿಧಾನಸಭೆಯ ಒಳಗೂ ಹೊರಗೂ ಎಲ್ಲರೂ ಒಟ್ಟಾಗಿ ಸೇರಿ ಕೆಲಸ ಮಾಡಿದ್ದೇವೆ. ನಮ್ಮ ಸರ್ಕಾರದ ಕಮಿಟ್‌ಮೆಂಟ್ ಎಷ್ಟಿದೆ ಎಂದು ಹೇಳುವುದಾದರೆ ಕೃಷ್ಣ ಯೋಜನೆಗೆ ಸುಮಾರು 17 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟು ತಕ್ಷಣ administrative approval ಅನ್ನು ಕ್ಯಾಬಿನೆಟ್‌ಗೆ ತಂದು ಯಾವುದೋ ಒಂದು ಹಂತದಲ್ಲಿ ಮಾಡುವುದಕ್ಕೆ ಆಗದೆ ಇರುವಂತಹ ಕೆಲಸವನ್ನೂ ಸಹ ಮಾಡಿರುವುದಕ್ಕೆ ನಮ್ಮ ಸರ್ಕಾರ ತೆಗೆದುಕೊಂಡಿರುವಂತಹ ನಿಲುವು, ಸುಮಾರು ಒಂದೂವರೆ ತಿಂಗಳ ಹಿಂದೆ ನೀರಾವರಿ ಯೋಜನೆಗೆ ಎಷ್ಟೆಲ್ಲಾ ಬದ್ಧತೆಯನ್ನು ಪ್ರದರ್ಶನ ಮಾಡಿದ್ದೇವೆ ಎಂಬ ವಿಷಯ ತಮಗೆಲ್ಲರಿಗೂ ತಿಳಿದಿದೆ. ಇದನ್ನು ಮಾಡುವಾಗಲು ಸಹ ನಾವು ಒಂದು ಕೆಲಸ ಮಾಡಿದೆವು. ಆ ಭಾಗದ ಶಾಸಕರು, ಸಚಿವರು, ಸಂಸದರು ಎಲ್ಲರನ್ನೂ ಕರೆಸಿ, ಸಮಾಲೋಚನೆ ಮಾಡಿ ಅವರ ಸಲಹೆಗಳನ್ನು ಸಹ ಸ್ವೀಕಾರ ಮಾಡಿಕೊಂಡು ಎಲ್ಲವನ್ನೂ ಒಟ್ಟಿಗೆ ತೆಗೆದುಕೊಂಡು ಅದರಲ್ಲಿ ಯಾವುದೇ ಒಂದು ರೀತಿಯಲ್ಲಿ ಅವರು ಯಾವುದೇ ಒಂದು ಪಕ್ಷಕ್ಕೆ ಸೇರಿದವರು ಎಂದು ಮಾಡದೆ ಎಲ್ಲರೂ ಒಟ್ಟಿಗೆ ಸೇರಿ ಅದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆದಕಾರಣ ಅವರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಸರ್ಕಾರ ತಕ್ಷಣ ಇದನ್ನು ಸಚಿವ ಸಂಪುಟ ಸಭೆಯ ಮುಂದೆ ತಂದು, ಅದಕ್ಕೆ ಸಚಿವಸಂಪುಟ ಅನುಮೋದನೆ

ನೀಡಿದ್ದಕ್ಕೆ ಎಲ್ಲರೂ ಅಭಿನಂದನೆಯನ್ನು ಸಲ್ಲಿಸಿದ್ದಾರೆ. ರಾಜ್ಯದ ಹಿತಾಸಕ್ತಿ ಬಂದಾಗ ನಾವು ಈ ರೀತಿ ಕೆಲಸ ಕಾರ್ಯಗಳನ್ನು ಮಾಡಬೇಕು. ಒಂದು ತಿಂಗಳು ನಾನು ರಾಜಕಾರಣ ಮಾಡುವುದಿಲ್ಲ, ನಾನು ಯಾರಿಗೂ ಏನನ್ನೂ ಹೇಳುವುದಿಲ್ಲ. ಯಾರು ಏನು ಬೇಕಾದರೂ, ಎಲ್ಲಿ ಬೇಕಾದರೂ ಹೇಳಿಕೊಳ್ಳಲಿ.

(6.00 ಗಂಟೆ)

ಚುನಾವಣೆ ಬಂದಾಗ ಒಂದು ತಿಂಗಳು ಎಷ್ಟು ಬೇಕಾದರೂ ರಾಜಕೀಯವನ್ನು ಮಾಡಿಕೊಳ್ಳಲಿ, ಯಾರು ಎಲ್ಲಿ ಬೇಕಾದರೂ ಏನನ್ನಾದರೂ ಹೇಳಿಕೊಳ್ಳಲಿ. ಬದಲಿಗೆ ನಾಲ್ಕು ವರ್ಷ ಹನ್ನೊಂದು ತಿಂಗಳಿನಲ್ಲಿ ಹೆಚ್ಚಿನ ಸಮಯ ಅದಕ್ಕಾಗಿಯೇ ವ್ಯಯ ಮಾಡಿದಲ್ಲಿ ಖಂಡಿತವಾಗಿ ನಮ್ಮ ರಾಜ್ಯದ ಹಿತಾಸಕ್ತಿಗೆ ಪೂರಕ ಆಗುವುದಿಲ್ಲ. ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಈಗ ಮಾತನಾಡಿದವರೆಲ್ಲರೂ ನನ್ನ ಹೆಸರನ್ನು ಹೇಳದೇ ಯಾರೂ ಸಹ ಮಾತನ್ನು ಮುಗಿಸಿಲ್ಲ. ಏಕೆಂದರೆ ಎಲ್ಲರಿಗೂ ಒಂದು ಕಡೆ ಆತಂಕ ಸದಾನಂದಗೌಡರು ಬಂದ ತಕ್ಷಣ ನಮ್ಮ ಕೋಲಾರ ಜಿಲ್ಲೆಗೆ ನೀರು ಬರುವುದಿಲ್ಲವೇನೋ ಎನ್ನುವ ಆತಂಕ. ನಮ್ಮ ಹಿಂದಿನವರು ಮಾಡಲಿಲ್ಲ. ಆದರೆ ಈಗಿನವರು ಮಾಡುತ್ತಾರೆ ಎನ್ನುವುದು ನಿಶ್ಚಿತವಾಗಿದೆ. ಆದರೆ ಇದರಲ್ಲಿ ಸ್ವಲ್ಪ ಮಟ್ಟಿಗಿನ ಸಮಸ್ಯೆ ಬಂದರೂ ಸಹ ಅದನ್ನೆಲ್ಲ ಎದುರಿಸಲು ನಾನು ಬದ್ಧನಾಗಿದ್ದೇನೆ. ಆದರೆ ಈ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳಬೇಕಾದ ಸಂದರ್ಭದಲ್ಲಿ ನಾವೆಲ್ಲರೂ ಸೇರಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕೆನ್ನುವುದು ನನ್ನ ಇಚ್ಛೆಯಾಗಿದೆ. ಹಾಗಾಗಿ ಈ ಸದನದಲ್ಲಿರುವ ಆ ಭಾಗದ ಶಾಸಕರುಗಳಿಗೆ ತಿಳಿಸುವುದೇನೆಂದರೆ ನಾಳೆ 5:30 ಕ್ಕೆ ಸರಿಯಾಗಿ ವಿಧಾನಸೌಧದ ಕೊಠಡಿ ಸಂಖ್ಯೆ 334ರಲ್ಲಿ ಒಂದು ಸಭೆ ನಡೆಯಲಿದ್ದು ಅದಕ್ಕೆ ಈ ಭಾಗದ ನಾಲ್ಕು ಜಿಲ್ಲೆಗಳ ಎಲ್ಲಾ ಮಂತ್ರಿಗಳನ್ನು, ಲೋಕಸಭಾ ಸದಸ್ಯರನ್ನು, ವಿಧಾನಸಭಾ ಸದಸ್ಯರನ್ನು, ವಿಶೇಷ ಆಹ್ವಾನಿತರಾಗಿ ನಮ್ಮ ರಾಮನಗರ ಜಿಲ್ಲೆಯ ಉಸ್ತುವಾರಿ ಸಚಿವರನ್ನು ಕೂಡ ಆಹ್ವಾನಿಸಿರುತ್ತೇನೆ, ಈ ಸದನದಲ್ಲಿರುವ ಈ ಭಾಗದ ಸದಸ್ಯರನ್ನು ಕೂಡ ನಾನು ಆ ಸಭೆಗೆ ಈ ಸಂದರ್ಭದಲ್ಲಿ ಆಹ್ವಾನಿಸುತ್ತಿದ್ದೇನೆ. ಪುನಃ ನಾನು ಮತ್ತೆ

ಮತ್ತೆ ಆಹ್ವಾನಿಸುವುದಕ್ಕೆ ಹೋಗುವುದಿಲ್ಲ. ಈ ಸಭೆಯಲ್ಲಿ ನೀರಾವರಿಗೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು, ತಜ್ಞರು ಸಹ ಬರುತ್ತಾರೆ.

**ಶ್ರೀ ಪುಟ್ಟಣ:–** ನೀವು ರಾಮನಗರ ಜಿಲ್ಲೆಯನ್ನು ಏಕೆ ಸೇರಿಸಿಲ್ಲ?

**ಶ್ರೀ ಡಿ.ವಿ. ಸದಾನಂದಗೌಡ:–** ಅದನ್ನು ಸಹ ಸೇರಿಸುತ್ತೇನೆ. ಯಾವಾಗಲೂ ಸಿಕ್ಕಾಪಟ್ಟೆ ಆವೇಶಕ್ಕೆ ಒಳಗಾಗಬಾರದು.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಗಳೇ, ಇದು ಆವೇಶವಲ್ಲ. ನಾಳಿನ ಸಭೆಗೆ ನಮ್ಮ ರಾಮನಗರ ಜಿಲ್ಲೆಯನ್ನು ಸೇರಿಸಿಕೊಳ್ಳಬೇಕೆನ್ನುವ ನಮ್ಮ ಮನವಿ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಗಳೇ, ಈಗಾಗಲೇ ನಾನು ಈ ಸಭೆಯಲ್ಲಿ ನಾಲ್ಕು ಜಿಲ್ಲೆಗಳನ್ನು ಕರೆದಿದ್ದೇನೆ. ದಯಮಾಡಿ ಪುಟ್ಟಣ್ಣನವರು ಸಹ ಬರಬೇಕು. ನಾಳೆ ನಾನು ರಾಮನಗರ ಜಿಲ್ಲೆಯನ್ನು ಸಹ ಸೇರಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಈ 3–4 ಜಿಲ್ಲೆಗಳಿಗೆ ನೀರು ಕೊಡಬೇಕೆನ್ನುವುದು ನನ್ನ ಒಂದು ಕಮಿಟ್‌ಮೆಂಟ್. ಹಾಗೆಯೇ ನಮ್ಮ ಆಯವ್ಯಯದಲ್ಲಿ earmark ಮಾಡಿರುವ ಹಾಗೆ 200 ಕೋಟಿ ರೂಪಾಯಿಗಳನ್ನು ಈ ವರ್ಷದಲ್ಲಿ ನೀರಾವರಿಗಾಗಿ ವ್ಯಯ ಮಾಡಬೇಕಾಗಿದೆ. ಇದನ್ನು ಹೇಗಾದರೂ ಪ್ರಾರಂಭಿಸಿದಲ್ಲಿ ಮಾತ್ರ ನಮ್ಮ ಯಶಸ್ಸಿನ ಕಥೆ ಆಗಲಿಕ್ಕೆ ಸಾಧ್ಯ ಎಂದು ನಾನು ನಿಶ್ಚಯ ಮಾಡಿದ್ದೇನೆ. ಹಾಗಾಗಿ ತಾವೆಲ್ಲರೂ ಸಹ ನಾಳಿನ ಸಭೆಗೆ ಬರಬೇಕು. ಈ ಸಭೆಗೆ ನಾನು ಕೇಂದ್ರದ ಮಂತ್ರಿಗಳಾದ ವೀರಪ್ಪ ಮೊಯಿಲಿ, ಮುನಿಯಪ್ಪನವರನ್ನು ಹಾಗೂ ಲೋಕಸಭಾ ಸದಸ್ಯರನ್ನು ಸಹ ಆಹ್ವಾನಿಸಿ ಅವರಿಗೆಲ್ಲ ಪತ್ರವನ್ನು ಕಳುಹಿಸಿದ್ದೇನೆ. ಆದರೆ ನಿಮಗೆ ಯಾರಿಗೂ ನಾನು ಪತ್ರವನ್ನು ಕಳುಹಿಸುವುದಿಲ್ಲ. ಏಕೆಂದರೆ ಇಲ್ಲಿಯೇ ಈ ವಿಚಾರ ಪ್ರಸ್ತಾಪವಾದ ಹಿನ್ನೆಲೆಯಲ್ಲಿ ಸದನದ ಮುಖೇನ ಎಲ್ಲರನ್ನು ಆಹ್ವಾನಿಸುತ್ತಿದ್ದೇನೆ. ತಾವೆಲ್ಲರೂ ಸಹ ಬರಬೇಕು. ನಾಳೆಯ ಸಭೆಯಲ್ಲೂ ಕೂಡ ನಮ್ಮ ನೀರಾವರಿ ಇಲಾಖೆಯವರು ತಾವು ಕೈಗೊಳ್ಳತಕ್ಕ ನೀರಾವರಿ ಯೋಜನೆಗಳ ಬಗ್ಗೆ presentation ಮಾಡುತ್ತಾರೆ. ಸನ್ಮಾನ್ಯ ಬೊಮ್ಮಾಯಿಯವರು ಮತ್ತು ಅವರ ಇಲಾಖೆಯವರು ಈ presentation

ಮಾಡುತ್ತಾರೆ. ಅಲ್ಲಿ ಈ ಯೋಜನೆಗಳ ಒಂದಷ್ಟು ಸಾಧಕ–ಬಾಧಕಗಳ ಬಗ್ಗೆ ಚರ್ಚೆಯನ್ನು ಮಾಡಿ, ನಾಳೆ ಯಾವುದಾದರೂ ಒಂದು ಹಂತದ ತೀರ್ಮಾನಕ್ಕೆ ನಾವು ಬರಲೇಬೇಕಾಗುತ್ತದೆ. ಅದಲ್ಲದೇ ಕೇವಲ ಸಭೆಗಳನ್ನು ಮುಂದುವರೆಸಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ಹಾಗಾಗಿ ಈ ವಿಚಾರದ ಬಗ್ಗೆ ಹೆಚ್ಚಿಗೆ ಚರ್ಚೆಯನ್ನು ಮಾಡಲು ನಾನು ಇಷ್ಟಪಡುವುದಿಲ್ಲ. ನಾಳಿನ presentation ಕಾರ್ಯಕ್ರಮದಲ್ಲಿ ಎಷ್ಟು ನೀರು ಬರುತ್ತದೆ ಎನ್ನುವುದು ಗೊತ್ತಾಗುತ್ತದೆ. ಬೊಮ್ಮಾಯಿಯವರು ಹೇಳಿರುವ ಪ್ರಕಾರ 24 ಟಿಎಂಸಿ ನೀರನ್ನು ನಾವು ಇದರಿಂದ ಪಡೆಯಬಹುದು. ಇಷ್ಟು ನೀರು ಬರುವುದರಿಂದ ನಮಗೆ ಕುಡಿಯುವ ನೀರಿಗೆ ಮತ್ತೊಂದಕ್ಕೆ ತೊಂದರೆ ಆಗುವುದಿಲ್ಲ. ಇದರಿಂದ ಮುಂದಿನ ಹಂತದಲ್ಲಿ ನಮಗೆ ಕೆರೆಗಳನ್ನು ತುಂಬಿಸಲು ಸಹ ಸಾಧ್ಯವಾಗುತ್ತದೆ. ನಾಳೆಯ ಸಭೆಯಲ್ಲಿ ಇದಕ್ಕೆ ಕೈಗೊಳ್ಳಬೇಕಾದ ಸೂಕ್ತ ವ್ಯವಸ್ಥೆಗಳ ಬಗ್ಗೆ ಚರ್ಚೆ ಮಾಡಲಾಗುವುದು. ನಾಲ್ಕು ಜಿಲ್ಲೆಗಳಿಗೆ ನೀರನ್ನು ನೀಡಲು ನಮ್ಮ ಸರ್ಕಾರ, ಬದ್ಧ ಎನ್ನುವ ಮಾತನ್ನು ಕಾರ್ಯಗತಕ್ಕೆ ತರಲು ನಾವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ.

**ಸಭಾಪತಿಯವರು:–** ಈಗ ಸಭೆಯ ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರುವುದು.

**(ಸದನವು ಸಂಜೆ 6 ಗಂಟೆ 4 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 2ನೇ ಫೆಬ್ರವರಿ ಮಾಹೆ 2012ರ ಗುರುವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)**